ಮುಹೂರ್ತಪದವೀ ಸಟೀಕಾ

ಸಂಪಾದಕರು ಮತ್ತು ಪ್ರಕಾಶಕರು :-

ಚ. ಮೂ. ಈಶ್ವರ ಶಾಸ್ತ್ರೀ, 'ವಿಶಾರದ'.

ಸಹಪ್ರಕಾಶಕರು :-

ಚ. ಈ. ಶಾಸ್ತ್ರೀ.

ಗ. ಶಾ. ಶ. ೧೯೧೭.

ಮುಹೂರ್ತಪದವೀ ಸಟೀಕಾ

ಸಂಪಾದಕರು ಮತ್ತು ಪ್ರಕಾಶಕರು :-
ಪಿ. ಎಸ್. ಈಶ್ವರ ಶಾಸ್ತ್ರೀ, ‘ಪಿಪಾಸದ’,
ಶಾಸ್ತ್ರಿ ನಿವಾಸ, ಕೆಲಿಂಜ - 574220, ಬಂಟ್ವಾಳ, ದ. ಕ.
ದೂರವಾಣಿ :- 08251-44652, ಪುತ್ತೂರು, ದ. ಕ.

ಸಹಪ್ರಕಾಶಕರು :-
ಸಿ. ಐ. ಶಾಸ್ತ್ರಿ,
ಪಾರಿಜಾತ ಸೊಸೈಟಿ,
ಪನ್‌ವೇಲ್ - 410206, ಮಹಾರಾಷ್ಟ್ರ,
ದೂರವಾಣಿ :- 022-7453341 ಬೊಂಬಯ್.

C. I. Shastry,
Parijata Society,
PANVEL - 410 206
MAHARASHTRA
Phone: 022 - 7453341 Bombay.

ಪ್ರಥಮ ಮುದ್ರಣ:- ಕ್ರಿ. ಶ. 1995 1000 ಪ್ರತಿಗಳು.

ಈ ಪುಸ್ತಕದ ಎಲ್ಲ ಹಕ್ಕು ಪ್ರಕಾಶಕರದು.

ಗ್ರಂಥಮೌಲ್ಯ:- ರೂಪಾಯಿ ಮೂವತ್ತು

ಪುತ್ತೂರಿನ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿ ಈ ಪುಸ್ತಕವು ದೊರೆಯುವುದು.

ಮುದ್ರಣ :-
ಶೋಭಾ ಪ್ರೋಸೆಸ್ ಪ್ರಿಂಟರ್ಸ್,
ದರ್ಬೆ - 574202, ಪುತ್ತೂರು, ದ. ಕ.
ದೂರವಾಣಿ :- 21696, 21697 ಮತ್ತು 21698 (ನಿವಾಸ).

॥ ಪ್ರಸೀದತು ಶ್ರೀರಾಮಚಂದ್ರಃ ॥

ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ

ಶ್ರೀಶ್ರೀ ರಾಘವೇಂದ್ರ ಭಾರತೀ ಮಹಾಸ್ವಾಮಿಗಳು, ಶ್ರೀ ಸಂಸ್ಥಾನ, ಗೋಕರ್ಣ.

ಶ್ರೀ ರಾಮಚಂದ್ರಾಪುರ ಮಠ, ಹೊಸನಗರ, ಶಿವಮೊಗ್ಗ ಜಿಲ್ಲೆ, (ಕರ್ನಾಟಕ ರಾಜ್ಯ).



ಗತ ಸಂಖ್ಯಾ-೪೧

ಶ್ರೀಯುತರಾದ ಮಂಗಳೂರು ಹೋಬಳಿ ಪುತ್ತೂರು ಶೀಮೆ ಕೆದಿಲ ಗ್ರಾಮದಲ್ಲಿರುವ ಚಕ್ರಕೋಡಿ ಮೂಡಂಬೈಲು ಗಂಗಾಧರ ಶಾಸ್ತ್ರಿಗಳ ಮಗ ಚ। ಮೂ। ಈಶ್ವರ ಶಾಸ್ತ್ರಿಗಳಿಗೆ-

ಆದಾಗಿ ಶ್ರೀ ಸವಾರಿಯು ಆರಾಧ್ಯ ಶ್ರೀ ಸೀತಾರಾಮ ಚಂದ್ರಾದಿ ದೇವತಾ ದಿವ್ಯ ಸನ್ನಿಧಿಯಲ್ಲಿ ಸಮಸ್ತ ಜನತೆಯ ಯೋಗಕ್ಷೇಮಗಳನ್ನು ಸಂಪ್ರಾರ್ಥಿಸುತ್ತಾ ಸದ್ಯ ಈ ಮುಕ್ಕಾಮಿನಲ್ಲಿ ಕ್ಷೇಮದಿಂದ ವಸತಿ ಮಾಡಿದೆ.

ನಿಮ್ಮ ಪೂರ್ವಜರು ಸಂಗ್ರಹಿಸಿಟ್ಟಿದ್ದ ಕೈಬರಹದ ಜ್ಯೌತಿಷ 'ಮುಹೂರ್ತಪದವೀ' ಎಂಬ ಮೂರು ಪರಿಚ್ಛೇದಗಳ ನ್ನೊಳಗೊಂಡ ಸಂಸ್ಕೃತ ಗ್ರಂಥಕ್ಕೆ ಎಂಬತ್ತೈದು ವರ್ಷಗಳ ಹಿಂದೆ ನಿಮ್ಮ ಪೂರ್ವಿಕರಾದ ಮೂಡಂಬೈಲು ಚಕ್ರಕೋಡಿ ಕೃಷ್ಣ ಶಾಸ್ತ್ರಿಗಳ ಮಗ ದಿವಂಗತ ಮೂ। ಚ। ಭೀಮಶಾಸ್ತ್ರಿಗಳು ಕನ್ನಡ ಅನುವಾದ ಮಾಡಿರುವುದನ್ನು ಪ್ರಕೃತ ಕನ್ನಡ ಲಿಪಿಯಲ್ಲಿ ಸುಂದರವಾಗಿ ಮುದ್ರಿಸಿ ಸದ್ಯವೇ ಪ್ರಕಾಶಿಸಿ ದಿವಂಗತ ಮೂಡಂಬೈಲು ಚ। ಈಶ್ವರ ಶಾಸ್ತ್ರಿಗಳ ಮಗ ಮೂ। ದಂಬೆ ಚ। ಶಂಭು (ಶಾಮ) ಶಾಸ್ತ್ರಿ ದಂಪತಿಗಳಿಗೆ ಸಮರ್ಪಿಸಲಿರುವ ಸಂಗ್ತಿ ವೇದ್ಯವಾಗಿ ಸಂತೋಷವಾಯಿತು.

ಸೂರ್ಯಚಂದ್ರಾದಿಗಳ ಸಂಚಾರದಿಂದ ಉಂಟಾಗುವ ಕಾಲಪ್ರಭೇದವನ್ನು ಶುಭಾಶುಭ ಗಳೆಂದು ಜ್ಞಾನಿಗಳೂ, ಮಹರ್ಷಿಗಳೂ, ಜ್ಯೋತಿಃಶಾಸ್ತ್ರ ಪ್ರವರ್ತಕರೂ ಆದ ವಸಿಷ್ಠ ಗರ್ಗ ನಾರದಾದಿಗಳು ತಿಳಿಸಿರುವಂತೆ ಧಾರ್ಮಿಕ ವ್ಯಾವಹಾರಿಕ ಕಾರ್ಯಗಳಿಗೆ ಶುಭಮುಹೂರ್ತವು ಅತ್ಯವಶ್ಯವೆಂಬುದು ಪ್ರಸಿದ್ಧವಾದ ವಿಷಯ. ಇಂತಹವರ ಅಭಿಪ್ರಾಯಗಳನ್ನೊಳಗೊಂಡ ಜನಾದರಣೀಯವೂ, ಫಲಪ್ರದವೂ ಆದ ಮುಹೂರ್ತಗಳನ್ನು ಸಾರಭೂತವಾಗಿ ತಿಳಿಸುವ ಈ ಕೃತಿಯು ಕನ್ನಡಿಗರಿಗೆ ಅತ್ಯುಪಯುಕ್ತವೆಂತ ಭಾವಿಸಿದೆ.

ನಿಮ್ಮೀ ಗ್ರಂಥಪ್ರಕಾಶನ ಕಾರ್ಯವು ಸುಗಮವಾಗಿ ಸಾಗಿ ಜನರು ಇದರ ಪ್ರಯೋಜನ ಪಡೆದು ಶುಭಫಲಭಾಗಿಗಳಾಗಲೆಂದು ಸುವರ್ಣ ಮಂತ್ರಾಕ್ಷತೆಯೊಂದಿಗೆ ಶ್ರೀ ಮಹಾಸಂಸ್ಥಾನದವರು ಹಾರೈಸಿದ ಸಂಗ್ತಿ ಶ್ರುತಪಡಿಸಿದೆ.

ಶ್ರೀಮಹಾಸಂಸ್ಥಾನದವರ ಅಪ್ಪಣೆ ಪ್ರಕಾರ

ಮಿತಿ : ಶ್ರೀ ಯುವನಾಮ ಸಂ। ದ
ಭಾದ್ರಪದ ಬಹುಳ ದ್ವಾದಶಿಯು
(ದಿನಾಂಕ: ೨೧-೯-೧೯೯೫)ನೇ ಗುರುವಾರ.

ಮೊಕ್ಕಾಂ:- ಶ್ರೀ ವಿದ್ಯಾಮಂದಿರ,
ಗಿರಿನಗರ, ಬೆಂಗಳೂರು - ೮೫.

ಶ್ರೀ ಗುರುಚರಣಾಶ್ರಿತ
ಶ್ರೀ ಗುರುಸೇವಾಧುರಂಧರ
ಸು। ಶಿ। ಶಾಸ್ತ್ರೀ, ಉಂಚಕೇರಿ
ಕೃತನತಯಃ ಆಶೀಷ್ಷ.


ಸಮರ್ಪಣೆ

ಶ್ರೀಮಾನ್ ಚ. ಶಂಭು (ಶ್ಯಾಮ) ಶಾಸ್ತ್ರಿಯವರು

ಮತ್ತು

ಇವರ ಧರ್ಮಪತ್ನಿ ಶ್ರೀಮತಿ ಗುಣವತಿ ಅಮ್ಮನವರು

ಇವರಿಗೆ-



ಮಾತಾಪಿತ್ರೋಃ ಪದಾಂಭೋಜೇ ಪಾರ್ವತೀಶಂಭುರೂಪಯೋಃ ॥
ಗುರೂಣಾಂ ದೇವಕಲ್ಪಾನಾಂ ವಂದೇ ಮಂತ್ರಪ್ರದಾಯಿನಾಂ ॥ ॥

ನನಗೆ ಅನೇಕ ನೀತಿಗಳನ್ನು ಹೇಳಿ, ಉಪನಯನ ಮದುವೆಗಳನ್ನು ಮಾಡಿ ನಮ್ಮ ವಂಶದ ಮಹತ್ವವನ್ನು ತಿಳಿಸಿದ ಪಿತೃಸಮಾನರಾದ ಈ ಪೂಜ್ಯ ದೊಡ್ಡತಂದೆಯವರು ಮತ್ತು ದೊಡ್ಡತಾಯಿಯವರಿಗೆ ಈ ಕೃತಿಯನ್ನು ಸಾಷ್ಟಾಂಗ ನಮಸ್ಕಾರ ಸಹಿತ ಸಮರ್ಪಿಸುತ್ತೇನೆ.

ಚ. ಮೂ. ಈಶ್ವರ ಶಾಸ್ತ್ರೀ.

ನನ್ನ ಹೆತ್ತು ಹೊತ್ತು ಸಲಹಿ ವಿದ್ಯಾಭ್ಯಾಸ, ಉಪನಯನ, ಮದುವೆಗಳನ್ನು ಮಾಡಿ ನನ್ನ ಅಭ್ಯುದಯಕ್ಕೆ ಕಾರಣರಾದ ಪರಮಪೂಜ್ಯರಾದ ಈ ನನ್ನ ತಂದೆತಾಯಿಯವರ ಸ್ಮರಣಾರ್ಥ ಈ ಕೃತಿಯ ಪ್ರಕಾಶನದಲ್ಲಿ ಸಹಕರಿಸಿದ್ದೇನೆ. ತಾಯಿ ತಂದೆಯವರಿಗೆ ಸಾದರ ಪ್ರಣಾಮಗಳು.

ಚ. ಈ. ಶಾಸ್ತ್ರೀ. (C. I. Shastry)

ಸಂಪಾದಕರ ಮಾತು



ಮೂಡಂಬೈಲಿನಲ್ಲಿದ್ದ ಚಕ್ರಕೋಡಿ ಮನೆತನದ ನಮ್ಮ ಹಿರಿಯರಾದ ಚ. ಕೃಷ್ಣ ಶಾಸ್ತ್ರೀ, ತಿಮ್ಮಣ್ಣ ಶಾಸ್ತ್ರೀ, ಭೀಮ ಶಾಸ್ತ್ರೀ ಮೊದಲಾದವರು ಸಾಮಾನ್ಯ ನೂರು ವರ್ಷಕ್ಕಿಂತ ಮೊದಲು ಪಂಚಾಂಗ ತಯಾರಿಸಲು ಉಪಯುಕ್ತವಾದ 'ಸದ್ರತ್ನ ಮಾಲಿಕಾ', ವಾಸ್ತುಶಿಲ್ಪಕ್ಕೆ ಸಂಬಂಧಿಸಿದ 'ಮನುಷ್ಯಾಲಯಚಂದ್ರಿಕಾ', ಗಣಿತ ಗ್ರಂಥವಾದ 'ಲೀಲಾವತೀ', ಮುಹೂರ್ತ ನೋಡಲು ಆವಶ್ಯಕವಾದ 'ಮುಹೂರ್ತಪದವೀ' ಇತ್ಯಾದಿ ಗ್ರಂಥಗಳಿಗೆ ಕನ್ನಡ ಭಾಷೆಯಲ್ಲಿ ವ್ಯಾಖ್ಯಾನ ಬರೆದು ತಾಳೆಯ ವಾಲೆಯಲ್ಲಿ ತುಳುಲಿಪಿಯಲ್ಲಿ ಉಲ್ಲೇಖಿಸಿ ಇಟ್ಟಿದ್ದರು. ಇವುಗಳನ್ನು ಜನರ ಉಪಯೋಗಕ್ಕಾಗಿ ಮುದ್ರಿಸಿ ಪ್ರಕಟಿಸಬೇಕೆಂದು ನಾನು ಮತ್ತು ನನ್ನ ಪೂಜ್ಯ ದೊಡ್ಡ ತಂದೆಯವರ ಮಗನಾದ ಸಿ. ಐ. ಶಾಸ್ತ್ರಿಯು ಆಲೋಚಿಸಿ ನಮ್ಮ ಧಾರ್ಮಿಕ ಗುರುಪೀಠಾಧಿಪತಿಗಳಾದ ಶ್ರೀಮಜ್ಜಗದ್ಗುರುಶಂಕರಾಚಾರ್ಯ ಶ್ರೀರಾಮಚಂದ್ರಾಪುರ ಮಠ ಶ್ರೀರಾಘವೇಂದ್ರಭಾರತೀಮಹಾಸ್ವಾಮಿಗಳವರ ಆಶೀರ್ವಾದ ಸುವರ್ಣ ಮಂತ್ರಾಕ್ಷತೆ ಸಹ ಪಡೆದು ಮೊದಲನೆಯದಾಗಿ ಈ 'ಮುಹೂರ್ತಪದವೀ ಸಟೀಕಾ' ಪುಸ್ತಕವನ್ನು ಪ್ರಕಟಿಸುತ್ತಿದ್ದೇವೆ.

ಧಾರ್ಮಿಕ ಹಾಗೂ ಲೌಕಿಕ ಕಾರ್ಯಗಳನ್ನು ಶುಭಕಾಲದಲ್ಲಿ ಮಾಡಿದರೇ ಶುಭಫಲ ಸಿಗುವುದಾದ ಕಾರಣ ಅಂತಹ ಶುಭಕಾಲವನ್ನು ತಿಳಿಯುವುದಕ್ಕೆ ಇಂತಹ ಸಾರಭೂತವಾದ ಪುಸ್ತಕದ ಆವಶ್ಯಕತೆ ಇದೆ. ಜ್ಯೋತಿಷ ಶಾಸ್ತ್ರವು ವೇದಾಂಗಗಳಾದ ಆರು ಶಾಸ್ತ್ರಗಳಲ್ಲಿ ಒಂದು. ಈ 'ಮುಹೂರ್ತಪದವೀ' ಗ್ರಂಥಕ್ಕೆ 'ವರದೀಪಿಕಾ ವ್ಯಾಖ್ಯಾನ'ವೆಂದು ಸಂಸ್ಕೃತ ಭಾಷೆಯಲ್ಲಿ ಟೀಕೆ ಇದೆ. ಅದರಲ್ಲಿ 'ಅಭಿನವ ಮುಹೂರ್ತಪದವೀ' ಎಂದು ಹೆಸರಿಟ್ಟು, ಮೂಲ ಶ್ಲೋಕಗಳು ಮೂವತ್ತಾರೇ ಇದ್ದು, ಶ್ಲೋಕಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿರುವುದು ಕಾಣುತ್ತದೆ. ಕನ್ನಡ ಭಾಷೆಯಲ್ಲಿ ಈ ವರೇಗೆ ನಮ್ಮ ತಿಳುವಳಿಕೆ ಪ್ರಕಾರ ಯಾರೂ ವ್ಯಾಖ್ಯಾನ ಬರೆಯಲಿಲ್ಲ. ಈ ಗ್ರಂಥದಲ್ಲಿ ಧರ್ಮ ಕರ್ಮಾಚರಣೆ ಮತ್ತು ಇತರ ಎಲ್ಲ ಕಾರ್ಯಗಳಿಗೆ ಆಗಬೇಕಾದ ಶುಭಮುಹೂರ್ತಗಳನ್ನೂ, ತ್ಯಾಜ್ಯ ದೋಷಗಳನ್ನೂ ಕೇವಲ ನಲುವತ್ತು ಶ್ಲೋಕಗಳಲ್ಲಿ ಹೇಳಿದ್ದಾರೆ. ಅದಕ್ಕೆ ಪೋಷಕವಾಗಿ ಸೂರ್ಯ ವಸಿಷ್ಠನಾರದ ಗಾರ್ಗ್ಯಾದಿ ಜ್ಯೋತಿಸ್ಸಿದ್ಧಾಂತ ಪ್ರವರ್ತಕರಾದ ಮಹರ್ಷಿಗಳ ವಚನದೊಂದಿಗೆ ಆ ಕಾಲದ ಅವರ ಕನ್ನಡ ಭಾಷೆಯಲ್ಲಿ ನಮ್ಮ ಹಿರಿಯರಿಂದ

ಬರೆಯಲ್ಪಟ್ಟಂತಹ ಟೀಕೆಯನ್ನು ಇದ್ದುದು ಇದ್ದಂತೆ ಈ ಪುಸ್ತಕದಲ್ಲಿ ಕೊಟ್ಟಿದ್ದೇವೆ. ಆಧುನಿಕರಿಗೆ ಇದರ ಅರ್ಥವಾಗುವುದಕ್ಕೆ ತೊಂದರೆಯಾಗಲಿಕ್ಕಿಲ್ಲವೆಂದು ನಂಬಿದ್ದೇವೆ. ಇದರಲ್ಲಿ ನಮಗೆ ಆ ಕಾಲದ ನಮ್ಮ ಹಿರಿಯರ ನುಡಿಕಟ್ಟು ಹೇಗಿತ್ತೆಂಬುದನ್ನು ತಿಳಿಸುವುದೂ ಒಂದು ಉದ್ದೇಶವಾಗಿದೆ. ಈ ಪುಸ್ತಕದಿಂದ ಶುಭಮುಹೂರ್ತಗಳನ್ನು ನೋಡಲು ಮತ್ತು ಹೇಳಲು ಅಭ್ಯಾಸ ಮಾಡುವವರಿಗೆ ಬಹಳ ಪ್ರಯೋಜನವಿದೆ ಹಾಗೂ ಇದು ಒಂದು ಕೈಪಿಡಿಯಂತಿದೆ. ಇಷ್ಟು ಸಂಕ್ಷಿಪ್ತ ಹಾಗೂ ಉತ್ಕೃಷ್ಟ ಗ್ರಂಥವು ಬೇರೊಂದಿಲ್ಲವೆಂಬುದು ನಮ್ಮ ಅಭಿಪ್ರಾಯ.

ಈ ಪುಸ್ತಕದಲ್ಲಿ ಸಂಖ್ಯೆ ಹಾಕಿದ ಶ್ಲೋಕಗಳು ಮಾತ್ರ ಮೂಲ ಗ್ರಂಥಕಾರರದ್ದಾಗಿವೆ. ಇತರ ದಪ್ಪ ಅಕ್ಷರಗಳಲ್ಲಿರುವ ಶ್ಲೋಕಗಳೆಲ್ಲ ವ್ಯಾಖ್ಯಾನಕಾರರಿಂದ ಸೇರಿಸಲ್ಪಟ್ಟವುಗಳು.

ತಾಳೆವಾಲೆಯಲ್ಲಿ ತುಳುಲಿಪಿಯಲ್ಲಿ ಬರೆದಿದ್ದ ಈ ಕೃತಿಯನ್ನು ಕ್ರಿ.ಶ. ೧೯೭೨ರಲ್ಲಿ ನಾನು ಓದಿ ಹೇಳಿದಂತೆ ನಮ್ಮ ದ್ವಿತೀಯ ಪುತ್ರ ಚ. ಮೂ. ಕೃಷ್ಣಶಾಸ್ತ್ರಿಯು ಕನ್ನಡ ಲಿಪಿಯಲ್ಲಿ ಬರೆದುಕೊಟ್ಟಿದ್ದಾನೆ. ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಶ್ರೀಗುರುಗಳ ಶುಭಾಶೀರ್ವಾದ ಮತ್ತು ಬಂಧುಮಿತ್ರರ ಶುಭಾಶಯದಿಂದ ಅನುಕೂಲ ಕಾಲವು ಈಗ ಒದಗಿದೆ. ಸಹೃದಯಿಗಳಾದ ಮಹಾಜನರು ಈ ಕೃತಿಯನ್ನು ಕೊಂಡುಕೊಂಡು ಓದಿ ಸಫಲರಾದರೆ ನಮ್ಮ ಪರಿಶ್ರಮವು ಸಾರ್ಥಕ ಹಾಗೂ ಇನ್ನಿತರ ಕೃತಿಗಳನ್ನು ಪ್ರಕಟಿಸಲಿಕ್ಕೆ ಉಪಕಾರವಾಗುವುದು. ಇದರ ಪ್ರಕಾಶನಕ್ಕೆ ಪ್ರಚೋದನೆ ಮತ್ತು ಆರ್ಥಿಕ ಸಹಕಾರವನ್ನಿತ್ತ ನನ್ನ ತಮ್ಮ ಚಿ। ಸಿ. ಐ. ಶಾಸ್ತ್ರಿಯವರಿಗೆ ನನ್ನ ಹಾರ್ದಿಕ ಶುಭಾಶಯಗಳು. ಇದನ್ನು ಕೊಂಡುಕೊಳ್ಳುವ ಗ್ರಾಹಕರಿಗೆಲ್ಲ ಕೃತಜ್ಞತೆಗಳು. ಇದನ್ನು ಅಂದವಾಗಿ ಮುದ್ರಿಸಿಕೊಟ್ಟ 'ಶೋಭಾ ಪ್ರೊಸೆಸ್ ಪ್ರಿಂಟರ್ಸ್'ನ ಒಡೆಯರಿಗೆ ಮತ್ತು ಕೆಲಸಗಾರರಿಗೆ ಅಭಿನಂದನೆಗಳು. ಈ ಪುಸ್ತಕದಲ್ಲಿ ಹಾಕಲು ನನ್ನ ಪೂಜ್ಯ ದೊಡ್ಡತಂದೆ ದೊಡ್ಡತಾಯಿಯವರ ಭಾವಚಿತ್ರವನ್ನು ಒದಗಿಸಿದ ಇವರ ಮಗಳು ಸೌ। ಕೆ. ಎಸ್. ಶಂಕರಿಗೆ ಅನಂತ ಆಶೀರ್ವಾದಗಳು. ಈ ಪುಸ್ತಕ ಪ್ರಕಾಶನಕ್ಕೆ ಸಹಕರಿಸಿದವರಿಗೆಲ್ಲ ವಂದನೆಗಳು.

ಕೊನೆಯದಾಗಿ ಸುವರ್ಣ ಮಂತ್ರಾಕ್ಷತೆ ಸಹಿತ ದಿವ್ಯ ಸಂದೇಶ ಭಾವಚಿತ್ರಗಳನ್ನಿತ್ತು ನಮ್ಮನ್ನು ಹರಸಿದ ಶ್ರೀಮಜ್ಜಗದ್ಗುರುಶಂಕರಾಚಾರ್ಯ ಶ್ರೀರಾಮಚಂದ್ರಾಪುರ ಮಠ ಶ್ರೀರಾಘವೇಂದ್ರಭಾರತೀಮಹಾಸ್ವಾಮಿಗಳ ಚರಣಾರವಿಂದಗಳಿಗೆ ಸಾಷ್ಟಾಂಗ ಪ್ರಣಾಮಗಳು.

ಇತಿ

ಕೆದಿಲ, 'ಶಾಸ್ತ್ರಿ ನಿವಾಸ'
ತಾರೀಕು ೩-೧೦-೧೯೮೪
ವಿಜಯದಶಮೀ.

ಚ. ಮೂ. ಈಶ್ವರ ಶಾಸ್ತ್ರೀ.

ಸಹಪ್ರಕಾಶಕರ ಮಾತು



ಮೂಲೆಯಲ್ಲಿ ತುಕ್ಕು ಹಿಡಿಯುತ್ತ ಬಿದ್ದಿರುವ ದೀಪವನ್ನು ಹೊರತಂದು, ತಿಕ್ಕಿ ತೊಳೆದು, ಎಣ್ಣೆ ಎರೆದು, ಬತ್ತಿ ಇಟ್ಟು ಉರಿಸಿ, 'ತಮಸೋ ಮಾ ಜ್ಯೋತಿರ್ಗಮಯ' ಎಂದು ನನ್ನ ಅಣ್ಣನವರಾದ ಚ. ಮೂ. ಈಶ್ವರ ಶಾಸ್ತ್ರಿಗಳು ಸಾಂಕೇತಿಕವಾಗಿ ಈ ಪುಸ್ತಕದ ಮೂಲಕ ಬೇಡಿಕೊಂಡಿರುವರೆಂದು ನನಗನಿಸುತ್ತದೆ.

ಸುಮಾರು ಒಂದು ಶತಮಾನದ ಹಿಂದೆಯೇ ನಮ್ಮ ಚಕ್ರಕೋಡಿ ಕುಟುಂಬದ ಧೀಮಂತ ಹಿರಿಯರು ನಮ್ಮ ಮೂಲ ಮನೆ ಚಕ್ರಕೋಡಿಯಾದರೂ ಪಾಂಡಿತ್ಯದ ಕೀರ್ತಿಯ ಶಿಖರವೇರಿದ ಹೆಚ್ಚಿನವರೂ ಆದಿಮನೆ ಎನ್ನಲಾಗುವ ಮೂಡಂಬೈಲಿನಲ್ಲಿ ಹುಟ್ಟಿದವರು, ಬೆಳೆದವರು. ಈ ಮನೆಯಲ್ಲಿ ತುಳು (ಮಲೆಯಾಳ ಅಕ್ಷರಕ್ಕೆ ಹೋಲುವ) ಅಕ್ಷರದಲ್ಲಿ ಹನೆ ಓಲೆ (ಗರಿ)ಯಲ್ಲಿ (ಆಗ ಕಾಗದದ ಪ್ರಚಾರ ಹೆಚ್ಚು ಇಲ್ಲವಾಗಿದ್ದ ಕಾರಣ) ಬರೆದಿದ್ದರೂ, ಅನಂತರದ ಹಲವು ವ್ಯಕ್ತಿಗಳು ತುಳುಬರಹವನ್ನು ಓದಲು ಮತ್ತು ಪುಸ್ತಕ ಪ್ರಕಾಶನ ಮೊದಲಾದ ಕೆಲಸಗಳನ್ನು ಮಾಡಲು ಸಮರ್ಥರಾಗಿದ್ದರೂ ಈ 'ಮುಹೂರ್ತ ಪದವಿ'ಯು ಆಧುನಿಕ ಪುಸ್ತಕ ರೂಪದಲ್ಲಿ ವಾಚಕರ ಕೈಸೇರಿರುವುದು ನನ್ನ ಅಣ್ಣನವರ ಅವಿರತ ಪ್ರಯತ್ನದ ಫಲವೆನ್ನಬೇಕು. ಅಷ್ಟೇ ಅಲ್ಲ, ಗತಿಸಿದವರಿಗೆ ಶ್ರದ್ಧೆ ಮತ್ತು ಗೌರವಪೂರ್ಣವಾಗಿ ಅರ್ಪಿಸುವ ನಮನವೆನ್ನಲೂಬಹುದು. ಹೇಗೂ ಇರಲಿ. ಅಟ್ಟದಲ್ಲಿ ಹೊಗೆ ಹಿಡಿಯುತ್ತ ಬಿದ್ದಿದ್ದ ಆ ಗರಿಯೋಲೆಗಳನ್ನು ಹುಡುಕಿ ಓದಿ ಕನ್ನಡ (ಆಗಿನ) ಭಾಷೆಯಲ್ಲಿ ಅನುಗೊಳಿಸಿ ಮುದ್ರಿಸಿ ಸದ್ಯದ ಸ್ಥಿತಿಯಲ್ಲಿ ಜನರ ಮುಂದಿಟ್ಟ 'ಅಣ್ಣ'ನವರ ಪ್ರಯತ್ನವು 'ಕತ್ತಲಿಂದ ಬೆಳಕಿನೆಡೆ ನಡೆಸು!' ಎನ್ನುವ ಪ್ರಾರ್ಥನೆಯಲ್ಲದೆ ಮತ್ತೇನು?

ಹೊಟ್ಟೆಪಾಡಿಗಾಗಿ, ಅನಿವಾರ್ಯವಾಗಿ, ಹುಟ್ಟೂರಿನ ಮಣ್ಣು, ಗಾಳಿ, ನೀರು ಮತ್ತು ಜನರನ್ನು ಬಿಟ್ಟು ಈ ಪ್ರಾಂತಕ್ಕೆ ಬಂದರೂ ನನ್ನ 'ಚಕ್ರಕೋಡಿ ಮೂಡಂಬೈಲು' ಕುಟುಂಬದ ಹಿರಿತನದ ಭಾವನೆಯು ನನ್ನ ಉಸಿರಿನೊಡನೆ ಬೆರೆತಿದೆ. ಹೀಗಾಗಿ ನಮ್ಮ ಹಿರಿಯರ ವಿದ್ವತ್ತಿನ ಜ್ಞಾನದ ಆದರಿಂದಾಗಿ ಲಭಿಸುವ ಮಾನದ ಪರಿಚಯವನ್ನು ಕಿಂಚಿತ್ತಾದರೂ ನಮ್ಮ ಸಮಾಜದ ಜನರ ಅರಿವಿಗೆ ತರಬೇಕೆನ್ನುವ ಉತ್ಕಟೇಚ್ಛೆ ನನ್ನನ್ನು ಬಹುದಿನಗಳಿಂದ ಕಾಡುತ್ತಿತ್ತು. ಈ ವಿಚಾರವನ್ನು ಅಣ್ಣನವರಲ್ಲಿ ಚರ್ಚಿಸಿದಾಗ ಅವರು ಉತ್ಸಾಹದಿಂದ ಈ ಪುಸ್ತಕವನ್ನು ಪ್ರಕಟಿಸುವ ಯೋಜನೆಯನ್ನು ಮುಂದಿಟ್ಟರು. ಇಂತಹ ಇನ್ನೂ ಹಲವು ಗ್ರಂಥಗಳಿವೆ. ಯಾವುದೇ ಕಾರ್ಯಕ್ಕೆ "ಮುಹೂರ್ತ" ನೋಡುವುದು

ಹೆಚ್ಚಿನವರಲ್ಲಿ ಅದರಲ್ಲೂ ಹಿಂದುಗಳಲ್ಲಿ ಈಗಲೂ ಪ್ರಚಲಿತ ಪದ್ಧತಿಯಾಗಿದ್ದು, "ಮುಹೂರ್ತಪದವಿ"ಯು ಉಪಯುಕ್ತವಾಗಬಹುದೆಂದೂ ಸೂಚಿಸಿದರು. ನಾನು ನನ್ನ ಬೆಂಬಲ (ದೂರದಿಂದ!) ಕೊಡುವ ಭರವಸೆ ನೀಡಿದೆ. ಆದರೆ ಅವರ ಹುಮ್ಮಸ್ಸು ಶ್ರಮಕ್ಕೆ ತುಲನೆ ಮಾಡಿದಾಗ ನನ್ನದು 'ಕಿಲೋ'ದಲ್ಲಿ ಒಂದು 'ಗ್ರಾಂ'ನಷ್ಟೂ ಆಗಲಾರದು.

ಪುಸ್ತಕದಲ್ಲಿ ಅಡಕವಾಗಿರುವ ವೈಶಿಷ್ಟ್ಯ ಉಪಯುಕ್ತತೆ ಮುಂತಾದವುಗಳ ಬಗೆಗೆ ವಾಚಕರು ಓದಿ ತಿಳಿಯುವುದೇ ಉತ್ತಮವೆಂದು ನನ್ನ ಅಭಿಪ್ರಾಯ. ಅಂತೂ 'ಮುಹೂರ್ತಪದವಿ'ಯು ಮುಹೂರ್ತ ಹೇಳುವವರಿಗೂ, ತಿಳಿಯಬಯಸುವವರಿಗೂ ಕೈದೀವಿಗೆಯಂತೆ ನೆರವಾಗಲೆಂದು ಹಾರೈಕೆ.

ಪನವೇಲ-ಮುಂಬಯಿ
ಆಗೋಸ್ತು ೨೧, ೧೯೯೫. ಚ. ಈ. ಶಾಸ್ತ್ರೀ.

ವಿಷಯಸೂಚೀ

॥ ಸ್ವಸ್ತಿ ಶ್ರೀ ಗುರುಗಣಪತ್ಯುಮಾಮಹೇಶ್ವರಸವಗ್ರಹೇಭ್ಯೋನಮಃ ॥

॥ ಮುಹೂರ್ತಪದವೀ ಸಟೀಕಾ ॥

ಅಥ ಮುಹೂರ್ತಪದವೀವ್ಯಾಖ್ಯಾನಂ ಲಿಖ್ಯತೇ ॥ ಶುಭಮಸ್ತು ॥
ಬಾಲಾಂ ವಾಣೀಂ ಗುರೂನ್ನತ್ವಾ ವಿನಾಯಕಮುಮಾಪತಿಂ ॥
ಮುಹೂರ್ತಪದವೀಟೀಕಾಂ ಲಿಖೇ ಕರ್ನಾಟಭಾಷಯಾ ॥

ಇಲ್ಲಿ ಗ್ರಂಥಕರ್ತೃವಾದವನು ತನ್ನ ಅಭೀಷ್ಟವಹ ಗ್ರಂಥಕ್ಕೆ ನಿರ್ವಿಘ್ನದಿಂದ ಆರಂಭ ಪರಿಸಮಾಪ್ತಿ ಸಿದ್ಧಿಗೋಸ್ಕರ ಇಷ್ಟದೇವತಾವಂದನೆ ಪುರಸ್ಸರವಾಗಿ ಪ್ರತಿಜ್ಞೆ ಮಾಡುತ್ತಾನೆ.

ಪ್ರತ್ಯಂಹಪ್ರತಿಹಂತೃಕಿಂಚನಮಹಸ್ಸಂಚಿಂತ್ಯ ಭಾಸಾಂ ನಿಧಿಂ ।
ಭಾನುಂ ಚ ಕ್ರಿಯತೇ ಮುಹೂರ್ತಪದವೀ ಸಂಕ್ಷಿಪ್ತಶಾಸ್ತ್ರಾಂತರಾ ॥
ವರ್ಜ್ಯಾವರ್ಜ್ಯವಿವೇಚಿನೀ ಕೃತಸದಾಚಾರಾನುಸಾರಾ ಮಯಾ ।॥
ಸಂತುಷ್ಯಂತು ತರಾಂ ಚಿರಾಯ ಸುಧಿಯೋ ದೇವಾಃ ಪ್ರಸೀದಂತು ನಃ ॥ ೧ ॥

ಅನುವಾದ:- ಪ್ರತ್ಯಂಹ = ವಿಘ್ನವನ್ನು, ಪ್ರತಿಹಂತೃ = ನಾಶಮಾಡುವಂಥ, ಕಿಂಚನ = ಅನಿರ್ವಚನೀಯವಾದಂಥ, ಮಹಃ = ತೇಜಃಸ್ವರೂಪವಾದ, ಮಹಾಗಣಪತಿಯನ್ನೂ, ಭಾಸಾಂ = ಕಿರಣಗಳಿಗೆ, ನಿಧಿಂ = ಆವಾಸಸ್ಥಾನವಾದಂಥ, ಭಾನುಂಚ = ಸೂರ್ಯನನ್ನೂ, ಸಂಚಿಂತ್ಯ = ಧ್ಯಾನಿಸಿ, ಸಂಕ್ಷಿಪ್ತ = ಸಂಕ್ಷೇಪಿಸಲ್ಪಟ್ಟಂಥ, ಶಾಸ್ತ್ರಾಂತರಾ = ಶಾಸ್ತ್ರಾಂತರ ವುಳ್ಳಂಥ, ವರ್ಜ್ಯಾವರ್ಜ್ಯವಿವೇಚಿನೀ = ವರ್ಜ್ಯಾವರ್ಜ್ಯದೋಷಗುಣಗಳಿಂದ ವಿವೇಚಿಸಿ ಯಾಗಿರುವಂಥ, ಕೃತ=ಮಾಡಲ್ಪಟ್ಟಂಥ, ಸದಾಚಾರ=ಉತ್ತಮ ಆಚಾರಕ್ಕೆ, ಅನುಸಾರಾ= ಅನುಸಾರವಾಗಿರುವಂಥ, ಮುಹೂರ್ತಪದವೀ = ಮುಹೂರ್ತಪದವೀ ಎಂಬ ಶಾಸ್ತ್ರವು, ಕ್ರಿಯತೇ = ಮಾಡಲ್ಪಡುತ್ತದೆ. ಸುಧಿಯಃ = ವಿದ್ವಾಂಸರುಗಳು, ತರಾಂ = ಅಧಿಕವಾಗಿ, ನಃ = ನಮಗೋಸ್ಕರ, ಸಂತುಷ್ಯಂತು = ಸಂತೋಷಿಸಲಿ. ದೇವಾಃ=ದೇವರ್ಕಳು, ನಃ=ನಮ ಗೋಸ್ಕರ, ಚಿರಾಯ=ಬಹುಕಾಲವೂ, ಪ್ರಸೀದಂತು=ಪ್ರಸಾದಿಸಲಿ ಎಂದನ್ವಯಾರ್ಥವು.

ತಾತ್ಪರ್ಯ:- ಧ್ಯಾನಮಾತ್ರ ಮಾಡಲಾಗಿ ಸಮಸ್ತವಿಘ್ನವನ್ನು ಪರಿಹರಿಸುವಂಥ ಮಹಾ ಗಣಪತಿಯನ್ನು ಮತ್ತು ಬಹಳ ಅತಿಶಯವಾದ ಪ್ರಭೆಗಳಿಗೆಲ್ಲ ಆವಾಸಸ್ಥಾನವಾಗಿರುವ ಸೂರ್ಯನನ್ನು ಧ್ಯಾನಿಸಿ ಸಮಸ್ತ ಮುಹೂರ್ತ ಶಾಸ್ತ್ರಗಳಿಂದೆಲ್ಲ ಅವಶ್ಯವಾಗಿರುವ ಗುಣದೋಷಗಳ ಸಂಗ್ರಹಿಸಿ ಸಂಕ್ಷೇಪಿಸಿ ಆ ಪ್ರಕಾರ ವರ್ಜ್ಯ ಅವರ್ಜ್ಯ ಗುಣದೋಷ ಗಳಿಂದ ಉತ್ತಮಾಚಾರಾನುಸಾರವಾಗಿರುವ ಮುಹೂರ್ತಪದವೀ ಎಂಬ ಮುಹೂರ್ತ ಶಾಸ್ತ್ರವು ನನ್ನಿಂದ ಮಾಡಲ್ಪಡುತ್ತದೆ. ಇದರನ್ನು ನೋಡಿ ವಿದ್ವಾಂಸರಾದವರು ಅಧಿಕವಾಗಿ ಸಂತೋಷಿಸಲಿ. ದೇವತೆಗಳು ನಮಗೋಸ್ಕರ ಅನುಕೂಲ ಅನುಗ್ರಹಿಸಲಿ ಎಂಬ ತಾತ್ಪರ್ಯ.

ಅನಂತರದಲ್ಲಿ ದೋಷಲಕ್ಷಣ ಬಲಾಬಲಾದಿಗಳು ಹೇಳದಿರುವುದಕ್ಕೆ ಕಾರಣ ಹೇಳುತ್ತಾನೆ.

ದೋಷಲಕ್ಷಣಬಲಾಬಲಾದಿಕಂ ಗ್ರಂಥವಿಸ್ತರಭಯಾದುಪೇಕ್ಷ್ಯತೇ ॥
ತತ್ಸ್ವರೂಪಮಿಹ ಸಂಜಿಘೃಕ್ಷಿತಂ ಸರ್ವಕರ್ಮಸು ವಿವೇಕಸಿದ್ಧಯೇ ॥ ೨ ॥

ಅನ್ವಯಾರ್ಥ:- ದೋಷಲಕ್ಷಣೇತಿ - ದೋಷಲಕ್ಷಣಬಲಾಬಲಾದಿಕಂ = ದೋಷಗಳ ಲಕ್ಷಣಗಳು ಬಲಾಬಲಗಳು ಮೊದಲಾಗಿರುವಂಥಾದ್ದು, ಗ್ರಂಥವಿಸ್ತರಭಯಾತ್=ಗ್ರಂಥ ವಿಸ್ತಾರದಭಯದ ದೆಸೆಯಿಂದ, ಉಪೇಕ್ಷ್ಯತೇ = ಉಪೇಕ್ಷಿಸಲ್ಪಡುತ್ತದೆ. ಇಹ = ಇಲ್ಲಿ, ಸರ್ವಕರ್ಮಸು = ಸಮಸ್ತ ಕರ್ಮಗಳಲ್ಲಿ, ವಿವೇಕಸಿದ್ಧಯೇ = ವಿವೇಕ ಸಿದ್ಧಿಗೋಸ್ಕರ, ತತ್ಸ್ವರೂಪಂ = ಆ ದೋಷಗಳ ಸ್ವರೂಪವನ್ನು, ಸಂಜಿಘೃಕ್ಷಿತಂ = ಸಂಕ್ಷೇಪಿಸಲ್ಪಟ್ಟಿತು ಎಂದರ್ಥ.

ತಾತ್ಪರ್ಯ:- ದೋಷಗಳ ಲಕ್ಷಣಗಳು ಮತ್ತು ಗುಣದೋಷಗಳು ಬಲಾಬಲಗಳು ಆದಿ ಶಬ್ದದಿಂದ ಈ ಮುಹೂರ್ತವಿಷಯವಾಗಿರುವ ಅನೇಕ ಲಕ್ಷಣಂಗಳು ಸಹ ಗ್ರಂಥ ವಿಸ್ತಾರವಾಗುವ ಭಯದ ದೆಸೆಯಿಂದ ಈ ಮುಹೂರ್ತಪದವೀ ಎಂಬ ಶಾಸ್ತ್ರದಲ್ಲಿ ಯಾವುಗಳನ್ನೂ ಹೇಳಲಿಲ್ಲ. ಆ ದೋಷ ಲಕ್ಷಣ ಬಲಾಬಲಾದಿಗಳನ್ನೂ ಕೂಡಾ ಹೇಳುವುದಾದರೆ ಬಹಳ ಗ್ರಂಥಗಳು ಬೇಕಾಗುತ್ತವೆ. ಆದ್ದರಿಂದ ಇದರಲ್ಲಿ ಹೇಳಲಿಲ್ಲ ಎಂಬ ತಾತ್ಪರ್ಯ. ಆ ದೋಷಗಳ ಸ್ವರೂಪವನ್ನು ಸಂಕ್ಷೇಪದಿಂದ ಹೇಳುತ್ತದೆ ಎಂದರಿಯುವುದು. ಅದು ಯಾವುದರಿಂದ ಹೇಳಬೇಕಾಯಿತೆಂದರೆ ಸಮಸ್ತ ಮುಹೂರ್ತ ಗಳಿಗೆ ಶುಭಕಾಲಸಿದ್ಧಿಯಾಗುವುದಕ್ಕೋಸ್ಕರವೆಂದರ್ಥ.

ಅನಂತರ ಸಮಸ್ತ ಮುಹೂರ್ತಗಳಲ್ಲಿಯೂ ಅವಶ್ಯವಾಗಿ ವರ್ಜಿಸುವ ದೋಷ ಗಳನು ಹೇಳುತ್ತಾನೆ-

ಉಲ್ಕೋರ್ವೀಚಲನೋಪರಾಗಗುಲಿಕಾಃ ಸಾಯಾಹ್ನಸಂಧ್ಯಾದಯೋ ।
ರಂಧ್ರಾಂತ್ಯಾರಿಗತೋ ವಿಧುಶ್ಚ ಸಿತದೃಕ್ಪಾಪೋದಯಾವೇಕ್ಷಣಂ ॥
ಗಂಡಾಂತೋಷ್ಣವಿಷಂ ಸ್ಥಿರಂ ಚ ಕರಣಂ ವಿಷ್ಟಿಶ್ಚ ರಿಕ್ತಾಷ್ಟಮೀ ।॥
ಲಾಟೈಕಾರ್ಗಲವೈಧೃತಾಹಿಶಿರಸಸ್ಸರ್ವತ್ರ ವರ್ಜ್ಯಾ ಅಮೀ ॥ ೩ ॥

ಅನ್ವಯಾರ್ಥ:- ಉಲ್ಕಾ=ಉಲ್ಕಾಪಾತ, ಉರ್ವೀಚಲನ=ಭೂಕಂಪ, ಉಪರಾಗ=ಗ್ರಹಣ, ಗುಲಿಕಾಃ = ಗುಲಿಕೋದಯ ಎಂದಿವುಗಳೂ, ಸಾಯಾಹ್ನಸಂಧ್ಯಾದಯಃ = ಸಾಯಾಹ್ನ ಸಂಧ್ಯಾದಿಗಳು, ರಂಧ್ರ = ಅಷ್ಟಮ, ಅಂತ್ಯ = ದ್ವಾದಶ, ಅರಿ=ಷಷ್ಠ ಇಂತೆಂದಿವುಗಳನ್ನು, ಗತ = ಪ್ರಾಪ್ತಿಸಿದಂಥ, ವಿಧುಃ = ಚಂದ್ರನು, ಸಿತದೃಕ್ = ಶುಕ್ರದೃಷ್ಟಿಯೂ, ಪಾಪ=ಪಾಪ ಗ್ರಹರ, ಉದಯ = ಉದಯವು, ಅವೇಕ್ಷಣಂ = ದೃಷ್ಟಿಯು, ಗಂಡಾಂತ = ಗಂಡಾಂತವು, ಉಷ್ಣ=ಉಷ್ಣಶಿಖೆಯು, ವಿಷಂ = ವಿಷ ಎಂದಿವುಗಳು, ಸ್ಥಿರಂ ಚ ಕರಣಂ = ಸ್ಥಿರಕರಣವು, ವಿಷ್ಟಿಃ = ಭದ್ರಕರಣವು, ರಿಕ್ತ = ರಿಕ್ತತಿಥಿಯು, ಅಷ್ಟಮೀ=ಅಷ್ಟಮಿಯು, ಲಾಟ=ಲಾಟ ದೋಷವು, ಏಕಾರ್ಗಲ = ಏಕಾರ್ಗಲ ದೋಷವು, ವೈಧೃತ = ವೈಧೃತ ದೋಷವು,

ಅಹಿಶಿರಸಃ = ಸರ್ಪಮಸ್ತಕ ದೋಷ ಎಂದಿವುಗಳು. **ಅಮೀ** = ಈ ದೋಷಗಳು **ಸರ್ವತ್ರ** = ಸಮಸ್ತ ಮುಹೂರ್ತಗಳಲ್ಲಿಯೂ. **ವರ್ಜ್ಯಾಃ** = ವರ್ಜ್ಯಗಳು ಎಂದರ್ಥ. ತಾತ್ಪರ್ಯ- ಉಲ್ಕಾಪಾತ, ಉರ್ವೀಚಲನ, ಗ್ರಹಣ ಗುಲಿಕೋದಯ, ಸಾಯಾಹ್ನ, ಸಂಧ್ಯಾದಿದುಷ್ಟಕಾಲ, ಅಷ್ಟಮ ದ್ವಾದಶ ಷಷ್ಠಗಳಲ್ಲಿ ಚಂದ್ರನಿರುವುದು, ಶುಕ್ರವೃಷ್ಟಿ, ಪಾಪಗ್ರಹರ ಉದಯ ದೃಷ್ಟಿ, ಗಂಡಾಂತ, ಉಷ್ಣಶಿಖೆ, ವಿಷ, ಸ್ಥಿರಕರಣ, ಧ್ರುವಕರಣ, ರಿಕ್ತತಿಥಿ, ಅಷ್ಟಮಿ, ಲಾಟ, ಏಕಾರ್ಗಲ, ವೈಧೃತ, ಸಾರ್ಪಮಸ್ತಕ ಎಂತೀ ದೋಷಗಳನ್ನು ಸಮಸ್ತ ಮುಹೂರ್ತಗಳಲ್ಲಿಯೂ ಅವಶ್ಯವಾಗಿ ವರ್ಜಿಸಬೇಕು.

ಉಲ್ಕಾಲಕ್ಷಣವನ್ನು ನಾರದನು ಹೇಳಿದನು-

ಉಲ್ಕಾ ಶಿರಸಿ ವಿಶಾಲಾ ನಿಪತಂತೀ ವರ್ಧತೇ ಪ್ರತನುಪುಚ್ಛಾ ॥ ದಸ್ಯೋಮಹದನಿ ಪುರುಷಾ ಭೇದಾ ಬಹವೋ ಭವಂತಿ ಭವಂತ್ಯಸ್ಯ ॥ ॥

ಈ ಪ್ರಕಾರದ ಲಕ್ಷಣವಿರುವುದಕ್ಕೆ ಉಲ್ಕಾಪಾತವೆಂಬುದು.

ಭೂಕಂಪವೆಂದರೆ ಮಹಾಶೇಷನು ಭೂಮಿಯನ್ನು ವಹಿಸಿ ಇರುವಾಗ್ಗೆ ತನಗೆ ಬಹಳ ಭಾರವಾಗಿ ಫಣೆಯಿಂದ ಮತ್ತೊಂದು ಫಣೆಗೆ ಇಳಿಸುವಾಗ ಭೂಮಿಯು ನಡುಗುವುದು. ಆವಾಗ ಉರ್ವೀಚಲನವೆಂಬ ದೋಷವಾಯಿತು. ಉರ್ವೀಚಲನವೆಂದರೂ ಭೂಕಂಪ ವೆಂದರೂ ಒಂದೇ ಆಗಿರುತ್ತದೆ.

ಅತ್ರ ನಾರದಃ- ಭೂಭಾರಖಿನ್ನನಾಗೇಂದ್ರಶಿರೋವಿಶ್ರಾಮಸಂಭವಃ ॥ ಭೂಕಂಪಃ ಸೋऽಪಿ ಜಗತಾಂ ಅಶುಭಾಯ ಭವೇತ್ಸದಾ ॥ ॥

ಉಲ್ಕಾಪಾತವೂ, ಭೂಕಂಪವೂ ಕಂಡಮೇಲೆ ಮೂರುದಿವಸ ಶುಭಕರ್ಮ ನಡೆಸಬಾರದು.

ಗ್ರಂಥಾಂತರಂ- ಉಲ್ಕಾಪಾತೇ ಚ ಭೂಕಂಪೇ ವರ್ಜಯೇದ್ದಿವಸತ್ರಯಂ ॥ ಗ್ರಹಣ ವನ್ನು ತಿಳಿಯುವುದಕ್ಕೆ ರಾಹು ಸಂಗಡವಾಗಲೀ, ಕೇತು ಸಂಗಡವಾಗಲೀ ಸೂರ್ಯನಿರು ವಾಗ ಹಗಲು ಅಮಾವಾಸ್ಯಾಂತ ಬಂದ ದಿವಸ ಆ ಅಮಾವಾಸ್ಯಾಂತಕ್ಕೆ ಸೂರ್ಯ ರಾಹುಗಳ ಸ್ಫುಟೀಕರಿಸಿ, ಅಂತರಿಸಿ, ಭುಜೀಕರಿಸಿ ನಿಂದ ಶೇಷವು ಸೂರ್ಯ-ಚಂದ್ರರ ಗತ್ಯಂತರದ ದಸೆಯಿಂದ ಕಿರಿದಾಗಿದ್ದರೆ ಸೂರ್ಯಗ್ರಹಣ ಉಂಟೆಂದರಿಯುವುದು. ಆ ರಾಹುಕೇತುಗಳಿಂದ ಒಬ್ಬನು- ಚಂದ್ರನ ಸಂಗಡ ಸೇರುವಾಗ ಪ್ರಾಹ್ಣಕಾಲದಲ್ಲಾಗಲೀ, ಸಾಯಾಹ್ನಕಾಲದಲ್ಲಾಗಲೀ, ರಾತ್ರಿಯಲ್ಲಾಗಲೀ ಪೌರ್ಣಮಾಸ್ಯಾಂತ ಬಂದು ಆ ಪೌರ್ಣ ಮಾಸ್ಯಾಂತಕ್ಕೆ ಚಂದ್ರರಾಹುಗಳ ಸ್ಫುಟೀಕರಿಸಿ, ಅಂತರಿಸಿ, ಭುಜೀಕರಿಸಿ ನಿಂದ ಶೇಷವು ಚಂದ್ರಾರ್ಕಗತ್ಯಂತರ ದಸೆಯಿಂದ ಕಿರಿದಾಗಿದ್ದರೆ ಚಂದ್ರಗ್ರಹಣ ಉಂಟೆಂದರಿಯುವುದು. ಇವರನ್ನು ಬೇರೆ ಗಣಿತ ಶಾಸ್ತ್ರಗಳಿಂದ ನಿಶ್ಚಯಿಸಿಕೊಂಡು ಆ ಗ್ರಹಣ ಬಂದರೆ ಶುಭಕರ್ಮವನ್ನು ಎಷ್ಟು ದಿವಸ ಪರ್ಯಂತ ನಡೆಸಬಾರದೆಂದರೆ-

ಗ್ರಂಥಾಂತರಂ- ಸೂರ್ಯೇಂದ್ವೋರ್ಗ್ರಹಣೇ ದೃಷ್ಟೇ ವರ್ಜಯೇದ್ದಿವಸತ್ರಯಂ ॥ ಗ್ರಸ್ತಾಸ್ತೇ ತ್ರಿದಿನಂ ಪೂರ್ವಂ ಪಶ್ಚಾದ್ಗ್ರಸ್ತೋದಯೇ ತಥಾ ॥ ॥ ಖಂಡಗ್ರಾಸೇ

ತಥಾತ್ರೀಣಿ ನಿಶ್ಶೇಷೇ ಸಪ್ತ ಸಪ್ತ ಚ ॥ ಸರ್ವಗ್ರಾಸೇಷು ಸಪ್ತಾಹಮರ್ಧಗ್ರಾಸೇ ದಿನತ್ರಯಂ ॥ ॥ ತ್ರಿಪಾದೇ ತು ಸತಿ ಗ್ರಾಸೇ ತ್ರಿದಿನಂ ಪರಿವರ್ಜಯೇತ್ ॥ ಸಂಧ್ಯಾಯಾಂ ತ್ರಿತ್ರಿದಿವಸಂ ನಿಶ್ಶೇಷೇ ಸಪ್ತ ಸಪ್ತ ಚ ॥ ॥

ಗುಲಿಕೋದಯವನರಿಯುವುದು ಹೇಗೆಂದರೆ- ಹಗಲಾದರೆ ದಿವಾಪ್ರಮಾಣವ ಎಂಟು ಭಾಗ ಮಾಡಬೇಕು. ರಾತ್ರಿಯಾದರೆ ರಾತ್ರಿ ಪ್ರಮಾಣವ ಎಂಟು ವಿಭಾಗ ಮಾಡಬೇಕು. ಅದು ಎಷ್ಟು ನಾಡಿ-ವಿನಾಡಿಗಳಾಗುತ್ತದೋ ಅಷ್ಟಷ್ಟು ನಾಡಿ-ವಿನಾಡಿಗಳಿಗೊಂದೊಂದು ಅಷ್ಟಾಂಶಗಳೆಂದರಿವದು. ಆ ಅಷ್ಟಾಂಶಗಳಿಗೆ ಆವಾವ ವಾರಾಧಿಪತಿ ಮೊದಲಾಗಿ ಕ್ರಮ ದಿಂದ ಅಧಿಪತಿಗಳ ಕಲ್ಪಿಸುವುದು. ರಾತ್ರಿಯಲ್ಲಾದರೆ ಆ ವಾರಾಧಿಪತಿಯಿಂದ ಐದನೆಯ ವಾರಾಧಿಪತಿಯಿಂದ ಮೊದಲಾಗಿ ಅಧಿಪತಿಗಳ ಕಲ್ಪಿಸುವುದು. ಈ ಅಷ್ಟಾಂಶಗಳಲ್ಲಿ ಶನಿಯ ಅಷ್ಟಾಂಶವು ಯಾವುದೋ ಅದು ಗುಲಿಕಕಾಲವೆಂದರಿಯುವುದು. (ಈ ಗುಲಿಕ ಕಾಲದೊಳಗೆ ಗುಲಿಕೋದಯವಾಗುವ ತನಕ ಮಾತ್ರ ಮುಹೂರ್ತಗಳಲ್ಲಿ ವರ್ಜಿಸುತ್ತಾರೆ. ಆ ಗುಲಿಕೋದಯವು ಹಗಲು-ರಾತ್ರಿ ಪ್ರಮಾಣ 30 ಘಳಿಗೆಯಾದರೆ ರವಿವಾರ 26 ಘಟಿ=$^{13}/_{15}$, ಚಂದ್ರವಾರ 22 ಘಟಿ=$^{11}/_{15}$, ಕುಜವಾರ 18 ಘಟಿ=$^{9}/_{15}$, ಬುಧ 14 ಘಟಿ=$^{7}/_{15}$, ಗುರುವಾರ 10 ಘಟಿ=$^{1}/_{3}$, ಶುಕ್ರವಾರ 6 ಘಟಿ=$^{1}/_{5}$, ಶನಿವಾರ 2 ಘಟಿ=$^{1}/_{15}$. ಹಗಲಿನ ವಾರಾಧಿಪತಿಯಿಂದ ಐದನೆಯ ವಾರಾಧಿಪತಿಗೆ ಬರೆದ ಘಳಿಗೆಯು ರಾತ್ರಿಯ ಗುಲಿಕೋದಯಕಾಲವು.)

ಗ್ರಂಥಾಂತರಂ- **ದಿವಾಮಾನಾಷ್ಟಭಾಗೇಶಾಃ ವಾರೇಶಪ್ರಮುಖಾ ಗ್ರಹಾಃ ॥ ಸ್ವಪಂಚಮದಿನೇಶಾದ್ಯಾ ನಿಶಾಮಾನಾಷ್ಟಭಾಗಪಾಃ ॥ ॥ ತೇಷು ಸೂರ್ಯಸುತಾಷ್ಟಾಂಶಃ ಕಾಲೋ ಹಿ ಗುಲಿಕಸ್ಯ ತು ॥**

ಗುಲಿಕೋದಯ ಕಾಲವನ್ನು ಶುಭಕರ್ಮದಲ್ಲಿ ವರ್ಜಿಸಬೇಕು. ಕೆಲವು ಕರ್ಮಗಳನ್ನು ನಡೆಸಬಹುದೆಂದು ಗ್ರಂಥಾಂತರದಲ್ಲಿ ಹೇಳಿಹದು.

ಗ್ರಂಥಾಂತರಂ- **ಏಂತತ್ಕರ್ಮ ಚರೇದ್ವಿದ್ವಾನ್ ವಿಶೇಷಂ ಗುಲಿಕೋದಯೇ ॥ ಧಾನ್ಯಸಂಗ್ರಹಮಭ್ಯಂಗಂ ಲವಣಕ್ರಯವಿಕ್ರಯಂ ॥ ॥ ನಯನೋನ್ಮೀಲನಂ ಶ್ರಾದ್ಧಂ ಭೈಷಜ್ಯಮೃಣಮೋಚನಂ ॥ ಅಗ್ನ್ಯಾಧಾನಂ ಪ್ರವೇಶಂ ಚ ಗಂಧಲೇಪನಭೂಷಣೇ ॥ ॥ ಗಜಾಶ್ವಾರೋಹಣಂ ಮಂತ್ರಸ್ವೀಕಾರಂ ಚಾಭಿಷೇಚನಂ ॥ ಆಭಿಚಾರಂ ಮಹಾದಾನಂ ವೇದಾರಂಭಂ ವಿಶೇಷತಃ ॥ ॥**

ಪುನರಪಿ ಗ್ರಂಥಾಂತರಂ- **ಸಂಗ್ರಹೇ ಚ ಪರಾಹಸ್ಯ ಕೂಪೇ ಚ ಕ್ರಯವಿಕ್ರಯೇ ॥ ಗೃಹಸ್ಯ ಧಾನ್ಯನಯನೇ ಗುಲಿಕಸ್ಯೋದಯಃ ಶುಭಃ ॥ ॥**

ಪುನಶ್ಚಃ- **ಸ್ಥಾಪ್ಯೇ ಸಮಾಪ್ತೌ ಕ್ರತುಷು ಪ್ರವೇಶೇ । ಗೃಹಪ್ರವೇಶೇ ಗಜವಾಜಿ ಬಂಧನೇ ॥ ರಾಜ್ಯಪ್ರವೇಶೇ ಜಲಧಿಪ್ರವೇಶೇ ॥। ಪಟ್ಟಾಭಿಷೇಕೇ ಗುಲಿಕೋದಯಶ್ಶುಭಃ ॥ ॥**

ಪುನಶ್ಚಃ- **ದೇವಪ್ರತಿಷ್ಠಾಪನಮೌಂಜಿಬಂಧೇ । ರಾಜ್ಯಪ್ರವೇಶೇ ಜಲಧಿಪ್ರವೇಶೇ ॥ ಗೃಹಪ್ರವೇಶೇ ಚ ಪರಪ್ರವೇಶೇ ॥। ಪಟ್ಟಾಭಿಷೇಕೇ ಗುಲಿಕೋದಯಃ ಶುಭಃ ॥ ॥**

ಅನಂತರ ಸಂಧ್ಯಾದಿಗಳ ವಿವರ :-

ದಿವಾದಲ್ಲಿ ಸೂರ್ಯೋದಯವಾಗಿ ಆರು ಘಳಿಗೆ ಪರ್ಯಂತ ಪ್ರಾಹ್ಣಕಾಲವು. ಆಮೇಲೆ ಆರು ಘಳಿಗೆ ಪೂರ್ವಾಹ್ಣಕಾಲವು. ಆಮೇಲೆ ಆರು ಘಳಿಗೆ ಮಧ್ಯಾಹ್ನಕಾಲವು. ಆಮೇಲೆ ಆರು ಘಳಿಗೆ ಅಪರಾಹ್ಣ ಕಾಲ. ಆಮೇಲೆ ಆರು ಘಳಿಗೆ ಸಾಯಾಹ್ನ ಕಾಲವು ಅತ್ರಸದ್ರತ್ನಂ-

ಅಹನಿ ಪ್ರಾಹ್ಣಪೂರ್ವಾಹ್ಣಮಧ್ಯಾಹ್ನಶ್ಚಾಪರಾಹ್ಣಕಾಃ ॥ ಸಾಯಾಹ್ನಶ್ಚೇತಿ ಕಾಲಾಃ ಸ್ಯುಃ ಸ್ಥೂಲಂ ಷಡ್ಘಟಿಕಾಮಿತಾಃ ॥ ॥

ತಾತ್ಪರ್ಯ:- ಈ ಪ್ರಕಾರದ ಕಾಲಗಳು ದಿವಾ ಪ್ರಮಾಣದ ಕಾಲವು ಮೂವತ್ತೇ ಘಟಿಯಾದ ಸಮಯದಲ್ಲಿಯೇ ಸರಿ. ಇದಕ್ಕೆ ಹೆಚ್ಚು ಕಡಿಮೆಯಾದಲ್ಲಿ ದಿವಾ ಪ್ರಮಾಣ ವನ್ನು ಐದು ಭಾಗಮಾಡಿ ಎಷ್ಟು ಘಳಿಗೆ-ವಿಘಳಿಗೆ ಆಗುತ್ತದೋ ಅಷ್ಟಷ್ಟು ಘಳಿಗೆ-ವಿಘಳಿಗೆಗಳಿಗೊಂದೊಂದು ಪ್ರಾಹ್ಣಾದಿಕಾಲಗಳು ಎಂದರಿವದು. ಅದರಲ್ಲಿ ಸಾಯಾಹ್ನ ಕಾಲವು ಶುಭಕರ್ಮದಲ್ಲಿ ನಿಷೇಧವು. ಸಂಧ್ಯಾಕಾಲವು ಯಾವುದೆಂದರೆ ಸೂರ್ಯನ ಅರ್ಧಾಸ್ತಮಯದಾರಭ್ಯ ನಕ್ಷತ್ರೋದಯಪರ್ಯಂತ ಸಾಯಂ ಸಂಧ್ಯಾಕಾಲವು. ತೇಜಃ ಪರಿಹಾರಾದಿಯಾಗಿ ಸೂರ್ಯನ ಅರ್ಧೋದಯ ಪರ್ಯಂತ ಪ್ರಾತಃಸಂಧ್ಯಾಕಾಲವು. ವರಾಹಮಿಹಿರ :-

ಅರ್ಧಾಸ್ತಮಯಮಾಸಂಧ್ಯಾ ವ್ಯಕ್ತೀಭೂತಾ ನ ತಾರಕಾ ॥ ಯಾವತ್ತೇಜಃ ಪರೀಹಾರ ಮುಖಾದ್ಭಾನೋರರ್ಧೋದಯಾ ತಾವತ್ ॥ ॥

ಈ ಸಂಧ್ಯಾಕಾಲಗಳು ಶುಭಕರ್ಮಗಳಲ್ಲಿ ವರ್ಜ್ಯಂಗಳು. ಆದಿತ್ಯಾಸ್ತಮಯ ದೆಸೆಯಿಂದ ಮೇಲೆ ಎರಡು ಘಳಿಗೆ ಮಧ್ಯಾಹ್ನದಲ್ಲಿಯೂ, ಮಧ್ಯರಾತ್ರಿಯಲ್ಲಿಯೂ ಹತ್ತು ವಿಘಳಿಗೆ ಸಹ ತ್ಯಾಜ್ಯವು. ಅತ್ರಸ್ಮೃತಿ:-

ಆದಿತ್ಯಾಸ್ತಮಯಾತ್ಪಶ್ಚಾತ್ ತ್ಯಜಂತಿ ಘಟಿಕಾದ್ವಯಂ ॥ ಮಧ್ಯಾಹ್ನೇ ಚಾರ್ಧ ರಾತ್ರೌ ಚ ವರ್ಜ್ಯಾ ದಶವಿನಾಡಿಕಾಃ ॥ ॥ ರವಿಸಂಕ್ರಮಣಾತ್ಪೂರ್ವಂ ಪರತಶ್ಚಾಪಿ ಷೋಡಶ ॥ ಘಟಿಕಾಶ್ಚ ವಿವರ್ಜ್ಯಾಃ ಸ್ಯುಃ ಸರ್ವೇಷು ಶುಭಕರ್ಮಸು ॥ ॥ ಸಂಕ್ರಮಾತ್ಪರತಃ ಪೂರ್ವಂ ವರ್ಜ್ಯಾ ಸ್ಯಾದ್ಯಾಮಮಾತ್ರಕಾ ॥ ಇತ್ಯಪಿ ॥

ಚಾಂದ್ರಮಾನ, ನಾಕ್ಷತ್ರಮಾನ, ಸೌರಮಾನ, ಸಾವನಮಾನ ಈ ಪ್ರಕಾರ ನಾಲ್ಕು ವಿಧ ವರ್ಷಗಳು. ಅದು ಹೇಗೆಂದರೆ- ಶುಕ್ಲಪಕ್ಷ ಪಾಡ್ಯದಾರಭ್ಯ ಅಮಾವಾಸ್ಯಾ ಪರ್ಯಂತ ಇರುವುದು ಚಾಂದ್ರಮಾನಮಾಸವು. ಚೈತ್ರಶುದ್ಧ ಪಾಡ್ಯದಾರಭ್ಯ ಫಾಲ್ಗುಣ ಬಹುಳ ಅಮಾವಾಸ್ಯಾ ಪರಿಯಂತ ಚಾಂದ್ರಮಾನದ ವರ್ಷವು. ಚಂದ್ರನಿಗೆ ಅಶ್ವಿನ್ಯಾದಿ ರೇವತ್ಯಂತವಾದ ಇಪ್ಪತ್ತೇಳು ನಕ್ಷತ್ರಗಳು ಸಲುವಾಗ ನಾಕ್ಷತ್ರಮಾನದಲ್ಲಿ ಒಂದು ಮಾಸವಾಗುವುದು. ಸೂರ್ಯನಿಗೆ ಮೇಷಾದಿ ಒಂದೊಂದು ರಾಶಿಗಳು ಸಲುವಾಗ ಸೌರಮಾನ ಪ್ರಕಾರ ಮೇಷಾದಿ ಒಂದೊಂದು ಮಾಸವಾಗುವುದು. ಮೂವತ್ತು ಮೂವತ್ತು

ದಿವಸಕ್ಕೆ ಒಂದೊಂದು ಮಾಸಪ್ರಕಾರ ಕಲ್ಪಿಸುವಾಗ ಸಾವನಮಾಸವು. ಆ ಪ್ರಕಾರ ಭಾರದ್ವಾಜನು ಹೇಳಿಹನು. ಭಾರದ್ವಾಜ :-

ಚಾಂದ್ರೋ ನಾಕ್ಷತ್ರಿಕಃ ಸೌರಃ ಸಾವನಶ್ಚ ತಥೈವ ಚ ॥ ಉಕ್ತಾಶ್ಚತುರ್ವಿಧಾ ಮಾಸಾಃ ಲೋಕೇಷು ವ್ಯವಹಾರಿಕಾಃ ॥ ॥ ಚಾಂದ್ರಂ ತು ಚಂದ್ರಾರ್ಕಸಮಾಗಮಾಭ್ಯಾಂ । ನಾಕ್ಷತ್ರ ಮಾಹುಃ ಶಶಿಮಂಡಲೇನ ॥ ಸೌರಂ ತು ರಾಶಿಂ ಪ್ರತಿಸೂರ್ಯಗತ್ಯಾ ॥। ತ್ರಿಂಶದ್ದಿನಂ ಸಾವನಸಂಜ್ಞಮಾರ್ಯಾಃ ॥ ॥ ಶಶಿಮಾಸಂ ಚ ಸೌರಂ ಚ ದ್ವೌ ವಿಜ್ಞೇಯೌ ವಿಶೇಷತಃ ॥ ಚಾಂದ್ರೇಣ ವ್ಯವಹಾರೋऽತ್ರ ಸೌರೇಣ ಸಹ ಕರ್ಮಸು ॥ ॥

ಎಂದು ಹೇಳಿರುವುದರಿಂದ ಚಾಂದ್ರಮಾಸವು ಸೌರಮಾಸವು ಪ್ರಧಾನವಾದ್ದರಿಂದ ಶುಭಕರ್ಮದಲ್ಲಿ ಸೌರಾಬ್ದಾವಸಾನದಲ್ಲಿ ಏಳು ದಿವಸ ಉಳಿದ ಮಾಸಗಳ ಅಬ್ದಾವಸಾನ ದಲ್ಲಿ ಐದು ದಿವಸ ಆದಿಯಲ್ಲಿ ಮೂರು ದಿವಸ ಸಹ ವರ್ಜ್ಯವೆಂದು ಮಾಧವೀಯ ದಲ್ಲಿಹದು. ಮಾಧವೀಯಂ-

ಸಪ್ತಾಂತೇ ರವಿವತ್ಸರಸ್ಯ ದಿವಸಾನ್ ತಾನ್ ಪಂಚ ಪಂಚಾಂತ್ಯಯೋಃ । ಪ್ರಾರಂಭೇ ದಿವಸತ್ರಯಂ ಪರಿಹರೇತ್ತೇಷಾಂ ತ್ರಯಾಣಾಮಪಿ ॥ ಇತಿ ॥

ಗ್ರಂಥಾಂತರಂ- ಘಟಿಕಾದ್ವಯಮೃಕ್ಷಾಂತೇ ಮಾಸಾಂತೇ ತು ದಿನತ್ರಯಂ ॥ ವರ್ಷಾಂತೇ ವರ್ಜಯೇತ್ಪಕ್ಷಂ ಗ್ರಹಣಾದ್ದಿನಸಪ್ತಕಂ ॥ ॥ ವಿಂಧ್ಯಸ್ಯೋತ್ತರದಿಗ್ಭಾಗೇ ಷಷ್ಟ್ಯಂತೇ ವತ್ಸರಂ ತ್ಯಜೇತ್ ॥ ವಿಂಧ್ಯಸ್ಯ ದಕ್ಷಿಣೇ ಭಾಗೇ ತ್ರಿಮಾಸಂ ತು ಪರಿತ್ಯಜೇತ್ ॥ ॥ ಅಂಗವಂಗಕಲಿಂಗೇಷು ತ್ರಿಮಾಸಂ ತು ಪರಿತ್ಯಜೇತ್ ॥ ಷಷ್ಟಿವರ್ಷೇ ತು ಸಂಪ್ರಾಪ್ತೇ ಶುಭಕರ್ಮ ನ ಕಾರಯೇತ್ ॥ ॥ ಮೌಂಜೀವಿವಾಹಗೋದಾನವ್ರತಸ್ನಾನಾದಿಕಾನಿ ಚ ॥ ವರ್ಜ್ಯಂ ಮಾಸತ್ರಯಂ ಪ್ರಾಂತೇ ಪ್ರಭವಾದೌ ತದರ್ಧಕಂ ॥ ॥ ಕ್ಷಯಾಂತೇ ವರ್ಜಯೇ ನ್ಮಾಸಂ ಶಕಾಂತೇ ತು ಋತುತ್ರಯಂ ॥ ಯುಗಾಂತೇ ವರ್ಜಯೇದ್ವರ್ಷಂ ಮಾಸಾಂತೇ ತು ದಿನತ್ರಯಂ ॥ ॥

ಸಂಧ್ಯಾದಯಃ ಎಂದು ಆದಿಶಬ್ದದಿಂದ ಮಾಸಮೃತ್ಯು ಮೃತ್ಯುಯೋಗ, ವಿಷಯೋಗ, ನಾಗಯೋಗ, ವಿಘಾತಯೋಗ, ದಗ್ಧಯೋಗ ಪಂಚಕ ಸಹ ಶುಭಕರ್ಮ ಗಳಲ್ಲಿ ವರ್ಜಿಸಬೇಕು. ಮೃತ್ಯು ಯಾವುದೆಂದರೆ, ಮಾಧವೀಯಂ-

ದದ್ಯುಸ್ತ್ವಿತ್ರಾ ಶೂರ್ಪಶಕ್ರಾಂಬುವಿಷ್ಣುಕ್ಷೀರಾಧೀಶಾ ಬುಧ್ನ್ಯದಸ್ರಾಂತಕಾಶ್ಚ ॥ ಧಾತಾ ರುದ್ರೋ ದೇವಸೂರಪ್ಯಜಾದ್ಯೈಃ ಮಾಸೈರ್ಯುಕ್ತಾ ವತ್ಸರಾರ್ಧೇನ ಮೃತ್ಯುಂ ॥ ॥

ಮೃತ್ಯು ಯಾವುದೆಂದರೆ

ಗ್ರಂಥಾಂತರಂ- ತ್ಯಜ ರವಿರನುರಾಧಾ ಚೋತ್ತರಾಷಾಢಚಾಂದ್ರೇ ಶತಭಿಷಮಘ ಭೌಮೇ ಚಾಂದ್ರಜೇ ಅಶ್ವಿನೀಚ ॥ ಮೃಗಶಿರಗುರುವಾರೇ ಸರ್ಪಮೈವಂ ಚ ಶುಕ್ರೇ ॥। ದಿನಕರಸುತಹಸ್ತೇ ಮೃತ್ಯುಯೋಗಂ ವದಂತಿ ॥ ॥

ಪ್ರಕಾರಾಂತರಂ- ಮೃತ್ಯುಯೋಗೋ ಮಖಾಶೂರ್ಪರೌದ್ರಮೂಲಪ್ರಚೇತಸ್ಯಃ ॥ ರೋಹಿಣೀಚೋತ್ತರಾಷಾಢಯುಕ್ತಾಃ ಸೂರ್ಯಾದಿವಾಸರೈಃ ॥ ॥

ಗಾರ್ಗ್ಯಶ್ಚ- ಆಶ್ಲೇಷಾರ್ಕೇಽರ್ಯಮಾ ಚಂದ್ರೇ ಆರ್ದ್ರಕಾ ಭೌಮವಾಸರೇ ॥ ಚಂದ್ರಸೂನೌ ತಥಾ ಯಾಮ್ಯಂ ಗುರೌ ಶೂರ್ಪರ್ಕ್ಷಮೇವಚ ॥ ॥ ಭಾರ್ಗವೇಽ ದಿತಿರ್ದೈವತ್ಯಂ ಸೌರೇ ಶ್ರವಣಮೇವ ಚ ॥ ಮೃತ್ಯುಯೋಗಮಿದಂ ಪ್ರೋಕ್ತಂ ಸರ್ವಕರ್ಮವಿನಾಶಿನಂ ॥ ಇತಿ ॥

ಪುನಃಸ್ಸೈವ- ಪೂರ್ವಾಷಾಢಾಖ್ಯರೇವತ್ಯೋಃ ವಿಶಾಖಾವರುಣೇಪತೌ ॥ ಯಾಮ್ಯಂ ಪುಷ್ಯಶ್ಚ ಭೌಮಾದ್ಯೈಃ ಮೃತ್ಯುಯೋಗಪದ್ಯೈಃ ಕ್ರಮಾತ್ ॥ ॥

ವಿಷಯೋಗ ಯಾವುದೆಂದರೆ ಗುರುಃ-

ಷಷ್ಠೀ ಚ ಸಪ್ತಮೀಚೈವಾಽಷ್ಟಮೀ ನವಮೀ ತಥಾ ॥ ದ್ವಾದಶ್ಯೇಕಾದಶೀಯುಕ್ತ ತ್ರಯೋದಶ್ಯರ್ಕತೋ ವಿಷಂ ॥ ॥

ನಾರದಃ- ಯಮರ್ಕ್ಷಮರ್ಕಚಂದ್ರೇ ತು ಚಿತ್ರಾಭೌಮೇ ತು ವಿಶ್ವಭಂ ॥ ಬುಧೇ ಶ್ರವಿಷ್ಠಾರ್ಯಮರ್ಕ್ಷಂ ಗುರೌ ಜ್ಯೇಷ್ಠಾ ಭೃಗೋರ್ದಿನೇ ॥ ॥ ರೇವತೀಸಾತ್ಮಜದಿನೇ ಕ್ಷೈಲಯೋಗಾ ಭವಂತ್ಯಮೀ ॥ ಇತಿ ॥

ಗುರುಃ- ದಸ್ರಮೈತ್ರಪುನರ್ವಸ್ವೌ ಭಾದ್ರಪಾದಾಗ್ನಿಮಿತ್ರಭಂ ॥ ಆಷಾಢಂ ಚ ಕ್ರಮಾದರ್ಕಾತ್ ಯೋಗಾ ವಿಷಸಮಾಹ್ವಯಾ ॥ ॥

ಮಾಧವೀಯಂಚಃ- ಪಂಚಮ್ಯಾ ಸಹ ಕೃತ್ತಿಕಾ ರವಿದಿನೇ ಚಿತ್ರಾದ್ವಿತೀಯಾವಿಧೌ । ರಾಕಾ ಧಾತೃಯುತಾ ಕುಜೇ ಶಶಿಸುತೇ ಯಾಮ್ಯಾನ್ವಿತಾ ಸಪ್ತಮೀ ॥ ಜೀವೇ ಮೈತ್ರಯುತಾ ತ್ರಯೋದಶತಿಥಿಃ ಶ್ರೋಣಾ ಸಷಷ್ಠೀ ಭೃಗೌ ।॥ ಮಂದೇ ಪುಷ್ಯಯುತಾಷ್ಟಮೀತಿ ಗದಿತಾಃ ಯೋಗಾ ವಿಷಾಖ್ಯಾ ಅಮೀ ॥ ॥

ಗ್ರಂಥಾಂತರಂ- ಆದಿತ್ಯಹಸ್ತೇ ಪಂಚಮ್ಯಾಂ ಷಷ್ಠೀಶ್ರವಣಸೋಮಕೇ ॥ ಭೌಮಾಶ್ವಿನೀ ಚ ಸಪ್ತಮ್ಯಾಮನುರಾಧಾಬುಧಾಷ್ಟಮೀ ॥ ॥ ನವಮ್ಯಾಂ ಗುರುಪುಷ್ಯೌಚ ದಶಮ್ಯಾಂ ಗುರುರೇವತೀ ॥ ದ್ವಾದಶೀ ಶನಿರೋಹಿಣ್ಯಾಂ ವಿಷಯೋಗಃ ಪ್ರಕೀರ್ತಿತಃ ॥ ॥

ನಾಗಯೋಗವದಾವದೆಂದರೆ ಗಾರ್ಗ್ಯ :- ಚಂದ್ರೇಽಶ್ವಿನೀ ರವೌ ಸೌಮ್ಯಂ ರೌದ್ರಂ ಭೌಧೇ ಖರಃ ಶನೌ ॥ ಭೃಗೌ ಮಖಾ ಕುಜೇ ಚಿತ್ರಾ ಜ್ಯೇಷ್ಠೇ ಜೀವೇ ಚ ನಾಗದಾ ॥

ಗ್ರಂಥಾಂತರಂ- ರವಿರ್ವಿಶಾಖಾ ಶಶಿಪೂರ್ವಷಾಢಾ ಕುಜೇ ಶ್ರವಿಷ್ಠಾ ಬುಧ ರೇವತೀ ಚ ॥ ಆಂಗೀರಸೋ ರೋಹಿಣಿಪುಷ್ಯಶುಕ್ರೇ ಮಂದೋತ್ತರೇ ವರ್ಜಯ ನಾಗಯೋಗಾನ್ ॥ ॥

ವಿಘಾತಯೋಗ ಯಾವದೆಂದರೆ ಗ್ರಂಥಾಂತರಂ- ಕುಜದ್ವಿತೀಯಾ ಚ ಕವಿಸ್ತೃತೀಯಾ ಭಾನುಶ್ಚತುರ್ಥೀ ಬುಧಪಂಚಮೀ ಚ ॥ ಶನಿಶ್ಚ ಷಷ್ಠೀ ಶಶಿಸಪ್ತಮೀ ಚ ಜೀವಾಷ್ಟಮೀ ಚೈವ ವಿಘಾತಯೋಗಾಃ ॥ ಇತಿ ॥

ಇತ್ಯಾದಿ ದುಷ್ಟಯೋಗಗಳು ಶುಭಕರ್ಮದಲ್ಲಿ ವರ್ಜ್ಯಂಗಳು. ಆದರೂ ಈ ತಿಥಿವಾರ ನಕ್ಷತ್ರಗಳಿಂದುಂಟಾದ ಯೋಗಂಗಳ ಫಲವೂ ಮೂರೂ ಮುಕ್ಕಾಲು ಘಳಿಗೆ ಪರ್ಯಂತವೇ ಹೊರತು ಆಮೇಲೆ ಆ ಫಲಗಳಿರುವುದಿಲ್ಲ.

ಗ್ರಂಥಾಂತರಂ- ತಿಥಿವಾರರ್ಕ್ಷಯೋಗಾನಾಂ ಫಲಮರ್ಕೋದಯಾದಿತಃ ॥ ಅರ್ಧಯಾಮಾತ್ಪರಂ ನಾಸ್ತಿ ಶುಭಂ ಚಾಶುಭಮೇವ ಚ ॥ ಇತಿ ॥

ಗುರು:- ತಿಥಿವಾರರ್ಕ್ಷಜಾ ಯೋಗಾಃ ಸರ್ವೇ ತೇ ಗುಣನಾಶನಾಃ ॥ ಯಾಮಾರ್ಧಾತ್ಪರತಃ ಸರ್ವೇ ಪುಷ್ಟಿದಾ ಶುಭಕರ್ಮಣಿ ॥ ॥

ಪಂಚಕದೋಷ ಅರಿವದಕ್ಕೆ ಮುಹೂರ್ತಕಾಲದ ನಕ್ಷತ್ರ ತಿಥಿವಾರ ಲಗ್ನಗಳ ಸಂಖ್ಯೆಗಳನೊಂದುಗೂಡಿ ಅದರ ಐದು ಪ್ರತಿ ಇಟ್ಟು ಮೇಲಣ ಒಂದನೇ ಪ್ರತಿಯಲ್ಲಿ ಹದಿನೈದು, ಎರಡನೇ ಪ್ರತಿಯಲ್ಲಿ ಹನ್ನೆರಡು, ಮೂರನೇ ಪ್ರತಿಯಲ್ಲಿ ಹತ್ತು. ನಾಲ್ಕನೇ ಪ್ರತಿಯಲ್ಲಿ ಎಂಟು, ಐದನೇ ಪ್ರತಿಯಲ್ಲಿ ನಾಲ್ಕು ಈ ಪ್ರಕಾರ ಕೂಡಿಸಿ ಅವುಗಳನ್ನೆಲ್ಲ ಪ್ರತಿಯನ್ನು ಒಂಬತ್ತರಿಂದ ಭಾಗಿಸಿ ಎಷ್ಟನೆಯ ಪ್ರತಿಯಲ್ಲಿ ಐದುಶೇಷ ಉಳಿದಿದೆ ಎಂದರಿತುಕೊಂಡು ಒಂದನೇ ಪ್ರತಿಯಲ್ಲಾದರೆ ರೋಗಪಂಚಕ, ಎರಡನೇ ಪ್ರತಿಯಲ್ಲಾದರೆ ಅಗ್ನಿಪಂಚಕ, ಮೂರನೇ ಪ್ರತಿಯಲ್ಲಾದರೆ ರಾಜಪಂಚಕ, ನಾಲ್ಕನೇ ಪ್ರತಿಯಲ್ಲಾದರೆ ಚೋರಪಂಚಕ, ಐದನೇ ಪ್ರತಿಯಲ್ಲಾದರೆ ಮೃತ್ಯುಪಂಚಕ ಈ ಪ್ರಕಾರ ತಿಳಿವದು.

ಗ್ರಂಥಾಂತರಂ- ಉಡುತಿಥಿದಿನಲಗ್ನಂ ಪಂಚಧಾಕೃತ್ಯ ಯುಕ್ತಾ । ತಿಥಿರವಿದಶ ನಾಗಾಮ್ನಾಯಸಂಖ್ಯಾಃ ಕ್ರಮೇಣ ॥ ನವಹೃತಶರಶೇಷಂ ಶೋಭನೇ ವರ್ಜನೀಯಂ ॥। ನಗನಲನೃಪಚೋರೈರ್ಮೃತ್ಯುನಾ ಚಾತ್ರ ದುಷ್ಟಂ ॥ ॥

ಈ ಬಗ್ಗೆ ಮತ್ತೊಂದು ಯುಕ್ತಿ ಇರುತ್ತದೆ. ಮುಹೂರ್ತ ಕಾಲದಲ್ಲಿ ತಿಥಿ, ವಾರ, ನಕ್ಷತ್ರ, ಲಗ್ನ ಸಂಖ್ಯೆಗಳನೊಂದುಗೂಡಿ ಒಂಬತ್ತರಿಂದ ಭಾಗಿಸಲಾಗಿ ಒಂದು ಶೇಷವಾದರೆ ಮೃತ್ಯುಪಂಚಕ, ಎರಡು ಶೇಷವಾದರೆ ಅಗ್ನಿಪಂಚಕ, ನಾಲ್ಕು ಶೇಷವಾದರೆ ರಾಜಪಂಚಕ, ಆರು ಶೇಷವಾದರೆ ಚೋರಪಂಚಕ, ಎಂಟು ಶೇಷವಾದರೆ ರೋಗಪಂಚಕ, ನಿಶ್ಶೇಷವಾದರೂ ಮೂರು, ಐದು, ಏಳು ಶೇಷವಾದರೂ ಪಂಚಕ ದೋಷವಿಲ್ಲ ವೆಂದರಿವದು.

ಗ್ರಂಥಾಂತರಂ- ತಿಥಿವಾರರ್ಕ್ಷಲಗ್ನಾನಾಂ ಯೋಗಾದಂಕೈಶ್ಚ ಶೇಷಿತಃ ॥ ಏಕೋ ಮೃತ್ಯುರ್ದ್ವಯೋರ್ವಹ್ನಿಶ್ಚತುರ್ಥೇ ರಾಜಪಂಚಕಂ ॥ ಷಷ್ಠಾಷ್ಟೌ ಚೋರರೋಗೌ ಚ ಶೇಷಂ ನಿಷ್ಪಂಚಕಂ ಭವೇತ್ ॥

ಈ ಪಂಚಕ ದೋಷದಲ್ಲಿ ಅವಶ್ಯವಾಗಿ ವರ್ಜ್ಯಂಗಳಾವುವೆಂದರೆ-

ಉಕ್ತಂಚ : ಯಾನೇ ಚೋರಂ ವ್ರತೇ ರೋಗಂ ಗೃಹಾರಂಭೇಽಗ್ನಿಪಂಚಕಂ ॥ ರಾಜಾಖ್ಯಂ ರಾಜಸೇವಾಯಾಂ ವಿವಾಹೇ ಮೃತ್ಯುಪಂಚಕಂ ॥ ॥ ಚೋರಂ ರೋಗಂ ತ್ಯಜೇದ್ರಾತ್ರೌ ದಿವಾ ರಾಜಾಗ್ನಿಪಂಚಕೇ ॥ ದಿವಾರಾತ್ರೌ ತ್ಯಜೇನ್ಮೃತ್ಯುಂ ಪಂಚಕಾನ್ನಿಯ

ಮಾಪ್ನುಛ್ಯೈಃ ॥ ॥ ವರ್ಜ್ಯಾಃ ಪಂಚಕಮುಷ್ಣರಶ್ಮಿದಿವಸೇ ರೋಗಸ್ಯ ರಾಜ್ಞೋ ವಿಧೌ ॥ ವರ್ಜ್ಯೇ ಭೌಮದಿನೇ ತಥಾ ಬುಧದಿನೇ ಚೋರಸ್ಯ ಮೃತ್ಯೋರ್ಗುರೌ ॥ ಸರ್ವಂ ಪಂಚಕಮಿಷ್ಟದಂ ಭೃಗುದಿನೇ ಸರ್ವಂ ತು ನೇಷ್ಟಂ ಶನೌ ॥। ಏವಂ ಗಾರ್ಗ್ಯಮುಖಾ ವದಂತಿ ಮುನಯಸ್ಸರ್ವೇಷು ಕಾರ್ಯೇಷು ಚ ॥ ॥

'ರಂಧ್ರಾಂತ್ಯಾರಿಗತೋವಿಧುಃ' ಎಂದು ಅಷ್ಟಮದ್ವಾದಶ ಷಷ್ಠಗಳಲ್ಲಿ ಚಂದ್ರನಿರ ಲಾಗದೆಂದರೂ ಅನಾದ್ಯಕ್ಷೌರದಲ್ಲೂ, ವಸ್ತ್ರಧಾರಣೆಯಲ್ಲೂ, ಧಾನ್ಯವೃದ್ಧಿಯಲ್ಲೂ, ನವಾನ್ನದಲ್ಲೂ, ಹಲೋತ್ಕರ್ಷದಲ್ಲೂ, ಬೀಜವಾಪನೆಯಲ್ಲೂ ದ್ವಾದಶ ಷಷ್ಠಗಳಲ್ಲಿ ಚಂದ್ರನಿದ್ದರೂ ಮಧ್ಯಮ ಪ್ರಕಾರ ಗ್ರಹಿಸಿಕೊಳ್ಳಬಹುದು.

ಕ್ಷೌರೇಽನಾದ್ಯಗತೇ ವಸ್ತ್ರೇ ಧಾನ್ಯವೃದ್ಧೌ ನವಾಶನೇ ॥ ಕರ್ಷಣೇ ಬೀಜವಾಪೇ ಚ ಷಷ್ಠಾಂತ್ಯೇ ಮಧ್ಯಮೋ ವಿಧುಃ ॥ ॥

ಅಷ್ಟಮದಲ್ಲಿ ಚಂದ್ರನಿರಲಾಗಿ ಯಾವುದೊಂದು ಕರ್ಮವೂ ನಡೆಸಲಾಗದು. ಪಾಪೋದಯವು ವರ್ಜ್ಯವೆಂದರೂ ನಾಮಕರಣ ಉಪನಿಷ್ಕ್ರಮಣ ವಿವಾಹ ಬಾಲಾನ್ನ ಪ್ರಾಶನ ಗೃಹರಂಭಾದಿ ಗೃಹವಿಷಯಗಳಾಗಿರುವ ಕರ್ಮಗಳು ಇಷ್ಟು ಕರ್ಮಗಳ ಹೊರತು ಇರುವ ಕರ್ಮಗಳಲ್ಲಿ ಆದಿತ್ಯೋದಯಲಗ್ನಮಾತ್ರ ಗ್ರಹಿಸಬಹುದು.

ನಾಮನಿಷ್ಕ್ರಮಣೋದ್ವಾಹಬಾಲಾನ್ನೇಷು ವಿಶೇಷತಃ ॥ ಭಾಸ್ಕರಸ್ಯೋದಯೋ ವರ್ಜ್ಯೋ ಗೇಹಾದೌ ವಾ ನ ಶೋಭನಃ ॥ ॥

ಸೂರ್ಯಚಂದ್ರರ ಗ್ರಹಣಕಳಿದು ಆರು ತಿಂಗಳು ಸಂದ ಮೇಲೆ ಶುಭಗ್ರಹನು ಲಗ್ನದಲ್ಲಿದ್ದರೆ ರಾಹುಕೇತುಗಳ ಉದಯವನ್ನು ಗ್ರಹಿಸಬಹುದು. "ಅತ್ರಮಾಧವೀಯಂ- ಉಪರಾಗಾದುಪರಿಗತೇ ವರ್ಷಾರ್ಧೇ ತನುಗತೇ ಶುಭೇ ॥ ಉದಯೋಽಪಿ ತಮೋ ಗ್ರಹಯೋಃ ಶುಭದಃ ಶುಭಕರ್ಮಸು ಗ್ರಾಹ್ಯಃ ॥ ॥" ಉಚ್ಚಸ್ವಕ್ಷೇತ್ರಗತನಾದ ಗುರು ವಾಗಲೀ ಶುಕ್ರನಾಗಲೀ ಬಲಿಷ್ಠನಾಗಿ ಲಗ್ನದಲ್ಲಿದ್ದರೆ ಶನಿರಾಹುಗ್ರಹಗಳ ದೃಷ್ಟಿ ಇರಲಾಗಿ ದೋಷವಿಲ್ಲ. "ಅತ್ರ ಸರ್ವಸಿದ್ಧಿಃ- ಸ್ವೋಚ್ಚಸ್ವಕ್ಷೇತ್ರಗತಃ ಕವಿರ್ಗುರುರ್ವಾ ಬಲೀ ಯದಾಲಗ್ನೇ ॥ ನ ತದಾ ದುಷ್ಯತಿ ದೃಷ್ಟಿಃ ಮದನಗತಸ್ಯಾರ್ಕಜಸ್ಯ ರಾಹೋರ್ವಾ ॥ ॥" ಖಂಡಾಂತವೆಂದರೆ- ಅಶ್ವಿನೀ ಮಖಾ ಮೂಲಗಳ ಆದಿಪಾದವು, ಆಶ್ಲೇಷಾ ಜ್ಯೇಷ್ಠಾ ರೇವತೀಗಳ ಅಂತ್ಯಪಾದವು ಗಂಡಾಂತವು. ಆ ಗಂಡಾಂತವನ್ನು ಶುಭಕರ್ಮದಲ್ಲಿ ವರ್ಜಿಸ ಬೇಕು. "ಅಶ್ವಿಮೂಲಮಘಾದ್ಯಾಂಶಃ ಪೂಷಾಹೀಂದ್ರಾಂತ್ಯಪಾದಕಃ ॥ ಗಂಡಾಂತಂ ಚ ಸದಾ ವರ್ಜ್ಯಂ ಸರ್ವೇಷು ಶುಭಕರ್ಮಸು ॥ ॥" ಇದು ನಕ್ಷತ್ರ ಗಂಡಾಂತವು. ಇನ್ನು ರಾಶಿ ಗಂಡಾಂತವಿಹುದು. ಅದೆಂತೆಂದರೆ- ಕರ್ಕಟಕ ವೃಶ್ಚಿಕ ಮೀನ ಲಗ್ನಗಳ ಅಂತ್ಯದಲ್ಲಿ ಅರ್ಧಘಳಿಗೆ, ಮೇಷ ಸಿಂಹ ಧನುರ್ಲಗ್ನಗಳ ಆದಿಯಲ್ಲಿ ಅರ್ಧಘಳಿಗೆ, ಇವು ರಾಶಿ ಗಂಡಾಂತವು. ಪಂಚಮೀ ದಶಮೀ ಪೌರ್ಣಮೀ ಅಮಾವಾಸ್ಯೆಗಳ ಅಂತ್ಯದಲ್ಲಿ ಒಂದುವರೆ ಘಳಿಗೆ, ಪಾಡ್ಯ ಷಷ್ಠ್ಯೇಕಾದಶಿಗಳ ಆದಿಯಲ್ಲಿ ಒಂದುವರೆ ಘಳಿಗೆ ಇದು ತಿಥಿ ಗಂಡಾಂತವು. ಆಶ್ಲೇಷ ಜ್ಯೇಷ್ಠ ರೇವತಿಗಳ ಅಂತ್ಯದಲ್ಲಿ ಎರಡುವರೆ ಘಳಿಗೆ, ಅಶ್ವಿನೀ

ಮಖಾ ಮೂಲಗಳ ಆದಿಯಲ್ಲಿ ಎರಡುವರೆ ಘಳಿಗೆ ಇದು ನಕ್ಷತ್ರ ಗಂಡಾಂತವೆಂದು ಇನ್ನೊಂದು ಮತ. ಈ ಗಂಡಾಂತಗಳು ಶುಭಕರ್ಮಗಳಲ್ಲಿ ವರ್ಜ್ಯಗಳು. “ಅತ್ರಮಾಧವೀಯಂ- ರಾಶಿತಿಥಿತಾರಕಾಣಾಂ ಖಂಡಾಂತಂ ಜಲಧಿವಿಷಯನವಮಾಂತೇ ॥ ತತ್ರೋಭಯತೋ ನಾಡ್ಯಃ ಶತಿಗುಣಶರಸಮ್ಮಿತಾಸ್ತ್ಯಾಜ್ಯಾಃ ॥ ॥” ಇತಿ. ಉಷ್ಣಶಿಖೆಯು ಮಾಧವೀಯದಲ್ಲಿ ಹೇಳಿಹದು- “ಮಾಧವೀಯಂ- ಅಶ್ವಿನ್ಯಾದಿಷು ಭೇಷ್ವಜಾಲಿಮುಕರ ಪ್ರಾಪ್ತಾಂಶಕಾಂತೇ ಕ್ರಮಾದಂಶಾರ್ಧಸ್ಮರಬಾಣರಂಧ್ರಘಟಿಕಾಸ್ತದ್ವದ್ವಿಶಾಖಾದಿಷು ॥ ಮೇಷಾಂಶಸ್ಯ ಮುಖೇಽಷ್ಟ ಕೋರ್ಪಿಮೃಗಯೋರಂಶಾವಸಾನೇಽಷ್ಟದಿಜ್ಞಾದೀರುಷ್ಣಶಿಖಾಷ್ಯಯಾಃ ಪರಿಹರೇತ್ ಸರ್ವೇಷು ಕಾರ್ಯೇಷ್ವಪಿ ॥ ॥ ಇತಿ” ಆ ಪ್ರಕಾರವಾಗುವಾಗ್ಗೆ- ಅಶ್ವಿನ್ಯಾದಿ ಸ್ವಾತ್ಯಂತವಹ ನಕ್ಷತ್ರಗಳೊಳಗೆ ಅಶ್ವಿನೀ ರೋಹಿಣೀ ಪುನರ್ವಸು ಮಘೆ ಹಸ್ತಗಳಲ್ಲಿ ಏಳು ಘಟಿ ಮೇಲೆ ಎಂಟು ಘಳಿಗೆಗಳು, ಭರಣಿ ಮೃಗಶಿರೆ ಪುಷ್ಯ ಹುಬ್ಬೆ ಚಿತ್ರೆಗಳಲ್ಲಿ ಐವತ್ತೈದು ಘಳಿಗೆ ಮೇಲೆ ಐದು ಘಳಿಗೆಗಳು, ಕೃತ್ತಿಕೆ ಆರ್ದ್ರೆ ಆಶ್ಲೇಷೆ ಉತ್ತರೆ ಸ್ವಾತಿಗಳಲ್ಲಿ ಇಪ್ಪತ್ತೊಂದು ಘಳಿಗೆ ಮೇಲೆ ಒಂಬತ್ತು ಘಳಿಗೆಗಳು ಆಮೇಲೆ ವಿಶಾಖಾದಿ ರೇವತ್ಯಂತವಹ ನಕ್ಷತ್ರಗಳೊಳಗೆ ವಿಶಾಖೆ ಮೂಲ ಶ್ರವಣ ಪೂರ್ವಾಭಾದ್ರೆಗಳಲ್ಲಿ ಆದಿಯಲ್ಲಿ ಎಂಟು ಘಳಿಗೆಗಳೂ ಅನೂರಾಧೆ ಪೂರ್ವಾಷಾಢ ಧನಿಷ್ಠೆ ಉತ್ತರಾಭಾದ್ರೆಗಳಲ್ಲಿ ಐವತ್ತೆರಡು ಘಳಿಗೆ ಮೇಲೆ ಎಂಟು ಘಳಿಗೆಗಳೂ, ಜ್ಯೇಷ್ಠೆ ಉತ್ತರಾಷಾಢ ಶತಭಿಷೆ ರೇವತಿಗಳಲ್ಲಿ ಇಪ್ಪತ್ತು ಘಳಿಗೆ ಮೇಲೆ ಹತ್ತು ಘಳಿಗೆಗಳು ಇವು ಉಷ್ಣಶಿಖೆಗಳು. ಇವುಗಳನ್ನು ಶುಭಕರ್ಮದಲ್ಲಿ ವರ್ಜಿಸಬೇಕು. ಆ ಬಗ್ಗೆ ಅಕ್ಷರ ಸಂಖ್ಯೆಯಿಂದ- “ಸೇನಾಂಜನಂ ಮಹೇಮಾನಂ ಪರಂಧೇನುಃ ಪುನಃ ಪುನಃ ॥ ಜ್ಞಾನಾಂಜನಂ ಪ್ರಮಾದ್ಧಾನಂ ನರಾನ್ನಿತ್ಯಂ ತಥಾ ಪುನಃ ॥ ಅಶ್ವಿನ್ಯಾದ್ಯಾ ವಿಶಾಖಾದ್ಯಾ ಉಷ್ಣನಾಡ್ಯಃ ಪ್ರಕೀರ್ತಿತಾಃ ॥” ಇನ್ನು ವಿಷನಾಡಿಗಳನ್ನು ಹೇಳುತಾನೆ- “ಅಂಗೇನೈವ ವಿಯತ್ತ್ವಯೋನಿಲನರೋರಾಗೀನುಗಂ ನಾಖಿನಾ । ದಿವ್ಯಂ ಪುತ್ರ ನರೋಭಯೋ ವಿಟನಟೋವಾದ್ವೈರ್ನರೋ ವೀರಸುಟ್ ॥ ನಿಷ್ಕಾನಿತ್ಯನೃಪಾಜಟಾ ತು ಕವಿರಾಟ್ ನಿಂಬಾ ನಿಶಾಪಕ್ರಸುತ್ ॥। ಹವ್ಯಾಶಾದಿಷು ತಾನತೀತ್ಯ ಪರತೋ ನಾಡ್ಯಶ್ಚತಸ್ರೋ ವಿಷಂ ॥ ॥” ಆರ್ದ್ರೆ ಹಸ್ತ ಮೂಲಗಳಿಗೆ ಎರಡೆರಡು ಸಾರಿ ವಿಷವಿರುತ್ತದೆ. ಅದೆಂತೆಂದರೆ- “ಏಕಾದಶಾದಪ್ಯಾರ್ದ್ರಾಯಾಮೇಕವಿಂಶಾತ್ತಥಾ ಪರಾಃ ॥ ಔರ್ಧ್ವಂ ಹಸ್ತೇ ಸಮಿನ್ನಾಡ್ಯಾ ರುದ್ರನಾಡ್ಯಾಃ ಪರಂ ತಥಾ ॥ ॥ ವಿಂಶನ್ನಾಡ್ಯಾಶ್ಚ ಷಣ್ನಾಡ್ಯಾಃ ಪರಂ ಮೂಲಸ್ಯ ಚೈವ ತು ॥” ನಾಡ್ಯಶ್ಚತಸ್ರಃ ಸಂಪ್ರೋಕ್ತಾ ವಿಷಾಖ್ಯಾಸ್ತತ್ರ ಸೂರಿಭಿಃ ॥ ॥ ಇತಿ” ಉಷ್ಣಶಿಖೆಯಾಗಲೀ ವಿಷವಾಗಲೀ ಮಾಂದಿಯಾಗಲೀ ಲಗ್ನಗಳ ಅಂತ್ಯಕ್ಕೆ ತಟ್ಟಲಾಗಿ ಆ ಲಗ್ನವನ್ನು ತ್ಯಜಿಸಬೇಕು. ಆದಿಗೆ ತಟ್ಟಿದರೆ ಆಮೇಲೆ ದೋಷವಿಲ್ಲ. “ಯದ್ರಾತ್ಯಂತೇ ಸ್ಥಿರೌ ಉಷ್ಣವಿಷಮಾಂದ್ಯಶ್ಚ ತಂ ತ್ಯಜೇತ್ ॥ ಲಗ್ನಸ್ಯಾದೌ ದೋಷಹೀನಃ ತದಂತ್ಯೇ ಶುಭಮಾಚರೇತ್ ॥ ॥ ಭಾದ್ರೇಂದ್ರಾಗ್ನಿರ್ಮಾಧವೋಷ್ಣಂ ಯದಿ ಸ್ಯಾತ್ । ತದ್ರೇಕ್ಕಾಣಂ ವರ್ಜಯಿತ್ವಾ ತು ಲಗ್ನಂ ॥ ಗ್ರಾಹ್ಯಂ ಆಹುಃ ಪಂಡಿತಾಃ ಕೇಚಿದೇವಂ ॥।...॥ ॥ ಇತಿ”

ಸ್ಥಿರಕರಣಗಳನ್ನು ಮಾಧವೀಯದಲ್ಲಿ ಹೇಳಿಹದು- “ಮಾಧವೀಯಂ- ಸ್ಥಿರಕರಣಾನ್ಯಸಿತಚತುರ್ದಶ್ಯಪರಾರ್ಧಾದಿಕಾನಿ ಚತ್ವಾರಿ ॥ ಪ್ರಾಹುಃ ಶಕುನಿಚತುಷ್ಪದನಾಗಕಿಂಸ್ತುಘ್ನ

ನಾಮಾನಿ ॥ ॥ ಇತಿ" ವಿಷ್ಟಿ ಎಂದರೆ ಭದ್ರಾಕರಣವು ಭದ್ರಕರಣವನ್ನು ಮುಹೂರ್ತದಲ್ಲಿ ವರ್ಜಿಸಬೇಕು. ಆದಾಗ್ಯೂ- "ಪಶ್ಚಾದ್ವ್ಯತೀಪಾತದಲಂ ಸಪಾರ್ಶ್ವೋ ದರ್ಶಶ್ಚ ವಿಷ್ಕಂಭ್ಯು ದಯಶ್ಚ ಸಾಕ್ಷಾತ್ ॥" ಎಂದು ಮಾಧವೀಯದಲ್ಲಿ ಹೇಳಿದ್ದರಿಂದ ವಿಷ್ಟಿಯ ಉದಯ ಘಳಿಗೆಗಳು ಮಾತ್ರ ವರ್ಜಿಸಿದರೆ ಸಾಕಾಗಿರುತ್ತದೆ. ಆದ್ದರಿಂದ ಇಲ್ಲಿ ವಿಷ್ಟಿಯ ಉದಯ ಘಳಿಗೆಯನರಿವುದಕ್ಕೆ ಹೇಳುತಾನೆ- "ಮಾಧವೀಯಂ-ಶುಕ್ಲೇವಾರಿಧಿನಾಗರುದ್ರತಿಥಿ ಸಂಖ್ಯಾತಾಸು ಪಕ್ಷೇ ಸಿತೇ । ತತ್ಪೂರ್ವಾಸ್ವಪಿ ಸಕೃಮಷ್ಟಿ ತಿಥಿಷು ಪ್ರೋದ್ಯಾತಿ ವಿಷ್ಟಿಃ ಕ್ರಮಾತ್ ॥ ದಿಗ್ಯಾಮೇಷು ಶರಾಕ್ಷಶೈಲಯುಗಷಟ್ ತ್ರ್ಯಷ್ಟೇಂದು ಸಂಖ್ಯೇಷ್ವಥೋ ॥। ಯಾಮೇಷ್ವಾದ್ಯಪಗಚ್ಛರಾಂತ್ಯದಹನೇಷ್ವಂತ್ಯಾದ್ಯನಾದೀಷು ಚ ॥ ॥ ಇತಿ"

ಏಕಾರ್ಗಳ ದೋಷವನರಿವದೆಂತೆಂದರೆ- "ನಿಂದ್ಯಂತೇ ನಿತ್ಯಯೋಗೇಷ್ವಪಿ ನವ ಪರಿಘಃ ಸವ್ಯತೀಪಾತವಜ್ರೋ । ವ್ಯಾಘಾತೋ ವೈಧೃತಿಶ್ಚ ಪ್ರಥಮಪರಿವೃತಃ ಶೂಲ ಗಂಡಾತಿಗಂಡಾಃ ॥" ಎಂದು ಮಾಧವೀಯದಲ್ಲಿ ಹೇಳಿದ ಪ್ರಕಾರ ಪರಿಘ ವ್ಯತೀಪಾತ ವಜ್ರ ವ್ಯಾಘಾತ ವೈಧೃತಿ ವಿಷ್ಕಂಭ ಶೂಲ ಗಂಡ ಅತಿಗಂಡಗಳೆಂಬ ಒಂಬತ್ತು ನಿತ್ಯಯೋಗಂಗಳೊಳಗೆ ದುರ್ಯೋಗ ಬಂದರೆ ಅಲ್ಲಿ ಪರಿಘಕ್ಕೆ ಮಘೆ, ವ್ಯತೀಪಾತಕ್ಕೆ ಆಶ್ಲೇಷೆ, ವಜ್ರಕ್ಕೆ ಪುಷ್ಯ, ವ್ಯಾಘಾತಕ್ಕೆ ಪುನರ್ವಸು, ವೈಧೃತಿಗೆ ಚಿತ್ರೆ, ವಿಷ್ಕಂಭಕ್ಕೆ ಅಶ್ವಿನಿ, ಶೂಲಕ್ಕೆ ಮೃಗಶಿರೆ, ಗಂಡಕ್ಕೆ ಮೂಲ, ಅತಿಗಂಡಕ್ಕೆ ಅನೂರಾಧೆ ಈ ಪ್ರಕಾರ ಪರಿಘಾದಿ ಒಂಬತ್ತು ಯೋಗಗಳೊಳಗೆ ಒಂದು ಯೋಗ ಬಂದಲ್ಲಿ ಮಘಾದಿ ಒಂಬತ್ತು ನಕ್ಷತ್ರ ಗಳೊಳಗೆ ಆ ಯೋಗಕ್ಕೆ ಹೇಳಿದ ನಕ್ಷತ್ರಗಳ ದೆಸೆಯಿಂದ ಕ್ರಮದಿಂದಲೂ, ವಿಪರೀತ ದಿಂದಲೂ ಚಂದ್ರಾದಿತ್ಯರಿರುವ ನಕ್ಷತ್ರ ಪರ್ಯಂತ ಲೆಕ್ಕಿಸುವಾಗ ಎಷ್ಟು ಸಂಖ್ಯೆಯಾಗು ತ್ತದೋ ಚಂದ್ರಾದಿತ್ಯರಿರುವ ನಕ್ಷತ್ರವು ಅಷ್ಟನೆಯ ಸಂಖ್ಯೆಯ ನಕ್ಷತ್ರವಾದರೆ ಅದು ಏಕಾರ್ಗಲ ದೋಷವೆಂದು ಶುಭಕರ್ಮದಲ್ಲಿ ವಿಸರ್ಜಿಸುವುದು. "ಅತ್ರಮಾಧವೀಯಂ- ಸಂಪ್ರಾಪ್ತೇ ಪರಿಘಾದಿಯೋಗನವಕೇ ಪೈತ್ರಾಹಿಪುಷ್ಯಾದಿತೀ । ತ್ವಷ್ಟ್ರೇಭ್ಯೋಽಶ್ವಿಭತಸ್ತು ಷಾರಕಿರಣಾಸ್ಮೂಲಾಚ್ಚ ಮೈತ್ರಾದಪಿ ॥ ಪ್ರಾಕ್ಪಶ್ಚಾಚ್ಚ ಯಥಾಕ್ರಮಂ ವಿಗಣತೇ ತಾರಾಗಣೇ ಸಂಖ್ಯಯಾ ॥। ಚಂದ್ರಾರ್ಕಾಶ್ರಿತತಾರಕೇ ಯದಿ ಸಮೇ ದೋಷೋಽಯ ಮೇಕಾರ್ಗಲಃ ॥ ॥ ಇತಿ" ಇನ್ನೊಂದು ಪ್ರಕಾರ- ಆದಿತ್ಯಸ್ಫುಟವನ್ನು ಹನ್ನೆರಡು ರಾಶಿದೆಸೆಯಿಂದ ಕಳೆದು ನಿಂದ ರಾಶ್ಯಾದಿಗಳಲ್ಲಿ ಯಾವ ನಕ್ಷತ್ರದಲ್ಲಿ ಎಷ್ಟು ಘಳಿಗೆ ಸಂದದೆಯೋ ಆ ನಕ್ಷತ್ರದ ಆರಭ್ಯ ಎರಡನೇ ಏಳನೇ ಹತ್ತನೇ ಹನ್ನೊಂದನೇ ಹದಿನಾಲ್ಕನೇ ಹದಿನಾರನೇ ಹದಿನೆಂಟನೇ ಇಪ್ಪತ್ತನೇ ಈ ಸಂಖ್ಯೆಯ ನಕ್ಷತ್ರಗಳಲ್ಲಿ ಅಷ್ಟು ಘಳಿಗೆ ಪರ್ಯಂತ ಏಕಾರ್ಗಲ ದೋಷವು. "ಗ್ರಂಥಾಂತರಂ- ಮಂಡಲಹೀನರವೇಃ ಸ್ಯಾತ್ । ರತ್ನಾಸ ನಿತ್ಯಪೂಜ್ಯಭಯುತುಲ್ಯಃ ॥ ದೈತ್ಯಸರರ್ಕ್ಷೇ ತಸ್ಮಿನ್ ॥। ಆದೌ ನಾಡಿಸಮೋರ್ಗಳೋ ಜ್ಞೇಯಃ ॥. ॥ ಇತಿ" ಅಹಿಶಿರಸ್ಸು ಎಂದರೆ- ಚಂದ್ರಾದಿತ್ಯರ ಸ್ಫುಟಗಳನೊಂದುಗೂಡಿ ಅವರಲ್ಲಿ ಅನೂರಾಧಾ ನಕ್ಷತ್ರದ ಅಪರಾರ್ಧ ಬಂದರೆ ಅದು ಅಹಿಶಿರಸ್ಸು ಎಂಬ ದೋಷವು. ಸಾರ್ಪಮಸ್ತಕವೆಂದರೂ ಅಹಿಶಿರಸ್ಸು ಎಂದರೂ ಒಂದೇ ಆಗಿಹದು. "ಚಂದ್ರಾರ್ಕಯೋಗೋ ಮೈತ್ರಸ್ಯಾಪರಾರ್ಧಂ ಯದಾ ಭವೇತ್ ॥

ಸರ್ಪಮಸ್ತಕಸಂಜ್ಞಸ್ತು ತದಾ ದೋಷೋ ವಿವರ್ಜಯೇತ್ ॥ ॥ ಇತಿ" "ಸರ್ಪಮಸ್ತಕ ಖಂಡಾಂತಂ ವಿಷ್ಟಿರೇಕಾರ್ಗಳಂ ತಥಾ ॥ ಸ್ವಕಾಲ ಏಷ ವರ್ಜ್ಯಂತೇ ಚತ್ವಾರೋಽಪಿ ಮನೀಷಿಭಿಃ ॥ ಇತಿ" ಲಾಟದೋಷವೆಂದರೂ ವೈಧೃತವೆಂದರೂ ಚಕ್ರಾರ್ಧವೆಂಬ ದೋಷವಾಗಿಹದು. ಆಗ ಚಕ್ರಾರ್ಧದೋಷವಿರುವ ನಕ್ಷತ್ರವನ್ನೇ ವರ್ಜಿಸಬೇಕೆಂದು ಕೆಲವರ ಪಕ್ಷ. ಸ್ಪರ್ಶಾದಿಮೋಕ್ಷ ಪರ್ಯಂತವಿರುವ ಕಾಲ ಮಾತ್ರ ವರ್ಜಿಸಿದರೆ ಸಾಕೆಂಬುದಕ್ಕೆ ಸೂರ್ಯಸಿದ್ಧಾಂತ- "ಆದ್ಯಂತಕಾಲಯೋರ್ಮಧ್ಯಕಾಲೋ ಜ್ಞೇಯೋಽತಿದಾರುಣಃ ॥ ಪ್ರಜ್ವಲಜ್ಜ್ವಲನಾಕಾರಃ ಸರ್ವಕರ್ಮಬಹಿಷ್ಕೃತಃ ॥ ॥ ಏಕಕಾಷ್ಠಗತಂ ಯಾವತ್ ಅರ್ಕೇಂದ್ವೋರ್ಮಂಡಲಾಂತರೇ ॥ ಸಂಭವಸ್ತಾವದೇವಾಸು ಸರ್ವಕರ್ಮವಿನಾಶಕೃತ್ ॥ ॥ ಇತಿ" "ವಿಷೋಷ್ಣವಿಷ್ಟಿಗುಳಿಕವ್ಯತೀಪಾತಾಹಿಮಸ್ತಕಾಃ ॥ ಮಾರ್ಗಲೋಷ್ಣಶಿಖಾರಾತಿ ವೈನಾಶಾಂಶಃ ಸಿತೇಕ್ಷಣಃ ॥ ॥ ಪಾಪಾನಾಮುದಯೋದೃಷ್ಟಿಶ್ಚಾಷ್ಟಮಾರಿವ್ಯಯೇ ಶಶೀ ॥ ಏತೇ ದೋಷಾ ವಿಭಿದ್ಯಂತೇ ಸ್ವಾಪವಾದ್ಯೈರ್ಗುಣೈರಪಿ ॥ ॥ ಇತಿ" ವೈನಾಶಿಕಾಂಶಕವನ್ನು ಮುಂದೆ ಐವನೇ ಶ್ಲೋಕದಲ್ಲಿ ಹೇಳುತದೆ. "ಅಸುಕ್ತಾಬಹವಃ ಸಂತಿ ದೋಷಾಃ ಪ್ರಾಯೇಣ ದುರ್ಬಲಾಃ ॥ ಕಲಾವದೋಷಃ ಕಾಲೋ ನ ಮಂದಭಾಗ್ಯಯುತಾ ಜನಾಃ ॥ ॥ ದೋಷೋಽಲ್ಪತೋ ಬಹುಗುಣೇ ಕರ್ಮ ಕುರ್ವಂತಿ ಮಾನವಾಃ ॥ ಇತಿ" ರಿಕ್ತಾಷ್ಟಮೀ ಎಂದು ರಿಕ್ತತಿಥಿಗಳಾಗದೆಂದು ಹೇಳಿದರಿಂದ ರಿಕ್ತತಿಥಿಗಳು ಅವುದೆಂದರೆ- "ನಂದಾ ಭದ್ರಾ ಜಯಾ ರಿಕ್ತಾ ಪೂರ್ಣೇತಿ ತಿಥಯಃ ಕ್ರಮಾತ್ ॥ ಪುನಃ ಪುನರ್ವಿಪಶ್ಚಿದ್ಭಿಃ ಕಥಿತಾಃ ಪ್ರಥಮಾದಿತಃ ॥ ॥" ಎಂದದರಿಂದ ಚತುರ್ಥಿ ನವಮೀ ಚತುರ್ದಶಿಗಳಾಗುವದು. ಅನಂತರವಲ್ಲಿ ಮತ್ತೂ ಮೌಢ್ಯಾದಿ ದೋಷಗಳನ್ನು ಹೇಳುತಾನೆ-

ಮೌಢ್ಯಂ ದರ್ಶನಮಹ್ನಿ ಜೀವಸಿತಯೋಃ ದೃಷ್ಟಿರ್ಮಿಥೋಽಂಹಸ್ಪತಿಃ ।
ಸಂಸರ್ಪಾಧಿಕಮಾಸಕಶ್ಚ ಷಡಿಮೇ ಮಾಸಾಹರುಕ್ತಾದೃತೇ ॥
ಆಸೌಮ್ಯಗ್ರಹಸಂಗಮಾತ್ ಪರಿಹರೇತ್ ಪಾಪೈರವಾಸ್ತಂ ಗೃಹಂ ।।।
ನಿಂದ್ಯಸ್ಸರ್ವಶುಭಕ್ರಿಯಾಸು ನಿಧನೇ ವಿಶ್ವಂಭರಾಸಂಭವಃ ॥ ೪ ॥

ಟೀಕಾ ಮೌಢ್ಯಮಿತಿ - ಜೀವಸಿತಯೋಃ = ಗುರುಶುಕ್ರರ, ಮೌಢ್ಯಂ = ಮೌಢ್ಯವು, ಅಹ್ನಿ=ದಿವದಲ್ಲಿ, ದರ್ಶನಂ=ಕಾಣುವುದು, ಮಿಥಃ=ಅನ್ಯೋನ್ಯವಾಗಿ, ದೃಷ್ಟಿಃ=ದೃಷ್ಟಿಯು, ಅಂಹಸ್ಪತಿಃ = ಅಂಹಸ್ಪತಿಯಾದಂಥಹ, ಸಂಸರ್ಪ=ಸಂಸರ್ಪವಾದಂಥ, ಅಧಿಕಮಾಸಕಶ್ಚ= ಅಧಿಕಮಾಸವು, ಇಮೇ ಷಟ್=ಈ ಆರು ದೋಷಗಳು, ಮಾಸಾಹರುಕ್ತಾತ್=ಮಾಸದಿನ ಉಕ್ತ ಕರ್ಮಗಳ ವೆಸೆಯಿಂದ, ಋತೇ=ಹೊರತು, ಪರಿಹರೇತ್=ವರ್ಜಿಸಬೇಕು. ಪಾಪೈಃ= ಪಾಪಗ್ರಹರಿಂದ, ಅವಾಸ್ತಂ=ಇರಲ್ಪಟ್ಟಂಥ, ಗೃಹಂ=ರಾಶಿಯನ್ನು, ಆಸೌಮ್ಯಗ್ರಹಸಂಗಮಾತ್=ಶುಭಗ್ರಹಯೋಗ ಪರ್ಯಂತ ವೆಸೆಯಿಂದ, ಪರಿಹರೇತ್=ವರ್ಜಿಸಲಿ. ಸರ್ವಶುಭಕ್ರಿಯಾಸು=ಸಮಸ್ತಶುಭಕರ್ಮಗಳಲ್ಲಿಯೂ, ನಿಧನೇ=ಅಷ್ಟಮದಲ್ಲಿ, ವಿಶ್ವಂಭರಾಸಂಭವಃ=ಅಂಗಾರಕನು, ನಿಂದ್ಯಃ=ನಿಷೇಧವು ಎಂದರ್ಥ.

ತಾತ್ಪರ್ಯ:- ಗುರುಶುಕ್ರರ ಮೌಢ್ಯವು, ಇವರುಗಳು ಹಗಲು ಕಂಡರೂ, ಇವರ ಅನ್ಯೋನ್ಯ ದೃಷ್ಟಿ, ಅಂಹಸ್ಪತ್ಯ ಮಾಸವೂ, ಸಂಸರ್ಪ ಮಾಸವೂ, ಅಧಿಕ ಮಾಸವು ಈ

ಪ್ರಕಾರ ಆರು ವಿಧ ದೋಷಗಳನ್ನು ಮಾಸೋಕ್ತಕರ್ಮ ದಿನೋಕ್ತಕರ್ಮಂಗಳ ಸಹ ಹೊರತು ಇರುವ ಕರ್ಮದಲ್ಲಿ ವರ್ಜಿಸಬೇಕು. ಮಾಸೋಕ್ತ ದಿನೋಕ್ತಕರ್ಮಗಳಲ್ಲಿ ವರ್ಜಿಸಬೇಡ. ಪಾಪಗ್ರಹರಿರುವ ಲಗ್ನಗಳನ್ನು ಅದಕ್ಕೆ ಶುಭಗ್ರಹರು ಬರುವ ವರೇಗೆ ವರ್ಜಿಸಬೇಕು. ಶುಭಗ್ರಹರು ಬಂದ ಮೇಲೆ ಆದೀತು. ಸಮಸ್ತಕರ್ಮಗಳಲ್ಲಿಯೂ ಅಷ್ಟಮದಲ್ಲಿ ಅಂಗಾರಕನಿರಬಾರದು ಎಂಬ ತಾತ್ಪರ್ಯ. ಗುರುಶುಕ್ರರು ಎಷ್ಟು ದಿವಸ ಪರ್ಯಂತ ಹಗಲು ಕಾಣುತಾರೋ ಅಷ್ಟು ದಿವಸ ವರ್ಜ್ಯವು, ಪ್ರಾಹ್ಣಕಾಲದಲ್ಲೂ ಸಾಯಾಹ್ನಕಾಲದಲ್ಲೂ ಕಂಡರೆ ದೋಷವಿಲ್ಲ. ಅದು ಹೊರತು ಇರುವ ಕಾಲದಲ್ಲಿ ಕಂಡರೆ ದಿವಾದರ್ಶನತ್ವ ದೋಷವಿರುವುದು- "ಯದಾ ದಿವೈವ ದೃಶ್ಯೇತೇ ಜೀವಶುಕ್ರೌ ನಭಸ್ಥಲೇ ॥ ತಯೋರನ್ಯತರೋ ವಾऽಪಿ ಸಕಾಲೋ ಬಹುದೋಷದಃ ॥ ॥ ಪ್ರಾಹ್ನ ಸಾಯಾಹ್ನ ಹೀನಾಹ್ನಿ ದೃಶ್ಯತ್ವಂ ಗುರುಶುಕ್ರಯೋಃ ॥ ಪ್ರಾಹ್ನಸಾಯಾಹ್ನ ಯೋರ್ಮಧ್ಯಕಾಲೋऽತ್ರಾಗ್ನಿಪದಃ ಸ್ಮೃತಃ ॥ ॥" ಗುರುಶುಕ್ರರ ಮಿಥೋದೃಷ್ಟಿ ಎಂದರೆ ಗುರುವಿನಿಂದ ಸಪ್ತಮದಲ್ಲಿ ಶುಕ್ರ, ಶುಕ್ರನ ಸಪ್ತಮದಲ್ಲಿ ಗುರು ಈ ಪ್ರಕಾರವಿರಲಾಗಿ ಮಿಥೋದೃಷ್ಟಿಯು. ಆ ಪ್ರಕಾರ ಎಷ್ಟು ದಿವಸವಿರುತ್ತಾರೋ ಅಷ್ಟು ದಿವಸ ವರ್ಜಿಸಬೇಕು. ಅಂಹಸ್ಪತಿಮಾಸ, ಸಂಸರ್ಪಮಾಸ, ಅಧಿಕಮಾಸ ಎಂದು ಮೂರು ವಿಧ ಮಾಸಗಳೂ ವರ್ಜ್ಯಂಗಳು. ಅವುಗಳ ಲಕ್ಷಣಗಳೆಂತೆಂದರೆ- ಒಂದು ಸೌರಮಾಸದ ಮಧ್ಯದಲ್ಲಿ ಎರಡು ಪೌರ್ಣಮಾಸ್ಯಾವಸಾನ ಬಂದರೆ ಸಂಸರ್ಪ ಮಾಸವಾಗುವುದು. ಒಂದು ಸೌರಮಾಸದ ಮಧ್ಯದಲ್ಲಿ ಎರಡು ಸಾರಿ ರೇವತೀ ನಕ್ಷತ್ರಾವಸಾನ ಬರಲಾಗಿ ಅದು ಅಂಹಸ್ಪತ್ಯ ಮಾಸವಾಗುವುದು. ಆ ಪ್ರಕಾರ ಎರಡು ಅವಸಾನಗಳ ಮಧ್ಯದಲ್ಲಿ ಶುಭಕರ್ಮ ನಡೆಸಲಾಗದು. "ತಥಾಚ-ಪೂರ್ಣಾದ್ವಯಂ ಸ್ಯಾದ್ಯದಿ ಸೌರಮಾಸೇ ಸಂಸರ್ಪಮಾಸಃ ಕಥಿತೋ ವಿರಿಂಚಿನಾ ॥ ತತ್ರೈವ ಪೌಷ್ಣದ್ವಯಸನ್ನಿಪಾತೇ ಚಾಂಹಸ್ಪತಿಸ್ತದ್ಯುಗಲಂ ಚ ನಿಂದ್ಯಂ ॥ ॥ ಇತಿ" ಚೈತ್ರಾದಿ ಚಾಂದ್ರಮಾಸಗಳೊಳಗೊಂದು ಮಾಸದ ಮಧ್ಯದಲ್ಲಿ ಆದಿತ್ಯನ ಸ್ಫುಟ ಸಂಕ್ರಾಂತಿಯು ಇಲ್ಲದೆ ಹೋದರೆ ಆ ಚಾಂದ್ರ ಮಾಸವು ಅಧಿಕಮಾಸವು. ಎರಡು ಸಂಕ್ರಾಂತಿ ಬಂದರೆ ಆ ಮಾಸವು ಕ್ಷಯಮಾಸವು ಆಗುವುದು. ಆ ಕ್ಷಯಮಾಸವು ಕಾರ್ತಿಕಾದಿ ಮೂರು ಮಾಸಗಳಲ್ಲಿ ಹೊರತು ಮೇಲಾದ ಮಾಸಗಳಲ್ಲಿ ಬಾರದು. ಕ್ಷಯಮಾಸ ಬಂದ ವರ್ಷ ಮಧ್ಯದಲ್ಲಿ ಎರಡು ಸಾರಿ ಅಧಿಕಮಾಸ ಬರುವುದು. ಕ್ಷಯಮಾಸವು ಬಹುಕಾಲಕ್ಕೊಂದು ಸಾರಿ ಬರುವುದು. "ತಥಾಚ ಜ್ಯೋತಿಸ್ಸಿದ್ಧಾಂತಃ- ಅಸಂಕ್ರಾಂತಿಮಾಸೋऽಧಿಮಾಸಃ ಸ್ಫುಟಸ್ಯ ತಸ್ಯಾದ್ವಿ ಸಂಕ್ರಾಂತಿಮಾಸಃ ಕ್ಷಯಾಖ್ಯಃ ॥ ಕದಾಚಿತ್ ಕ್ಷಯಾಃ ಕಾರ್ತಿಕಾದಿತ್ರಯೇ ಸ್ಯಾತ್ ತದಾ ವರ್ಷಮಧ್ಯೇ ಹಿ ಮಾಸತ್ರಯಂ ಹಿ ॥ ॥" ಒಂದು ಅಧಿಮಾಸ ಬಂದು ಎರಡನೇ ಅಧಿಮಾಸವು ಎಷ್ಟು ದಿವಸದ ಮೇಲೆ ಬರುತದೆ ಎಂದರೆ- "ವಸಿಷ್ಠಸಿದ್ಧಾಂತಃ ದ್ವಾತ್ರಿಂಶತ್ಸಲು ಮಾಸಾಃ ಷೋಡಶ ದಿವಸಾಶ್ಚ ನಾಡಿಕಾಸ್ತಿಸ್ರಃ ॥ ಅಧಿಮಾಸಾಂಶತಮೇತತ್ ವಿನಾಡಿಕಾಃ ಪಂಚಪಂಚಾಶತ್ ॥ ॥ ಇತಿ" ಕ್ಷಯಮಾಸವು ಇಷ್ಟೇ ವರ್ಷಕ್ಕೊಂದು ಸಾರಿ ಬಂದೀತೆಂಬುದಕ್ಕೆ ನಿಯಮವಿಲ್ಲ. ಆದರೂ ಹಿಂದೆ ಬಂದ ಶೂನ್ಯ

ಮಾಸಗಳಿಂದ ಸುಮಾರು ತಿಳಿಯಬಹುದಾದ್ದರಿಂದ ಹಿಂದೆ ಬಂದ ಕ್ಷಯಮಾಸಗಳು ಸಿದ್ಧಾಂತ ಶಿರೋಮಣಿಯಲ್ಲಿ ಹೇಳಿಹದು.

ಅಧಿಮಾಸವೆಂದರೆ ಒಂದು ಮಾಸೋಕ್ತ ಅರುವತ್ತು ದಿವಸವೆಂದರಿವದು. ಅದರಲ್ಲಿ ಆದಿ ಮೂವತ್ತು ದಿವಸ ಅಧಿಕವೆಂದೂ ಆಮೇಲೆ ಮೂವತ್ತು ದಿವಸ ನಿಜವೆಂದೂ ಸಹ ತಿಳಿವದು. ಆ ನಿಜದಲ್ಲಿ ಶುಭಕರ್ಮ ನಡೆಸಬಹುದು. "ತಥಾಚ ಭಾರದ್ವಾಜಸ್ಮೃತಿಃ- ದಿನ ಷಷ್ಟ್ಯಾತ್ಮಕೇ ತಸ್ಮಿನ್ ಪೂರ್ವತ್ರಿಂಶದ್ದಿನೇಷ್ವಪಿ ॥ ಕ್ರಿಯತೇ ತದ್ದಿನಶ್ರಾದ್ಧಪ್ರಭೃತ್ಯೇವ ತು ನೇಪ್ಸಿತಂ ॥ ॥ ತಸ್ಮಿನ್ನೇವ ಪರತ್ರಿಂಶತ್ ಶುಭಕರ್ಮಣಿ ಶಸ್ಯತೇ ॥ ಇತಿ"

ಕ್ಷಯಮಾಸ ಬಂದರೆ ಆ ಸಂವತ್ಸರದಲ್ಲಿ ಆ ಚಾಂದ್ರಮಾಸವಿಲ್ಲದೆ ಆ ಮಾಸಕ್ಕೆ ಅದರಿಂದ ಮೇಲಣ ಮಾಸದ ಅಭಿಧಾನವಾಗುವುದು. ಈ ಪ್ರಕಾರ ಮೌಢ್ಯಾದಿ ಷಡ್ದೋಷಗಳು ದಿನೋಕ್ತ ಮಾಸೋಕ್ತ ಕರ್ಮಾಂಗಳಲ್ಲಿ ವರ್ಜ್ಯಾಂಗಳಲ್ಲ. ಅದು ಹೊರತಿರುವ ಕರ್ಮದಲ್ಲಿಯೇ ವರ್ಜ್ಯಾಂಗಳು. ಪಾಪಗ್ರಹರಿರುವ ಲಗ್ನದಲ್ಲಿ ಶುಭಗ್ರಹ ಕೂಡಿದ್ದರೆ ಆ ಪಾಪೋದಯವು ದೋಷವಿಲ್ಲ. "ಶುಭಯೋಗಾದಿನಾ ರಾಶಿಃ ಪಾಪಯುಕ್ತಾ ವಿಶುದ್ಧ್ಯತಿ" ॥ ಎಂದು ಹೇಳಿಹದೆ. ಆದಿತ್ಯೋದಯ ಲಗ್ನವನ್ನು ಶುಭಯೋಗವಿಲ್ಲದಿದ್ದರೂ ಗ್ರಹಿಸಬಹುದು. "ಶುಭಯೋಗಂ ವಿನಾಪ್ಯರ್ಕಯುಕ್ತರಾಶಿಸ್ತು ಗೃಹ್ಯತೇ" ॥ ಎಂದದೆ. ಕೇತುವನ್ನು ಮುಹೂರ್ತ ವಿಷಯದಲ್ಲಿ ಅಂಗೀಕರಿಸಬೇಡ. ಆತನ ಉದಯ ವೃಷ್ಟ್ಯಾದಿಗಳೆಲ್ಲ ಶುಭವೇ ಸರಿ. "ಚಾರಸ್ಯಾನಿಶ್ಚಯಾತ್ಕೇತುಃ ಮುಹೂರ್ತೇಷು ನ ಚಿಂತ್ಯತೇ ॥" ಎಂದು ಆತಗೆ ಸ್ವಯಂ ವ್ಯಕ್ತವಾದ ಚಾರವಿಲ್ಲವಾದ್ದರಿಂದ ಆತನು ಮುಹೂರ್ತ ವಿಷಯದಲ್ಲಿ ದೋಷಿಯಾಗುವುದಿಲ್ಲ. ಯಾವ ಸಮಸ್ತ ಕರ್ಮದಲ್ಲಿಯೂ ಅಷ್ಟಮದಲ್ಲಿ ಅಂಗಾರಕನಿರಬಾರದು.

ಅನಂತರದಲ್ಲಿ ವೈನಾಶಿಕಾದಿ ನಕ್ಷತ್ರ ದೋಷವನ್ನು ಹೇಳುತಾನೆ:-

> ಅಷ್ಟಾಶೀತಿತಮಾಂಶಕಂ ಪರಿಹರೇತ್ ಪೂರ್ವಂಚ ಜನ್ಮಾಂಶತೋ ।
> ಭಂ ಜನ್ಮಾಷ್ಟಮಮೇತದಿಂದುಮಸದಚ್ಛೇಶಾಂಸ್ತದಂಶಾನಪಿ ॥
> ಆದ್ಯೇ ಪ್ರತ್ಯರಭೇ ವಿಪದ್ಯಪಿ ವಧೇ ತ್ಯಾಜ್ಯೋಽಖಿಲಾಂಶೋಽಸತಾಂ ॥।
> ಅಂತ್ಯೇಽಂತ್ಯಾದ್ಯತೃತೀಯಭಾಗಮಿತರತ್ರರ್ಕ್ಷಾಂ ಚ ಲಗ್ನಾಷ್ಟಮಂ ॥ ೫ ॥

ಟೀಕಾ-ಅಷ್ಟಾಶೀತಿರಿತಿ-ಜನ್ಮಾಂಶತಃ=ಜನ್ಮನಕ್ಷತ್ರದ ಜನ್ಮಾಂಶಕದ ದೆಸೆಯಿಂದ, ಪೂರ್ವಂ=ಮೊದಲನೆಯದನ್ನೂ, ಅಷ್ಟಾಶೀತಿತಮಾಂಶಕಂಚ=ಎಂಬತ್ತೆಂಟನೆಯ ಅಂಶಕ ವನ್ನೂ, ಪರಿಹರೇತ್ = ವರ್ಜಿಸಲಿ, ಜನ್ಮಾಷ್ಟಮಂ = ಜನ್ಮರಾಶಿ ದೆಸೆಯಿಂದ ಅಷ್ಟಮ ವಾದಂಥ, ಭಂ=ರಾಶಿಯನ್ನು, ಏತದಿಂದುಂ=ಈ ಅಷ್ಟಮ ರಾಶಿಯಲ್ಲಿರುವಂತಹ ಚಂದ್ರ ನನ್ನು, ಅಸದಚ್ಛೇಶಾನ್=ಪಾಪಗ್ರಹರು ಶುಕ್ರ ಎಂದಿವರುಗಳ ಅಧಿಪತಿಗಳಾಗಿರುವಂಥ, ತದಂಶಾನಪಿ = ಆ ಜನ್ಮಾಷ್ಟಮ ರಾಶಿಯಲ್ಲಿದ್ದ ಚಂದ್ರನ ಅಂಶಗಳನ್ನಾದರೂ, ಪರಿಹರೇತ್=ವರ್ಜಿಸಲಿ. ಆದ್ಯೇ=ಆದಿ ಪರ್ಯಾಯದಲ್ಲಿ, ಪ್ರತ್ಯರಭೇ=ಪ್ರತ್ಯರ ನಕ್ಷತ್ರ ದಲ್ಲಿ, ವಿಪದಿ=ವಿಪತ್ತಾರೆಯಲ್ಲಿ, ವಧೇಽಪಿ=ವಧ ತಾರೆಯಲ್ಲಿಯೂ, ಅಖಿಲಂ=ಸಮಸ್ತ ವಾದಂಥ, ಅಂಶಃ = ಅಂಶವು, ತ್ಯಾಜ್ಯಃ = ವರ್ಜ್ಯವು. ಅಂತ್ಯೇ=ಅಂತ್ಯಪರ್ಯಾಯದಲ್ಲಿ,

ಅಸತಾಂ = ಪಾಪಗ್ರಹರ, ಅಂಶಃ = ಅಂಶಕವು, ತ್ಯಾಜ್ಯಃ = ವರ್ಜ್ಯವು. ಇತರತ್ರ ಇದು ಹೊರತಿರುವ ಮಧ್ಯ ಪರ್ಯಾಯದಲ್ಲಿ, ಅಂತ್ಯ = ನಾಲ್ಕನೆ, ಆದ್ಯ = ಒಂದನೆ, ತೃತೀಯ=ಮೂರನೆ, ಭಾಗಂ=ಅಂಶಕವು, ತ್ಯಾಜ್ಯಃ=ವರ್ಜ್ಯವು, ಲಗ್ನಾಷ್ಟಮಂ=ಲಗ್ನ= ಜನ್ಮಲಗ್ನದ ದೆಸೆಯಿಂದ, ಅಷ್ಟಮಂ = ಅಷ್ಟಮವಾದಂಥ, ಋಕ್ಷಂಚ = ರಾಶಿಯೂ, ವರ್ಜ್ಯಂ=ವರ್ಜ್ಯವು ಎಂದರ್ಥ.

"ಅಶ್ವಿನೀಪ್ರಥಮಾದ್ಯಾಂಶಾಃ ಕ್ರಮಾನ್ಮೇಷಾದಿಸಂಜ್ಞಿತಾಃ ॥ ಭೌಮಶುಕ್ರಬುಧಶ್ಚಂದ್ರಾರ್ಕಬುಧಶುಕ್ರಕುಜಾ ಗುರುಃ ॥ ॥ ಮಂದಾರ್ಕಜೀವಾ ಮೇಷಾದಿರಾಶ್ಯಂಶಪತಯಃ ಕ್ರಮಾತ್ ॥" ಎಂದುದರಿಂದ ಒಂದೊಂದು ನಕ್ಷತ್ರಕ್ಕೆ ನಾಲ್ಕು ನಾಲ್ಕು ಅಂಶಕಗಳು ಸರಿಯಷ್ಟೆ? ಆದರಿಂದ ಯಾವ ನಕ್ಷತ್ರದಲ್ಲಿ ಎಷ್ಟನೆಯ ಅಂಶಕದಲ್ಲಿ ಜನನವೋ ಆ ಅಂಶಕ ಮೊದಲಾಗಿ ಎಂಬತ್ತೆಂಟನೆಯ ಅಂಶಕವು ಯಾವ ನಕ್ಷತ್ರದಲ್ಲಿ ಎಷ್ಟನೆಯ ಅಂಶಕವಾಗುತದೋ ಆ ಅಂಶಕವು ವೈನಾಶಿಕಾಂಶಕವು. ಅದನ್ನು ಶುಭಕರ್ಮದಲ್ಲಿ ವರ್ಜಿಸಬೇಕು. ಹಾಗೆಯೇ ಪೂರ್ವಂಚ ಎಂದುದರಿಂದ ನೂರ ಎಂಟನೆಯ ಅಂಶಕವೂ ವೈನಾಶಿಕ ಅಂಶವಾಗುವುದು. ಜನ್ಮಕಾಲದಲ್ಲಿ ಚಂದ್ರನಿರುವ ರಾಶಿಗೆ ಜನ್ಮರಾಶಿ ಎಂದು ಹೆಸರು. ಆ ಜನ್ಮರಾಶಿ ದೆಸೆಯಿಂದ ಅಷ್ಟಮ ರಾಶಿಯಲ್ಲಿ ಚಂದ್ರನಿರಲಾಗಲು ನಿಷೇಧವು ಅಥವಾ ಆ ಜನ್ಮರಾಶಿಗೆ ಆಗಲೀ, ಆ ಜನ್ಮಾಷ್ಟಮ ರಾಶಿಯಲ್ಲಿರುವ ಚಂದ್ರನಿಗಾಗಲೀ ಪಾಪಗ್ರಹರ ಅಂಶಕವು ಶುಕ್ರನ ಅಂಶಕವು ಬಂದರೆ ಆ ಅಂಶಕವ ಮಾತ್ರವಾದರೂ ವರ್ಜಿಸಿದರೂ ಸಾಕು. ಜನ್ಮನಕ್ಷತ್ರ ಮೊದಲಾಗಿ ಒಂಬತ್ತು ನಕ್ಷತ್ರಗಳು ಪ್ರಥಮ ಪರ್ಯಾಯವು. ಆಮೇಲೆ ಒಂಬತ್ತು ನಕ್ಷತ್ರಗಳು ದ್ವಿತೀಯ ಪರ್ಯಾಯವು. ಆಮೇಲಿನ ಒಂಬತ್ತು ನಕ್ಷತ್ರಗಳು ತೃತೀಯ ಪರ್ಯಾಯವು. ಇವಕ್ಕೆ ಆದಿ ಪರ್ಯಾಯ, ಮಧ್ಯ ಪರ್ಯಾಯ, ಅಂತ್ಯ ಪರ್ಯಾಯವೆಂದೂ ಹೇಳುತ್ತಾರೆ. ಆ ಒಂಬತ್ತು ನಕ್ಷತ್ರಗಳಿಗೆ ಕ್ರಮದಿಂದ ಜನ್ಮ, ಸಂಪತ್, ವಿಪತ್, ಕ್ಷೇಮ, ಪ್ರತ್ಯರ, ಸಾಧಕ, ವಧ, ಮೈತ್ರ, ಪರಮ ಮೈತ್ರಗಳೆಂದು ಹೆಸರು. ಆದ್ಯ ಪರ್ಯಾಯದ ಪ್ರತ್ಯರ ವಿಪತ್ ವಧ ತಾರೆ ಈ ಮೂರು ನಕ್ಷತ್ರಗಳ ಸಮಸ್ತ ಅಂಶಕಗಳು ನಿಷೇಧಗಳು. ಅಂತ್ಯ ಪರ್ಯಾಯದಲ್ಲಿ ಈ ಮೂರು ನಕ್ಷತ್ರಗಳಲ್ಲಿಯೂ ಪಾಪಗ್ರಹರ ಅಂಶಕಗಳು ಮಾತ್ರ ನಿಷೇಧಗಳು. ಮೇಲಾದ ಅಂಶಕಗಳು ನಿಷೇಧವಲ್ಲ. ಮಧ್ಯ ಪರ್ಯಾಯದಲ್ಲಿ ಪ್ರತ್ಯರ ತಾರೆಯಲ್ಲಿ ನಾಲ್ಕನೆಯ ಅಂಶಕ, ವಿಪತ್ತಾರೆಯಲ್ಲಿ ಒಂದನೆಯ ಅಂಶಕ, ವಧತಾರೆಯಲ್ಲಿ ಮೂರನೆಯ ಅಂಶಕ ಇಷ್ಟು ಅಂಶಕ ವರ್ಜಿಸಿ ಉಳಿದ ಅಂಶಕಗಳಲ್ಲಿ ಶುಭಕರ್ಮ ನಡೆಸಬಹುದು. ಪ್ರಥಮ ಪರ್ಯಾಯದಲ್ಲಿ ಜನ್ಮತಾರೆ, ದ್ವಿತೀಯ ಪರ್ಯಾಯದಲ್ಲಿ ವಿಪತ್ತಾರೆ, ತೃತೀಯ ಪರ್ಯಾಯದಲ್ಲಿ ಪ್ರತ್ಯರ ತಾರೆ ಸಹ ವರ್ಜಿಸಿ ಉಳಿದ ತಾರೆಗಳೆಲ್ಲ ವನ್ನು ಗ್ರಹಿಸಬೇಕು. ವಧ ತಾರೆಯು ಮೂರೂ ಪರ್ಯಾಯದಲ್ಲಿಯೂ ವರ್ಜ್ಯವೇ ಸರಿ. "ತಥಾಚ-ಪ್ರಥಮೇ ಪ್ರಥಮಂ ತ್ಯಾಜ್ಯಂ ದ್ವಿತೀಯೇಚ ತೃತೀಯಕಂ ॥ ತೃತೀಯೇ ಪ್ರತ್ಯರಂ ಚೈವ ವಧಃ ಸರ್ವತ್ರ ವರ್ಜ್ಯತೇ ॥ ॥ ಇತಿ" ಜನ್ಮನಕ್ಷತ್ರದಲ್ಲಿ ಏಳು ಘಳಿಗೆ, ವಿಪತ್ತಾರೆಯಲ್ಲಿ ಹತ್ತು, ಪ್ರತ್ಯರ ತಾರೆಯಲ್ಲಿ ಐದು ಘಳಿಗೆ ಈ ಪ್ರಕಾರ ವರ್ಜಿಸಿ ಉಳಿದ

ಘಳಿಗೆಗಳನ್ನಾದರೂ ಗ್ರಹಿಸಿಕೊಳಬಹುದು. "ಜನ್ಮರ್ಕ್ಷೇ ಸಪ್ತಘಟಿಕಾಃ ವಿಪತ್ತಾರೇ ದಶ ನಾಡಿಕಾಃ ॥ ಪ್ರತ್ಯರೇ ಪಂಚ ಸಂತ್ಯಾಜ್ಯಾಃ ಶೇಷನಾಡ್ಯಃ ಶುಭಾವಹಾಃ ॥ ॥ ಇತಿ"

ಜನ್ಮವಿಪತ್‌ಪ್ರತ್ಯರ ವಧ ಜನ್ಮಾಷ್ಟಮರಾಶಿ ಈ ತ್ಯಾಜ್ಯಗಳಲ್ಲಿ ವಿಪತ್ಕಾಲದಲ್ಲಿ ಕ್ರಿಯೆಗಳ ನಡೆಸುವಲ್ಲಿ ತದುಕ್ತ ದ್ರವ್ಯಗಳ ದಾನಕೊಟ್ಟು ಮಾಡಬಹುದು. ಆ ದಾನದ್ರವ್ಯಗಳಾವುವೆಂದರೆ- "ಛಾಗಂ ಗುಡಂ ಚ ಲವಣಂ ಸತಿಲಂ ಕಾಂಚನಂ ತಥಾ ॥ ದದ್ಯಾದ್ವಿಪ್ರಾಯ ಜನ್ಮಾದಿತಾರಾದೋಷೋಪಶಾಂತಯೇ ॥ ॥"

"ವಿಪತ್ತಾರಾ ಮೌಂಜಿಬಂಧೇ ವಿವಾಹೇ ಪ್ರತ್ಯರಃ ಶುಭಃ ॥ ನವಾನ್ನೇ ಜನ್ಮತಾರಾ ಚ ವಧಃ ಸರ್ವತ್ರ ವರ್ಜಯೇತ್ ॥ ॥ ಪುನಶ್ಚ-ವಿವಾಹೇ ಪ್ರತ್ಯರಂ ಶ್ರೇಷ್ಠಂ ಮೌಂಜ್ಯಾಂ ವಿಪದಿ ಶೋಭನಂ ॥ ಕನ್ಯಕಾಯಾ ವಿವಾಹೇ ಚ ವಿಪತ್ತಾರಾ ಪ್ರಶಸ್ಯತೇ ॥"

ಜನ್ಮರಾಶ್ಯಧಿಪತಿಗೂ ಜನ್ಮರಾಶಿವಿನೆಯಿಂದ ದಶಮರಾಶ್ಯಧಿಪತಿಗೂ ಮಿತ್ರತ್ವ ಇದ್ದರೆ ವೈನಾಶಿಕ ದೋಷವಿಲ್ಲ. "ಅತ್ರಮಾಧವೀಯಂ-ಜನ್ಮೇಶಕರ್ಮೇಶ್ವರಮಿತ್ರ ಭಾವಃ ಕ್ಷಿಣೋತಿ ವೈನಾಶಿಕದೋಷಮುಗ್ರಂ ॥ ಇತಿ. ಗುರುಶ್ಚ-ಜನ್ಮರ್ಕ್ಷಕರ್ಮ ನಾಥೌ ದ್ವೌ ಮಿಥಮಿತ್ರೇ ಯದಾ ತದಾ ॥ ವೈನಾಶಿಕಾಂಶಕರ್ಕ್ಷೋತ್ಥದೋಷಭಂಗೋ ಭವೇದಿಹ ॥ ॥ ಇತಿ"

ಜನ್ಮಾಷ್ಟಮ ರಾಶ್ಯಧಿಪತಿಗೂ, ಜನ್ಮರಾಶ್ಯಧಿಪತಿಗೂ, ಮಿತ್ರತ್ವವಿದ್ದರೆ ಜನ್ಮಾಷ್ಟಮ ರಾಶಿ ದೋಷವಿಲ್ಲ. ಜನ್ಮಲಗ್ನಾದಷ್ಟಮ ರಾಶಿಗೂ ಅದೇ ಪ್ರಕಾರ ನೋಡಿ ಕೊಳ್ಳಬಹುದು. "ಅತ್ರಮಾಧವೀಯಂ-ಸ್ವಕೀಯಜನ್ಮಾಷ್ಟಮರಾಶಿಪತ್ಯೋಃ ಮೈತ್ರಂ ನ ಜನ್ಮಾಷ್ಟಮ ರಾಶಿದೋಷಃ ॥ ಇತಿ" "ಗುರುಶ್ಚ-ಜನ್ಮೇ ಚಾಷ್ಟಮರಾಶೀಶೌ ಮಿಥೋ ಮಿತ್ರೇ ಯದಾ ತದಾ ॥ ಅಷ್ಟಮರ್ಕ್ಷಾದಘೋತ್ಥವ್ಯದೋಷಾನ್ನಶ್ಯತಿ ಭಾವತಃ ॥ ॥ ಇತಿ"

ಅನಂತರದಲ್ಲಿ ಸಾವನಾದಿ ಮಾಸಂಗಳಲ್ಲಿ ವಿಶೇಷ ಕೃತ್ಯವನು ಹೇಳುತಾನೆ:-

ಸಾವನಃ ಸಮ್ಮತೋ ಕಾಲೋ ವ್ರತಸೀಮಂತಪುಂಸವೇ ॥
ಚೌಲೋಪನೀತ್ಯೋಃ ಸೌರೋಽಪಿ ಚಾಂದ್ರೋಽಪ್ಯಾಪದಿ ಭೋಜನೇ ॥ ೬ ॥

ಟೀಕಾ - ಸಾವನ ಇತಿ - ವ್ರತಸೀಮಂತಪುಂಸವೇ=ವ್ರತ, ಸೀಮಂತ, ಪುಂಸವನದಲ್ಲಿ, ಸಾವನಃಕಾಲಃ=ಸಾವನ ಮಾನಪ್ರಕಾರವಾದ ಕಾಲವು, ಸಮ್ಮತಃ=ಯೋಗ್ಯವು. ಚೌಲೋಪ ನೀತ್ಯೋಃ = ಚೌಲೋಪನಯನಗಳಲ್ಲಿ, ಸೌರೋಽಪಿ = ಸೌರಮಾನವೂ, ಭೋಜನೇ= ಅನ್ನಪ್ರಾಶನದಲ್ಲಿ, ಆಪದಿ = ವಿಪತ್ಕಾಲದಲ್ಲಿ, ಚಾಂದ್ರೋಽಪಿ=ಚಾಂದ್ರಮಾನವಾದರೂ, ಸಮ್ಮತಃ = ಯೋಗ್ಯವೆಂದರ್ಥ. ವ್ರತ ಸೀಮಂತಪುಂಸವನ ಎಂದಿವುಗಳಿಗೆ ಸಾವನಮಾನ ಪ್ರಕಾರ ಸಂವತ್ಸರ ಮಾಸಾದಿಗಳ ನೋಡಿಕೊಳ್ಳಬಹುದು. ಚೌಲಕ್ಕೂ, ಉಪನಯನಕ್ಕೂ ಸಾವನವೂ, ಸೌರವೂ ಎರಡೂ ಪಕ್ಷವು ಆದೀತು. ಭೋಜನದಲ್ಲಿ ಸಾವನವೂ. ಸೌರವೂ ಎರಡೂ ಆದೀತು. ವಿಪತ್ಕಾಲದಲ್ಲಿ ಚಾಂದ್ರಮಾನವೂ ಆದೀತು.

ಇತಿ ಮುಹೂರ್ತಪದವ್ಯಾಂ ಪ್ರಥಮಃ ಪರಿಚ್ಛೇದಃ

ಈ ಪ್ರಕಾರ ಮುಹೂರ್ತಪದವಿಯ ಒಂದನೇ ಪರಿಚ್ಛೇದದಲ್ಲಿ ಸಮಸ್ತ ಕರ್ಮಗಳಲ್ಲಿಯೂ ಅವಶ್ಯವಾಗಿ ವರ್ಜಿಸುವ ದೋಷಂಗಳ ಹೇಳಿ ಇನ್ನು ಎರಡನೇ ಪರಿಚ್ಛೇದದಲ್ಲಿ ವಿವಾಹಾದಿ ಅಗ್ನ್ಯಾಧಾನಾಂತ ಕರ್ಮಗಳಿಗೆ ಕಾಲವನ್ನು ಹೇಳುತ್ತಾನೆ. ಈಗ ಇಲ್ಲಿ ವಿವಾಹಕಾಲವನ್ನು ಹೇಳುತಾನೆ-

ಇಷ್ಟಾಃ ಕೃಷ್ಣಾಷ್ಟಮೀ ಸೇಂದ್ವಜಪಿತೃಮರುದಂತ್ಯೋತ್ತರಾ ಮೂಲಮಿತ್ರಾಃ ।
ಉದ್ವಾಹೇ ನಾಹಿಮಾಂಶುರ್ಘಟಧನುರಬಲಾಕರ್ಕಮೀನಾಪರಾರ್ಧೇ ॥
ಮೇಷೋ ರಂಧ್ರಾಹಿಭೌಮಾವಯುವಗುರುಸಿತೌ ಸಗ್ರಹರ್ಕ್ಷಂ ಶಲಾಕಾಃ ।।।
ಚಂದ್ರೋಽಂಗೇಽಸ್ತೇ ವಿಹಂಗಾ ವರಜನಿಭತಮೀಮಧ್ಯಜನ್ಮಾಸ್ತಖೇಟಾಃ ॥ ೨ ॥

ಟೀಕಾ - ಇಷ್ಟಾ ಇತಿ - ಕೃಷ್ಣಾಷ್ಟಮೀ=ಕೃಷ್ಣಪಕ್ಷದ ಅಷ್ಟಮೀ, ಇನ=ಹಸ್ತ, ಇಂದು=ಮೃಗಶಿರೆ, ಅಜ = ರೋಹಿಣಿ, ಪಿತೃ = ಮಘೆ, ಮರುತ್ = ಸ್ವಾತಿ, ಅಂತ್ಯ = ರೇವತಿ, ಉತ್ತರಾಃ = ಉತ್ತರಾತ್ರಯವಾದ ಉತ್ತರಾ, ಉತ್ತರಾಷಾಢಾ, ಉತ್ತರಾಭಾದ್ರೆಗಳು, ಮೂಲ = ಮೂಲ, ಮಿತ್ರಾಃ = ಅನೂರಾಧೆ ಎಂಬಿವುಗಳೂ ಉದ್ವಾಹೇ=ವಿವಾಹದಲ್ಲಿ, ಇಷ್ಟಾಃ=ಶುಭಗಳೆಂದರ್ಥ. ಇಷ್ಟಾಃಕೃಷ್ಣಾಷ್ಟಮೀ ಎಂದು ಹೇಳಿದರಿಂದ ಹಿಂದೆ ದೋಷ ಪ್ರಕರಣದಲ್ಲಿ ರಿಕ್ತಾಷ್ಟಮೀ ಎಂದು ರಿಕ್ತತಿಥಿಗಳೂ, ಅಷ್ಟಮಿಯೂ ಆಗದೆಂದು ಹೇಳಿ ಇಲ್ಲಿ 'ಇಷ್ಟಾಃಕೃಷ್ಣಾಷ್ಟಮೀ' ಎಂದುದರಿಂದ ಕೃಷ್ಣಪಕ್ಷದ ಅಷ್ಟಮಿಯು ಶುಭವೇ ಸರಿ. ಶುಕ್ಲಪಕ್ಷದ ಅಷ್ಟಮಿಯು ಮಾತ್ರ ಆಗದು. ಹಸ್ತ ಮೃಗಶಿರೆ ರೋಹಿಣಿ ಮಘೆ ಸ್ವಾತಿ ರೇವತಿ ಉತ್ತರೆ ಉತ್ತರಾಷಾಢ ಉತ್ತರಾಭಾದ್ರೆ ಮೂಲ ಅನೂರಾಧೆ ಇಂತೀ ಹನ್ನೊಂದು ನಕ್ಷತ್ರಗಳೂ ವಿವಾಹದಲ್ಲಿ ಪ್ರಶಸ್ತಗಳು. ಮಿಕ್ಕಾದ ಹದಿನಾರು ನಕ್ಷತ್ರಂಗಳು ನಿಷೇಧಂಗಳು. ಘಟಧನುರಬಲಾಕರ್ಕಮೀನಾಪರಾರ್ಧೇ = ಘಟ = ಕುಂಭ, ಧನು = ಧನುಸ್ಸು, ಅಬಲಾ=ಕನ್ನಿ, ಕರ್ಕ=ಕರ್ಕಟಕ, ಮೀನಾಪರಾರ್ಧೇ=ಮೀನದ ಅಪರಾರ್ಧ ಎಂಬಿದರಲ್ಲಿ, ಅಹಿಮಾಂಶುಃ = ಸೂರ್ಯನು. ಮೇಷಃ = ಮೇಷಲಗ್ನವು, ರಂಧ್ರ = ಅಷ್ಟಮದಲ್ಲಿ, ಅಹಿಭೌಮೌ = ರಾಹು ಅಂಗಾರಕರು, ಅಯುವಗುರುಸಿತೌ = ಯೌವನರಲ್ಲದಿರುವಂಥ ಗುರುಶುಕ್ರರು, ಸಗ್ರಹರ್ಕ್ಷಂ=ಗ್ರಹರಿಂದ ಕೂಡಿದ ನಕ್ಷತ್ರವು, ಶಲಾಕಾಃ=ಶಲಾಕೆಯೂ, ಅಂಗೇ = ಲಗ್ನದಲ್ಲಿ ಚಂದ್ರಃ = ಚಂದ್ರನು, ಅಸ್ತೇ = ಸಪ್ತಮದಲ್ಲಿ, ವಿಹಂಗಾಃ=ಸಮಸ್ತ ಗ್ರಹರು, ವರಜನಿಭ = ವರಪುರುಷನ ಜನ್ಮನಕ್ಷತ್ರವು, ತಮೀಮಧ್ಯ = ರಾತ್ರಿಯ ಮಧ್ಯ, ಜನ್ಮಾಸ್ತ=ಜನ್ಮರಾಶಿಯ ಸಪ್ತಮದಲ್ಲಿ, ಖೇಟಾಃ=ಸಮಸ್ತಗ್ರಹರು, ನ=ನಿಷೇಧವು.

ಕುಂಭ ಧನು ಕನ್ನೆ ಕರ್ಕಟಕಗಳು ಮತ್ತು ಮೀನದ ಅಂತ್ಯಾರ್ಧ ಇಷ್ಟರಲ್ಲಿ ಆದಿತ್ಯ ನಿರುವಾಗಲೂ, ಮೇಷ ಲಗ್ನವು, ಅಷ್ಟಮದಲ್ಲಿ ಅಂಗಾರಕನೂ, ರಾಹುವೂ, ಗುರುಶುಕ್ರರ ಬಾಲವೃದ್ಧತ್ವವು, ಸಗ್ರಹ ನಕ್ಷತ್ರ, ಶಲಾಕೆ ಎಂಬ ವೇಧೆ. ಲಗ್ನದಲ್ಲಿ ಚಂದ್ರ, ಸಪ್ತಮದಲ್ಲಿ ಸಮಸ್ತ ಗ್ರಹರು, ಪುರುಷನ ಪ್ರಥಮ ಪರ್ಯಾಯದ ಜನ್ಮನಕ್ಷತ್ರ, ಮಧ್ಯರಾತ್ರಿ ಮತ್ತು ವಧೂವರರ ಜನ್ಮರಾಶಿ ದೆಸೆಯಿಂದ ಸಪ್ತಮದಲ್ಲಿ ಸಮಸ್ತಗ್ರಹರೂ ಸಹ ಈ ವಿವಾಹದಲ್ಲಿ ನಿಷೇಧಂಗಳು. ಸೌರಮಾಸ ಪ್ರಕಾರ ಕುಂಭ ಧನು ಕನ್ನಿ ಕರ್ಕಟಕ ಈ ನಾಲ್ಕು ಮಾಸಂಗಳು ಮೀನ ಮಾಸದಲ್ಲಿ ಹದಿನೈದು ದಿವಸದಿಂದ ಮೇಲೆ ಈ ಪ್ರಕಾರ ನಾಲ್ಕುವರೆ ತಿಂಗಳು ವಿವಾಹಕ್ಕೆ ನಿಷೇಧಗಳು ಮತ್ತು ಜನ್ಮನಕ್ಷತ್ರ ಜನ್ಮರಾಶಿ ಜನ್ಮಮಾಸ ಜನ್ಮವಾರ

ಮತ್ತು ಜ್ಯೇಷ್ಠ ಪುತ್ರನಿಗೂ, ಜ್ಯೇಷ್ಠ ಪುತ್ರಿಗೂ ಜ್ಯೇಷ್ಠ ಮಾಸ ಇಷ್ಟರನ್ನು ವಿವಾಹಾದಿ ಶುಭಕರ್ಮಗಳಲ್ಲಿ ವರ್ಜಿಸಬೇಕು. "ಅತ್ರ ಪ್ರಯೋಗಮಾಲಾ:- ನ ಜನ್ಮಧಿಷ್ಣ್ಯೇ ನ ಚ ಜನ್ಮಮಾಸೇ ನ ಜನ್ಮಕಾಲೀಯದಿನೇ ವಿದಧ್ಯಾತ್ ॥ ಜ್ಯೇಷ್ಠೇ ನ ಮಾಸಿ ಪ್ರಥಮಸ್ಯ ಸೂನೋಃ ತಥಾ ಸುತಾಯಾ ಅಪಿ ಮಂಗಲಾನಿ ॥ ॥ ಇತಿ" ಜನ್ಮಮಾಸದಲ್ಲಿ ಜನ್ಮತಿಥಿಯಾರಭ್ಯ ಹತ್ತು ದಿವಸ ಮಾತ್ರ ವರ್ಜಿಸಿ ಉಳಿದ ದಿನಗಳಲ್ಲಿ ಗ್ರಹಿಸಬಹುದು. "ಅತ್ರರಾಜಮಾರ್ತಂಡಃ- ಜನ್ಮಮಾಸನಿಷೇಧೋಽಪಿ ದಿನಾನಿ ದಶ ವರ್ಜಯೇತ್ ॥ ಆರಭ್ಯ ಜನ್ಮದಿವಸಾತ್... ॥ ॥ ಇತಿ" "ಸಂಗ್ರಹೇ - ಅನ್ನಪ್ರಾಶನಮುದ್ವಾಹಚೌಲ ಕರ್ಮೋಪನಾಯನಂ ॥ ಜನ್ಮಮಾಸೇಷು ವರ್ಜ್ಯಂ ಸ್ಯಾತ್ ಕಳಿಂಗೇ ಮಗಧೇ ತಥಾ ॥ ॥ ಗೃಹಪ್ರವೇಶಸೀಮಂತಪಟ್ಟಬಂಧವ್ರತಾನಿ ಚ ॥ ಜನ್ಮಮಾಸೇಷು ವರ್ಜ್ಯಂ ಸ್ಯಾತ್ ನರ್ಮದಾತಟ ಉತ್ತರೇ ॥ ॥ ನರ್ಮದಾದಕ್ಷಿಣೇ ದೇಶೇ ಜನ್ಮಮಾಸಃ ಶುಭಪ್ರದಃ ॥ ಆದ್ಯಾದಶೇನ ಶುಭದಂ ಬಹೂನಾಂ ಸಮ್ಮತಂ ತ್ವಿದಂ ॥ ॥ ಇತಿ"

ಜ್ಯೇಷ್ಠ ಪುತ್ರನಿಗೂ, ಜ್ಯೇಷ್ಠ ಪುತ್ರಿಗೂ ಜ್ಯೇಷ್ಠಮಾಸದಲ್ಲಿ ಶುಭಕರ್ಮವು ನಿಷೇಧ ವೆಂದಾಗ್ಯೂ ಅದಕ್ಕೆ ಅಪವಾದವನ್ನು ಹೇಳುತ್ತಾನೆ- "ಪ್ರಯೋಗಮಾಲಾ-ಜ್ಯೇಷ್ಠಸ್ಯ ಜ್ಯೇಷ್ಠಕನ್ಯಾಯಾಃ ವಿವಾಹೋ ನ ಪ್ರಶಸ್ಯತೇ ॥ ತಯೋರನ್ಯತರಜ್ಯೇಷ್ಠೇ ಜ್ಯೇಷ್ಠಮಾಸಃ ಪ್ರಶಸ್ಯತೇ ॥ ॥ ಮುಹೂರ್ತಚಿಂತಾಮಣಿಃ- ನ ಜ್ಯೇಷ್ಠಾಜ್ಯೇಷ್ಠಯೋಃ ಕಾರ್ಯಂ ಸ್ವನಾರ್ಯೋಃ ಪಾಣಿಪೀಡನಂ ॥ ತಯೋರೇಕತರೇ ಜ್ಯೇಷ್ಠೇ ಜ್ಯೇಷ್ಠೇ ಮಾಸೇಽಪಿ ಕಾರಯೇತ್ ॥ ॥ ದ್ವೌ ಜ್ಯೇಷ್ಠೌ ಮಧ್ಯಮೌ ಪ್ರೋಕ್ತಾವೇಕಜ್ಯೇಷ್ಠಃ ಶುಭಾವಹಃ ॥ ಜ್ಯೇಷ್ಠತ್ರಯಂ ನ ಕುರ್ವೀತ ವಿವಾಹಂ ಸರ್ವಸಮ್ಮತಂ ॥ ॥ ಪರಾಶರಃ- ಅಜ್ಯೇಷ್ಠಕನ್ಯಕಾ ಯತ್ರ ಜ್ಯೇಷ್ಠಾ ಪುತ್ರೋ ವರೋ ಯದಾ । ವ್ಯತ್ಯಯೋ ವಾ ತಯೋಸ್ತತ್ರ, ಜ್ಯೇಷ್ಠಮಾಸಃ ಶುಭಾವಹಃ ॥ ॥"

ಮೇಷಲಗ್ನ ಒಂದು ಮಾತ್ರ ಆಗದೆಂದು ಹೇಳಿದ್ದರಿಂದ ಮಿಕ್ಕಾದ ಹನ್ನೊಂದು ಲಗ್ನಗಳೂ ವಿವಾಹಕ್ಕೆ ಆದೀತು. ಅಷ್ಟಮದಲ್ಲಿ ರಾಹು ಅಂಗಾರಕರು ಆಗದೆಂದು ಹೇಳಿದ್ದಾಗ್ಯೂ ರಾಹುವು ಅಷ್ಟಮದಲ್ಲಿದ್ದರೆ ಶುಭವೇ ಸರಿ ಎಂದು ಮಾಧವೀಯದಲ್ಲಿ ಹೇಳಿಹದು- "ಮಾಧವೀಯಂ-ಮೃತ್ಯುರ್ನಿರ್ಧನತಾಂ ಶ್ರಿಯಂ ಸುಖಸುಹೃತ್‌ಭಂಗಂ ತನೂಜಕ್ಷಯಂ । ವೃದ್ಧಿಂ ಶತ್ರುಜಯಂ ಚ ಭರ್ತೃಮರಣಂ ರೋಗಂ ಚ ಧರ್ಮಚ್ಯುತಿಂ ॥ ದೌಶ್ಶೀಲ್ಯಂ ವಿಭವಂ ವ್ಯಯಂ ಚ ಭವನೇಷ್ವಾತ್ಮಾದಿಷೂಗ್ರಗ್ರಹಾಃ ।॥ ಕುರ್ವಂತಿ ಕ್ರಮಶ ಸ್ತ್ವಮೋರ್ಕತನಯಾ ವಾಽ ರೋಗ್ಯಮತ್ರಾಷ್ಟಮೇ ॥ ॥ ಇತಿ"

'ಅಯುಪ ಗುರುಸಿತೌ' ಎಂದು ಗುರುಶುಕ್ರರ ಬಾಲವೃದ್ಧತ್ವವಾಗದೆಂದುದರಿಂದ ಬಾಲತ್ವ ವೃದ್ಧತ್ವವನ್ನರಿವದಕ್ಕೆ ಹೇಳುತ್ತಾನೆ- "ಅಸ್ತಾತ್ಪ್ರಾಕ್‌ಸಪ್ತದಿನೈರ್ವಾರ್ಧಕ್ಯಂ ಗುರುಶುಕ್ರಯೋಃ ॥ ತಯೋರ್ಬಾಲ್ಯಂ ತೂದಯಾಹಾತ್ ಪರತಸ್ಸಪ್ತವಾಸರೈಃ ॥ ॥ ಕ್ರಮಚಾರೇ ವಿಧಿರಯಂ ವಕ್ರಚಾರೇ ಚ ಕಥ್ಯತೇ ॥ ವಾರ್ಧಕ್ಯಂ ಪಂಚದಿವಸೈಃ ಬಾಲ್ಯಂ ತತ್ರ ದಿನತ್ರಯೈಃ ॥ ॥ ಗುರೋರ್ಬಾಲ್ಯಂ ಚ ವೃದ್ಧತ್ವಂ ಪಕ್ಷಾನ್ನೇತಿ ಬುಧೈಃ ಸ್ಮೃತಃ ॥ ಸಪ್ತಾಹಸ್ಸು ವಾರ್ಧಕ್ಯಂ ಗುರೋರ್ಬಾಲ್ಯಂ ಚ ಪಂಚಸು ॥ ॥ ಭೃಗೋಸ್ತ್ವ ವಕ್ರಚಾರೇಽಸ್ಯ

ಕ್ರಮಾತ್ಪಂಚಾಹಸು ತ್ರಿಷು ॥ ॥ ಇತಿ" "ಗುರುತ್ವ-ಪ್ರಾಕ್ಪಶ್ಚಾದುದಿತಂ ಶುಕ್ರಂ ಪಂಚಸಪ್ತ ದಿನಂ ಶಿಶುಂ ॥ ವಿಪರೀತಂ ತಯೋರಸ್ತೇ ವೃದ್ಧಸ್ತದ್ವದ್ಗುರೋರಪಿ ॥ ॥ ಇತಿ" ಸಗ್ರಹ ನಕ್ಷತ್ರವೆಂದರೆ- ಮುಹೂರ್ತಕಾಲದ ನಕ್ಷತ್ರದಲ್ಲಿ ಆದಿತ್ಯಾದಿ ಗ್ರಹರೊಳಗೆ ಯಾರಾದರೂ ಒಬ್ಬ ಗ್ರಹನಿದ್ದರೆ ಆ ನಕ್ಷತ್ರಕ್ಕೆ ಆ ಗ್ರಹನ ಸಗ್ರಹದೋಷವೆಂದರಿವದು. "ಅತ್ರನಾರದಃ- ಶಶಾಂಕೇ ಗ್ರಹಸಂಯುಕ್ತೇ ದೋಷಃ ಸಗ್ರಹಸಂಯುತೇ ॥ ಇತಿ"

ಶಲಾಕೆಯನರಿವದು ಹೇಗೆಂದರೆ ಹೇಳುತ್ತಾನೆ- "ಮಾಧವೀಯಂ-ದ್ವೇದ್ವೇಕೋಣಾ ದ್ವಿಕೋಣಾಂ ಪ್ರತಿಲಿಖಿತು ಪುರಃ ಪಂಚಪಂಚಾಥ ತಿರ್ಯಕ್ । ರೇಖಾಸ್ತಾಸ್ವೀಶಕೋಣ ಪ್ರಭೃತಿಷು ಗಣಯೇದ್ಭಾನಿ ವಹ್ನ್ಯಾದಿಕಾನಿ ॥ ಯಸ್ಮಿನ್ನಿಂದುಗ್ರಹಸ್ತ್ವ ಪ್ರತಿಮುಖ ಮಯುತಃ ಸಾಕಮೇಕಾಂ ಶಲಾಕಾಮೃಕ್ಷಂ ತದ್ವೇಧದುಷ್ಟಂ ಪರಿಣಯನವಿಧೌ ತದ್ವಿಪತ್ತಿಂ ವಿಧತ್ತೇ ॥ ॥ ಇತಿ" ಈ ಶಲಾಕೆಯಲ್ಲಿ ಅಭಿಜಿತ್ ಭುಕ್ತಿಯನ್ನು ಕೂಡಾ ಲೆಕ್ಕಿಸಬೇಕಾಗಿರುವುದರಿಂದ ಆ ಅಭಿಜಿತ್ ತೇದಿಯನರಿವುದಕ್ಕೆ ಹೇಳುತದೆ. "ಮಾಧವೀಯಂ- ಪಾದಸ್ತುತುರ್ಥಃ ಖಲು ವಿಶ್ವಭಸ್ಯ ಸಾದ್ಯಸ್ತ ವಿಷ್ಣೋಃ ಪ್ರಥಮಾಸ್ತತಸ್ರಃ ॥ ಉಕ್ತಾಭಿಜಿದ್ಭುಕ್ತಿರಿತೀಯಮಸ್ಯಾಂ ಸ್ಥಿತೋ ಗ್ರಹೋ ವಿಧ್ಯತಿ ಧಾತೃತಾರಾಂ ॥ ॥" ಈ ಅಭಿಜಿತ್ ಭುಕ್ತಿಯಲ್ಲಿರುವ ಗ್ರಹನು ಶಲಾಕಾವೇಧೆಯಲ್ಲಿ ರೋಹಿಣೀ ನಕ್ಷತ್ರಕ್ಕೆ ವೇಧೆ ಕೊಡುವನು. ಈ ಶಲಾಕೆಯನ್ನರಿವದಕ್ಕೆ ಇನ್ನೊಂದು ಯುಕ್ತಿ ಇರುತದೆ. ಅದೆಂತೆಂದರೆ- "ವಿಶ್ವೇಂದೂ ಅಭಿಜಿದ್ವಿಧೀ ಪಿತೃಹರೀ ಮೂಲಾದಿತೀ ವಾರುಣಸ್ವಾತ್ಯೌ ಪೂಷಭಗೌ ಚ ಮಿತ್ರಯಮಭೇ ಪೂಷ್ಣರ್ಕ್ಷಹಸ್ತಾವಿತಿ ॥ ಯುಗ್ಮೇಷ್ವನ್ಯತರಸ್ಥಿತಸ್ತ್ವಿತರಾಂ ವಿಧ್ಯತ್ಯದುಂ ಖೇಚರೋ ॥। ಗೋವಿಂದಾದ್ಯಘಟೀಚತುಷ್ಕಸಹಿತೋ ವಿಶ್ವಾಂತ್ಯಪಾದೋಽಭಿಜಿತ್ ॥ ॥ ಇತಿ"

ಮುಹೂರ್ತಕಾಲದ ಲಗ್ನದೆಸೆಯಿಂದ ಸಪ್ತಮದಲ್ಲಿ ಗ್ರಹರು ಯಾರೂ ಇರಲಾಗದು. ಆದಾಗ್ಯೂ- "ಜಾಮಿತ್ರಗೋ ಯದಿ ಭವೇದುಶನಾ ಬುಧಸ್ತು ಗೀರ್ವಾಣರಾಜಸಚಿವಃ ಸಿತಪಕ್ಷಚಂದ್ರಃ ॥ ಕನ್ಯಾಪ್ರದಾನಸಮಯೇ ಪರಿಹೃತ್ಯ ದೋಷಾನ್ ಸೌಭಾಗ್ಯ ಮಾಯುರರುಜಂ ಪ್ರಕರೋತಿ ಲಕ್ಷ್ಮೀಂ ॥ ॥" ಹೀಗೆ ಹೇಳಿರುವದರಿಂದ ವಿಪತ್ಕಾಲದಲ್ಲಿ ಈ ಅಪವಾದವನಂಗೀಕರಿಸಿ ವಿವಾಹ ಮಾಡಬಹುದು.

'ವರಜನಿಭ'ವೆಂದು ಹೇಳಿದ್ದರಿಂದ ಪುರುಷನ ಆದಿ ಪರ್ಯಾಯದ ಜನ್ಮನಕ್ಷತ್ರವನು ಮಾತ್ರ ವರ್ಜಿಸಿದರೆ ಸಾಕು. ದ್ವಿಜನ್ಮ ತ್ರಿಜನ್ಮಗಳು ವರ್ಜ್ಯವಲ್ಲ. 'ವರಜನಿಭ' ಎಂದು ಮಾತ್ರ ಹೇಳಿದ್ದರಿಂದ ಕನ್ನಿಕೆಯ ಜನ್ಮನಕ್ಷತ್ರಗಳು ಮೂರೂ ವರ್ಜ್ಯಂಗಳಲ್ಲ. "ದಾನ ಹೋಮಾದಿಕೇ ವಸ್ತ್ರೇ ಭೂಷಣೇ ಚಾನ್ನನೂತನೇ ॥ ಶಸ್ತಂ ಜನ್ಮತ್ರಯಂ ಕನ್ಯಾಜನ್ಮಭಂ ಸತ್ಕರಗ್ರಹೇ ॥ ಪರಾಶ್ಚ ಸಕಲಾಃ ಶಸ್ತಾಃ ಕನ್ಯಾಜನ್ಮತ್ರಯಂ ಶುಭಂ ॥ ಇತಿ"

ತಮೀಮಧ್ಯವೆಂದರೆ ಮಧ್ಯರಾತ್ರಿಯು. ಆ ಮಧ್ಯರಾತ್ರಿಯಲ್ಲಿ ಎಂಟನೆಯ ಮುಹೂರ್ತವನು ವರ್ಜಿಸಬೇಕು. "ಅಹ್ನಃ ಪಂಚದಶೋಭಾಗೋ ಮುಹೂರ್ತ ಇತಿ ಕಥ್ಯತೇ ॥ ದಿವಾ ಪಂಚದಶ ಪ್ರೋಕ್ತಾ ನಿಶಾಯಾಂ ಚ ತಥಾ ಸ್ಮೃತಃ ॥ ॥ ಇತಿ" ಇದರಿಂದ ಇಲ್ಲಿ ದಿವಾರಾತ್ರಿಗಳೆರಡೂ ಆದೀತೆಂಬದಾಯಿತು.

ಜನ್ಮಾಸ್ತಖೇಟಾಃ ಎಂದಪರಿಂದ ವಧೂವರರಿಬ್ಬರ ಜನ್ಮರಾಶಿ ದೆಸೆಯಿಂದ ಸಪ್ತಮದಲ್ಲಿಯೂ ಗ್ರಹರು ಯಾರೂ ಇರಲಾಗದು. "ಜನ್ಮಚಂದ್ರಾತ್‌ಸ್ತ್ರೀನರಭಯೋಃ ನೇಷ್ಟಾ ಅದ್ಯಸ್ಯೈಖಿಲಾಗ್ರಹಾಃ ॥ ಪಾಪಾ ವಿಶೇಷತೋ ನೇಷ್ಟಾ ಭೌಮಾರ್ಕಾಪನಿ ವರ್ಜಿತಾಃ ॥ ॥ ಜಾಮಿತ್ರಶುದ್ಧಿಃ ಸ್ತ್ರೀಣಾಂ ತು ವಿಶೇಷೇಣ ನಿರೀಕ್ಷ್ಯತೇ ॥ ಸಗ್ರಹರ್ಕ್ಷೇ ಶಲಾಕಾಯಾಂ ಜಾಮಿತ್ರೇ ಚಾಪಿ ಜನ್ಮತಃ ॥ ॥ ಗ್ರಾಹ್ಯಾವಿಪದಿ ಭಾಮಾರ್ಕೌ ವಿಹಾಯ ಸಕಲಾ ಗ್ರಹಾಃ ॥ ॥"

ಭಾರ್ಯಾಪಿಯೋಗವಾಗಿ ಎರಡನೆ ವಿವಾಹವಾಗುವಲ್ಲಿ ಭಾರ್ಯಾವಿಯೋಗವಾಗಿ ಹನ್ನೆರಡನೆಯ ದಿವಸ ಸಪಿಂಡೀಕರಣವನು ಮಾಡಿ ಆಮೇಲೆ ಅದೇ ಹನ್ನೆರಡನೆಯ ದಿವಸ ಪುನರ್ವಿವಾಹವಾಗುವುದಕ್ಕೆ ಮುಹೂರ್ತಾದಿಗಳೊಂದರನ್ನೂ ಚಿಂತಿಸಬೇಡ. "ಪುನರ್ವಿವಾಹವಿಷಯೇ ಕಾಲಸ್ಯನಿಯಮಂ ವಿನಾ ॥ ಭಾರ್ಯಾವಿಯೋಗೇ ವಿಪ್ರಾಣಾಂ ಪಿಂಡ ಸಂಯೋಜನಾತ್ಪರಂ ॥ ॥ ದ್ವಾದಶಾಹೇ ವಿವಾಹಃ ಸ್ಯಾತ್ ಇತಿ ಶಾಸ್ತ್ರವಿದಾಂ ಮತಂ ॥"

ಕನ್ನಿಕೆಗೆ ಆಭರಣ ಧಾರಣೆಯೂ ಮಂಗಲಸೂತ್ರ ಧಾರಣೆಯೂ ವಿವಾಹವೂ ಒಂದೇ ಲಗ್ನದಲ್ಲಿಯೇ ಆಗಬೇಕು. "ವಧ್ವಾ ಮಂಗಲಸೂತ್ರೇಣ ಭೂಷಣಂ ಚ ಕರಗ್ರಹಃ ॥ ಏಕಸ್ಮಿನ್ನೇವ ರಾಶೌ ದ್ವೌ ಕರ್ತವ್ಯಾವಿತಿ ಸಮ್ಮತಂ ॥ ॥ ಇತಿ"

ಅನಂತರದಲ್ಲಿ ಗರ್ಭಾಧಾನ ಕಾಲವನು ಹೇಳುತಾನೆ-

ಸೇಕೇ ಶಸ್ತತರಾ ಚತುರ್ಥರಜನೀ ನೋ ಪಂಚಮೀ ಶುಕ್ರದೃಕ್ ।
ಶಸ್ತಾಂಗೇ ಚ ವಿಧುಂ ತ್ಯಜೇದಿಹ ದಿನಂ ಜನ್ಮತ್ರಯಂ ಚೋಭಯೋಃ ॥
ಪೂರ್ವೇಶೇಂದ್ರಯಮದ್ವಿಶೂರ್ಪಭುಜಗಾನ್ ಕನ್ಯಾಂ ಹರೇರ್ವಾಸರಂ ।॥
ರಾಕಾಂ ಶ್ರಾದ್ಧದಿನಾದಿ ಮಾಸಮಧಿಕಂ ಸಂಸರ್ಪಮಂಹಸ್ಪತಿಂ ॥ ೮ ॥

ಟೀಕಾ - ಸೇಕೇತಿ - ಸೇಕೇ = ಗರ್ಭಾಧಾನದಲ್ಲಿ, **ಚತುರ್ಥರಜನೀ** = ನಾಲ್ಕನೆಯ ರಾತ್ರಿಯು, **ಶಸ್ತತರಾ** = ಅತಿ ಪ್ರಶಸ್ತವು. **ನೋಪಂಚಮೀ** = ಐದನೆಯ ರಾತ್ರಿಯಾಗದು. **ಶುಕ್ರದೃಕ್‌ಶಸ್ತಾ** = ಶುಕ್ರದೃಷ್ಟಿಯು ಪ್ರಶಸ್ತವು. **ಅಂಗೇವಿಧುಂ ತ್ಯಜೇತ್** = ಲಗ್ನದಲ್ಲಿ ಚಂದ್ರನಿರಬಾರದು. **ಇಹ** = ಈ ಗರ್ಭಾಧಾನದಲ್ಲಿ, **ಉಭಯೋಃ** = ಸ್ತ್ರೀ ಪುರುಷರಿಬ್ಬರ, **ಜನ್ಮತ್ರಯಂ** = ಮೂರು ಜನ್ಮನಕ್ಷತ್ರವು, **ದಿನಂ** = ಜನ್ಮದಿನವನ್ನು, **ಪೂರ್ವೇಶೇಂದ್ರಯಮದ್ವಿಶೂರ್ಪಭುಜಗಾನ್** = **ಪೂರ್ವ** = ಪೂರ್ವಾತ್ರಯವಾದ ಹುಬ್ಬೆ, ಪೂರ್ವಾಷಾಢ ಪೂರ್ವಾಭಾದ್ರೆ, **ಈಶ**=ಆರ್ದ್ರೆ, **ಇಂದ್ರ**=ಜ್ಯೇಷ್ಠೆ, **ಯಮದ್ವಿ**=ಭರಣಿ ಕೃತ್ತಿಕೆ, **ಶೂರ್ಪ**= ವಿಶಾಖೆ, **ಭುಜಗಾನ್** = ಆಶ್ಲೇಷೆ ಎಂತೆಂದಿವುಗಳನ್ನು, **ಕನ್ಯಾಂ** = ಕನ್ಯಾಲಗ್ನವನ್ನೂ, **ಹರೇರ್ವಾಸರಂ** = ಹರಿವಾಸರವನ್ನೂ, **ರಾಕಾಂ** = ಪೌರ್ಣಮಿಯನ್ನೂ, **ಶ್ರಾದ್ಧದಿನಾದಿ** = ಶ್ರಾದ್ಧದಿನಾದಿ ದಿನವನ್ನೂ, **ಅಧಿಕಂ** = ಅಧಿಕವಾದಂಥ **ಮಾಸಂ** = ಮಾಸವನ್ನೂ, **ಸಂಸರ್ಪಂ** = ಸಂಸರ್ಪಮಾಸವನ್ನೂ, **ಅಂಹಸ್ಪತಿಂ** = ಅಂಹಸ್ಪತಿಮಾಸವನ್ನೂ, **ತ್ಯಜೇತ್** = ವರ್ಜಿಸಲಿ ಎಂದರ್ಥ.

ಗರ್ಭಾಧಾನದಲ್ಲಿ ರಜೋದರ್ಶನ ಮೊದಲ್ಗೊಂಡು ನಾಲ್ಕನೆಯ ರಾತ್ರಿಯು ಪ್ರಶಸ್ತವು. ಐದನೆಯ ರಾತ್ರಿಯಾಗದು. ಗರ್ಭಾಧಾನವು ದಿವದಲ್ಲಿ ಆಗದು. ಶುಕ್ರ ದೃಷ್ಟಿಯು ಪ್ರಶಸ್ತವು. ಲಗ್ನದೆಸೆಯಿಂದ ಒಂದರಲ್ಲಿ ಚಂದ್ರನು, ಶುಭಪ್ರದನಲ್ಲ. ಸ್ತ್ರೀ ಪುರುಷರಿಬ್ಬರ ಜನ್ಮ, ದ್ವಿಜನ್ಮ, ತ್ರಿಜನ್ಮ ಈ ಮೂರು ಜನ್ಮನಕ್ಷತ್ರಗಳಲ್ಲಿ, ವರಜನ್ಮ ದಿನವು ಮತ್ತು ಪೂರ್ವಾತ್ರಯವಾದ ಹುಬ್ಬೆ, ಪೂರ್ವಾಷಾಢ, ಪೂರ್ವಾಭಾದ್ರೆ, ಆರ್ದ್ರೆ, ಜ್ಯೇಷ್ಠೆ, ಭರಣಿ, ಕೃತ್ತಿಕೆ, ವಿಶಾಖೆ, ಆಶ್ಲೇಷೆ ಇಂತೀ ಒಂಬತ್ತು ನಕ್ಷತ್ರಗಳು, ಕನ್ಯಾಲಗ್ನ, ಹರಿವಾಸರ, ಪೌರ್ಣಮೀ, ಶ್ರಾದ್ಧದಿನ ಮೊದಲಾದ ಪಿತೃದಿನ ಪೂಜ್ಯದಿನ, ಅಧಿಕಮಾಸ ಸಂಸರ್ಪಮಾಸ, ಅಂಹಸ್ಪತಿಮಾಸ ಸಹ ಈ ಗರ್ಭಾಧಾನದಲ್ಲಿ ನಿಷೇಧಂಗಳು. ನಾಲ್ಕನೆಯ ರಾತ್ರಿ ಆದೀತು. ಐದನೆಯ ರಾತ್ರಿಯಾಗದು ಎಂದು ಹೇಳಿದುದರಿಂದ ರಜೋದರ್ಶನ ದಿನ ಮೊದಲಾಗಿ ನಾಲ್ಕನೆಯ ರಾತ್ರಿಯಾರಭ್ಯ ಹದಿನಾರನೆಯ ರಾತ್ರಿ ಪರ್ಯಂತ ಇರುವ ನಾಲ್ಕನೆ, ಆರನೆ, ಎಂಟನೆ, ಹತ್ತನೆ, ಹನ್ನೆರಡನೆ, ಹದಿನಾಲ್ಕನೆ, ಹದಿನಾರನೆ ಈ ಪ್ರಕಾರ ಯುಗ್ಮದಿನಂಗಳು ಪ್ರಶಸ್ತಂಗಳು. ಐದನೆ, ಏಳನೆ, ಒಂಬತ್ತನೆ, ಹನ್ನೊಂದನೆ, ಹದಿಮೂರನೆ, ಹದಿನೈದನೆ ಇಂತೀ ಓಜದಿನಂಗಳು, ನಿಷೇಧಂಗಳು. ಸ್ತ್ರೀಯರಿಗೆ ರಜೋದರ್ಶನವಾಗಿ ಹದಿನಾರು ದಿವಸ ಪರ್ಯಂತ ಋತುಕಾಲವಾದ್ದರಿಂದ ಈ ಗರ್ಭಾಧಾನ ಕರ್ಮವು ಆ ಹದಿನಾರು ದಿನಗಳೊಳಗೆಯೇ ಆಗಬೇಕು. "ಅತ್ರಸರ್ವಸಿದ್ಧಿಃ- ರಜೋನಿರ್ಗಮನಾತ್ ಸ್ತ್ರೀಣಾಂ ಋತುಃ ಷೋಡಶರಾತ್ರಯಃ ॥ ಓಜಯುಗ್ಮ ನಿಶಾ ಜ್ಞೇಯಾಃ ಕ್ರಮಾತ್ಸ್ತ್ರೀನರಗರ್ಭದಾಃ ॥ ॥ ಇತಿ" ದೋಷಪ್ರಕರಣದಲ್ಲಿ ಶುಕ್ರದೃಷ್ಟಿ ಸಮಸ್ತಕರ್ಮಕ್ಕೂ ಆಗದೆಂದು ಹೇಳಿದಾಗ್ಯೂ ಗರ್ಭಾಧಾನ ಕರ್ಮದಲ್ಲಿ ಶುಕ್ರ ದೃಷ್ಟಿಯು ಅತಿ ಪ್ರಶಸ್ತವು. ಕನ್ಯಾಲಗ್ನವಾಗದೆಂದು ಹೇಳಿದರಿಂದ ಮೇಷವು ಕನ್ನಿಯು ಹೊರತು ಮೇಲಾದ ಲಗ್ನಗಳೆಲ್ಲ ಶುಭವೇ ಸರಿ. ಹರಿವಾಸರವಾಗದೆಂದದರಿಂದ ಆ ಹರಿವಾಸರ ಲಕ್ಷಣವೇನೆಂದರೆ- "ದ್ವಾದಶ್ಯಾಃ ಪ್ರಥಮೋ ಯೋಽಂಶಃ ಏಕಾದಶ್ಯೋಽಶ್ಚ ಯೋಽಂತಿಮಃ ॥ ಹರಿವಾಸರ ಸಂಜ್ಞೋಽಯಂ ಗರ್ಭಾಧಾನೇ ತು ದೂಷಿತಂ ॥ ॥ ಇತಿ"

ಶ್ರಾದ್ಧ ದಿನಾದಿಗಳನ್ನು ವರ್ಜಿಸಬೇಕೆಂದದರಿಂದ ಶ್ರಾದ್ಧ ದಿನಾದಿಗಳು ಆವುವೆಂದರೆ- "ಸರ್ವಸಿದ್ಧಿಃ- ಸಂಕ್ರಾಂತ್ಯಾದೌ ದಿನೇ ಪೂಜ್ಯಶ್ರಾದ್ಧಸೂತಿಕಶಾವಯೋಃ ॥ ಪಂಚಮ್ಯುತ್ತರ ಫಲ್ಗುನ್ಯೋಃ ವರ್ಜಯೇನ್ಮೈಥುನಂ ಬುಧಃ ॥ ॥ ಇತಿ" ಸ್ಮೃತಿಶ್ಚ=ಮೃತೇ ಜನ್ಮರ್ಕ್ಷೇ ದಿವಸೇ... ॥ ಶ್ರಾದ್ಧಕರ್ತಾಚಾನ್ಯದಿನೇ ಸಂಕ್ರಾಂತೌ... ತಥಾ ॥ ॥ ... ಸಪ್ತಮ್ಯಾಂ ಚತುರ್ದಶ್ಯಷ್ಟಮೀ ತಥಾ ॥ ಏಕಾದಶ್ಯಾಂ ಪೌರ್ಣಮಾಸ್ಯಾಂ ದರ್ಶಷಷ್ಠ್ಯೋಃ ವಿಶೇಷತಃ ॥ ॥ ತೈಲಾಭ್ಯಂಗಂ ರತಿಂ ಮಾಂಸಂ ದಂತಕಾಷ್ಠಂ ಚ ವರ್ಜಯೇತ್ ॥ ವಸಿಷ್ಠಶ್ಚ:- ಅಷ್ಟಮೀ ಪರ್ವರಿಕ್ತಾಶ್ಚ ತಿಥಯೋ ದಶವರ್ಜಿತಾಃ ॥ ಶೇಷಾಸ್ತು ತಿಥಯಃ ಶ್ರೇಷ್ಠಾಃ ಕೃಷ್ಣೇ ಚಾಂತ್ಯಾಂಶಕತ್ರಿಕಂ ॥ ॥ ಅತ್ರಿಃ- ರಿಕ್ತಷಷ್ಠ್ಯಷ್ಟಮೀಪರ್ವಾಃ ವರ್ಜ್ಯಾಃ ಶೇಷಾಃ ಶುಭಪ್ರದಾಃ ॥ ಇತಿ

ಅಧಿಕಮಾಸ ಸಂಸರ್ಪಮಾಸ ಅಂಹಸ್ಪತಿಮಾಸ ಈ ಮೂರು ವಿಧ ಅಧಿಮಾಸಂಗಳು ದಿನ ಮಾಸೋಕ್ತ ಕರ್ಮಗಳಲ್ಲಿ ವರ್ಜ್ಯಂಗಳಲ್ಲದಿರುವ ಮೌಢ್ಯಾದಿ ಷಡ್ದೋಷಗಳೊಳಗೆ

ಸೇರಿದ್ದಾದಾಗ್ಯೂ ಈ ದಿನೋಕ್ತ ಕರ್ಮವಾದ ಗರ್ಭಾಧಾನದಲ್ಲಿ ಈ ಅಧಿಕಮಾಸ ಸಂಸರ್ಪಮಾಸ ಅಂಹಸ್ಪತಿಮಾಸಗಳನ್ನು ವರ್ಜಿಸಬೇಕು. ಗುರುಶುಕ್ರರ ಮೌಢ್ಯ ಮಿಥೋದೃಷ್ಟಿ ದಿವಾದರ್ಶನ ಈ ಮೂರನ್ನು ವರ್ಜಿಸಬೇಡ.

ಅನಂತರದಲ್ಲಿ ಪುಂಸವನಕಾಲವನು ಹೇಳುತಾನೆ-

> ಪುಷ್ಯೇ ಪುಂಸವನಂ ಕುಜಾರ್ಯದಿನಕೃದ್ವಾರೇ ತೃತೀಯೇ ಸ್ಮೃತಂ ।
> ಮಾಸೇನೋತ್ತರಮಾಸಯೋರಭಿನವೇ ಗರ್ಭೇ ಚತುರ್ಥೇऽಪಿ ಸತ್ ॥
> ಶುಕ್ರೇಂದೂದಯದೃಷ್ಟಿವಾರಮಿಥುನಸ್ತ್ರೀಕರ್ಕರಾತ್ರೀಸ್ತ್ಯಜೇತ್ ।।।
> ಕುರ್ಯುಸ್ತತ್ಸಿತಪಕ್ಷ ಏವ ಹರಿಭೇ ಪುಷ್ಯೇऽಪಿ ಕೌಶೀತಕಾಃ ॥ ೯ ॥

ಟೀಕಾ-ಪುಷ್ಯೇತಿ-ಪುಂಸವನಂ=ಪುಂಸವನ ಕಾರ್ಯವು, ಪುಷ್ಯೇ=ಪುಷ್ಯ ನಕ್ಷತ್ರದಲ್ಲಿ, ಕುಜಾರ್ಯದಿನಕೃದ್ವಾರೇ = ಕುಜ ಗುರು ಸೂರ್ಯವಾರದಲ್ಲಿ, ತೃತೀಯೇ = ಮೂರನೇ ಮಾಸದಲ್ಲಿ, ಸ್ಮೃತಂ = ಶುಭವೆಂದೆಣಿಸಲ್ಪಟ್ಟಿತು. ಉತ್ತರಮಾಸಯೋಃ = ಉತ್ತರ ಮಾಸ ಗಳಲ್ಲಿ, ನ = ನಿಷೇಧವು. ಅಭಿನವೇ = ಹೊಸತಾದಂಥಹ, ಗರ್ಭೇ = ಗರ್ಭದಲ್ಲಿ, ಚತುರ್ಥೇऽಪಿ = ನಾಲ್ಕನೆಯ ಮಾಸದಲ್ಲಿಯೂ, ಸತ್ = ಶುಭ ಆದೀತು. ಶುಕ್ರೇಂದೂ ದಯದೃಷ್ಟಿವಾರಮಿಥುನಸ್ತ್ರೀಕರ್ಕರಾತ್ರೀಃ=ಶುಕ್ರೇಂದೂದಯ = ಶುಕ್ರಚಂದ್ರರ ಉದಯ ಲಗ್ನವು, ದೃಷ್ಟಿ=ದೃಷ್ಟಿ, ವಾರ=ವಾರಗಳು, ಮಿಥುನ=ಮಿಥುನ ಲಗ್ನ, ಸ್ತ್ರೀ=ಕನ್ಯಾಲಗ್ನ, ಕರ್ಕ=ಕರ್ಕಟಕ ಲಗ್ನ, ರಾತ್ರೀಃ=ರಾತ್ರಿ ಇಂತೆಂದಿವುಗಳನ್ನು, ತ್ಯಜೇತ್=ವಿವರ್ಜಿಸಬೇಕು. ತತ್=ಆ ಪುಂಸವನವನ್ನು, ಸಿತಪಕ್ಷ ಏವ=ಶುಕ್ಲಪಕ್ಷದಲ್ಲಿಯೇ, ಕುರ್ಯುಃ=ಮಾಡಲಿ. ಕೌಶೀತಕಾಃ=ಕೌಶೀತಕ ಮತದವರು, ಹರಿಭೇ=ಶ್ರವಣ ನಕ್ಷತ್ರದಲ್ಲಿ, ಪುಷ್ಯೇऽಪಿ=ಪುಷ್ಯ ನಕ್ಷತ್ರದಲ್ಲಿಯೂ ಮಾಡಲಿ ಎಂದರ್ಥ.

ಪುಂಸವನವೆಂಬ ಕರ್ಮವು ಪುಷ್ಯ ನಕ್ಷತ್ರದಲ್ಲಿ ಕುಜ ಗುರು ಆದಿತ್ಯ ವಾರಗಳಲ್ಲಿ ಗರ್ಭವಾಗಿ ಮೂರನೆಯ ಮಾಸದಲ್ಲಿ ಮಾಡಬೇಕು. ಉಳಿದ ಮಾಸಗಳಲ್ಲಿ ಆಗದು. ಆದ್ಯ ಗರ್ಭವಾದರೆ ನಾಲ್ಕನೆಯ ಮಾಸದಲ್ಲಿ ಆದೀತು. ಶುಕ್ರ ಚಂದ್ರರ ಉದಯ ದೃಷ್ಟಿವಾರಗಳು ಸಹ ಆಗದು ಮತ್ತು ಮಿಥುನ ಲಗ್ನ ಕನ್ಯಾ ಲಗ್ನ ಕರ್ಕಟಕ ಲಗ್ನ ರಾತ್ರಿ ಸಹ ಆಗದು. ಶುಕ್ಲಪಕ್ಷದಲ್ಲಿಯೇ ಆಗಬೇಕು. ಕೌಶೀತಕ ಮತದವರಿಗೆ ಶ್ರವಣ ಪುಷ್ಯ ಎರಡೂ ನಕ್ಷತ್ರಗಳು ಆದೀತು. ಉಳಿದವರಿಗೆ ಪುಷ್ಯ ನಕ್ಷತ್ರದಲ್ಲಿಯೇ ಆಗಬೇಕೆಂದು ಹೇಳಿದ್ದರಿಂದ ಕೌಶೀತಕರಿಗೆ ಶ್ರವಣ ಪುಷ್ಯಗಳೆರಡೂ ನಕ್ಷತ್ರಗಳು ಆದೀತೆಂಬದಾಯಿತು. ಪುಂಸವನದಲ್ಲಿ ಈ ಎರಡು ನಕ್ಷತ್ರಗಳಲ್ಲದೆ ಬೇರೆ ನಕ್ಷತ್ರಗಳು ಆಗವೆಂಬದಾದ್ದರಿಂದ ಇಲ್ಲಿ ವಿಪತ್ಪ್ರತ್ಯರವಧೆ ಚಂದ್ರಾಷ್ಟಮ ಸಹ ವಿಶೇಷವಾಗಿ ಚಿಂತಿಸಬೇಕಾಗಿಲ್ಲ. ಯಾಕೆಂದರೆ ಇವೆರಡು ನಕ್ಷತ್ರಗಳು ವಿಪತ್ಪ್ರತ್ಯರವಧೆ ಚಂದ್ರಾಷ್ಟಮಗಳಾಗಿ ಹೋದಲ್ಲಿ ಪುಂಸವನ ಮಾಡುವುದಕ್ಕೆ ಸಂದರ್ಭವಿಲ್ಲ ಎಂದಾಗುವುದರಿಂದ ವಿಶೇಷವಾಗಿ ಚಿಂತಿಸಬೇಡವೆಂಬುದು ಅರ್ಥದಿಂದಲೇ ಕಾಣುತದೆ. "ಪುಷ್ಯೇ ಕುಜಾರ್ಕಜೀವಾನಾಂ ವಾರೇ ಮಂದಸ್ಯಚಾಪದಿ ॥" ಎಂದುದರಿಂದ ಕುಜ ಗುರು ರವಿ ಶನಿ ವಾರಂಗಳು ಆದೀತು. ಮೂರನೇ ಮಾಸವೇ ಆಗಬೇಕು. ಎರಡನೆಯ ಮಾಸವೂ ಮೂರನೆಯ ಮಾಸವೂ ಆದೀತು ಎಂದು

ಜಾತುಕರ್ಣ್ಯ ಹೇಳಿಹನು- "ಜಾತುಕರ್ಣ್ಯಃ-ದ್ವಿತೀಯೇ ವಾ ತೃತೀಯೇ ವಾ ಮಾಸಿ ಪುಂಸವನಂ ಭವೇತ್ ॥ ವ್ಯಕ್ತೇ ಗರ್ಭೇ ಭವೇತ್ಕಾರ್ಯಂ ಸೀಮಂತೇನ ಸಹಾಥವಾ ॥ ॥ ಇತಿ" ಈ ಪ್ರಕಾರದ ಮಾಸಗಳಲ್ಲಿ ಪುಂಸವನ ಮಾಡದಿದ್ದರೆ ಸೀಮಂತದ ಸಂಗಡ ಮಾಡಬೇಕು. ಅಲ್ಲಿ ಈ ಪುಂಸವನಕ್ಕೆ ಹೇಳಿದ ಕಾಲವ ಬಿಟ್ಟು ಆ ಸೀಮಂತಕ್ಕೆ ಹೇಳಿದ ಕಾಲದಲ್ಲಿಯೇ ಮಾಡಬೇಕು. ಅವುದಾದರೊಂದು ಪ್ರಧಾನ ಕರ್ಮವನ್ನು ಮಾಡುವಲ್ಲಿ ಅದರಿಂದ ಮೊದಲೇ ಆಗುವ ಕರ್ಮಗಳನ್ನು ಕೂಡಿ ಮಾಡುವುದಾದರೆ ಆ ಕರ್ಮಗಳಿಗೆ ಉಪಸರ್ಜನಗಳೆಂದು ಹೆಸರು. ಆ ಪ್ರಧಾನ ಕರ್ಮಕ್ಕೆ ಹೇಳಿದ ಮುಹೂರ್ತದಲ್ಲಿ ಆ ಪ್ರಧಾನ ಕರ್ಮಗಳನ್ನೂ, ಆ ಉಪಸರ್ಜನ ಕರ್ಮಗಳನ್ನೂ ಮಾಡಬೇಕು. ಅಲ್ಲಿ ಪ್ರಧಾನ ಕರ್ಮಾನುಗುಣ ಮುಹೂರ್ತವೇ ಬಲೀಯವು. ಉಪಸರ್ಜನ ಕರ್ಮಕ್ಕೆ ವಿರೋಧಿಯಾದ ಮುಹೂರ್ತವಾದಾಗ್ಯೂ ಅದು ಚಿಂತ್ಯವಿಲ್ಲ. "ಅತ್ರಮಾಧವೀಯಂ- ಕಾರ್ಯಂ ಯದೇಕಂ ಕ್ರಿಯತೇ ಪ್ರಧಾನಂ ತದಾಹುರನ್ಯಾನ್ಯುಪಸರ್ಜನಾನಿ ॥ ಗ್ರಾಹ್ಯಾ ವಿರುದ್ಧೇ ಉಪಸರ್ಜನಾನಾಂ ಬಲೀ ಪ್ರಧಾನಾನುಗುಣಾ ಮುಹೂರ್ತಾಃ ॥ ॥ ಇತಿ"

'ಸೋತ್ತರ ಮಾಸಯೋಃ' ಎಂದುದರಿಂದ ನಾಲ್ಕನೆಯ ಮಾಸವು ಐದನೆಯ ಮಾಸವು ಆಗದೆಂಬದಾಯಿತು. ಅತ್ರಸ್ಮೃತಿಃ- ತೃತೀಯೇ ಮಾಸಿ ಕರ್ತವ್ಯಂ ಗೃಷ್ಟೇರನ್ಯತ್ರ ಶೋಭನಂ ॥ ಗೃಷ್ಟಿಸ್ತುರ್ಥೇಮಾಸೇತು ಷಷ್ಠೇವಾऽಪ್ಯಥವಾऽಷ್ಟಮೇ ॥ ॥

ದೋಷ ಪ್ರಕರಣದಲ್ಲಿ ಶುಕ್ರವೃಷ್ಟಿಯು ಯಾವ ಕರ್ಮಕ್ಕೂ ಆಗದೆಂದು ಹೇಳಿ ಇಲ್ಲಿ ಮತ್ತೆ "ಶುಕ್ರೇಂದೂದಯದೃಷ್ಟಿವಾರಮಿಥುನಸ್ತ್ರೀಕರ್ಕಿರಾತ್ರೀಸ್ತ್ಯಜೇತ್ ॥" ಎಂದು ಹೇಳುವುದಕ್ಕೆ ಏನು ಕಾರಣವೆಂದರೆ ಶುಕ್ರನ ಉದಯವು ವರ್ಜ್ಯವಾಗಿರುವದರಿಂದ ಶುಕ್ರಚಂದ್ರರ ಉದಯದೃಷ್ಟಿವಾರಾದಿಗಳು ಆಗದೆಂದು ಏಕಪದದಲ್ಲಿ ಹೇಳುವದಾದರಿಂದ ಹೇಳಿದ್ದೆಂದರಿವದು.

ಈ ಪ್ರಕಾರ ಪುಂಸವನವಾದ ಮೇಲೆ ಆ ಗರ್ಭಿಣಿಯ ಪತಿಯಾದವನು ಯಾವ ನಿಯಮದಿಂದಿರಬೇಕೆಂದರೆ- "ಗ್ರಂಥಾಂತರಂ-ಪೂರ್ವಪಕ್ಷೇ ಗರ್ಭರಕ್ಷಾಂ ಪುಂಸವೇತು ಕೃತೇ ಸತಿ ॥ ಅಬ್ಧಿಸ್ನಾನಂ ನೈವ ಕುರ್ಯಾತ್ ವಪನಂ ಪ್ರೇತಧಾರಣಂ ॥ ॥ ದಾಹಕ ಪ್ರೇಕ್ಷಣಾಸ್ನಾದೀನ್ ವರ್ಜಯೇದ್ಗರ್ಭಿಣೀಪತಿಃ ॥ ಮಾಧವೀಯಂ- ಪುಂಸೋ ಭಾರ್ಯಾ ಗರ್ಭಿಣೀ ಯಸ್ಯ ನಾಸೌ । ಸೂನೋಃಶ್ಚೌಲಂ ಕ್ಷೌರಕರ್ಮಾತ್ಮನಸ್ತು ॥ ಗೇಹಾರಂಭಂ ಸ್ತಂಭ ಸಂಸ್ಥಾಪನಂ ವಾ ॥। ವಾರ್ಧೌ ಸ್ನಾನಂ ದೂರಯಾತ್ರಾಂ ಚ ಕುರ್ಯಾತ್ ॥ ॥"

ಅನಂತರದಲ್ಲಿ ಎರಡು ಶ್ಲೋಕಗಳಿಂದ ಸೀಮಂತಕ್ಕೂ, ವಿಷ್ಣುಬಲಿಗೂ, ಜಾತಕರ್ಮಕ್ಕೂ ಕಾಲವನು ಹೇಳುತಾನೆ-

> ಸೀಮಂತಂ ಸಿತಪಕ್ಷ ಏವ ಸಕಲಾಃ ಕುರ್ವಂತಿ ಗರ್ಭೇऽಗ್ರಿಮೇ ।
> ಪಶ್ಚಾಂತ್ಯೇಂದ್ವದಿತಿದ್ವ್ಯಜೋತ್ತರ ರಮಾಧೀಶೇ ಯಜುರ್ವೇದವಿತ್ ॥
> ಏಕಾಂಘ್ರಿದ್ವ್ಯದಿತಿದ್ವಿಪಸ್ತಹರಿಮಿತ್ರಾದ್ಯೇಷು ಕೌಶೀತಕೋ ॥।
> ಪ್ರಂತ್ಯಾದ್ಯಾಂಘ್ರಿಷು ಚಾಶ್ವಲಾಯನ ಇಹ ಬ್ರಧ್ನೋತ್ತರೇ ಸಾಮವಿತ್ ॥ ೧೦ ॥

ಸರ್ವೇ ಚೈವ ಚತುರ್ಥಮಾಸಿ ನ ಪರೇ ಕೌಶೀತಕಾಃ ಸಪ್ತಮೇ ।
ನಾತ್ರಾರಾರ್ಕದಿನಾಳಿಕೇಸರಿನಿಶಾ ವಧ್ವಾಶ್ಚ ಜನ್ಮತ್ರಯಂ ॥
ಪಕ್ಷೇ ವಿಷ್ಣುಬಲಿಃ ಸಿತೇ ಚ ಹರಿಭೇ ಮಾಸೇಽಷ್ಟಮೇದ್ವಾದಶೇ ॥
ಸಪ್ತಮ್ಯೋರಪಿ ಜಾತಕರ್ಮ ತು ಸುತೇ ಜಾತೇ ಗತೇಽಘೇ ನ ಚೇತ್ ॥ ೧೧ ॥

ಟೀಕಾ - ಸೀಮಂತಮಿತಿ - ಸೀಮಂತಂ = ಸೀಮಂತವನ್ನು, ಸಕಲಾಃ = ಸಮಸ್ತ ಮತದವರು, ಸಿತಪಕ್ಷ ಏವ=ಶುಕ್ಲಪಕ್ಷದಲ್ಲಿಯೇ, ಅಗ್ರಿಮೇ=ಹೊಸತಾದಂತಹ, ಗರ್ಭೇ=ಗರ್ಭದಲ್ಲಿ, ಹಸ್ತಾಂತ್ಯೇಂದ್ವದಿತಿಪುಷ್ಯಜೋ=ಹಸ್ತ=ಹಸ್ತ, ಅಂತ್ಯ=ರೇವತಿ, ಇಂದು=ಮೃಗಶಿರ, ಅದಿತಿದ್ವಿ=ಪುನರ್ವಸು, ಪುಷ್ಯ, ಅಜ=ರೋಹಿಣಿ, ಉತ್ತರಾ=ಉತ್ತರಾತ್ರಯವಾದ ಉತ್ತರೆ, ಉತ್ತರಾಷಾಢ, ಉತ್ತರಾಭಾದ್ರೆ, ರಮಾಧೀಶೇ=ಶ್ರವಣ ಎಂತೆಂದಿವುಗಳಲ್ಲಿ, ಯಜುರ್ವೇದವಿತ್=ಯಜುರ್ವೇದಿಗಳೂ, ಏಕಾಂಘ್ರಿದ್ವಿ=ಪೂರ್ವಾಭಾದ್ರೆ, ಉತ್ತರಾಭಾದ್ರೆ, ಅದಿತಿದ್ವಿ=ಪುನರ್ವಸು ಪುಷ್ಯ, ಹಸ್ತ=ಹಸ್ತ, ಹರಿ=ಶ್ರವಣ, ಮಿತ್ರ=ಅನೂರಾಧೆ, ಆದ್ಯೇಷು=ಅಶ್ವಿನಿ ಇಂತೀ ಎಂಟು ನಕ್ಷತ್ರಗಳಲ್ಲಿ, ಕೌಶೀತಕಃ=ಕೌಶೀತಕರೂ, ಈ ಎಂಟು ನಕ್ಷತ್ರಗಳಲ್ಲಿ, ವ್ಯಂತ್ಯಾದ್ಯಾಂಘ್ರಿಷು=ಅಂತ್ಯಪಾದವ ಬಿಟ್ಟು, ಮೊದಲಿನ ಮೂರು ಪಾದಗಳಲ್ಲಿ ಆಶ್ವಲಾಯನಃ=ಆಶ್ವಲಾಯನರೂ, ಬ್ರಧ್ನೋತ್ತರೇ=ಹಸ್ತ ಉತ್ತರೆ ಉತ್ತರಾಷಾಢ, ಉತ್ತರಾಭಾದ್ರೆ ಇಂತೀ ನಾಲ್ಕು ನಕ್ಷತ್ರಗಳಲ್ಲಿ, ಸಾಮವಿತ್=ಸಾಮವೇದಿಗಳೂ ಸೀಮಂತ ಮಾಡಬೇಕು. ಸರ್ವೇಚೈವ=ಸಮಸ್ತ ಮತದವರೂ, ಚತುರ್ಥಮಾಸಿ=ನಾಲ್ಕನೆಯ ಮಾಸದಲ್ಲಿ, ಕೌಶೀತಕಾಃ=ಕೌಶೀತಕರು, ಸಪ್ತಮೇ=ಏಳನೆಯ ಮಾಸದಲ್ಲಿ, ಕುರ್ವಂತಿ=ಮಾಡುತ್ತಾರೆ. ಪರೇ=ಮೇಲಾದ ಮಾಸಗಳಲ್ಲಿ ನ=ನಿಷೇಧವು. ಅತ್ರ=ಈ ಸೀಮಂತದಲ್ಲಿ, ಆರಾರ್ಕದಿನಾಲಿಕೇಸರಿನಿಶಾಃ=ಆರ=ಅಂಗಾರಕ, ಅರ್ಕಿ=ಶನಿ ಎಂದಿವುಗಳ, ದಿನ=ವಾರಗಳು, ಅಳಿ=ವೃಶ್ಚಿಕ, ಕೇಸರಿ=ಸಿಂಹ ಈ ಎರಡು ಲಗ್ನಗಳು, ನಿಶಾ=ರಾತ್ರಿಯು, ವಧ್ವಾಃ=ಸ್ತ್ರೀಯ, ಜನ್ಮತ್ರಯಂಚ=ಮೂರುಜನ್ಮ ನಕ್ಷತ್ರಗಳು ಸಹ ನ=ನಿಷೇಧಂಗಳೆಂದರ್ಥ. ಸೀಮಂತವನ್ನು ಸಮಸ್ತ ಮತದವರು ಶುಕ್ಲಪಕ್ಷದಲ್ಲಿಯೇ ಮಾಡಬೇಕು. ಇದು ಸೀಮಂತವು ಹೊಸದಾದಂತಹ ಗರ್ಭದಲ್ಲಿ ಹೊರತು ಮೇಲಾದ ಗರ್ಭದಲ್ಲಿ ಬೇಡ. ಯಜುರ್ವೇದಿಗಳಿಗೆ ಹಸ್ತ, ರೇವತಿ, ಮೃಗಶಿರೆ, ಪುನರ್ವಸು, ಪುಷ್ಯ, ರೋಹಿಣಿ, ಉತ್ತರೆ, ಉತ್ತರಾಷಾಢ, ಉತ್ತರಾಭಾದ್ರೆ, ಶ್ರವಣ ಇಂತೀ ಹತ್ತು ನಕ್ಷತ್ರಗಳಲ್ಲಿ ಆಗಬೇಕು. ಕೌಶೀತಕ ಮತದವರಿಗೆ ಪೂರ್ವಾಭಾದ್ರೆ, ಉತ್ತರಾಭಾದ್ರೆ, ಪುನರ್ವಸು, ಪುಷ್ಯ, ಹಸ್ತ, ಶ್ರವಣ, ಅನೂರಾಧೆ, ಅಶ್ವಿನಿ ಇಂತೀ ಎಂಟು ನಕ್ಷತ್ರಗಳಲ್ಲಿ ಆಗಬೇಕು. ಆಶ್ವಲಾಯನದವರಿಗೆ ಈ ಕೌಶೀತಕ ಮತದವರಿಗೆ ಹೇಳಿದ ಎಂಟು ನಕ್ಷತ್ರಗಳಲ್ಲಿ ಆದ್ಯಂತ್ಯಪಾದವಬಿಟ್ಟು, ಮಧ್ಯದ ಎರಡು ಪಾದಗಳಲ್ಲಿ ಆಗಬೇಕು. ಸಾಮವೇದಿಗಳಿಗೆ ಹಸ್ತ, ಉತ್ತರೆ, ಉತ್ತರಾಷಾಢ, ಉತ್ತರಾಭಾದ್ರೆ ಇಂತೀ ನಾಲ್ಕು ನಕ್ಷತ್ರಗಳಲ್ಲಿ ಆಗಬೇಕು. ಈ ಸೀಮಂತವನ್ನು ಸಮಸ್ತ ಮತದವರು ಗರ್ಭೋತ್ಪತ್ತಿಯಾಗಿ ನಾಲ್ಕನೆಯ ಮಾಸದಲ್ಲಿ ಮಾಡುವರು. ಮೇಲಾದ ಮಾಸಗಳಲ್ಲಿ ವರ್ಜಿಸುವರು. ಕೌಶೀತಕರು ಏಳನೆಯ ಮಾಸದಲ್ಲಿಯೂ ಮಾಡಿಯಾರು. ಇಲ್ಲಿ ಮಂಗಳವಾರ, ಶನಿವಾರ ವೃಶ್ಚಿಕ ಲಗ್ನ, ಸಿಂಹ

ಲಗ್ನ ರಾತ್ರಿ ಗರ್ಭಿಣಿಯ ಮೂರು ಜನ್ಮನಕ್ಷತ್ರಗಳು ಸಹ ವರ್ಜ್ಯಂಗಳು. ಆರನೆಯ ಮಾಸದಲ್ಲಿ ನಾಲ್ಕನೆಯ ಮಾಸದಲ್ಲಿ ಎಂಟನೆಯ ಮಾಸದಲ್ಲಿ ಆದೀತು. "ಅತ್ರ ಸರ್ವಸಿದ್ಧಿ:- ಚತುರ್ಥೇ ಮಾಸಿ ಸೀಮಂತಂ ಕುರ್ಯಾತ್ ಷಷ್ಠೇऽಷ್ಟಮೇऽಪಿ ವಾ ॥ ಪರ್ಯಂತೇ ಪಂಚಮೇ ಮಾಸೇ ಸೀಮಂತಾಖ್ಯಕ್ರಿಯಾ ಬುಧೈಃ ॥ ॥ ಇತಿ" ವಿಪತ್ಕಾಲದಲ್ಲಿ ಗರ್ಭೋತ್ಪತ್ತಿಯಾಗಿ ಪ್ರಸವವಾಗುವುದರೊಳಗೆ ಯಾವ ಮಾಸದಲ್ಲಿಯೂ ಸೀಮಂತ ಮಾಡಬಹುದು. "ಅತ್ರಶಂಖ:- ಗರ್ಭಾಲಂಬನಮಾರಭ್ಯ ಯಾವನ್ನಪ್ರಸವಸ್ತದಾ ॥ ಸೀಮಂತೋನ್ನಯನಂ ಕುರ್ಯಾತ್ ಶಂಖಸ್ಯ ವಚನಂ ತಥಾ ॥ ॥ ಇತಿ" ಮಂಗಳವಾರವು ಶನಿವಾರವು ಎರಡು ಆಗವೆಂದು ಹೇಳಿದ್ದರೂ ಶನಿವಾರದಲ್ಲಿ ಗೃಹಪ್ರವೇಶ ಸೀಮಂತ ಶ್ರಾದ್ಧ ವಿವಾಹಗಳನ್ನು ಅವಶ್ಯವಾಗಿ ಮಾಡಬಹುದು. "ಅತ್ರಮಲ್ಲ:- ಗೃಹಪ್ರವೇಶ ಸೀಮಂತಶ್ರಾದ್ಧವಾಹಗ್ರಹೇಷು ಚ ॥ ವಾರಂ ಸೂರ್ಯಸುತಸ್ಯಾಪಿ ಶುಭದಂ ನಿಯಮಾದ್ವುಧಃ ॥ ॥ ಇತಿ" 'ವಧ್ವಾಶ್ಚಜನ್ಮತ್ರಯಂ' ಎಂಬುದರಿಂದ ಗರ್ಭಿಣಿಯ ಮೂರು ಜನ್ಮನಕ್ಷತ್ರಗಳು ಆಗವು.

ಇನ್ನು ವಿಷ್ಣುಬಲಿ ಕಾಲವನು ಹೇಳುತಾನೆ-

ಪಕ್ಷೇತಿ-ಅಷ್ಟಮೇ = ಎಂಟನೆಯದಾದಂಥ, ಮಾಸೇ = ಮಾಸದಲ್ಲಿ, ಸಿತೇಪಕ್ಷೇ= ಶುಕ್ಲಪಕ್ಷದಲ್ಲಿ, ಅಜಪದರ್ಭೇ=ರೋಹಿಣಿ ಶ್ರವಣಗಳಲ್ಲಿ, ದ್ವಾದಶೀ ಸಪ್ತಮ್ಯೋರಪಿ= ದ್ವಾದಶೀ ಸಪ್ತಮಿಗಳಲ್ಲಾದರೂ, ವಿಷ್ಣುಬಲಿ:=ವಿಷ್ಣುಬಲಿಯು ಎಂದರ್ಥ. ಗರ್ಭವಾದ ಎಂಟನೆಯ ಮಾಸದಲ್ಲಿ ಶುಕ್ಲಪಕ್ಷದಲ್ಲಿ ರೋಹಿಣೀ ಶ್ರವಣಗಳೆರಡು ನಕ್ಷತ್ರಗಳಲ್ಲಿ ದ್ವಾದಶೀಸಪ್ತಮೀ ಈ ಎರಡು ತಿಥಿಗಳಲ್ಲಾಗಲಿ, ವಿಷ್ಣುಬಲಿಯನು ಮಾಡಬೇಕು. ಇಲ್ಲಿ ದಿವಾರಾತ್ರಿಗಳೆರಡೂ ಆದೀತು. ಇಲ್ಲಿ ವಿಶೇಷವಾದ ದೋಷಗಳೊಂದನ್ನೂ ಚಿಂತಿಸಬೇಡ.

ಇನ್ನು ಜಾತಕರ್ಮ ಕಾಲವನು ಹೇಳುತಾನೆ- ಜಾತಕರ್ಮೇತ್ಯಿತಿ-ಸುತೇ=ಮಗನು, ಜಾತೇಸತಿ=ಜನಿಸಲಾಗಿ, ಜಾತಕರ್ಮತು=ಜಾತಕರ್ಮವು, ನ ಚೇತ್=ಅಲ್ಲದಿದ್ದರೆ, ಅಘೇ=ಸೂತಕವು, ಗತೇಸತಿ=ಹೋಗಲಾಗಿ ಜಾತಕರ್ಮವು ಎಂದರ್ಥ. ಪುತ್ರ ಜನನವಾದ ಮಾತ್ರದಲ್ಲಿ ಜಾತಕರ್ಮವನು ಮಾಡಬೇಕು. ಆ ಸಮಯದಲ್ಲಿ ಸಂದರ್ಭವಾಗದಿದ್ದರೆ ಸೂತಕ ಶುದ್ಧವಾಗುವ ದಿವಸ ಮಾಡಬೇಕು. "ಅತ್ರ ಸರ್ವಸಿದ್ಧಿ:- ಪ್ರಾಗೇವ ಜಾತಕರ್ಮಸ್ಯಾನ್ನಾಭಿಚ್ಛೇದಸ್ತದಾ ಶಿಶೋಃ ॥ ಅಸಂಭವೇ ಪುನಃ ಕುರ್ಯಾತ್ ಶುಭಕಾಲೇ ತ್ವಘೇ ಗತೇ ॥ ॥ ಇತಿ" "ಗ್ರಂಥಾಂತರಂ ಚ-ಅತೀತಾಯಾಂ ತು ಪಕ್ಷಿಣ್ಯಾಂ ನೈವ ಕಾರ್ಯ ಮಘಾಸ್ವಿತೇ ॥ ಗತೇऽಘೇ ತಚ್ಛ್ವಸಂ ಕಾರ್ಯಂ ಶುಭಕಾಲೋऽತ್ರ ಚಿಂತ್ಯತಾಂ ॥ ॥ ಇತಿ" "ಜಾತಕರ್ಮಣಿ ಸಮಸ್ತರಾಶಯಃ ತಾರಕಾಶ್ಚ ತಿಥಯ ಪ್ರಪೂಜಿತಾಃ ॥ ಅಶುಭವನ್ನ ಸಮಯಾದನಂತರಂ ಜಾತಕರ್ಮಣಿ ವಿಧೇಯಮಿತ್ಯಮುಃ ॥ ॥ ಇತಿ" ಈ ಪ್ರಕಾರ ಹೇಳಿದ್ದರಿಂದ ಜನನಾದಿಪಕ್ಷಿಣಿಯೊಳಗೂ, ಅಘಾಂತದಲ್ಲಿಯೂ ಜಾತಕರ್ಮ ಮಾಡುವಲ್ಲಿ ತಿಥಿನಕ್ಷತ್ರಾದಿಗಳೊಂದನ್ನೂ ಚಿಂತಿಸಬೇಡ. ಆಮೇಲೆ ಮಾಡುವವರಲ್ಲಿಯೇ ಚಿಂತ್ಯವೆಂದರಿವದು.

ಜಾತಕರ್ಮವಾವದೆಂದರೆ- "ಜಾತೇ ಸುತೇ ತದ್ದಿವಸಂ ನಿರೀಕ್ಷ್ಯ ಸ್ನಾತ್ವಾ ಸಚೇಲಶ್ಚ ಧೃತಾರ್ದ್ರವಾಸಾಃ ॥ ದತ್ವಾ ದ್ವಿಜೇಭ್ಯೋ ದ್ರವಿಣಾನಿ ಕುರ್ಯಾತ್ ತಸ್ಯಾತು ಜಾತಸ್ಯ ಹಿ ಜಾತಕರ್ಮ ॥ ॥ ಇತಿ"

ಅನಂತರದಲ್ಲಿ ನಾಮಕರಣ ಕಾಲವನು ಹೇಳುತಾನೆ-

ನಾಮಾಹ್ನಿ ದ್ವಾದಶೇತಃ ಪರಮಶುಭಮಹಃ ಪೂರ್ವಮತ್ರೇಷ್ಟಮಿಷ್ಟಾ ।
ರಾತ್ರಿಃ ಕೌಶೀತಕಾನಾಮಪಿ ಖಲು ದಶಮೀ ಗೃಹ್ಣತೇ ನಾಪರಾಹ್ನಃ ॥
ಶೂರ್ಪೇಂದ್ರತ್ವಾಷ್ಟ್ರಪೂರ್ವಾಶ್ವ್ಯಹಿಯಮಶಿಖಿನೋಽಜೈಣಜೂಕಾನಿಶಾದ್ಯ
ತ್ರ್ಯಂಶೌ ಭೌಮಾರ್ಕವಾರೌ ವ್ಯಯಗಖಗಮೃತಿಸ್ಥಾಸೃಜೋ ಜನ್ಮಭಂ ಚ ॥ ೧೨ ॥

ಟೀಕಾ-ನಾಮೇತಿ-ದ್ವಾದಶೇಽಹ್ನಿ = ಹನ್ನೆರಡನೆಯ ದಿವಸದಲ್ಲಿ. ನಾಮ = ನಾಮಕರಣವು. ಇತಃ = ಇದರ ಮೇಲೆಯಿಂದ, ಪರಂ = ಮೇಲೆ ಇರುವ, ಅಹಃ = ದಿನವು, ಅಶುಭಃ=ಅಶುಭವು. ಅತ್ರ=ಈ ನಾಮಕರಣದಲ್ಲಿ, ಪೂರ್ವಂ=ಹನ್ನೊಂದನೆಯ ದಿವಸವು. ಇಷ್ಟಂ = ಶುಭವು. ಕೌಶೀತಕಾನಾಂ = ಕೌಶೀತಕ ಮತದವರಿಗೆ, ದಶಮೀ = ಹತ್ತನೆಯ ದಾದಂಥ. ರಾತ್ರಿಃ = ರಾತ್ರಿಯಾದರೂ, ಇಷ್ಟಾಖಲು = ಇಷ್ಟವಲ್ಲವೇ? ಅಪರಾಹ್ನಃ= ಅಪರಾಹ್ನವು, ಶೂರ್ಪೇಂದ್ರತ್ವಾಷ್ಟ್ರಪೂರ್ವಾಶ್ವ್ಯಹಿಯಮಶಿಖಿನಃ = ಶೂರ್ಪ = ವಿಶಾಖೆ, ಇಂದ್ರ=ಜ್ಯೇಷ್ಠೆ, ತ್ವಾಷ್ಟ್ರ=ಚಿತ್ರೆ, ಪೂರ್ವಾ=ಪೂರ್ವಾತ್ರಯವಾದ ಹುಬ್ಬೆ, ಪೂರ್ವಾಷಾಢ ಪೂರ್ವಾಭಾದ್ರೆ, ಅಶ್ವಿ = ಅಶ್ವಿನಿ. ಅಹಿ = ಆಶ್ಲೇಷೆ, ಯಮ = ಭರಣಿ, ಶಿಖಿನಃ=ಕೃತ್ತಿಕೆ ಎಂಬಿವುಗಳು. ಅಜೈಣಜೂಕಾಃ=ಅಜ=ಮೇಷ, ಏಣ=ಮಕರ, ಜೂಕಾ=ತುಲೆ ಎಂಬಿವುಗಳು. ನಿಶಾದ್ಯತ್ರ್ಯಂಶೌ=ನಿಶಾ=ರಾತ್ರಿಯ, ಆದ್ಯ=ಮೊದಲನೆಯ, ತ್ರ್ಯಂಶೌ=ಮೂರನೆಯ ಎರಡಂಶಗಳು. ಭೌಮಾರ್ಕವಾರೌ=ಕುಜ ಶನಿವಾರಗಳು. ವ್ಯಯಗಖಗಮೃತಿಸ್ಥಾಸೃಜಃ= ವ್ಯಯಗ=ದ್ವಾದಶದಲ್ಲಿರುವಂಥ, ಖಗ=ಗ್ರಹರು, ಮೃತಿಸ್ಥಾಸೃಜಃ=ಅಷ್ಟಮದಲ್ಲಿರುವಂಥ ಅಂಗಾರಕನು. ಜನ್ಮಭಂ ಚ=ಜನ್ಮನಕ್ಷತ್ರವು, ನ ಗೃಹ್ಯತೇ=ನಿಷೇಧಗಳೆಂದು ಅರ್ಥ.

ನಾಮಕರಣವು ಜನನವಾಗಿ ಹನ್ನೆರಡನೆಯ ದಿವಸದಲ್ಲಿ ಆಗಬೇಕು. ಹದಿಮೂರನೆಯ ದಿನವಾಗದು. ಹನ್ನೊಂದನೆಯ ದಿವಸವು ಆಗದೆಂಬುದಿಲ್ಲ. ಕೌಶೀತಕ ಮತದವರು ಹತ್ತನೆಯ ದಿವಸ ರಾತ್ರಿ ಪ್ರಭಾತಕಾಲ ಬಂದ ಮೇಲೆ ಸೂತಿಕ ಶುದ್ಧಿಯನ್ನು ಮಾಡಿಕೊಂಡು ಆಮೇಲೆ ನಾಮಕರಣವನ್ನು ಮಾಡಿಯಾರು. ಈ ನಾಮಕರಣದಲ್ಲಿ ಅಪರಾಹ್ನವಾಗದು ವಿಶಾಖೆ ಜ್ಯೇಷ್ಠೆ ಚಿತ್ರೆ ಹುಬ್ಬೆ ಪೂರ್ವಾಷಾಢ. ಪೂರ್ವಾಭಾದ್ರೆ, ಅಶ್ವಿನಿ. ಆಶ್ಲೇಷೆ, ಕೃತ್ತಿಕೆ, ಭರಣಿ ಇಂತೀ ಹತ್ತು ನಕ್ಷತ್ರಗಳು, ಮೇಷ. ಮಕರ. ತುಲೆ ಈ ಮೂರು ಲಗ್ನಗಳು ಮತ್ತು ರಾತ್ರಿಯನ್ನು ಮೂರುಭಾಗ ಮಾಡಿ ಅದರಲ್ಲಿ ಆದಿ ಎರಡು ಭಾಗ ರಾತ್ರಿಯೂ. ಕುಜಶನಿವಾರಗಳೂ, ದ್ವಾದಶದಲ್ಲಿ ಸಮಸ್ತಗ್ರಹರೂ, ಅಷ್ಟಮದಲ್ಲಿ ಅಂಗಾರಕ, ಪ್ರಥಮ ಪರ್ಯಾಯದ ಜನ್ಮನಕ್ಷತ್ರ ಸಹ ವರ್ಜಿಸಬೇಕು. ಈ ನಾಮಕರಣದಲ್ಲಿ ಬ್ರಾಹ್ಮಣರಿಗೆ ಹನ್ನೆರಡನೆಯ ದಿವಸ, ಕ್ಷತ್ರಿಯರಿಗೆ ಹದಿನಾರನೆಯ ದಿವಸ, ವೈಶ್ಯರಿಗೆ ಇಪ್ಪತ್ತನೆ ದಿವಸ, ಶೂದ್ರರಿಗೆ ಮೂವತ್ತೆರಡನೆಯ ದಿವಸ ಈ ಪ್ರಕಾರದ ದಿವಸಗಳಲ್ಲಿ ನಾಮಕರಣವನ್ನು ಮಾಡಬೇಕು. ಬ್ರಾಹ್ಮಣರಿಗೆ ಹತ್ತನೆಯ

ದಿವಸ ರಾತ್ರಿ ಪ್ರಭಾತಕಾಲದಲ್ಲಿ ಸೂತಿಕ ಶುದ್ಧಿಯನ್ನು ಮಾಡಿಕೊಂಡು ನಾಮಕರಣ ಮಾಡಬೇಕು. "ಅತ್ರ ಸರ್ವಸಿದ್ಧಿ:- ದ್ವಾದಶೇ ಷೋಡಶೇ ವಿಂಶೇ ದ್ವಾತ್ರಿಂಶೇ ಕ್ರಮತೋ ದಿನೇ ॥ ನಾಮ ಕುರ್ಯಾದ್ದ್ವಿ ಜಾತೀನಾಂ ವಿಪ್ರಸ್ಯ ದಶಮೇಽಪಿವಾ ॥ ॥ ಇತಿ" ಈ ಹೇಳಿದ ದಿವಸಗಳಲ್ಲಿ ನಾಮಕರಣ ಮಾಡುವುದಕ್ಕೆ ವಾರ ನಕ್ಷತ್ರ ತಿಥಿ ರಾಶಿ ಗ್ರಹಸ್ಥಿತ್ಯಾದಿ ಗಳೊನ್ನೊಂದನ್ನೂ ಚಿಂತಿಸಬೇಡ. ಅದು ಹೊರತು ಮಾಡುವಲ್ಲಿ ಇಲ್ಲಿ ಹೇಳಿದ ವಿಧಾನೋಕ್ತವಾದ ನಕ್ಷತ್ರ ರಾಶ್ಯಾದಿಗಳನ್ನೆಲ್ಲ ಚಿಂತಿಸಬೇಕು. "ಅತ್ರ ವಸಿಷ್ಠ:- ದಶಮೇ ದ್ವಾದಶೇವಾಽಹ್ನಿ ನಾಮಕರ್ಮ ವಿಧೀಯತೇ ॥ ತತಃ ಪರಂ ವಿಧಾನೋಕ್ತವಾರ ನಕ್ಷತ್ರರಾಶಿಷು ॥ ॥ ಇತಿ" ಆ ಹನ್ನೆರಡನೆಯ ಮೊದಲಾದ ಪ್ರಾಪ್ತ ದಿನಗಳಾದರೂ ಅಲ್ಲಿ ವ್ಯತೀಪಾತ ಸಂಕ್ರಾಂತಿ ಗ್ರಹಣ ವೈಧೃತಿಗಳು ಬಂದರೆ ಮಾಡಬಾರದು. "ಗರ್ಗ:- ವ್ಯತೀಪಾತೇ ಚ ಸಂಕ್ರಾಂತೌ ಗ್ರಹಣೇ ವೈಧೃತಾವಪಿ ॥ ಶ್ರಾದ್ಧಂ ವಿನಾ ಶುಭಂ ನೈವ ಪ್ರಾಪ್ತಕಾಲೇಽಪಿ ಮಾನವಃ ॥ ॥ ಇತಿ" "ಅನ್ಯಚ್ಚ-ಅಮಾಸಂಕ್ರಾಂತ್ಯಧಿಷ್ಣಾದೌ ಪ್ರಾಪ್ತಕಾಲೇಽಪಿ ನಾಚರೇತ್ ॥ ಇತಿ" ಆ ಪ್ರಕಾರ ದೋಷಗಳು ಬಂದುಹೋದಲ್ಲಿ ಹದಿನೊಂದನೆಯ ದಿವಸವಾಗಲೀ, ಒಂದನೆಯ ಮಾಸದಲ್ಲಾಗಲೀ ವರ್ಷ ಸಲುವುದ ರೊಳಗೆ ಮಾಡಬೇಕು. "ಭರತ:- ಅಷ್ಟಾದಶಾಹೇ ವಿಗತೇ ದಶಾಹೇ । ಸ್ಯಾದ್ದ್ವಾದಶಾಹೇಽಪ್ಯಥ ಮಾಸಿ ವರ್ಷೇ ॥ ಚಂದ್ರಾನುಕೂಲೇ ಸುದಿನೇ ಶತಾಹೇ ॥। ಪುತ್ರಸ್ಯ ಕುರ್ಯಾದಥ ನಾಮಕರ್ಮ ॥ ॥ ಇತಿ" 'ನಾಪರಾಹ್ಣ:' ಎಂದುದರಿಂದ ಹಿಂದೆ ದೋಷಪ್ರಕರಣದಲ್ಲಿ 'ಸಾಯಾಹ್ನಸಂಧ್ಯಾದಯಃ' ಎಂದು ಸಾಯಾಹ್ನವ ಮಾತ್ರ ವರ್ಜಿಸಬೇಕೆಂದು ಹೇಳಿದ್ದರಿಂದ ಅಪರಾಹ್ಣವು ಯಾವ ಕರ್ಮಕ್ಕೂ ಆದೀತು. ಈ ನಾಮಕರಣದಲ್ಲಿ ಮಾತ್ರ ವರ್ಜಿಸಬೇಕು.

ಮೇಷ, ತುಲಾ ಮಕರಗಳ ಹೊರತು ಮಿಕ್ಕಾದ ಲಗ್ನಗಳೆಲ್ಲ ಆದೀತು. "ಮೃತಿ ಸ್ಥಾಸ್ಪೃಜಂ" ಎಂದುದರಿಂದ 'ನಿಂದ್ಯಃ ಸರ್ವಶುಭಕ್ರಿಯಾಸು ನಿಧನೇ ವಿಶ್ವಂಭರಾಸಂಭವಃ ।' ಎಂದು ದೋಷಪ್ರಕರಣದಲ್ಲಿ ಹೇಳಿ ಇಲ್ಲಿ ಮತ್ತೆ 'ಮೃತಿಸ್ಥಾಸ್ಪೃಜಃ' ಎಂದುದರಿಂದ ಉಳಿದ ಕರ್ಮಗಳಲ್ಲಿ ವಿಶೇಷವಾಗಿ ವರ್ಜಿಸಬೇಕೆಂಬುದಿಲ್ಲ. ಇಲ್ಲಿ ಅವಶ್ಯವಾಗಿ ಆಗದೆಂದು ಅರಿಯಬೇಕು. ಆದ್ಯ ಜನ್ಮನಕ್ಷತ್ರವ ಮಾತ್ರ ಬಿಟ್ಟು ಉಳಿದ ಎರಡು ಜನ್ಮನಕ್ಷತ್ರಗಳು ಆದೀತು. ದ್ವಾದಶದಲ್ಲಿ ಯಾರೂ ಇರಲಾಗದು.

ಜನ್ಮಾದಿ ನಾಲ್ಕನೆಯ ಮಾಸವು ಉಪನಿಷ್ಕ್ರಮಣ ಕಾಲವಾದ್ದರಿಂದ ಮೂರು ತಿಂಗಳೊಳಗೆ ನಾಮಕರಣ ಮಾಡಬೇಕು ಎಂದು ಪಕ್ಷಾಂತರವಿಹದು. "ಅಸಂಭವೇ ಪುನಃ ಕಾಲೋ ನಾಮ್ನ ಆ ನವತೇರ್ದಿನಾತ್ ॥ ಇತಿ"

ಇನ್ನು ಬಾಲಕನಿಗೆ ಅಂಜನಕ್ಕೆ ಕಾಲವನು ಹೇಳುತಾನೆ-

"ಬಾಲಾನಾಮಂಜನೇ ಶಸ್ತಾ ದ್ವಿನೇತ್ರಾ ಭುಕ್ತತಾರಕಾ ॥ ಜಲರ್ಧಿಕಾಲಃ ಶುಭದೋ ವರ್ಜ್ಯಾಃ ಪಾಪಾಚ್ಛವಾಸರಾಃ ॥ ॥ ಏತದ್ದಿವಾ ರಾತ್ರೌ ವಾ ರಾತ್ರೌ ವಾರಫಲಂ ನ ಹಿ ॥ ರಿಕ್ತಾದ್ವ್ಯಾಸ್ತಿಥಯೋ ವರ್ಜ್ಯಾಃ ಪೂರ್ಣಾಃ ಶಸ್ತಾ ವಿಶೇಷತಃ ॥ ॥ ಅರ್ಕಾದ್ಯವೃತ್ಯಾದಿ

ವಾರರ್ಕ್ಷೇ ನವಭಕ್ತ್ಯಾಪತೇಽಷಿತೇ || ಚತಸ್ರೋ ದ್ವಿದೃಶಾಕಾಣಾಃ ತಿಸ್ರೋ ದ್ವೇ ಅಂಧಸಂಜ್ಞಿತೇ || || ಇತ್ಯೇಷಾ ಗೃಹ್ಯತೇ ದೃಷ್ಟಿರ್ನೇತ್ರಾಣಾಮೌಷಧೇಷು ಚ || ಇತಿ"

ಇನ್ನು ವಚಾ ಪ್ರದಾನ ಕಾಲವನು ಹೇಳುತಾನೆ-

"ವಚಾ ಪ್ರದಾನೇ ಬಾಲಸ್ಯ ಶೋಭನಂ ಜಲವರ್ಧನಂ || ನಿಶಾದ್ಯೌ ತ್ರ್ಯಂಶಕೌ ವರ್ಜ್ಯೌ ಅಪರಾಹ್ಣಸ್ತಥೈವ ಚ || || ಸಿಂದ್ಯೌ ಮಂದಾರಯೋರ್ವಾರೌ ಬುಧವಾರೋಽತ್ರ ಶೋಭನಃ || ಇತಿ"

ಅನಂತರದಲ್ಲಿ ಉಪನಿಷ್ಕ್ರಮಣ ಕಾಲವನು ಹೇಳುತಾನೆ-

ನಿಷ್ಕ್ರಾಮಣಂ ಚತುರ್ಥೇ | ಮಾಸಿ ನ ಚೇತ್ಪ್ರಾಶನೇನ ಸಹ ಕುರ್ಯಾತ್ ||
ಭುಕ್ತಿವದೇವ ಮುಹೂರ್ತಃ ||| ಕಿಂತು ನ ಹರಿವಾಸರೋ ವರ್ಜ್ಯಃ || ೧೩ ||

ಟೀಕಾ - ನಿಷ್ಕ್ರಾಮಣಮಿತಿ - ಚತುರ್ಥೇಮಾಸಿ = ನಾಲ್ಕನೆಯ ಮಾಸದಲ್ಲಿ, ನಿಷ್ಕ್ರಾಮಣಂ=ನಿಷ್ಕ್ರಮಣವು. ನಚೇತ್=ಅಲ್ಲದಿದ್ದರೆ, ಪ್ರಾಶನೇನ ಸಹ=ಅನ್ನಪ್ರಾಶನ ದೊಡನೆ, ಕುರ್ಯಾತ್ = ಮಾಡಲಿ. ಮುಹೂರ್ತಃ = ಮುಹೂರ್ತವು, ಭುಕ್ತಿವದೇವ= ಅನ್ನಪ್ರಾಶನೆಯೋಪಾದಿಯಲ್ಲಿಯೇ. ಕಿಂತು = ಹಾಗಾದರೂ, ಹರಿವಾಸರಃ=ಹರಿವಾಸರವು, ನ ವರ್ಜ್ಯಃ = ವರ್ಜ್ಯವಲ್ಲವೆಂದು ಅರ್ಥ.

ಉಪನಿಷ್ಕ್ರಮಣವು ಜನನಾದಿ ನಾಲ್ಕನೆಯ ಮಾಸದಲ್ಲಾಗಬೇಕು. ಅಲ್ಲಿ ಮಾಡದ ಪಕ್ಷದಲ್ಲಿ ಆಮೇಲೆ ಅನ್ನಪ್ರಾಶನೆಗೆ ಹೇಳಿದೋಪಾದಿಯಲ್ಲಿಯೇ ಆಗಬೇಕು. ಅನ್ನಪ್ರಾಶನೆಗೆ ಹರಿವಾಸರವನ್ನು ವರ್ಜಿಸಬೇಕೆಂದು ಹೇಳಿರುತ್ತದೆ. ಈ ಉಪನಿಷ್ಕ್ರಮಣ ದಲ್ಲಿ ಆ ಹರಿವಾಸರವು ವರ್ಜ್ಯವಲ್ಲ. ಅನಂತರದಲ್ಲಿ ಅನ್ನಪ್ರಾಶನ ಕಾಲವನು ಹೇಳುತಾನೆ-

ಷಷ್ಠೇ ಮಾಸಿ ನ ಸಪ್ತಮೇಽಶನವಿಧಿಃ ಶೂರ್ಪಾಹಿಪೂರ್ವಾಂತಕ |
ದ್ವೀಂದ್ರದ್ವೀಶಮಖೇತರೋಡುಷು ಪರಿತ್ಯಾಜ್ಯೋ ಹರೇರ್ವಾಸರಃ ||
ರಂಧ್ರೇಽಸೃಗ್ವಪುಷೀಂದುರಂಬುನಿ ಗುರುರ್ಜ್ಞೇಂದೂ ಶುಭೇ ಖೇಽಖಿಲಾಃ |||
ಕ್ಷ್ಮಾಜಕ್ಷೇತ್ರಝುಷಾರ್ಧರಾತ್ರಗರಲದ್ರೇಕ್ಕಾಣಜನ್ಮೋಡು ಚ || ೧೪ ||

ಟೀಕಾ - ಷಷ್ಠೇ ಮಾಸೀತಿ - ಷಷ್ಠೇಮಾಸಿ=ಆರನೆಯ ಮಾಸದಲ್ಲಿ, ಶೂರ್ಪಾಹಿ ಪೂರ್ವಾಂತಕದ್ವೀಂದ್ರದ್ವೀಶಮಖೇತರೋಡುಷು = ಶೂರ್ಪ = ವಿಶಾಖೆ, ಅಹಿ=ಆಶ್ಲೇಷೆ, ಪೂರ್ವಾ=ಪೂರ್ವಾತ್ರಯವಾದ ಹುಬ್ಬೆ ಪೂರ್ವಾಷಾಢ, ಪೂರ್ವಾಭಾದ್ರೆ, ಅಂತಕದ್ವಿ= ಭರಣಿ ಕೃತ್ತಿಕೆ, ಇಂದ್ರದ್ವಿ=ಜ್ಯೇಷ್ಠೆ ಮೂಲ, ಈಶ=ಆರ್ದ್ರೆ, ಮಖ=ಮಘೆ, ಎಂದಿವು ಗಳನ್ನು, ಇತರ = ಹೊರತಾಗಿರುವಂಥ, ಉಡುಷು = ನಕ್ಷತ್ರಗಳಲ್ಲಿ, ಅಶನವಿಧಿಃ= ಅನ್ನಪ್ರಾಶನ ವಿಧಿಯು. ಸಪ್ತಮೇ=ಏಳನೆಯ ಮಾಸದಲ್ಲಿ. ನ=ನಿಷೇಧವು. ಹರೇರ್ವಾ ಸರಃ=ಹರಿವಾಸರವು, ರಂಧ್ರ=ಅಷ್ಟಮದಲ್ಲಿ ಅಸೃಕ್=ಅಂಗಾರಕನು, ವಪುಷಿ=ಲಗ್ನದಲ್ಲಿ, ಇಂದುಃ=ಚಂದ್ರನು, ಅಂಬುನಿ=ಚತುರ್ಥದಲ್ಲಿ ಗುರುಃ=ಗುರುವು, ಶುಭೇ=ನವಮದಲ್ಲಿ, ಜ್ಞೇಂದೂ = ಬುಧಚಂದ್ರರು, ಖೇ = ದಶಮದಲ್ಲಿ, ಅಖಿಲಾಃ = ಸಮಸ್ತಗ್ರಹರು,

ಕ್ಷ್ಮಾಜಕ್ಷೇತ್ರ = ಕುಜಕ್ಷೇತ್ರಗಳಾದ ಮೇಷ ವೃಶ್ಚಿಕ ಲಗ್ನಗಳು, ಝಷ = ಮೀನಲಗ್ನ, ಅರ್ಧರಾತ್ರ=ಮಧ್ಯರಾತ್ರಿಯು, ಗರಲದ್ರೇಕ್ಕಾಣಃ = ವಿಷದ್ರೇಕ್ಕಾಣವು, ಜನ್ಮೋಡು ಚ= ಪ್ರಥಮ ಜನ್ಮನಕ್ಷತ್ರವು, ಪರಿತ್ಯಾಜ್ಯ:=ವರ್ಜ್ಯವೆಂದರ್ಥ.

ಅನ್ನಪ್ರಾಶನೆಯು ಆರನೆಯ ಮಾಸದಲ್ಲಾಗಬೇಕು. ಏಳನೆಯ ಮಾಸವಾಗದು. ವಿಶಾಖೆ ಆಶ್ಲೇಷೆ ಹುಬ್ಬೆ ಪೂರ್ವಾಷಾಢ ಪೂರ್ವಾಭಾದ್ರೆ ಭರಣಿ ಕೃತ್ತಿಕೆ ಜ್ಯೇಷ್ಠೆ ಮೂಲ ಮಖೆ ಆರ್ದ್ರೆ ಇಂತೀ ಹನ್ನೊಂದು ನಕ್ಷತ್ರಂಗಳು ವರ್ಜ್ಯಂಗಳು. ಉಳಿದ ಅಶ್ವಿನಿ, ರೋಹಿಣಿ, ಮೃಗಶಿರೆ, ಪುನರ್ವಸು, ಪುಷ್ಯ, ಉತ್ತರೆ, ಹಸ್ತ, ಚಿತ್ರೆ, ಸ್ವಾತಿ, ಅನೂರಾಧೆ, ಉತ್ತರಾಷಾಢ, ಶ್ರವಣ ಧನಿಷ್ಠೆ, ಶತಭಿಷೆ, ಉತ್ತರಾಭಾದ್ರ, ರೇವತಿ ಇಂತೀ ಹದಿನಾರು ನಕ್ಷತ್ರಂಗಳಾದೀತು. ಹರಿವಾಸರವು, ಅಷ್ಟಮದಲ್ಲಿ ಅಂಗಾರಕನು, ಲಗ್ನದಲ್ಲಿ ಚಂದ್ರನು, ಚತುರ್ಥದಲ್ಲಿ ಗುರುವು, ನವಮದಲ್ಲಿ ಬುಧಚಂದ್ರರು, ದಶಮದಲ್ಲಿ ಸಮಸ್ತಗ್ರಹರು, ಅಂಗಾರಕನ ಕ್ಷೇತ್ರವಾದ ಮೇಷ, ವೃಶ್ಚಿಕ ಲಗ್ನಗಳು ಮತ್ತು ಮೀನ ಲಗ್ನವು, ಮಧ್ಯರಾತ್ರಿಯು, ವಿಷದ್ರೇಕ್ಕಾಣ, ಶಿಶುವಿನ ಪ್ರಥಮ ಪರ್ಯಾಯದ ಜನ್ಮನಕ್ಷತ್ರ ಸಹ ವರ್ಜಿಸಬೇಕು. ಆರನೆಯ ಮಾಸದಲ್ಲಿ ಅನ್ನಪ್ರಾಶನೆಯು ಮಾಡದಿದ್ದ ಪಕ್ಷದಲ್ಲಿ ಏಳನೆಯ ಮಾಸವಾರಭ್ಯ ಹತ್ತನೆಯ ಮಾಸ ಸಲುವವರೆಗೆ ಯಾವಾಗ್ಯೂ ಆದೀತು. "ಅತ್ರನಿರ್ಣಯ ಸಿಂಧೌನಾರದ:- ತದಭಾವೇಽಷ್ಟಮೇಮಾಸಿ ನವಮೇ ದಶಮೇಽಪಿವಾ ॥ ಸಪ್ತಮೇ ಮಾಸಿ ವಾ ಕಾರ್ಯಂ ನವಾನ್ನಪ್ರಾಶನಂ ಶುಭಂ ॥ ॥ ಗುರುಶ್ಚ-ಮಾಸಿ ಷಷ್ಠೇಽಥ ಸೌರೇಣ ಚಾಷ್ಟಮೇ ದಶಮೇಽಪಿ ವಾ ॥ ದ್ವಾದಶೇ ವಾ ಪರಂ ವಿಂದ್ಯಾತ್ ಯುಗ್ಮೇಷು ಶಿಶುಜನ್ಮತಃ ॥ ॥ ಇತಿ" ಈ ಶ್ಲೋಕದ ತಾತ್ಪರ್ಯದಿಂದ ಜನ್ಮಾದಿ ಯುಗ್ಮ ಮಾಸಗಳೆಲ್ಲ ಅನ್ನಪ್ರಾಶನೆಗೆ ಆದೀತೆಂಬದಾಯಿತು. "ನಾರದ:- ಷಷ್ಠೇ ಮಾಸೇಽಷ್ಟಮೇವಾಽಥ ಪುಂಸಾಂ ಸ್ತ್ರೀಣಾಂ ತು ಪಂಚಮೇ ॥ ಸಪ್ತಮೇ ಮಾಸಿ ವಾ ಕಾರ್ಯಂ ನವಾನ್ನಪ್ರಾಶನಂ ಶುಭಂ ॥ ॥" ಈ ಶ್ಲೋಕದ ತಾತ್ಪರ್ಯದಿಂದ ಪುರುಷನಿಗೆ ಯುಗ್ಮ ಮಾಸದಲ್ಲಿ, ಸ್ತ್ರೀಯರಿಗೆ ಓಜಮಾಸದಲ್ಲಿ ಆಗಬೇಕೆಂಬದಾಯಿತು. ಹರಿವಾಸರ ಆಗದೆಂದದರಿಂದ ಅದರ ಲಕ್ಷಣವೆಂತೆಂದರೆ "ದ್ವಾದಶ್ಯಾಃ ಪ್ರಥಮೋ ಯೋಽಂಶಃ ಏಕಾದಶ್ಯಾಶ್ಚ ಯೋಽಂತಿಕಃ ॥ ಹರಿವಾಸರಸಂಜ್ಞೋಽಯಂ ಬಾಲಾನ್ನೇಽತೀವ ಗರ್ಹಿತಃ ॥ ॥ ಇತಿ" ಏಕಾದಶಿ ಉಪವಾಸದ ದಿವಸವು ಆಗದು. "ಏಕಾದಶ್ಯಾಮುಪೋಷ್ಯಾಯಾಂ ಬಾಲಾನ್ನಂ ನ ತು ಭೋಜನಂ ॥ ಇತಿ" ಅರ್ಧರಾತ್ರಿಯಲ್ಲಾಗದೆಂದುದರಿಂದ ಮಧ್ಯರಾತ್ರಿಯಲ್ಲಿ ಎರಡು ಘಳಿಗೆಯ ವರ್ಜಿಸಿ ಮಿಕ್ಕಾದ ರಾತ್ರಿಯು ಆದೀತು. ದಿವದಲ್ಲಿ ಆದೀತೆಂಬುದಕ್ಕೆ ಸಂದೇಹವಿಲ್ಲವಷ್ಟೆ? "ರಾತ್ರೌ ಮುಹೂರ್ತಾಷ್ಟಮೋ ಯಸ್ಸೋಽಪಿ ನಿಂದ್ಯೋ ವಿಶೇಷತಃ ॥ ಇತಿ" ಗರಲದ್ರೇಕ್ಕಾಣವಾವುದೆಂದರೆ- "ಕೀಟೇಂಽತ್ಯೋ ಘಟಗೋವೀಣಾ ತುಲಾಮೀನೇಷು ಮಧ್ಯಮಃ ॥ ಆದ್ಯೋಽನ್ಯೇಷು ದೃಗಾಣೋಽಸೌ ವಿಷಾಖ್ಯೋ ಮೃತ್ಯುದರ್ಶಿತಃ ॥ ॥ ಇತಿ" ಈ ಗರಲದ್ರೇಕ್ಕಾಣ ತಿಳಿಯಲು ಅಕ್ಷರ ಸಂಖ್ಯೆಯ ಸಂಜ್ಞೆಯಿಂದ ಶ್ಲೋಕಃ-

"ಪಾಠ ತ್ರಿಕಟುಕೋ ರೋಗೀ ಪಥ್ಯರಾತ್ರಿರಿತಿಕ್ರಮಾತ್ ॥ ಏತದಕ್ಷರ ಸಂಖ್ಯಾನಾಂ ದ್ರೇಕ್ಕಾಣಂ ಗರಲಂ ಸ್ಮೃತಂ ॥ ॥ ಇತಿ"

ಇನ್ನು ಬಾಲಕನಿಗೆ ಹಾಲುಕೊಡುವುದಕ್ಕೆ ಹೇಳುತಾನೆ-

"ನಕ್ಷತ್ರಮಾರ್ಗೇ ಸಂಪೂರ್ಣೇ ಬಾಲಾನ್ನಪ್ರಾಶನೇಽಪಿವಾ ॥ ದುಗ್ಧಪಾನಂ (ಭಿದ್ಯೆತತ್ರೇ) ಶುಭಂ ಜನ್ಮರ್ಕ್ಷಪಿತ್ರ್ಯಭೇ ॥ ॥ ಬಾಲಾನ್ನವಿಹಿತಾಸ್ತ್ವಾರಾಃ ಶುಭಾಃ ಪ್ರಾಯೇಣ ಕರ್ಮಸು ॥ ಶುಭಗ್ರಹಾಣಾಂ ವಾರಾಶ್ಚ ಸಾಮಾನ್ಯೇನ ಶುಭಾ ಮತಾಃ ॥ ॥ ಇತಿ"

ಇನ್ನು ಬಾಲಕನಿಗೆ ಖಟ್ವಾರೋಹಣಕ್ಕೆ ಕಾಲವನು ಹೇಳುತಾನೆ-

"ಖಟ್ವಾರೋಹಸ್ತು ಕರ್ತವ್ಯೋ ದ್ವಾದಶೇ ಷೋಡಶೇಽಪಿ ವಾ ॥ ದ್ವಾವಿಂಶದ್ದಿವಸೇ ವಾಽಪಿ ಕರ್ತವ್ಯಂ ಜನ್ಮತಃ ಶಿಶೋಃ ॥ ॥ ಆಂದೋಲಗಮನೇ ಪುಂಸೋ ದ್ವಾದಶೋ ದಿವಸಃ ಶುಭಃ ॥ ತ್ರಯೋದಶಸ್ತು ಕನ್ಯಾಯಾಃ ನ ನಕ್ಷತ್ರವಿಚಾರಣಾ ॥ ॥ ಅಸ್ಮಿನ್ ದಿವಸೇ ಚೇತ್ ಸ್ಯಾತ್ ತಿರ್ಯಗಾಸ್ಯೇ ಪ್ರಶಸ್ಯತೇ ॥ ಇತಿ"

ಅನಂತರವಲ್ಲಿ ನವಾನ್ನಕ್ಕೆಯೂ ಆಗ್ರಯಣಕ್ಕೆಯೂ ಕಾಲವನು ಹೇಳುತಾನೆ-

ನವಾನ್ನೇ ಜನ್ಮರ್ಕ್ಷೇ ಪಿತೃನಿರ್ಋತಿಶೂರ್ಪೇಽಪಿ ಶುಭದಂ ।
ವ್ಯಯಾರಿಸ್ಥೇ ವೇಂದೌ ತದಿದಮಧಿಮಾಸೇ ನ ಗೃಹಿಣಾಂ ॥
ಸುರರ್ಕ್ಷೇ ಪಕ್ಷೇಽಚ್ಛೇ ಸ್ಮೃತಮಹನಿ ವರ್ಷರ್ತುಶರದೋಃ ।॥
ನ ಪಕ್ಷತ್ಯೋಃ ಪರ್ವಣ್ಯಪಿ ಭನಿಯಮಃ ಸನ್ಮಧುಕರಃ ॥ ೧೫ ॥

ಟೀಕಾ-ನವಾನ್ನೇತಿ=ನವಾನ್ನೇ=ನವಾನ್ನವಲ್ಲಿ, ಜನ್ಮರ್ಕ್ಷೇ=ಜನ್ಮನಕ್ಷತ್ರದಲ್ಲಿಯೂ, ಪಿತೃನಿರ್ಋತಿಶೂರ್ಪೇಽಪಿ=ಪಿತೃ = ಮಘೆ, ನಿರ್ಋತಿ = ಮೂಲ, ಶೂರ್ಪೇಽಪಿ=ವಿಶಾಖೆ ಯಲ್ಲಿಯೂ. ವ್ಯಯಾರಿಸ್ಥೇವಾ = ವ್ಯಯ = ದ್ವಾದಶ, ಅರಿ = ಷಷ್ಠ, ಎಂದಿವರಲ್ಲಿ ಸ್ಥ=ಇರುವ, ಇಂದೌ=ಚಂದ್ರನು, ಶುಭದಂ=ಶುಭಪ್ರದ ಎಂದರ್ಥ. ನವಾನ್ನ ಎಂದರೆ ಹೊಸ ಧಾನ್ಯವನ್ನು ಮೊದಲು ಪ್ರಾಶನೆ ಮಾಡುವುದಾಗಿದುದು. ಈ ನವಾನ್ನದಲ್ಲಿಯೂ, ಆಗ್ರಯಣವಲ್ಲಿಯೂ ಅನ್ನಪ್ರಾಶನೆಗೆ ಹೇಳಿದ ಮುಹೂರ್ತವೇ ಆಗಬೇಕು. ಮಾಸ ನಿಯಮ ಮಾತ್ರ ಬೇಡ. ಇನ್ನು ವಿಶೇಷವಿರುವುದನ್ನು ಹೇಳುತಾನೆ- ಈ ನವಾನ್ನ ಪ್ರಾಶನೆ ಯಲ್ಲಿ ಜನ್ಮನಕ್ಷತ್ರವು ಪ್ರಶಸ್ತವು. ಮಘೆ ಮೂಲ ವಿಶಾಖೆಗಳು, ದ್ವಾದಶ ಷಷ್ಠಗಳಲ್ಲಿ ಚಂದ್ರನೂ ಶುಭಪ್ರದರು. 'ಪಿತೃನಿರ್ಋತಿಶೂರ್ಪೇಽಪಿ' ಎಂದದರಿಂದ ಅನ್ನಪ್ರಾಶನೆಗೆ ವಿಧಿಸಿದ ಹದಿನಾರು ನಕ್ಷತ್ರಗಳು ಈ ಮಘೆ ಮೂಲ ವಿಶಾಖೆಗಳು ಮೂರು ಇಂತೀ ಹತ್ತೊಂಬತ್ತು ನಕ್ಷತ್ರಗಳು ಆದೀತು. ಇನ್ನು ಆಗ್ರಯಣಕ್ಕೆ ಹೇಳುತಾನೆ- 'ತದಿತಿ'- ಗೃಹಿಣಾಂ = ಗೃಹಸ್ಥಾಶ್ರಮದವರಿಗೆ, ತತ್ = ಆ ನವಾನ್ನವು, ಇದಂ = ಈ ಆಗ್ರಯಣವು, ಅಧಿಮಾಸೇ = ಅಧಿಮಾಸದಲ್ಲಿ, ನ = ನಿಷೇಧವು. ಸುರರ್ಕ್ಷೇ = ದೇವ ನಕ್ಷತ್ರದಲ್ಲಿ, ಅಚ್ಛೇಪಕ್ಷೇ = ಶುಕ್ಲಪಕ್ಷದಲ್ಲಿ, ಅಹನಿ = ಹಗಲಲ್ಲಿ, ವರ್ಷರ್ತುಶರದೋಃ = ವರ್ಷರ್ತು ಶರದೃತುಗಳಲ್ಲಿ, ಸ್ಮೃತಃ = ಹೇಳಲ್ಪಟ್ಟಿತು. ಪಕ್ಷತ್ಯೋಃ = ಎರಡೂ ಪಾಡ್ಯಗಳಲ್ಲಿ, ಪರ್ವಣ್ಯಪಿ = ಪರ್ವದಲ್ಲಿಯೂ, ಭನಿಯಮಃ = ನಕ್ಷತ್ರ ನಿಯಮವು, ನ = ಇಲ್ಲ. ಮಧುಕರಃ = ವೃಶ್ಚಿಕವು, ಸತ್ = ಉತ್ತಮವು ಎಂದರ್ಥ. 'ಗೃಹಿಣಾಂ' ಎಂದುದರಿಂದ

ಆಗ್ರಯಣಕ್ಕೆ ಎಂದರಿವುದು. ಈ ಆಗ್ರಯಣದಲ್ಲಿ ಅಧಿಮಾಸವಾಗದು. ದೇವನಕ್ಷತ್ರದಲ್ಲಿ ಶುಕ್ಲಪಕ್ಷದಲ್ಲಿ ಹಗಲಿನಲ್ಲಿ ವರ್ಷರ್ತು ಶರದೃತು ಎಂಬೆರಡು ಋತುಗಳಲ್ಲಾಗಬೇಕು. ವೃಶ್ಚಿಕಲಗ್ನವಾದೀತು. 'ಅಧಿಮಾಸೇ' ಎಂಬುದರಿಂದ ಅಧಿಮಾಸ ಮಾತ್ರ ವರ್ಜ್ಯವು. ಸಂಸರ್ಪಾಂಹಸ್ಪತಿಗಳೆರಡು ವರ್ಜ್ಯವಲ್ಲ. ನವಾನ್ನದಲ್ಲಿ ಅಧಿಮಾಸ ಚಿಂತ್ಯವಿಲ್ಲ. 'ಸುರರ್ಕ್ಷೇ' ಎಂದರೆ ಕೃತ್ತಿಕಾದಿ ವಿಶಾಖಾನ್ತಹ ಹದಿನಾಲ್ಕು ನಕ್ಷತ್ರಗಳಾದಾವು "ಪೂರ್ವಪಕ್ಷೇ ಕೃತ್ತಿಕಾದಿವಿಶಾಖಾಂತಾಶ್ಚತುರ್ದಶ ॥ ಶ್ರಾವಣಾದಿಷು ಮಾಸೇಷು ಗೃಹಸ್ಥಾಗ್ರಯಣಂ ದಿವಾ ॥ ॥" ಆಗ್ರಯಣಕ್ಕೆ ಶುಕ್ಲಪಕ್ಷವೇ ಆಗಬೇಕು. ನವಾನ್ನಕ್ಕೆ ಕೃಷ್ಣಪಕ್ಷವೂ ಆದೀತು. ನವಾನ್ನವು ಆಗ್ರಯಣವು ದಿವದಲ್ಲಿಯೇ ಆಗಬೇಕು. ರಾತ್ರಿಯಾಗದು. ವರ್ಷರ್ತುವಾಗಲೀ, ಶರದೃತುವಾಗಲೀ ಆಗಬೇಕು. ಈ ಆಗ್ರಯಣದಲ್ಲಿ ಎರಡು ಪಾಡ್ಯಗಳಲ್ಲಾಗಲೀ, ಪೌರ್ಣಮಿಯಾಗಲೀ, ಅಮಾವಾಸ್ಯೆಯಾಗಲೀ ಬಂದರೆ ಕೃತ್ತಿಕಾದಿ ವಿಶಾಖಾಂತವಹ ಹದಿನಾಲ್ಕು ನಕ್ಷತ್ರಗಳೇ ಆಗಬೇಕೆಂಬ ನಿಯಮವಿಲ್ಲ. ಇಷ್ಟು ಮಾತ್ರ ವಿಶೇಷ ಹೊರತು ಮಿಕ್ಕಿದವುಗಳೆಲ್ಲ ಅನ್ನಪ್ರಾಶನೆಗೆ ವಿಧಿಸಿದೋಪಾದಿಯೇ ಆಗಬೇಕು. ಆದರೂ ಇಲ್ಲಿ ಲಗ್ನದಲ್ಲಿ ಚಂದ್ರನು ಚತುರ್ಥದಲ್ಲಿ ಗುರು, ನವಮದಲ್ಲಿ ಬುಧಚಂದ್ರರು, ದಶಮದಲ್ಲಿ ಶುಭಗ್ರಹರು ಸಹ ಆದೀತು. "ನವಾನ್ನೇ ಚಾಪ್ಯಾಗ್ರಯಣೇ ಗ್ರಾಹ್ಯೌ ರವಿವಿಧೂದಯೌ ॥ ಜ್ಞೇಂದೂ ಧರ್ಮೇ ಸುಖೇ ಜೀವೋ ದಶಮೇ ಚ ಶುಭಗ್ರಹಾಃ ॥ ॥ ಇತಿ" 'ಸನ್ಮಧುಕರಃ' ಎಂಬುದರಿಂದ ಕ್ಷ್ಮಾಜಕ್ಷೇತ್ರದಲ್ಲಿ ವೃಶ್ಚಿಕವು ಗ್ರಾಹ್ಯವು. "ವರ್ಜ್ಯಾ ದಿಷ್ಟೋಕ್ತೇಷ್ವಾರಾರ್ಕ್ಯೋರ್ವಾರಾವಾಽಗ್ರಯಣಾದೃತೇ ॥" ಎಂಬುದರಿಂದ ಆಗ್ರಯಣ ಹೊರತು ಉಳಿದ ದಿಷ್ಟೋಕ್ತ ಕರ್ಮದಲ್ಲಿ ಮಂಗಳವಾರ ಶನಿವಾರಗಳಾಗದೆಂಬುದರಿಂದ ಈ ಆಗ್ರಯಣದಲ್ಲಿ ಮಂಗಳವಾರ ಶನಿವಾರಗಳು ಆದೀತೆಂಬುದಾಯಿತು.

ಅನಂತರದಲ್ಲಿ ಚೌಲ ಕಾಲವನು ಹೇಳುತ್ತಾನೆ-

> ಅಬ್ದೇ ಚೌಲಂ ತೃತೀಯೇ ವಿದಧತು ಜನನಾನ್ನೋ ಚತುರ್ಥೇ ನ ಷಷ್ಠೇ ।
> ಭುಕ್ತ್ಯುಕ್ತೇ ಭೇ ನ ಮಿತ್ರಂ ಖರದಿನಮಯನಂ ದಕ್ಷಿಣಂ ಕೃಷ್ಣಪಕ್ಷಂ ॥
> ಜಹ್ಯಾತ್ಸಿಂಹಾಳಿಕುಂಭಾನ್ ಪ್ರತಿಪದಮಸೃಜಂ ರಂಧ್ರಗಂ ಧರ್ಮಗೋಗ್ರಾನ್ ॥।
> ಜನ್ಮರ್ಕ್ಷಾಣಿ ತ್ರಿಯಾಮಾಂ ವಿಧುಮಪಿ ತನುಗಂ ಸೋಽಸ್ತು
> ಚೌಲೇಂಗನಾನಾಂ ॥ ೧೬ ॥

ಟೀಕಾ - **ಅಬ್ದೇತಿ** = **ಚೌಳಂ** = **ಚೌಳಕರ್ಮವು**, **ಜನನಾತ್** = ಜನನ ದೆಸೆಯಿಂದ ತೃತೀಯೇ ಅಬ್ದೇ=ಮೂರನೆಯ ವರ್ಷದಲ್ಲಿ, ವಿದಧತು=ವಿಧಿಸಲಿ. ಚತುರ್ಥೇ=ನಾಲ್ಕನೆ ವರ್ಷದಲ್ಲಿ, ನ = ನಿಷೇಧವು. ಷಷ್ಠೇ = ಆರನೆಯ ವರ್ಷದಲ್ಲಿ, ನ = ನಿಷೇಧವು. ಭುಕ್ತ್ಯುಕ್ತೇ = ಅನ್ನಪ್ರಾಶನೆಗೆ ಹೇಳಿದ, ಭೇ = ನಕ್ಷತ್ರದಲ್ಲಿ, ಮಿತ್ರಂ = ಅನೂರಾಧೆಯು, ನ=ನಿಷೇಧವು. ಖರದಿನಂ=ಪಾಪಗ್ರಹರ ವಾರವು, ದಕ್ಷಿಣಂ ಅಯನಂ=ದಕ್ಷಿಣಾಯನವು, ಕೃಷ್ಣಪಕ್ಷಂ= ಕೃಷ್ಣಪಕ್ಷವು, ಸಿಂಹಾಳಿಕುಂಭಾನ್=ಸಿಂಹ ವೃಶ್ಚಿಕ ಕುಂಭಲಗ್ನಗಳನ್ನು, ಪ್ರತಿಪದಂ=ಪಾಡ್ಯವನ್ನು, ರಂಧ್ರಗಂ=ಅಷ್ಟಮದಲ್ಲಿರುವಂಥ, ಅಸೃಜಂ=ಅಂಗಾರಕನನ್ನು,

ಧರ್ಮಗೋಗ್ರಾನ್ = ಧರ್ಮಗ = ನವಮದಲ್ಲಿರುವಂಥ, ಉಗ್ರಾನ್=ಪಾಪಗ್ರಹರನ್ನೂ, ಜನ್ಮರ್ಕ್ಷಾಣಿ = ಮೂರು ಜನ್ಮನಕ್ಷತ್ರಗಳನ್ನೂ, ತ್ರಿಯಾಮಾಂ = ರಾತ್ರಿಯನ್ನೂ, ತನುಗ= ಲಗ್ನದಲ್ಲಿರುವಂಥ, ವಿಧುಮಪಿ=ಚಂದ್ರನನ್ನೂ, ಜಹ್ಯಾತ್=ವರ್ಜಿಸಲಿ ಎಂದರ್ಥ. ಸಃ= ಆ ಲಗ್ನದಲ್ಲಿರುವ ಚಂದ್ರನು, ಅಂಗನಾನಾಂ=ಸ್ತ್ರೀಯರುಗಳಿಗೆ, ಚೌಲೇ=ಚೌಲದಲ್ಲಿ, ಅಸ್ತು=ಆಗಲಿ ಎಂದರ್ಥ. ಚೌಲವನ್ನು ಬಾಲಕನ ಜನ್ಮಾದಿ ಮೂರನೆಯ ವರ್ಷದಲ್ಲಿ ಮಾಡಬೇಕು. ನಾಲ್ಕನೆಯ ಮತ್ತು ಆರನೆಯ ವರ್ಷವು ವರ್ಜ್ಯವು. ಅನ್ನಪ್ರಾಶನೆಗೆ ಹೇಳಿದ ಹದಿನಾರು ನಕ್ಷತ್ರಗಳಲ್ಲಿ ಅನೂರಾಧೆ ಒಂದು ಆಗದು. ಆಮೇಲೆ ಉಳಿದ ಹದಿನೈದು ನಕ್ಷತ್ರಗಳು ಆದೀತು. ಪಾಪಗ್ರಹರ ವಾರವು ದಕ್ಷಿಣಾಯನವು ಕೃಷ್ಣಪಕ್ಷವು, ಸಿಂಹ ವೃಶ್ಚಿಕ ಕುಂಭ ಲಗ್ನಗಳು, ಪಾಡ್ಯವು, ಅಷ್ಟಮದಲ್ಲಿ ಅಂಗಾರಕನು, ನವಮದಲ್ಲಿ ಪಾಪಗ್ರಹರು, ಮೂರು ಜನ್ಮನಕ್ಷತ್ರಗಳು, ರಾತ್ರಿಯು, ಲಗ್ನದಲ್ಲಿ ಚಂದ್ರನು ಸಹ ಆಗದು. ಸ್ತ್ರೀಯರಿಗೆ ಚೌಲದಲ್ಲಿ ಲಗ್ನದಲ್ಲಿ ಚಂದ್ರನು ಆದೀತು. ಮೂರನೆ ವರ್ಷವು ಆದೀತು. ನಾಲ್ಕನೆ ಆರನೆ ವರ್ಷವು ಆಗದೆಂದುದರಿಂದ ಏಳನೆಯದಾದ ವರ್ಷವಾದೀತೆಂಬದಾಯಿತು. ಜನ್ಮಾದಿಯಾಗಿ ಒಂದನೆ, ಎರಡನೆ, ಮೂರನೆ, ಐದನೆ ವರ್ಷಗಳಲ್ಲಿ ಚೌಲವಾಗಬೇಕು. ಅಲ್ಲಿ ಮಾಡದ ಪಕ್ಷದಲ್ಲಿ ಆಮೇಲೆ ಉಪನಯನದ ಸಂಗಡಲೇ ಮಾಡಬೇಕು. "ಅತ್ರಪಾರಿಜಾತಃ- ಜಾತಾಧಿಕಾರಾಜ್ಜನ್ಮಾದಿತೃತೀಯೇಽಬ್ದೇ ತು ಚೌಲಕಂ ॥ ಆದ್ಯಬ್ದೇ ಕುರ್ವತೇ ಕೇಚಿತ್ ಪಂಚಮೇಽಬ್ದೇ ದ್ವಿತೀಯಕೇ ॥ ॥ ಉಪನೀತ್ಯಾ ಸಹೈವೇತಿ ವಿಕಲ್ಪಾ ಕುಲಧರ್ಮತಃ ॥ ಇತಿ" "ಗ್ರಂಥಾಂತರಂ- ತೃತೀಯೇ ಪಂಚಮೇ ವಾಽಬ್ದೇ ಶಿಶೋಶ್ಚೌಲಂ ವಿಧೀಯತೇ ॥ ಚತುರ್ಥಷಷ್ಠಯೋರ್ನೈವ ಕುರ್ಯಾಚ್ಚೌಲಂ ಕದಾಚನ ॥ ॥ ಅತ್ರ ಜನ್ಮತ ಏವಾಬ್ದಃ ಕ್ಲೃಪ್ತಃ ಸ್ಯಾದ್ಗರ್ಭತೋ ನ ತು ॥ ಇತಿ"- 'ಕುರ್ವೀತ ಚೌಲಂ ವಿಷಮೇ ತು ವರ್ಷೇ' ಎಂದು ಮಾಧವೀಯದಲ್ಲಿ ಹೇಳಿರುವುದರಿಂದ ವಿಷಮ ವರ್ಷದಲ್ಲಿ ಚೌಲವಾಗಬೇಕಲ್ಲದೆ ಸಮ ವರ್ಷದಲ್ಲಿ ಆಗದು. ಪಾಪಗ್ರಹವಾರವಾಗದೆಂದರೂ ಬ್ರಾಹ್ಮಣರಿಗೆ ಆದಿತ್ಯವಾರವು ವಿಪತ್ಕಾಲದಲ್ಲಿ ಗ್ರಹಿಸಬಹುದು. "ಸೂರ್ಯವಾರಸ್ತು ಮಧ್ಯಸ್ತು ಚೌಲೇ ವಿಪ್ರಸ್ಯ ಚಾಪದಿ ॥ ಇತಿ" ಇಲ್ಲಿ ಬಿದಿಗೆ ತದಿಗೆ ಪಂಚಮೀ ಸಪ್ತಮೀ ದಶಮೀ ಏಕಾದಶಿಗಳು ಪ್ರಶಸ್ತಂಗಳು. "ಅತ್ರವಸಿಷ್ಠಃ- ದ್ವಿತೀಯಾ ಚ ತೃತೀಯಾ ಚ ಪಂಚಮೀ ಸಪ್ತಮೀ ತಥಾ ॥ ದಶಮ್ಯೇಕಾದಶೀ ಚೈವ ಪೂಜಿತಾಃ ಕ್ಷುರಕರ್ಮಣಿ ॥ ॥ ಇತಿ" "ಗ್ರಂಥಾಂತರಂ-ದಸ್ರಾಗ್ನಿ ಸಪ್ತಭೂತಾರ್ಕರುದ್ರದಿಗ್ವಿಶ್ವಸಂಖ್ಯಕಾಃ ॥ ತಿಥಯಃ ಶುಭದಾಃ ಸರ್ವೇ ವಿಷ್ಟಿಭಾಗವಿವರ್ಜಿತಾಃ ॥ ॥ ಇತಿ" ಜನ್ಮಮಾಸದಲ್ಲಿ ಚೌಲವು ನಿತ್ಯಕ್ಷೌರವು ವರ್ಜ್ಯವು. "ಮಾಧವೀಯಂ- ಸ್ವಜನ್ಮಮಾಸೇ ಬಾಲಾನಾಂ ಚೌಲಮಾಯುಃ ಕ್ಷಯಾವಹಂ ॥ ತತ್ರಾಪಿ ಕೇಚಿತ್ಕುರ್ವಂತಿ ಸಹೋಪನಯನೇಽಪಿ ತತ್ ॥ ॥ ಇತಿ" ಉಪನಯನದೊಡನೆ ಚೌಲವಾಗುವಲ್ಲಿ ಇದು ವರ್ಜ್ಯವಲ್ಲ. ಜನ್ಮಮಾಸವೆಂಬುದು ಸೌರದಲ್ಲಿಯೇ ತಿಳಿಯಬೇಕು. "ಜಾತೋ ಯಸ್ಮಿನ್ ಸೌರಮಾಸೇ ಬಾಲಶ್ಚೌಲೇ ಚ ವರ್ಜಯೇತ್ ॥" ಜನ್ಮಮಾಸ ಜನ್ಮನಕ್ಷತ್ರ ಜನ್ಮವಾರ ಇದಿಷ್ಟು ಚೌಲದಲ್ಲಿಯೂ, ನಿತ್ಯಕ್ಷೌರದಲ್ಲಿಯೂ ವರ್ಜಿಸಬೇಕು. "ಜನ್ಮಮಾಸಂ ತಥಾ ಜನ್ಮದಿನಂ ಜನ್ಮರ್ಕ್ಷಮೇವಚ ॥ ಕ್ಷುರಕರ್ಮಣಿ ಸಂತ್ಯಾಜ್ಯಂ ಸರ್ವದಾ ಶುಭಮಿಚ್ಛತಾ ॥ ॥ ಇತಿ" ಬಾಲಕನ ತಾಯಿಯು

ಗರ್ಭಿಣಿಯಾಗಿದ್ದರೆ ಚೌಲವನ್ನು ಮಾಡಬಾರದು. "ಚೌಲಕರ್ಮ ಶಿಶೋರ್ವರ್ಜ್ಯಂ ಜನನೀ ಗರ್ಭಿಣೀ ಯದಿ ॥ ಇತಿ" ಐದು ವರ್ಷವು ಕಳೆದ ಬಳಿಕ ಚೌಲ ಮಾಡುವುದಾದರೂ ಉಪನಯನದೊಡನೆ ಚೌಲ ಮಾಡುವುದಾದರೂ ತಾಯಿಯು ಗರ್ಭಿಣಿಯಾಗಿದ್ದರೆ ದೋಷವಿಲ್ಲ. "ನಾರದ:- ಸೂನೋರ್ಮಾತರಿ ಗರ್ಭಿಣ್ಯಾಂ ಚೂಡಾಕರ್ಮ ನ ಕಾರಯೇತ್ ॥ ಪಂಚಮಾಬ್ದಾತ್ಪ್ರಾಗಥೋರ್ಧ್ವಂ ಗರ್ಭಿಣ್ಯಾಮಪಿ ಕಾರಯೇತ್ ॥ ॥ ಇತಿ"

ಅನಂತರದಲ್ಲಿ ನಿತ್ಯಕ್ಷೌರದ ಕಾಲವನು ಹೇಳುತಾನೆ-

ಕ್ಷೌರೇಽನಾದ್ಯೇಽಂತ್ಯಲಗ್ನಾರಿಚಂದ್ರಭಾಸುದಿನೋದಯಾಃ ॥

ಗೃಹ್ಯಂತೇ ಕೃಷ್ಣಪಕ್ಷೋ ವಾ ವರ್ಜಯೇದುಪನೀತಿಭಂ ॥ ೧೭ ॥

ಟೀಕಾ - ಕ್ಷೌರೇತಿ - ಅನಾದ್ಯೇ = ಆದ್ಯವಲ್ಲದಂಥ, ಕ್ಷೌರೇ=ಕ್ಷೌರದಲ್ಲಿ, ಅಂತ್ಯಲಗ್ನಾರಿ ಚಂದ್ರಭಾಸುದಿನೋದಯಾಃ = ಅಂತ್ಯ = ದ್ವಾದಶ, ಲಗ್ನ = ಲಗ್ನ, ಅರಿ=ಷಷ್ಠ, ಎಂದಿವು ಗಳಲ್ಲಿ ಚಂದ್ರ=ಚಂದ್ರನು, ಭಾಸು=ಆದಿತ್ಯನ, ದಿನ=ದಿವಸವು, ಉದಯಾಃ=ಉದಯ ಎಂದಿವುಗಳು, ಕೃಷ್ಣಪಕ್ಷೋವಾ=ಕೃಷ್ಣಪಕ್ಷವಾದರೂ, ಗೃಹ್ಯಂತೇ=ಗ್ರಹಿಸಲ್ಪಡುತ್ತದೆ. ಕ್ಷೌರವೆಂದರೆ ಚೌಲ ಹೊರತ್ಯವೇ. ಉಪನೀತಿಭಂ=ಉಪನಯನವಾದ ನಕ್ಷತ್ರವನ್ನು, ವರ್ಜಯೇತ್= ವರ್ಜಿಸಲಿ ಎಂದರ್ಥ. ಅನಾದ್ಯಕ್ಷೌರವೆಂದರೆ ಚೌಲ ಹೊರತು ಮಿಕ್ಕಾದ ಕ್ಷೌರವಾಗಿಹದು. ಅಲ್ಲಿ ದ್ವಾದಶ ಲಗ್ನ ಷಷ್ಠಗಳಲ್ಲಿ ಚಂದ್ರನು, ಚಂದ್ರಾದಿತ್ಯರ ವಾರಗಳು, ಇವರ ಉದಯ ಲಗ್ನಗಳು ಸಹ ಶುಭಪ್ರದಂಗಳು. ಕೃಷ್ಣಪಕ್ಷವು ವಿಕಲ್ಪದಿಂದ ಗ್ರಹಿಸ ಬಹುದು. ತನಗೆ ಯಾವ ನಕ್ಷತ್ರದಲ್ಲಿ ಉಪನಯನವಾಗಿರುತ್ತದೆಯೋ ಆ ನಕ್ಷತ್ರದಲ್ಲಿ ಕ್ಷೌರವನು ಮಾಡಬಾರದು. ಇಲ್ಲಿ ಹೇಳಿದಷ್ಟು ಹೊರತು ಮಿಕ್ಕವುಗಳೆಲ್ಲ ಚೌಲಕ್ಕೆ ಹೇಳಿದೋಪಾದಿಯಲ್ಲಿ ನೋಡಿಕೊಳಬೇಕು. ಆದಿತ್ಯನವಾರ ಉದಯಾಂಶಾದಿಗಳೆಲ್ಲ ಬ್ರಾಹ್ಮಣರಿಗೆ ಶುಭವು. ಚಂದ್ರನ ಉದಯ ವಾರಾಂಶಾದಿಗಳು ಸ್ತ್ರೀಗಳಿಗೆ ಶುಭ. ಅಂಗಾರಕನದು ಕ್ಷತ್ರಿಯರಿಗೆ ಶುಭ. ಶನೈಶ್ಚರನದು ವೈಶ್ಯರಿಗೆ ಶೂದ್ರರಿಗೆ ಸಹ ಶುಭ. ಗುರ್ವಾದಿಗಳ ಮರಣ ನಿಮಿತ್ತವಾಗಿ ಆ ಕಾಲದಲ್ಲಿ ಕ್ಷೌರಮಾಡುವಲ್ಲಿ ಶುಕ್ರನ ಉದಯ ವಾರಾಂಶಾದಿಗಳು ಒಂದೂ ಶುಭವಲ್ಲ. "ಅತ್ರಮಾಧವೀಯಂ-ಕ್ಷೌರೋಽಪಿ ಚೌಲವಿಹಿತಃ ಸಮಯಃ ಸಮಾನಃ ಶ್ರೇಷ್ಠೋ ದ್ವಿಜಸ್ಯಚ ರವೇರುದಯಾಂಶವಾರಾಃ ॥ ಇಂದೋಃ ಸ್ತ್ರಿಯಃ ಕ್ಷಿತಿಪತೇಃ ಕ್ಷಿತಿಜಸ್ಯ ಸೌರೇಃ ವಿಟ್‌ಶೂದ್ರಯೋರುಶನಸೋ ನ ಶುಭಾಸ್ತು ಶಾವೇ ॥ ॥ ಇತಿ" ಯತ್ತಲಾನ್ ಮೃತಸೂತಕ ವಿವಾಹ ಸೀಮಂತಾದಿಗಳ ವಿಷಯವಾಗಿ ಕ್ಷಿಪ್ರದಲ್ಲಿ ಕ್ಷೌರಮಾಡಬೇಕಾಗಿ ಬಂದು ಅಲ್ಲಿ ತಿಥಿ ನಕ್ಷತ್ರಾದಿಗಳು ಉಕ್ತವಲ್ಲದಿದ್ದರೂ ರಾತ್ರಿಯಾದರೂ ಸಹ ದೋಷವಿಲ್ಲ. "ಅತ್ರಗುರು:- ಮೃತಕೇ ಸೂತಕೇ ಚೈವ ವ್ರತಾಂತೇ ನಿಷ್ಕೃತೌ ತಥಾ ॥ ವಿವಾಹೇ ವಾ ದಶಾಹೇ ವಾ ಸೀಮಂತೇ ರಾಜಶಾಸನೇ ॥ ॥ ಕ್ಷೌರಃ ಸದ್ಯಃ ಸ ಕುರ್ವೀತ ತಥಾ ರಂಗೋಪಜೀವಿನಃ ॥ ತಿಥಿ ನಕ್ಷತ್ರವಾರಾದಿವಿಶೇಷೋ ನ ದಿವಾನಿಶೋಃ ॥ ॥ ಇತಿ" "ಗ್ರಂಥಾಂತರಂ ಚ- ರಾಜಾಜ್ಞಾಯಾಂ ಚ ದೀಕ್ಷಾಯಾಂ ಪ್ರತ್ಯಯೇ ರೋಗ ಪೀಡಿತೇ ॥ ಕ್ಷುರಕರ್ಮಣಿ ಕರ್ತವ್ಯೇ ನಾಸ್ತಿ ಕಾಲವಿಧಿರ್ನೃಣಾಂ ॥ ॥ ಇತಿ" ಯತ್ತಲಾನು

ದುರ್ದಿನಗಳಲ್ಲಿ ಕ್ಷೌರವನು ಮಾಡಿಹೋದರೆ ಆಮೇಲೆ ಕ್ಷಿಪ್ರದಲ್ಲಿ ಶುಭದಿವಸ ನೋಡಿ ಅಲ್ಲಿ ಕ್ಷೌರವ ಮಾಡಬೇಕು. "ದುರ್ಮುಹೂರ್ತೇ ಕೃತೇ ಕ್ಷೌರೇ ಸದ್ಯಃ ಕುರ್ಯಾತ್ ಪುನಃ ಶುಭೇ ॥ ಮಾಧವೀಯಂ ಚ- ಅಶುಭೇ ಸಮಯೇ ಕ್ಷೌರೇ । ಕೃತೇ ಪುನಃ ಕ್ಷಿಪ್ರಮಾಚರೇತ್ ಸುಶುಭೇ ॥ ಶುಭನಕ್ಷತ್ರೇ ಸುದಿನೇ ॥। ಶ್ಮಶ್ರುಕ್ಷೌರಂ ವಿಧೀಯತೇ ವಿಜ್ಞೈಃ ॥ ॥" ಯಾವ ಮಾಸಗಳಲ್ಲಿ ಕ್ಷೌರಮಾಡಬಾರದೆಂದರೆ- "ಕನ್ಯಾಕರ್ಕಟಕುಂಭೇಷು ಚಾಪಮಾಸೇ ತಥೈವ ಚ ॥ ಕೇಶಚ್ಛಿಂದಂ ಗೃಹಸ್ಥಸ್ಯ ಪಿತೄನ್ ಪ್ರಾಪಯತೇ ಯಮಃ ॥ ॥ ಧನುಕುಂಭೌ ದ್ವಿಧಾ ಭಿತ್ವಾ ಯಾವತ್ಪೂರ್ವಾಂಶಸರ್ಗಮಃ ॥ ಕರ್ಕಟಸ್ಯಾಂತ್ಯಭಾಗಂ ಚ ಕನ್ಯಾಂ ಸರ್ವತ್ರ ವರ್ಜಯೇತ್ ॥ ॥ ಇತಿ"

ಚೌಲ ಕಳೆದು ಮೂರು ಋತು ಸಲುವ ವರೆಗೆಯೂ ಮತ್ತು ಉಪನಯನದಿಂದ ಮೇಲೆ ಉಪಾಕರ್ಮವಾಗುವ ವರೇಗೆಯೂ ಕ್ಷೌರ ಮಾಡಲಾಗದು. "ಕ್ಷೌರಕರ್ಮ ನ ಕುರ್ವೀತ ಚೌಲಾದೂರ್ಧ್ವಂ ಋತುತ್ರಯಂ ॥ ತಥೈವೋಪನಯಾದೂರ್ಧ್ವಂ ಉಪಾಕರ್ಮ ವಿನಾ ಕ್ವಚಿತ್ ॥ ॥ ಇತಿ" ಕ್ಷೌರಮಾಡುವ ವಿಧಿ ಎಂತೆಂದರೆ- "ಆಗಲಾಂತಂ ಯತೇಃಕ್ಷೌರಂ ಆಕಕ್ಷಂ ಬ್ರಹ್ಮಚಾರಿಣಃ ॥ ಆಪಾದಂ ತು ಗೃಹಸ್ಥಸ್ಯ ಪ್ರಕೋಷ್ಠಂ ಘೂಷಿಕಾಂ ವಿನಾ ॥ ॥" ತೈಲಾಭ್ಯಂಗಕ್ಕೆ ಕಾಲವನು ಗ್ರಂಥಾಂತರದಲ್ಲಿ ಹೇಳಿಹುದು- "ತೈಲಾಭ್ಯಂಗಂ ದಿವ್ಯೈವ ಮುನಯಃ ಶಂಸಂತಿ ಮಂದೇಂದುವಿ । ದ್ವಾರೇ ಪರ್ವಚತುರ್ದಶೀ ಪ್ರತಿಪದಃ ಷಷ್ಠ್ಯಷ್ಟಮೀ ದ್ವಾದಶೀಃ ॥ ಜ್ಯೇಷ್ಠಾನುತ್ತರಫಲ್ಗುನೀಂ ಹರಿಹರೌ ಜನ್ಮತ್ರಯಂ ಸಂಕ್ರಮಂ ॥। ಹಿತ್ವಾ ಬಾಲಕವೃದ್ಧರೋಗಿಷು ಯಥಾಕಾಲಂ ನ ದೋಷಾವಹಂ ॥ ॥ ಇತಿ" "ರವಿಸ್ತಾಪಂ ಕಾಂತಿಂ ವಿತರತಿ ಶಶೀ ಭೂಮಿತನಯೋ । ಮೃತಿಂ ಲಕ್ಷ್ಮೀಂ ಚಂದ್ರಿಃ ಸುರಪತಿಗುರುರ್ವಿತ್ತ ಹರಣಂ ॥ ವಿಪತ್ತಿರ್ದೈತ್ಯಾನಾಂ ಗುರುರಖಿಲಭೋಗ್ಯೈಶ್ವರ್ಯಭವನಂ ॥। ನೃಣಾಂ ತೈಲಾಭ್ಯಂಗಾತ್ ಸಪದಿ ಕುರುತೇ ಸೂರ್ಯತನಯಃ ॥ ॥ ಇತಿ"

ಈ ದುಷ್ಟಫಲಕಾಣುವ ವಾರಗಳಿಗೆ ಪ್ರಾಯಶ್ಚಿತ್ತವ ಹೇಳಿಹುದು- "ರವೌ ಪುಷ್ಪಂ ಗುರೌ ದೂರ್ವಾಃ ಭೃಗೋರ್ಗೋಮಯಮೇವ ಚ ॥ ಕುಜೇ ಮೃದಂ ವಿನಿಕ್ಷಿಪ್ಯ ತೈಲಾಭ್ಯಂಗಂ ನ ದುಷ್ಯತೇ ॥ ॥" ದಂತಧಾವನಕ್ಕೆ ಕಾಲವಾವುದೆಂದರೆ- "ಜನ್ಮರ್ಕ್ಷ ಪ್ರತ್ಯರವಿಪದ್ವಧಾಶ್ಚಾಷ್ಟಮರಾಶಯಃ ॥ ಅಂಕಭೂಮನುಷಷ್ಠ್ಯಂತ್ಯಾ ನಿಂದಿತಾ ದಂತಧಾವನೇ ॥ ॥ ಇತಿ"

ವೃಷೋತ್ಸರ್ಗ ಹಡಗು ಕಳುಹಿಸುವುದು ಇತ್ಯಾದಿಗಳಲ್ಲಿ ಚೌಲದೋಷಾದಿ ಕಾಲವಾಗಬೇಕು. "ಕಾಮೇಽಭಿಷೇಕೇ ವೃಷನೌಪ್ರೋತ್ಸರ್ಗಾದ್ಯೇಷು ಕರ್ಮಸು ॥ ಚೌಲವತ್ಸಮಯಃ ಪ್ರೋಕ್ತಃ ಪೂರ್ವೈರಾಚಾರತತ್ಪರೈಃ ॥ ॥ ಇತಿ"

ಅನಂತರದಲ್ಲಿ ಅಕ್ಷರಾರಂಭಕ್ಕೆ ಕಾಲವನು ಹೇಳುತಾನೆ-

ಸೇಶಂ ಪ್ರಾಶನಭಂ ನವಮ್ಯಪಿ ಶಿಶೋಃ ಶಸ್ತಾಕ್ಷರಾರಂಭಣೇ ।
ನಾನಾಧ್ಯಾಯ ಇತಶ್ಚ ಪೂರ್ವದಿವಸಃ ಸಂವತ್ಸರಶ್ಚಾಲವತ್ ॥
ಧೀವಿತ್ತೋಗ್ರಕುಜಾರ್ಕ್ಯಹಃಸ್ಥಿರರಘುಷಾಸ್ವಿನ್ಮೌಢ್ಯಮಾರಂ ಮೃತೌ ॥।
ವ್ಯಂತ್ಯತ್ರ್ಯಂಶ ಸಿತಾಂ ತ್ಯಜೇದ್ವಿಧುದಿನೇ ಜಾಡ್ಯಂ ನ ಸಜ್ಜನ್ಮಭಂ ॥ ೧೮ ॥

ಟೀಕಾ-ಸೇಶಮಿತಿ-ಶಿಶೋಃ = ಶಿಶುವಿಗೆ, ಅಕ್ಷರಾರಂಭಣೇ = ಅಕ್ಷರಾರಂಭದಲ್ಲಿ, ಸೇಶಂ=ಆರ್ದ್ರೆ ಸಹಿತವಾದಂಥ, ಪ್ರಾಶನಭಂ=ಅನ್ನಪ್ರಾಶನೋಕ್ತನಕ್ಷತ್ರವು, ನವಮ್ಯಪಿ= ನವಮಿಯೂ, ಶಸ್ತಾ=ಪ್ರಶಸ್ತವು. ಇತಃ=ಅನಧ್ಯಾಯದ ದಿನದ ದೆಸೆಯಿಂದ, ಪೂರ್ವ ದಿವಸಂ ಚ = ಮುಂಚಿನ ದಿವಸವು, ಅನಾಧ್ಯಾಯಃ = ಅನಾಧ್ಯಾಯವು, ನ=ನಿಷೇಧವು, ಸಂವತ್ಸರಃ=ವರ್ಷನಿಯಮವು, ಚೌಲವತ್ = ಚೌಲೋಪಾದಿಯು. ಧೀವಿತ್ತೋಗ್ರಕುಜಾರ್ಕ್ಯಹಃ=ಧೀ=ಪಂಚಮ, ವಿತ್ತ = ದ್ವಿತೀಯ, ಎಂದಿವುಗಳಲ್ಲಿ, ಉಗ್ರ = ಪಾಪಗ್ರಹರನ್ನು, ಕುಜಾರ್ಕಿ=ಕುಜಶನಿಗಳ, ಅಹಃ=ದಿವಸವನ್ನು, ಸ್ಥಿರ=ಸ್ಥಿರಲಗ್ನ, ಝಷಾನ್=ಮೀನಲಗ್ನ ಎಂದಿವುಗಳನ್ನು, ವಿಸ್ಮೌಢ್ಯಂ=ಬುಧನ ಮೌಢ್ಯವನ್ನು, ಮೃತೌ=ಅಷ್ಟಮದಲ್ಲಿ, ಆರಂ= ಅಂಗಾರಕನನ್ನು, ವ್ಯಂತ್ಯತ್ರ್ಯಂಶನಿಶಾಂ=ವಿ=ಹೊರತಾದಂಥ, ಅಂತ್ಯತ್ರ್ಯಂಶ= ಅಂತ್ಯತ್ರ್ಯಂಶವಾದಂಥ, ನಿಶಾಂ = ರಾತ್ರಿಯನ್ನು, ತ್ಯಜೇತ್ = ವರ್ಜಿಸಬೇಕು. ವಿಧುದಿನೇ=ಚಂದ್ರವಾರದಲ್ಲಿ, ಜಾಡ್ಯಂ = ಜಡತ್ವವು. ಜನ್ಮಭಂ = ಜನ್ಮನಕ್ಷತ್ರವು, ನ ಸತ್ = ಪ್ರಶಸ್ತವಲ್ಲ ಎಂದರ್ಥ.

ಶಿಶುವಿಗೆ ಅಕ್ಷರಾರಂಭವನ್ನು ಮಾಡುವಲ್ಲಿ ಅನ್ನಪ್ರಾಶನೆಗೆ ವಿಧಿಸಿದ ಹದಿನಾರು ನಕ್ಷತ್ರಗಳು ಮತ್ತು ಆರ್ದ್ರೆ ಈ ಪ್ರಕಾರ ಹದಿನೇಳು ನಕ್ಷತ್ರಗಳು ಮತ್ತು ನವಮೀ ತಿಥಿ ಸಹ ಪ್ರಶಸ್ತಂಗಳು. ಈ ಅಕ್ಷರಾರಂಭ ದಿವಸವು ಇದರ ಮರುದಿವಸವು ಅನಾಧ್ಯಾಯವಾಗಬಾರದು. ಸಂವತ್ಸರವು ಚೌಲಕ್ಕೆ ಹೇಳಿದ ಅಷ್ಟನೆಯ ಸಂವತ್ಸರದಲ್ಲಿ ಆಗಬೇಕು. ಪಂಚಮದಲ್ಲಿಯೂ, ದ್ವಿತೀಯದಲ್ಲಿಯೂ ಪಾಪಗ್ರಹರು, ಅಂಗಾರಕ ಶನಿವಾರಗಳ ಹಗಲು, ಸ್ಥಿರ ಲಗ್ನ ಮೀನಲಗ್ನ, ಬುಧನ ಮೌಢ್ಯ, ಅಷ್ಟಮದಲ್ಲಿ ಅಂಗಾರಕ ಸಹ ಆಗದು. ರಾತ್ರಿಯ ಮೂರು ಭಾಗ ಮಾಡಿ ಇದರಲ್ಲಿ ಆದಿ ಎರಡು ಪಾಲು ರಾತ್ರಿಯನು ವರ್ಜಿಸಬೇಕು. ಪ್ರಥಮ ಪರಿಯಾಯದ ಜನ್ಮನಕ್ಷತ್ರವು ನಿಷೇಧವು. ಚಂದ್ರವಾರದಲ್ಲಿ ಪ್ರಾರಂಭಿಸಿದರೆ ಜಡತ್ವ ಬರುವುದು. ದೋಷ ಪ್ರಕರಣದಲ್ಲಿ 'ರಿಕ್ತಾಷ್ಟಮಿ' ಎಂದು ರಿಕ್ತತಿಥಿಯಾಗದೆಂದು ಇಲ್ಲಿ 'ನವಮ್ಯಪಿ' ಎಂದು ನವಮಿ ಆದೀತೆಂದುದರಿಂದ ಅದು ರಿಕ್ತವಾದರೂ ದೋಷವಿಲ್ಲ. ಅಕ್ಷರಾರಂಭ ದಿವಸವು ಅದರ ಮರುದಿವಸವು ಅನಾಧ್ಯಾಯವಾಗಬಾರದಾದುದರಿಂದ ಅನಾಧ್ಯಾಯಗಳಾವುವೆಂದರೆ- "ಧರ್ಮಪ್ರವೃತ್ತಿ:- ಪಕ್ಷದ್ವಯೇ ಚತುರ್ದಶ್ಯಾವಷ್ಟಮ್ಯಾಂ ದ್ವೇ ತಥೈವ ಚ ॥ ಪ್ರತಿಪದ್ದ್ವೇ ದರ್ಶಪೂರ್ಣೇ ಅನಾಧ್ಯಾಯಾಃ ಪ್ರಕೀರ್ತಿತಾಃ ॥ ॥ ಯದ್ಯಷ್ಟಮೀಚತುರ್ದಶ್ಯೋಃ ಪ್ರಾರಂಭೋಽಸ್ತಮಯಾತ್ಪುರಾ ॥ ತದ್ದಿನಂ ಚ ತಯೋಃ ಕಾಲಃ ಪ್ರತಿಪತ್ಪರ್ವಣೋರಪಿ ॥ ॥ ತ್ರಯೋದಶ್ಯಾಃ ಸಮಾರಂಭೋ ಯದ್ಯರ್ಕಾಸ್ತಮಯಾತ್ಪುರಾ ॥ ತದಾದಿಶ್ಯಾಪಿ ತಚ್ಛೇಷಶ್ಯಾನಾಧ್ಯಾಯಃ ಸ್ಮೃತೋ ಬುಧೈಃ ॥ ॥ ನಿಶಾಮುಖೇ ಚತುರ್ಥೀ ತು ಸಪ್ತಮೀ ಯದಿ ದೃಶ್ಯತೇ । ನಿಶೀಥಿನೀಮುಖೇ ತಸ್ಮಿನ್ ನ ವಕ್ತವ್ಯಾ ಕ್ವಚಿತ್ತ್ರಯೀ ॥ ॥ ಷಷ್ಠಿಂ ಚ ದ್ವಾದಶೀಂ ಚೈವಾಪ್ಯರ್ಧರಾತ್ರೌ ನ ನಾಡಿಕಾ ॥ ಪ್ರದೋಷೇ ನ ತ್ವಧೀಯೀತ ತೃತೀಯೇ ನವ ನಾಡಿಕಾಃ ॥ ॥ ಯದಹ್ನಿ ಕ್ರಿಯತೇ ವೇದಸಮಾಪ್ತಿಸ್ತದ್ದಿನಾತ್ಪರಂ । ಚತುರ್ಥೇ ದಿವಸೇ ಕೈಶ್ಚಿತ್ ಅನಧ್ಯಾಯ ಇತಿ ಸ್ಮೃತಃ ॥ ॥ ಚಾತುರ್ಮಾಸ್ಯದ್ವಿತೀಯಾಸು ಯುಗಮನ್ವಂತರೇಷು ಚ ॥ ಅಷ್ಟಕಾಸು ಚ ಪರ್ವಾಸು ತಥಾ ಸೋಪಪದಾಸು ಚ ॥ ॥ ಅಯನೇ ವಿಷುವೇ ಚೈವ ಶ್ರವಣದ್ವಾದಶೀ ತಥಾ ॥ ಶಯನೇ

ಬೋಧಿನೀ ಚೈವ ದ್ವಾದಶೀ ಪರಿಕೀರ್ತಿತಾಃ ॥ ॥ ದ್ವಿತೀಯಾ ಪ್ರೇತಪರ್ಜನ್ಯಸಂಭವೇ ಪ್ರೇತಸಂಜ್ಞಿತಾ ॥ ಆಶ್ವಿನಸ್ಯ ಚ ಯಾ ಶುಕ್ಲದ್ವಿತೀಯಾ ಪ್ರೇತಸಂಜ್ಞಿತಾ ॥ ॥ ಶಂಕಾಚತುರ್ದಶೀ ಚೈವ ತಥಾ ಚಾಕ್ಷಚತುರ್ದಶೀ ॥ ಅನಾಧ್ಯಾಯಾಸ್ತ್ವಿಮೇ ಪ್ರೋಕ್ತಾಃ ತಿಥಿರ್ನಿತ್ಯಾ ಮಹರ್ಷಿಭಿಃ ॥ ॥ ಇತಿ” ಪುರಾಣೇ- “ಮಹಾನವಮ್ಯಾಂ ದ್ವಾದಶ್ಯಾಂ ಭರಣ್ಯಾಂ ಹಾದಿಕೇ ತಥಾ ॥ ತಥಾ ಚಾಕ್ಷತೃತೀಯಾಯಾಂ ಶಿಷ್ಯಾನ್ನಾಧ್ಯಾಪಯೇದ್ಬುಧಃ ॥ ॥ ಮಾಘಮಾಸಸ್ಯ ಸಪ್ತಮ್ಯಾಂ ರಥಾಖ್ಯಾಯಾಂ ಚ ವರ್ಜಯೇತ್ ॥ ಇತಿ” ಆಶ್ವೀಜ ಶುಕ್ಲ ನವಮಿಯು ಮಹಾನವಮಿಯು. ಕಾರ್ತಿಕಶುದ್ಧ ದ್ವಾದಶಿಯು ಮಹಾದ್ವಾದಶಿಯು ॥ ಭಾದ್ರಪದ ಮಾಸದಲ್ಲಿ ಬಂದ ಭರಣೀ ನಕ್ಷತ್ರವು ಮಹಾಭರಣಿಯು. “ಮನುಃ- ಪ್ರದುಷ್ಯತೇಗ್ನಿಷು ವಿದ್ಯಾತ್ತನಿತನಿಸ್ವನೇ ॥ ಸದ್ಯೋತೇ ಸ್ಯಾದನಧ್ಯಾಯಂ ಶೇಷೇ ರಾತ್ರೌ ಯಥಾ ದಿವಾ ॥ ॥ ಚೋರೈರುಪಪ್ಲುತೇ ಗ್ರಾಮೇ ಸಂಭ್ರಮೇವಾಗ್ನಿಕಾರಿತೇ ॥ ಅಕಾಲಿಕಮನಾಧ್ಯಾಯಂ ವಿದ್ಯಾತ್ಸರ್ವಾಷುತೇಷು ಚ ॥ ॥ ನಿರ್ಘಾತೇ ಭೂಮಿಚಲನೇ ಜ್ಯೋತಿಷಾಂ ಪರಿಮಾರ್ಜನೇ ॥ ಏತಾನಕಾಲಿಕಾನ್ ವಿದ್ಯಾದನಾಧ್ಯಾಯಮೃತಾವಪಿ ॥ ॥ ಧರ್ಮ ಪ್ರವೃತ್ತಿ:- ಶುಚಾವೂರ್ಜೇ ತಪಸ್ಯೇ ಚ ಯಾ ದ್ವಿತೀಯಾಸ್ತ್ವಾಃಪ್ರವದಂತಿ ವಿಪಶ್ಚಿತಃ ಮಾಘೇ ॥ ಪಂಚದಶಕೃಷ್ಣಾ ನಭಸ್ಯೇ ಚ ತ್ರಯೋದಶೀ ತೃತೀಯಾ ॥ ॥ ಮಾಧವೇ ಕೃಷ್ಣಪಂಚಮ್ಯೂರ್ಜೇ ಯುಗಾದಯಃ ॥ ಆಶ್ವಯುಕ್ ಶುಕ್ಲನವಮೀ ದ್ವಾದಶೀ ಕಾರ್ತಿಕೇ ತಥಾ ॥ ॥ ಸಿತಾಽಷಾಢಸ್ಯದಶಮೀ ಮಾಘಮಾಸಸ್ಯ ಸಪ್ತಮೀ ॥ ಶ್ರಾವಣಸ್ಯಾಪ್ಯಮಾವಾಸ್ಯಾ ಜ್ಯೈಷ್ಠ್ಯಾ ಪಂಚದಶೀ ಸಿತಾ ॥ ॥ ಆಷಾಢೀ ಕಾರ್ತಿಕೀ ಮಾಘೀ ಚೈತ್ರೀ ಮನ್ವಾದಯಃ ಸ್ಮೃತಾಃ ॥ ಮಾರ್ಗೇ ಪೌಷೇ ತಥಾ ಮಾಘೇ ನಭಸ್ಯೇ ಫಾಲ್ಗುನೇ ತಥಾ ॥ ॥ ಕೃಷ್ಣಪಕ್ಷೇಽಷ್ಟಕಾಸ್ತಿಸ್ರಃ ಸಪ್ತಮ್ಯಾದಿಯಥಾಕ್ರಮಂ ॥ ಜ್ಯೇಷ್ಠಶುಕ್ಲದ್ವಿತೀಯಾ ಚ ಯಾಽಶ್ವಿನೀ ದಶಮೀ ಸಿತಾ ॥ ॥ ಚತುರ್ಥೀ ದ್ವಾದಶೀ ಮಾಘೇ ಚೈತಾಸ್ತ್ವೇಪಪದಾಃ ಸ್ಮೃತಾಃ ॥ ಮಾಘಕರ್ಕಟಸಂಕ್ರಾಂತೀ ದ್ವೇ ಉದಗ್ದಕ್ಷಿಣಾಯನೇ ॥ ಅಥ ಚೈವ ತುಲಾಮೇಷೌ ವಿಷುವೌ ತೌ ಪ್ರಕೀರ್ತಿತೌ ॥ ॥ ಚತುರ್ದಶ್ಯಾಂ ಯದಾ ದೀಪಂ ಪ್ರಾಗಸ್ತಾದ್ದೃಶ್ಯತೇ ರವೇಃ ॥ ಅನಾಧ್ಯಾಯಂ ನ ಕುರ್ವೀತ ತ್ರಯೋದಶ್ಯಾಂ ತು ಸರ್ವದಾ ॥ ॥ ಮೇಧಾಕಾಮಸ್ತ್ರಯೋದಶ್ಯಾಂ ಸಪ್ತಮ್ಯಾಂ ಚ ಚತುರ್ಥಿಕೇ ॥ ದ್ವಾದಶ್ಯಾಂ ಚ ತಥಾಽಷ್ಟಮ್ಯಾಂ ನ ಸ್ಮರೇನ್ನ ಚ ಕೀರ್ತಯೇತ್ ॥ ॥ ಚತುರ್ಥೀಪ್ರಥಮೇ ಯಾಮೇ ಸಾರ್ಧಯಾಮಾ ಚ ಸಪ್ತಮೀ ॥ ಯಾಮದ್ವಯಂ ತ್ರಯೋದಶ್ಯಾಂ ಪ್ರದೋಷಃ ಸರ್ವಘಾತಕಃ ॥ ॥ ತ್ರಿಮುಹೂರ್ತಃ ಪ್ರದೋಷಃ ಸ್ಯಾತ್ ರವಾವಸ್ತಂ ಗತೇ ಸತಿ ॥ ಮಹಾನಿಶೀಥಃ ಸ್ಯಾದ್ರಾತ್ರ್ಯಾ ಮಧ್ಯಸ್ಥಂ ಘಟಿಕಾದ್ವಯಂ ॥ ॥ ಇತಿ”

ಅನಾಧ್ಯಾಯದ ಮುಂಚಿನ ದಿವಸವು ಅಕ್ಷರಾರಂಭಕ್ಕೆ ಅನಾಧ್ಯಾಯದಂತೆಯೇ. ಆದುದರಿಂದ ‘ನಾನಾಧ್ಯಾಯ ಇತತ್ಪೂರ್ವದಿವಸಃ’ ಎಂದು ಹೇಳಿಹದು. ಆ ಪ್ರಕಾರ ಮನು ಹೇಳಿಹನು- “ಅನಾಧ್ಯಾಯಸ್ಯ ಪೂರ್ವೇದ್ಯುಃ ಅನಾಧ್ಯಾಯೋ ಭವೇದ್ಧ್ರುವಂ ॥ ಅನಾಧ್ಯಾಯೇಷು ಪಠತಃ ಪ್ರಜ್ಞಾಮಾಯುಃ ಪ್ರಜಾಂ ಶ್ರಿಯಂ ॥ ॥ ಬ್ರಹ್ಮವೀರ್ಯಂ ತಥಾ ಶ್ರೇಯೋ ನಿಕೃಂತತಿ ಯಮಃ ಸ್ವಯಂ ॥ ಇತಿ” ಪಂಚಮದಲ್ಲೂ ದ್ವಿತೀಯದಲ್ಲೂ ಪಾಪಗ್ರಹರಾಗದೆಂವರೂ ಆದಿತ್ಯನು ದ್ವಿತೀಯದಲ್ಲಿದ್ದರೂ. ಲಗ್ನದಲ್ಲಿದ್ದರೂ ಮಧ್ಯಮ

ಪ್ರಕಾರವಾದೀತು. "ಸತ್ಯಾಮಾಪದಿ ಲಗ್ನಸ್ಥೋ ಭಾನುರ್ಮೂರ್ಧ್ಯೋ ಧನೇ ತಥಾ ॥ ಇತಿ" ಈ ಅಕ್ಷರಾರಂಭವು ಉಪನಯನದಿಂದ ಮುಂಚೆಯೇ ಆಗಬೇಕು. "ದ್ವಿತೀಯಜನ್ಮತಃ ಪೂರ್ವಮಾರಭೇತಾಕ್ಷರಾನ್ ಸುಧೀಃ ॥ ಇತಿ" ಸಾರಸ್ವತ ಯೋಗವಿದ್ದಲ್ಲಿ ವಿದ್ಯಾರಂಭ ಅಕ್ಷರಾರಂಭ ಮಾಡುವಲ್ಲಿ ಮುಹೂರ್ತ ನೋಡಬೇಕೆಂದಿಲ್ಲ. ಆ ಸಾರಸ್ವತ ಯೋಗಗಳು ಯಾವುವೆಂದರೆ ಕನ್ಯಾಲಗ್ನವಾಗಿ ಆ ಲಗ್ನದಲ್ಲಿ ಆದಿತ್ಯ ಬುಧರು ಅತ್ಯುಚ್ಚದಲ್ಲಿದ್ದಾಗ ಬುಧನ ವಾರದಲ್ಲಿ ಒಂದು ಯೋಗ. ಹಸ್ತನಕ್ಷತ್ರದ ಮೂರನೆ ಪಾದವಾದ ಬುಧನ ಅಂಶಕದಲ್ಲಿ ರವಿಚಂದ್ರಬುಧರಿದ್ದು ಬುಧನ ವಾರ ಸೂರ್ಯೋದಯವುಳ್ಳ ಕನ್ಯಾಲಗ್ನದಲ್ಲಿ ಒಂದು ಯೋಗ. ಬುಧವಾರ ಹಸ್ತನಕ್ಷತ್ರದ ಮೂರನೆಯ ಪಾದವಹ ಬುಧಾಂಶಕದಲ್ಲಿದ್ದ ಚಂದ್ರಬುಧೋದಯ ಲಗ್ನದಲ್ಲಿ ಒಂದು ಯೋಗ. ಕೇಂದ್ರದಲ್ಲಿ ಗುರುಶುಕ್ರರಿದ್ದು ಕನ್ಯಾರಾಶಿಯಲ್ಲಿ ತನ್ನ ವರ್ಗೋತ್ತಮಾಂಶಕದಲ್ಲಿದ್ದ ಬುಧೋದಯದಲ್ಲಿ ಒಂದು ಯೋಗ. ವೃಷಭದಲ್ಲಿ ಬುಧನಿದ್ದು ಮೀನದಲ್ಲಿ ಶುಕ್ರನಿದ್ದು ಮೇಷದಲ್ಲಿ ಅತ್ಯುಚ್ಚ ಗತನಾಗಿದ್ದ ಆದಿತ್ಯೋದಯ ಲಗ್ನದಲ್ಲಿ ಒಂದು ಯೋಗ. ಗುರುಬುಧರ ವಾರ ದಿಂದೊಂದು ವಾರದಲ್ಲಿ ಬುಧಾಂಶಕದಲ್ಲಿ ರವಿ ಗುರುಗಳಿದ್ದು ಬುಧೋದಯ ಲಗ್ನದಲ್ಲಿ ಒಂದು ಯೋಗ. ಮೀನದಲ್ಲಿ ಅತ್ಯುಚ್ಚ ಗತನಾಗಿದ್ದ ಶುಕ್ರನಿದ್ದು ಶುಕ್ರವಾರ ಶುಕ್ರೋದಯ ಲಗ್ನದಲ್ಲಿ ಒಂದು ಯೋಗ. ಕರ್ಕಟಕದಲ್ಲಿ ಅತ್ಯುಚ್ಚಗತನಾದ ಗುರುವಿದ್ದು ಗುರುವಾರ ಗುರೂದಯ ಲಗ್ನದಲ್ಲಿ ಒಂದು ಯೋಗ. "ಅತ್ರಮಾಧವೀಯಂ-ಕನ್ಯಾಯಾಮುದಯೇ ರವೇರ್ಬುಧವಿನೇ ಚಂದ್ರಾತ್ಮಜೇತ್ಯುಚ್ಚಗೇ । ಹಸ್ತೇಜ್ಞಾಂಶಗತಾ ರವೀಂದುಶಶಿಜಾ ಲಗ್ನೇ ರವೌ ವಿಡ್ದಿನೇ ॥ ವಾರೇಜ್ಞಸ್ಯ ವಿಲಗ್ನಗೌ ಶಶಿಬುಧೌ ಹಸ್ತೇ ಬುಧಾಂಶಸ್ಥಿತೌ ||| ಕೇಂದ್ರೇ ಜೀವಸಿತೌ ಬುಧೇ ಚ ಯುವತೌ ವರ್ಗೋತ್ತಮಸ್ಥೇ ತನೌ ॥ ॥ ಲಗ್ನೇಽರ್ಕೇ ವರಪಂಚಗೇ ಬುಧಸಿತೌ ಗೋಮೀನಯೋಃ ಸಂಸ್ಥಿತೌ । ಜ್ಞೇ ಲಗ್ನೇ ಚ ಬುಧಾಂಶಗೌ ರವಿಗುರೂ ವಾರೇ ಗುರೋರ್ಜ್ಞಸ್ಯ ವಾ ॥ ಶುಕ್ರೇಽತ್ಯುಚ್ಚಗತೇ ತನೌ ಸ್ವದಿವಸೇ ತದ್ವತ್ಸ್ವವಾರೇ ಗುರೌ ||| ವಿದ್ಯೋಪಕ್ರಮಣೇ ವಿಶಿಷ್ಟಫಲದಾ ಯೋಗಾಸ್ತು ಸಾರಸ್ವತಾಃ ॥ ॥ ಇತಿ" ಇಂತೀ ಸಾರಸ್ವತ ಯೋಗಂಗಳಿದ್ದರೂ ಅನಾಧ್ಯಾಯವನು ವರ್ಜಿಸಬೇಕು. "ಸಾರಸ್ವತಾಖ್ಯಾ ಯೋಗಾಃ ವಿದ್ಯಾಯಾಂ ತೇಽತಿಶೋಭನಾಃ ॥ ಯೋಗೇ ಸತ್ಯಪ್ಯನಧ್ಯಾಯಾಃ ವರ್ಜ್ಯಂತೇ ಪೂರ್ವಸೂರಿಭಿಃ ॥ ॥ ಇತಿ"

ಅನಂತರಕರ್ಣವೇಧನೆಕಾಲವನು ಹೇಳುತಾನೆ-

ಶಶಿಹರಿವಸುಹಸ್ತದ್ವ್ಯುತ್ತರಾರ್ದ್ರಾತ್ರಿಪೌಷ್ಣಾ ।
ಸ್ತ್ಯಭಯುಚರವೃಷಾಖ್ಯಾಃ ಶೋಭನಾಃ ಕರ್ಣವೇಧೇ ॥
ಜಹತಿ ಜನನತಾರಾ ಶರ್ವರೀ ನ ಪ್ರಶಸ್ತಾ |||
ಭತಿಥಿಭವನಚಿಂತಾಂ ನೈವ ಕುರ್ವಂತಿ ಯೋಗೇ ॥ ೧೯ ॥

ಟೀಕಾ-ಶಶೀತಿ - ಕರ್ಣವೇಧೇ = ಕರ್ಣವೇಧನೆಯಲ್ಲಿ, ಶಶಿಹರಿವಸುಹಸ್ತದ್ವ್ಯುತ್ತರಾರ್ದ್ರಾತ್ರಿಪೌಷ್ಣಾನಿ=ಶಶಿ=ಮೃಗಶಿರೆ, ಹರಿ=ಶ್ರವಣ, ವಸು=ಧನಿಷ್ಠ, ಹಸ್ತದ್ವಿ=ಹಸ್ತ, ಚಿತ್ರ, ಉತ್ತರಾ = ಉತ್ತರಾತ್ರಯವಾದ ಉತ್ತರೆ ಉತ್ತರಾಷಾಢ ಉತ್ತರಾಭಾದ್ರ,

ಆರ್ದ್ರಾತ್ರಿ=ಆರ್ದ್ರೆ ಪುನರ್ವಸು ಪುಷ್ಯ. ಪೌಷ್ಣಾನಿ=ರೇವತಿ ಎಂದಿವುಗಳು, ಉಭಯಾಚರ ವೃಷಾಖ್ಯಾಃ = ಉಭಯಲಗ್ನ ಚರಲಗ್ನ, ವೃಷಭಲಗ್ನ ಎಂದಿವುಗಳು. ಶೋಭನಾಃ = ಪ್ರಶಸ್ತಂಗಳು. ಜನನತಾರಾಃ = ಮೂರು ಜನ್ಮನಕ್ಷತ್ರಗಳನ್ನು, ಜಹತಿ = ಬಿಡುತ್ತಾರೆ. ಶರ್ವರೀ = ರಾತ್ರಿಯು, ನ ಪ್ರಶಸ್ತಾ = ಪ್ರಶಸ್ತವಲ್ಲ. ಯೋಗೇ = ಕುಂಡಲಯೋಗದಲ್ಲಿ, ಭತಿಥಿಭವನಚಿಂತಾಂ=ಭ=ನಕ್ಷತ್ರ, ತಿಥಿ=ತಿಥಿ. ಭವನ=ಲಗ್ನ ಎಂದಿವುಗಳ. ಚಿಂತಾಂ= ಚಿಂತೆಯನ್ನು, ನ ಕುರ್ವಂತ್ಯೇವ = ಮಾಡುವುದೇ ಇಲ್ಲ ಎಂದರ್ಥ. ಮೃಗಶಿರೆ, ಶ್ರವಣ, ಧನಿಷ್ಠೆ ಹಸ್ತ ಚಿತ್ರೆ ಉತ್ತರೆ ಉತ್ತರಾಷಾಢ, ಉತ್ತರಾಭಾದ್ರೆ, ಆರ್ದ್ರೆ, ಪುನರ್ವಸು, ಪುಷ್ಯ, ರೇವತಿ ಇಂತೀ ಹನ್ನೆರಡು ನಕ್ಷತ್ರಗಳು ಕರ್ಣವೇಧನೆಗೆ ಮುಖ್ಯಂಗಳು. ಉಳಿದ ಹದಿನೈದು ನಕ್ಷತ್ರಂಗಳಾಗದು. ಉಭಯ ರಾಶಿಲಗ್ನಗಳು ಆಗಬೇಕು. ಸ್ಥಿರರಾಶಿಲಗ್ನದಲ್ಲಿ ವೃಷಭಲಗ್ನ ಅರ್ಹಿತು. ಸಿಂಹ ವೃಶ್ಚಿಕ ಕುಂಭಗಳು ಆಗದು. ಜನ್ಮ ದ್ವಿಜನ್ಮ ತ್ರಿಜನ್ಮ ಈ ಮೂರು ಜನ್ಮತ್ರಯಗಳು ಮತ್ತು ರಾತ್ರಿ ಸಹ ಆಗದು. ಕುಂಡಲ ಯೋಗದಲ್ಲಿ ಕರ್ಣವೇಧನೆ ಮಾಡುವುದಕ್ಕೆ ಇಲ್ಲಿ ಹೇಳಿದ ಪ್ರಕಾರ ತಿಥಿ ನಕ್ಷತ್ರ ಲಗ್ನಗಳೊಂದನ್ನು ಚಿಂತಿಸಬೇಡ. ಆ ಕುಂಡಲಯೋಗವು ಯಾವುದೆಂದರೆ ಗುರು ಇರುವ ರಾಶಿಗೆ ದ್ವಿತೀಯ ದ್ವಾದಶಗಳಲ್ಲಾಗಲೀ, ತೃತೀಯ ಏಕಾದಶಗಳಲ್ಲಾಗಲೀ, ದಶಮ ಚತುರ್ಥಗಳಲ್ಲಾಗಲೀ, ಪಂಚಮ ನವಮಗಳಲ್ಲಾಗಲೀ ಶುಭಗ್ರಹರಿದ್ದರೆ ಆ ಗುರು ಇರುವ ಲಗ್ನಕ್ಕೆ ಕುಂಡಲ ಯೋಗ ಉಂಟೆಂದರಿವುದು. ಶುಕ್ರನು ಮೀನದಲ್ಲಿದ್ದು ಆ ರಾಶಿಗಳು ಇಲ್ಲಿ ಹೇಳಿದ ಪ್ರಕಾರ ಶುಭಗ್ರಹರಿದ್ದರೆ ಆ ಶುಕ್ರನಿರುವ ಲಗ್ನಕ್ಕೆ ಕುಂಡಲಯೋಗ ಉಂಟೆಂದರಿವುದು. "ಗುರೂದಯೇ ಕರ್ಣವೇಧೋ ಮೀನಶುಕ್ರೋದಯೇಽಪಿ ವಾ ||" ಇನ್ನೊಂದು ಪ್ರಕಾರ ಕುಂಡಲಯೋಗವಿರುವುದು. ಅದೆಂತೆಂದರೆ- ಗುರುಲಗ್ನದಲ್ಲಿದ್ದು ಆ ಲಗ್ನದಿಂದ ಉಪಚಯ ದಲ್ಲಿ=೩, ೬, ೧೦, ೧೧ರಲ್ಲಿ ಚಂದ್ರ, ಆ ಚಂದ್ರಾದುಪಚಯದಲ್ಲಿ ಶುಕ್ರ, ಆ ಶುಕ್ರಾದುಪ ಚಯದಲ್ಲಿ ಆ ಲಗ್ನಗತನಾದ ಗುರು ಇದ್ದರೆ ಕುಂಡಲಯೋಗ. "ಲಗ್ನಾದುಪಚಯೇ ಚಂದ್ರಃ ಚಂದ್ರಾದುಪಚಯೇ ಸಿತಃ || ಸಿತಾದುಪಚಯೇ ಜೀವಃ ಸೋಽಪಿಲಗ್ನಗತೋ ಯದಿ || || ತದಾ ಯೋಗೋ ಭವೇತ್ಕರ್ಣವೇಧಯೋಗೋಽತಿಪೂಜಿತಃ || ಇತಿ" ಮತ್ತೊಂದು ಪ್ರಕಾರ ಶುಭಗ್ರಹ ಲಗ್ನದಲ್ಲಿದ್ದು ಏಕಾದಶದಲ್ಲಿ ಗುರುವಿದ್ದು ತೃತೀಯ ದಲ್ಲಿ ಯಾರೂ ಇಲ್ಲದೆ ಇದ್ದು ಆ ದಿವಸ ಶ್ರವಣ ರೇವತಿ ಅಶ್ವಿನಿ ಚಿತ್ರೆ ಮೃಗಶಿರ ಪುಷ್ಯಗಳಲ್ಲೊಂದು ನಕ್ಷತ್ರ ಬಂದರೆ ಇಲ್ಲಿ ಕುಂಡಲ ಯೋಗವುಂಟು. "ಲಗ್ನೇ ಶುಭಾ ಗುರುರ್ಲಾಭೇ ಸೋತ್ಥಂ ಶೂನ್ಯಂ ಯದಾ ತದಾ || ವಿಷ್ಣುಪೌಷ್ಣಾಶ್ವಿಚಿತ್ರೇಂದುಪುಷ್ಯಂ ಚೇತ್ಕರ್ಣವೇಧನಂ || || ಇತಿ"

ಈ ಕರ್ಣವೇಧವು ಪುರುಷರಿಗೆ ವ್ರತಕರ್ಮದಿಂದ ಮೊದಲು ಆಗಬೇಕು. ಶೂದ್ರರಿಗೆ ಚೌಲ ಕಳೆದು ಶಸ್ತ್ರಬಂಧಕ್ಕೆ ಮುಂಚಿತ ಆಗಬೇಕು. ಸ್ತ್ರೀಯರಿಗೆ ವಿವಾಹದಿಂದ ಮುಂಚಿತ ಆಗಬೇಕು. "ಅಬ್ದಾತ್ಸೋತ್ಸೇಜಾಃ ಪಂಚಮಾದ್ಯಾಃ ಶ್ರೇಷ್ಠಾಃ ಪ್ರಾಕ್ ವ್ರತತೋ ನೃಣಾಂ || ಸ್ತ್ರೀಣಾಂ ಪರಿಣಯಾತ್ಪೂರ್ವಂ ಶೂದ್ರಾಣಾಂ ಪ್ರಾಕ್ತು ಶಸ್ತ್ರತಃ || || ಇತಿ"

ಇಲ್ಲಿ ಹೇಳಿರುದು ಜನ್ಮಾದಿ ಪದಿನಾರು ತಿಂಗಳೊಳಗೆ ಕರ್ಣವೇಧನೆ ಮಾಡದಿರುವ ಪಕ್ಷದಲ್ಲಿ ಎಂದರಿವದು. ಜನ್ಮಾದಿಯಾಗಿ ಒಂದನೆ, ಆರನೆ, ಏಳನೆ, ಎಂಟನೆ, ಹತ್ತನೆ, ಹನ್ನೆರಡನೆ, ಹದಿನಾರನೆಯ ತಿಂಗಳುಗಳಲ್ಲಿ ಆಗಬೇಕು. "ಅತ್ರಮದನ ರತ್ನಂ-ಪ್ರಥಮೇ ಸಪ್ತಮೇ ಮಾಸಿ ಚಾಷ್ಟಮೇ ದಶಮೇಽಥವಾ ॥ ದ್ವಾದಶೇ ಚ ತಥಾ ಕುರ್ಯಾತ್ ಕರ್ಣವೇಧಂ ತು ಷೋಡಶೇ ॥ ॥"

"ಶ್ರೀಧರೀಯಂ ಚ- ಮಾಸೇ ಷಷ್ಠೇ ಸಪ್ತಮೇವಾಽಷ್ಟಮೇ ವಾ ವೇಧ್ಯೌ ಕರ್ಣೌ ದ್ವಾದಶೇ ಷೋಡಶೇ ವಾ ॥ ಇತಿ" ಒಂದನೆಯ ಮಾಸದಲ್ಲಿ ಕರ್ಣವೇಧನ ಮಾಡದಿದ್ದರೆ ಆಮೇಲೆ ಮಾಡುವಾಗ್ಗೆ ಜನ್ಮಮಾಸವ ವರ್ಜಿಸಬೇಕು. "ವ್ಯಾಸ:- ಯೋ ಜನ್ಮಮಾಸೇ ಕ್ಷುರಕರ್ಮ ಯಾತ್ರಾಂ ಕರ್ಣಸ್ಯ ವೇಧಂ ಕುರುತೇಽತಿಮೋಹಾತ್ ॥ ನೂನಂ ಸ ರೋಗೀ ಧನಪುತ್ರನಾಶಂ ಪ್ರಾಪ್ನೋತಿ ಮೂಢೋ ವಧಬಂಧನಾನಿ ॥ ॥ ಇತಿ" "ವರ್ಜ್ಯಾ: ಸ್ಯು: ಶ್ರುತಿವೇಧನೇ ತಿಥಿಭಯೋಃ ಸಂಧಿಶ್ಚ ವರ್ಜ್ಯಾ ದಿವಾ" ಎಂದು ಮುಹೂರ್ತ ಶತಕದಲ್ಲಿ ಹೇಳಿದ್ದರಿಂದಲೂ, 'ತಿಥಿಋಕ್ಷಾಣಿ ಶುಭಾನಿ ಸಂಧಿರಹಿತಾನ್ಯಹ್ನೀಂದು' ಎಂದು ಮಾಧವೀಯದಲ್ಲಿ ಹೇಳಿದ್ದರಿಂದಲೂ, ಹಗಲು ತಿಥಿನಕ್ಷತ್ರಗಳ ಸಂಧಿಬಂದ ದಿವಸ ಅವಶ್ಯವಾಗಿ ಕರ್ಣವೇಧನ ಮಾಡಬಾರದು. ಕುಂಡಲಯೋಗವಿದ್ದಲ್ಲಿ ಗ್ರಹಿಸಬಹುದು.

ಅನಂತರದಲ್ಲಿ ಉಪನಯನ ಕಾಲವನು ಹೇಳುತಾನೆ-

ಜನ್ಮಾಬ್ದಾತ್ಸಪ್ತಮಾದೌ ಸ್ಮೃತಮುಪನಯನಂ ಪಂಚಮೇವಾಽಶನರ್ಕ್ಷೇ ।
ಪಕ್ಷೇಽಚ್ಛೇ ಪಕ್ಷತೌ ವಾ ಜಹುರಯನಮವಾಗತ್ರ ಮಂದಾರವಾರೌ ॥
ದೋಷಾನಧ್ಯಾಯರಂಧ್ರಸ್ಥಿತವಿಸಿತಖಗಾನ್ ಧರ್ಮಗೋಗ್ರಾನ್‌ವಿಮಂದಾನ್ ॥।
ಜನ್ಮೇಂದೋರ್ಭ್ರಾತರೀಡ್ಯಂ ವಿಸಿತದಿವಿಚರಾನಷ್ಟಮೇ ಜನ್ಮಭಂ ಚ ॥ ೨೦ ॥

ಟೀಕಾ - ಜನ್ಮಾಬ್ದಾದಿತಿ - ಉಪನಯನಂ = ಉಪನಯನವು, ಜನ್ಮಾಬ್ದಾತ್= ಜನ್ಮಾಬ್ದದ ದೆಸೆಯಿಂದ, ಸಪ್ತಮಾದೌ = ಏಳನೆಯ ಮೊದಲಾದ ವರ್ಷಗಳಲ್ಲಿ, ಪಂಚಮೇವಾ=ಐದನೆಯ ವರ್ಷದಲ್ಲಾದರೂ, ಅಶನರ್ಕ್ಷೇ=ಅನ್ನಪ್ರಾಶನೋಕ್ತ ನಕ್ಷತ್ರ ದಲ್ಲಿ, ಅಚ್ಛೇಪಕ್ಷೇ = ಶುಕ್ಲಪಕ್ಷದಲ್ಲಿ, ಪಕ್ಷತೌವಾ = ಪಾಡ್ಯದಲ್ಲಾದರೂ, ಸ್ಮೃತಂ= ಹೇಳಲ್ಪಟ್ಟಿತು. ಅತ್ರ = ಈ ಉಪನಯನದಲ್ಲಿ, ಅವಾಗಯನಂ = ದಕ್ಷಿಣಾಯನವನ್ನು, ಮಂದಾರವಾರೌ=ಶನಿಕುಜ ವಾರಗಳನ್ನು, ದೋಷಾನಧ್ಯಾಯರಂಧ್ರಸ್ಥಿತವಿಸಿತಖಗಾನ್= ದೋಷ = ರಾತ್ರಿ, ಅನಧ್ಯಾಯ = ಅನಾಧ್ಯಾಯ, ರಂಧ್ರಸ್ಥಿತ = ಅಷ್ಟಮದಲ್ಲಿರುವಂಥ, ವಿಸಿತ=ಶುಕ್ರನ ಹೊರತಾದಂಥ, ಖಗಾನ್=ಗ್ರಹರನ್ನು, ವಿಮಂದಾನ್=ಶನಿ ಹೊರತಾ ದಂಥ, ಧರ್ಮಗೋಗ್ರಾನ್=ಧರ್ಮಗ=ನವಮದಲ್ಲಿರುವಂಥ, ಉಗ್ರಾನ್=ಪಾಪಗ್ರಹ ರನ್ನು, ಜನ್ಮೇಂದೋ:=ಜನ್ಮಚಂದ್ರನ ದೆಸೆಯಿಂದ, ಭ್ರಾತರಿ=ತೃತೀಯದಲ್ಲಿ, ಈಡ್ಯಂ= ಬೃಹಸ್ಪತಿಯನ್ನು, ಅಷ್ಟಮೇ = ಅಷ್ಟಮದಲ್ಲಿ, ವಿಸಿತದಿವಿಚರಾನ್ = ಶುಕ್ರನ ಹೊರತಾ ದಂಥ ಗ್ರಹರನ್ನು, ಜನ್ಮಭಂ ಚ=ಪ್ರಥಮಜನ್ಮ ನಕ್ಷತ್ರವನ್ನು ವರ್ಜಿಸಿಯಾರೆಂದರ್ಥ. ಜನ್ಮಾಬ್ದ ಮೊದಲಾಗಿ ಏಳನೆಯ ಮೊದಲಾದ ವರ್ಷಗಳಲ್ಲಿ ಅಥವಾ ಐದನೆಯ ವರ್ಷದಲ್ಲಾಗಲೀ ಅನ್ನಪ್ರಾಶನೆಗೆ ವಿಧಿಸಿದ ನಕ್ಷತ್ರಗಳಲ್ಲಿ ಶುಕ್ಲಪಕ್ಷದಲ್ಲಿ ಅಥವಾ

ಪಾಡ್ಯದಲ್ಲಾದರೂ ಉಪನಯನವನ್ನು ಮಾಡಬೇಕು. ಇಲ್ಲಿ ದಕ್ಷಿಣಾಯನವನ್ನು ಶನಿವಾರ ಕುಜವಾರಗಳನ್ನು ರಾತ್ರಿಯನ್ನು ಅನಾಧ್ಯಾಯವನ್ನು ಅಷ್ಟಮದಲ್ಲಿ ಶುಕ್ರ ಹೊರತು ಮೇಲಾದ ಗ್ರಹರನ್ನು, ಸಪ್ತಮದಲ್ಲಿ ಶನಿ ಹೊರತು ಉಳಿದ ಪಾಪಗ್ರಹರನ್ನು ಮತ್ತು ಜನ್ಮರಾಶಿ ದೆಸೆಯಿಂದ ತೃತೀಯದಲ್ಲಿ ಗುರುವನ್ನು ಅಷ್ಟಮದಲ್ಲಿ ಶುಕ್ರನ ಹೊರತು ಉಳಿದ ಸಮಸ್ತ ಗ್ರಹರನ್ನು, ಪ್ರಥಮ ಪರ್ಯಾಯದ ಜನ್ಮನಕ್ಷತ್ರವನ್ನು ವರ್ಜಿಸಬೇಕು. ಬ್ರಾಹ್ಮಣರಿಗೆ ಜನ್ಮಾದಿ ಏಳನೆಯ ವರ್ಷದಲ್ಲಿ, ಕ್ಷತ್ರಿಯರಿಗೆ ಹನ್ನೊಂದನೆಯ ವರ್ಷದಲ್ಲಿ, ವೈಶ್ಯರಿಗೆ ಹನ್ನೆರಡನೆಯ ವರ್ಷದಲ್ಲಿ ಈ ಪ್ರಕಾರ ಉಪನಯನವಾಗಬೇಕು. “ಅತ್ರಮಾಧವೀಯಂ-ವಿಪ್ರಸ್ಯಾಭಿಹಿತಂ ದ್ವಿತೀಯಜನನಂ ವರ್ಷೇ ಶುಭಂ ಸಪ್ತಮೇ । ರಾಜನ್ಯಸ್ಯ ಚತುರ್ಭಿರತ್ರ ಸಹಿತೇ ವೈಶ್ಯಸ್ಯ ಚ ದ್ವಾದಶೇ ॥” ಇವು ಮುಖ್ಯ ಕಾಲಗಳಾಗಿಹವು. ಬ್ರಾಹ್ಮಣರಿಗೆ ಹದಿನಾರು ವರ್ಷ, ಕ್ಷತ್ರಿಯರಿಗೆ ಇಪ್ಪತ್ತೊಂದು ವರ್ಷ, ವೈಶ್ಯರಿಗೆ ಇಪ್ಪತ್ತೈದು ವರ್ಷ. ಇಷ್ಟು ವರ್ಷಗಳು ಕಳಿಯುವುದರೊಳಗೆ ಉಪನಯನವಾಗಬೇಕು. ಅದು ಕಳೆದ ಮೇಲೆ ಪಾತಿತ್ಯ ಉಂಟಾಗುತ್ತದೆ. “ಅತ್ರಗುರುಃ:- ಜನ್ಮತಃ ಸಪ್ತಮೇ ವರ್ಷೇ ಗರ್ಭತೋ ವಾಽಷ್ಟಮೇಽಪಿ ವಾ ॥ ನವಮೇ ದಶಮೇ ಚೈವ ವರ್ಷೇ ಚೋತ್ತಮಮಧ್ಯಮೌ ॥ ॥ ಬ್ರಾಹ್ಮಣಸ್ಯ ಕ್ರಮಾತ್ ಪಶ್ಚಾತ್ ಅಧಮಂ ಚಾಽಧಮಾಧಮಂ ॥ ಪ್ರಾಯಶ್ಚಿತ್ತಂ ತು ಕರ್ತವ್ಯಂ ಯಥಾವಿಭವತಸ್ತದಾ ॥ ॥ ಆಷೋಡಶಾಬ್ದಾತ್ಸರ್ವೇಷಾಮನತೀತೇ ಮಹಾಪದಿ ॥ ಕ್ಷತ್ರಿಯೋ ವಿಂಶತೇರೂರ್ಧ್ವಂ ನ ವೈಶ್ಯಃ ಪಂಚವಿಂಶತೇಃ ॥ ॥ ಅತಿಷೋಡಶಿಕೋ ವಿಪ್ರೋ ನೋಪನೇಯಃ ಕದಾಚನ ॥ ಸ್ಯಾವಧೇಃ ಕ್ಷತ್ರಿಯೋ ವೈಶ್ಯೋ ಊರ್ಧ್ವಂ ಚಾಂಡಾಲತಾಮಿಯಾತ್ ॥ ॥”

‘ಜನ್ಮಾಬ್ದಾತ್ಸಪ್ತಮಾದೌ’ ಎಂದು ಆದಿ ಶಬ್ದದಿಂದ ಏಳು ವರ್ಷದಿಂದ ಮೇಲೆ ಎಷ್ಟನೆಯ ವರ್ಷದಲ್ಲೂ ಆದೀತೆಂದರ್ಥ. ‘ಪಕ್ಷತೌ ವಾ’ ಎಂದು ವಾ ಶಬ್ದದಿಂದ ಪಾಡ್ಯವು ಮಧ್ಯಮ ಪ್ರಕಾರ ಗ್ರಹಿಸಬೇಕು. ಆದಾಗ್ಯೂ ಆದ್ಯರ್ಥವಾಗದು. ಶುಕ್ಲಪಕ್ಷದ ಪಾಡ್ಯದ ಅತ್ಯಾರ್ಥ ಗ್ರಾಹ್ಯವು. ‘ಪ್ರತಿಪತ್ಸಿಂಹಕರಣಮುಪನೀತೇ ವಿಧೀಯತೇ ॥ ಇತಿ’ ಉಳಿದ ತಿಥಿಗಳಲ್ಲಿ ಅನಾಧ್ಯಾಯ ಹೊರತು ಮಿಕ್ಕಾದ ತಿಥಿಗಳೆಲ್ಲವೂ ಆದೀತು. ‘ಜನ್ಮೇಂದೋರ್ಭ್ರಾತರೀಡ್ಯಂ’ ಎಂದು ವಟುವಿನ ಜನ್ಮರಾಶಿಯಿಂದ ತೃತೀಯದಲ್ಲಿ ಅವಶ್ಯವಾಗಿ ಗುರುವಿರಲಾಗದು ಮತ್ತು ಜನ್ಮ ಚತುರ್ಥ ಷಷ್ಠ ದ್ವಾದಶಗಳಲ್ಲಿಯೂ ಗುರು ಇರಲಾಗದೆಂದು ಕೆಲವರ ಮತ. ಅದನ್ನು ಕಾಲಾತ್ಯಯದಲ್ಲಿ ಶಾಂತಿಯಿಂದ ಗ್ರಹಿಸಬಹುದು. ಕಾಲಾತ್ಯಯದಲ್ಲಿಯೂ ತೃತೀಯದ ಬೃಹಸ್ಪತಿಯಾಗದು. “ಜನ್ಮಸ್ವರೌ ವ್ಯಯೇ ಗೇಹೇ ಸ್ಥಿತೋ ಜೀವಶ್ಚ ನೇಷ್ಯತೇ ॥ ಅರಿವ್ಯಯಸುಖಸ್ಥೋಽಪಿ ಜೀವಃ ಶಾಂತ್ಯಾ ನ ದೋಷದಃ ॥ ॥ ಜನ್ಮಸ್ಥೋಽಪಿ ನ ದೋಷಾಯ ಶಾಂತ್ಯಾ ಕಾಲಾತ್ಯಯೇ ಗುರುಃ ॥ ಜನ್ಮಭ್ರಾತೃಗತೋ ಜೀವಃ ಕರೋತ್ಯೇವ ಮೃತಿಂ ವಟೋಃ ॥ ॥ ಇತಿ” ಬೃಹಸ್ಪತಿಯು ಅನಿಷ್ಟ ಸ್ಥಾನದಲ್ಲಿ ನಿತ್ತು ಕಾಲಾತ್ಯಯವಾದರೆ ಚೈತ್ರಮೀನಗಳೆರಡೂ ಕೂಡಿದ ತಿಂಗಳಲ್ಲಿ ಉಪನಯನ ಮಾಡಿದರೆ ಆ ದೋಷವಿಲ್ಲ. “ಅತ್ರನಿರ್ಣಯಸಿಂಧುಃ:- ಶುದ್ಧಿರ್ನ್ಯಪಗುರೋರ್ಯಸ್ಯ ವರ್ಷೇ ಪ್ರಾಪ್ತೇಽಷ್ಟಮೇ ಯದಿ ॥ ಮೀನಚೈತ್ರಗತೇ ಭಾನೌ ತಸ್ಯೋಪನಯನಂ ಶುಭಂ ॥ ॥ ಜನ್ಮಭಾದಷ್ಟಮೇ ಸಿಂಹೇ ನೀಚೇ ವಾ ಶತ್ರುಭೇ ಗುರೌ ॥

ಮೌಂಜೀಬಂಧಃ ಶುಭಃ ಪ್ರೋಕ್ತಃ ಚೈತ್ರಮೀನಗತೇ ರವೌ ॥ ॥ ಇತಿ" ಜನ್ಮಮಾಸ, ಜನ್ಮದಿನ, ಜನ್ಮನಕ್ಷತ್ರ ಮತ್ತು ಜ್ಯೇಷ್ಠ ಪುತ್ರನಿಗೆ ಜ್ಯೇಷ್ಠಮಾಸ ಸಹ ಯಾವುದಕ್ಕೂ ಆಗದೆಂದು ಹಿಂದೆ ವಿಳಸೆಯ ಶ್ಲೋಕದ ವ್ಯಾಖ್ಯಾನದಲ್ಲಿ ಹೇಳಿಹದು. 'ವಿಸಿತದಿವಿಚ ರಾಸಷ್ಟಮೇ' ಎಂದು ಅಷ್ಟಮದಲ್ಲಿ ಶುಕ್ರ ಹೊರತಾದವರು ಆಗದೆಂದರೂ ಬುಧಶುಕ್ರ ರಿಪ್ಪರೆ ದೋಷವಲ್ಲ. "ಜನ್ಮಾಷ್ಟಮೇ ಶುಕ್ರಬುಧೌ ಶುಭಾವನ್ಯೇ ಮೃತಿಪ್ರದಾಃ ॥ ಇತಿ" ಈ ಉಪನಯನ ಮಾಡುವಾತನು ಆಚಾರ್ಯನೆಂದೆನಿಸುವನು. ಆಚಾರ್ಯನ ಜನ್ಮಾಷ್ಟಮ ರಾಶಿಲಗ್ನವು, ಜನ್ಮಾಷ್ಟಮದಲ್ಲಿ ಚಂದ್ರನು, ಉಪನಯನದಲ್ಲಿ ವರ್ಜ್ಯವು. "ಆಚಾರ್ಯ ಸ್ಯಾಷ್ಟಮೋರಾಶಿಃ ವರ್ಜ್ಯಃ ಕಷ್ಟೋಽತ್ರ ಚಂದ್ರಮಾಃ ॥ ಇತಿ" ಇದು ಮೂಲ ಶ್ಲೋಕ ದಲ್ಲಿ ಹೇಳಲಿಲ್ಲ. ಆದರೂ ಮುಹೂರ್ತ ಮಾರ್ಗದಲ್ಲಿ 'ಆಚಾರ್ಯರಂಧ್ರಂ' ಎಂದುದ ರಿಂದಲೂ, ದೇಶಾಚಾರವಿರುವುದರಿಂದಲೂ ಈ ಉಪನಯನದಲ್ಲಿ ಮಾತ್ರ ವರ್ಜಿಸ ಬೇಕು. ಉಪನಯನದಲ್ಲಿ ಗಾಯತ್ರೀ ಉಪದೇಶ ಕೃಷ್ಣಾಜಿನೋಪವೀತಧಾರಣೆ ಸಹ ವಿಶೇಷವಾದ್ದರಿಂದ ಇಲ್ಲಿ ಒಂದೇ ಮುಹೂರ್ತವಲ್ಲಾದರೆ ಬಹು ವಿಶೇಷವಾದ ಶುಭವು. "ಉಪನೀತೌ ಪ್ರಧಾನಂ ಸ್ಯಾತ್ ಗಾಯತ್ರೀಶ್ರವಣಂ ಕಿಲ ॥ ಸಾಜಿನಸ್ಯೋಪವೀತಸ್ಯ ಪ್ರಧಾನಂ ಧಾರಣಂ ತಥಾ ॥ ॥ ಗಾಯತ್ರ್ಯಾಃ ಸಂಗ್ರಹಃ ಕಾರ್ಯಃ ತತ್ರ ತೇನೈವ ರಾಶಿನಾ ॥ ಇತಿ" ಗಾಯತ್ರೀ ಉಪದೇಶವಾದರೂ ಒಂದೇ ಲಗ್ನದಲ್ಲಿ ಆಗಬೇಕು. ಇಲ್ಲಿ ವ್ರತ ಉಪನಯನ ಗೋದಾನಗಳಲ್ಲಿ ಆದಿತ್ಯೋದಯ ಲಗ್ನವು ಗ್ರಾಹ್ಯವು. "ವ್ರತೋಪನಯನ ಗೋದಾನೇಷ್ವರ್ಕೋ ಮಧ್ಯೋ ವಿಲಗ್ನಗಃ ॥" ವಟುವಿನ ತಾಯಿಯು ಗರ್ಭಿಣಿಯಾಗಿದ್ದರೆ ಉಪನಯನವೂ ಚೌಲವೂ ಮಾಡಲಾಗದು. ಐದು ವರ್ಷ ದಾಟಿದ ಮೇಲೆ ಆದೀತು. "ಶಿಶೋರ್ಮಾತರಿ ಗರ್ಭಿಣ್ಯಾಂ ನ ಚೌಲಂ ನೋಪನಾಯನಂ ॥ ಪಂಚಮಾತ್ ಪ್ರಾಕ್‌ನಿಷೇಧೋಽಯಂ ವರ್ಷಾದೂರ್ಧ್ವಂ ನ ದುಷ್ಯತಿ ॥ ॥ ಇತಿ"

ಅನಂತರದಲ್ಲಿ ಉಪಾಕರ್ಮ ಕಾಲವನು ಹೇಳುತಾನೆ-

ಆಷಾಢ್ಯಾಂ ಪೌರ್ಣಮಾಸ್ಯಾಂ ಖಲು ಕತಿಚದುಪಾಕರ್ಮಕುರ್ವಂತ್ಯಥಾನ್ಯೇ ।
ಶ್ರಾವಣ್ಯಾಂ ಸಾಚ್ಯುತಾಯಾಮಪರ ಇಹ ತಥಾ ಭಾದ್ರಪದ್ಯಾಂ ನಭಸ್ಯೇ ॥
ತದ್ಭಸ್ತೇ ತದ್ವಿಯೋಗೇ ಸತಿ ಪುನರಪರೇ ಶ್ರಾವಣೇ ಹಸ್ತವತ್ಯಾಂ ॥
ಪಂಚಮ್ಯಾಮೋಷಧೀನಾಂ ಮುರಜಿತಿ ಪರಿಪಾಕೇಽಪಿ ತಸ್ಮಾಧಿಮಾಸೇ ॥ ೨೧ ॥

ಟೀಕಾ - ಆಷಾಢ್ಯಾಮಿತಿ - ಆಷಾಢ್ಯಾಂ = ಆಷಾಢಸಂಬಂಧವಾದಂಥ, ಪೌರ್ಣ ಮಾಸ್ಯಾಂ = ಪೌರ್ಣಮಿಯಲ್ಲಿ, ಕತಿಚಿತ್ = ಕೆಲವರಾದಂಥ ಯಜುರ್ವೇದಿಗಳು, ಉಪಾಕರ್ಮ=ಉಪಾಕರ್ಮವನು, ಕುರ್ವಂತಿಖಲು=ಮಾಡುತಾರೆ. ಅಥ=ಅನಂತರದಲ್ಲಿ, ಅನ್ಯೇ = ಕೆಲವರಾದಂಥ ಯಜುರ್ವೇದಿಗಳು ಕೌಶೀತಕ ಮತದವರು, ಶ್ರಾವಣ್ಯಾಂ ಪೌರ್ಣಮಾಸ್ಯಾಂ=ಶ್ರಾವಣಮಾಸ ಸಂಬಂಧವಾದಂಥ ಪೌರ್ಣಮಿಯಲ್ಲಿ, ಕುರ್ವಂತಿ= ಮಾಡುತಾರೆ. ಅಪರೇ=ಕೆಲವರಾದಂಥ ಸಾಮವೇದಿಗಳು, ಇಹ=ಇದ್ರ ಶ್ರಾವಣಮಾಸ ದಲ್ಲಿ, ಸಾಚ್ಯುತಾಯಾಂ=ಶ್ರವಣನಕ್ಷತ್ರ ಸಹಿತವಾದಂಥ, ಪೌರ್ಣಮಾಸ್ಯಾಂ=ಪೌರ್ಣಮಿ ಯಲ್ಲಿಯೂ, ನಭಸ್ಯೇ=ಭಾದ್ರಪದ ಮಾಸದಲ್ಲಿ, ಭಾದ್ರಪದ್ಯಾಂ=ಪೂರ್ವಾಭಾದ್ರೆ ಯುಳ್ಳಂಥ, ಪೌರ್ಣಮಾಸ್ಯಾಂ = ಪೌರ್ಣಮಿಯಲ್ಲಿಯೂ, ತದ್ವಿಯೋಗೇಸತಿ = ತತ್=

ಅವುಗಳು, ವಿಯೋಗೇಸತಿ=ಬಾರದಿರಲಾಗಿ, ತದ್ಭಸ್ತೇ=ಆ ಶ್ರಾವಣ ಭಾದ್ರಪದ ಮಾಸಗಳಲ್ಲಿ ಬಂದಂಥ, ಹಸ್ತೇ=ಹಸ್ತನಕ್ಷತ್ರದಲ್ಲಿ, ಕುರ್ವಂತಿ=ಮಾಡುತಾರೆ. ಪುನಃ=ಆಮೇಲೆ, ಅಪರೇ = ಕೆಲವರಾದಂಥ, ಆಶ್ವಲಾಯನರು, ಶ್ರಾವಣೇ = ಶ್ರಾವಣಮಾಸದಲ್ಲಿ, ಹಸ್ತವತ್ಯಾಂ=ಹಸ್ತನಕ್ಷತ್ರಉಳ್ಳಂಥ, ಪಂಚಮ್ಯಾಂ = ಪಂಚಮಿಯಲ್ಲಿ, ಓಷಧೀನಾಂ=ಸಿಂಹ ಮಾಸದ ದಿನಗಳ, ಪರಿಪಾಕೇ=ಪರಿಪಾಕದಲ್ಲಿ, ಮುರಜಿತ್ಯಪಿ=ಶ್ರವಣನಕ್ಷತ್ರದಲ್ಲಾದರೂ, ಕುರ್ವಂತಿ = ಮಾಡುತಾರೆ. ತತ್ = ಆ ಉಪಾಕರ್ಮವು, ಅಧಿಮಾಸೇ = ಅಧಿಮಾಸದಲ್ಲಿ, ನ=ನಿಷೇಧವೆಂದರ್ಥ.

ಆಷಾಢ ಮಾಸದ ಪೌರ್ಣಮಿ ದಿವಸ ಯಜುರ್ವೇದಿಗಳು ಉಪಾಕರ್ಮವನು ಮಾಡುತಾರೆ. "ಉಪಾಕೃತಿಃ ಪೌರ್ಣಮಾಸ್ಯಾಮಾಷಾಢೇ ಯಾಜುಷಾಮಿತಿ ‖ ಶ್ರಾವಣೇ ಪೌರ್ಣಮಾಸ್ಯಾಂ ತು ಮಾಸೇ ಕೌಶೀತಕಸ್ಯ ಚ ‖ ‖" ಎಂದುದರಿಂದ ಶ್ರಾವಣಮಾಸದ ಪೌರ್ಣಮೀ ದಿವಸ ಕೌಶೀತಕರು ಉಪಾಕರ್ಮವನು ಮಾಡುತಾರೆ. "ಸಾಮವೇದವಿದೋ ಮಾಸಿ ಶ್ರಾವಣೇ ಶ್ರವಣೋಡುನಿ ‖ ಪೌರ್ಣಮಾಸೀಯುತೇ ತಸ್ಯಾಂ ಸ್ಯೈಕಾಂಘ್ರ್ಯಾಂ ಭಾದ್ರಮಾಸಿ ವಾ ‖ ‖" ಎಂದುದರಿಂದ ಶ್ರಾವಣಮಾಸದಲ್ಲಿ ಶ್ರವಣನಕ್ಷತ್ರ ಕೂಡಿದ ಪೌರ್ಣಮೀ ಒಂದು ದಿನ. ಭಾದ್ರಪದ ಮಾಸದಲ್ಲಿ ಪೂರ್ವಾಭಾದ್ರೆ ಕೂಡಿದ ಪೌರ್ಣಮಿ ಒಂದು ಕಾಲ. ಈ ಎರಡು ಕಾಲದಲ್ಲೊಂದು ಕಾಲದಲ್ಲಿ ಸಾಮವೇದಿಗಳು ಉಪಾಕರ್ಮ ನಡೆಸುವರು. "ಕಾರ್ಯಾ ತಯೋರಲಾಭೇ ಸಾ ಹಸ್ತಭೇ ಮಾಸಯೋಸ್ತಯೋಃ ‖" ಎಂದುದರಿಂದ ಶ್ರಾವಣ ಮಾಸದಲ್ಲಿ ಶ್ರವಣ ಕೂಡಿದ ಪೌರ್ಣಮಿಯು ಭಾದ್ರಪದ ಮಾಸದಲ್ಲಿ ಪೂರ್ವಾಭಾದ್ರೆ ಕೂಡಿದ ಪೌರ್ಣಮಿಯು ಬಾರದೆ ಇರಲಾಗಿ ಆ ಶ್ರಾವಣ ಭಾದ್ರಪದ ಮಾಸಗಳೊಳಗೆ ಒಂದು ಮಾಸದಲ್ಲಿ ಹಸ್ತನಕ್ಷತ್ರ ಬಂದ ದಿವಸವಾದರೂ ಸಾಮವೇದಿಗಳು ಉಪಾಕರ್ಮ ಮಾಡುವರು. "ಹಸ್ತೇ ಶ್ರಾವಣಪಂಚಮ್ಯಾ ಯುಕ್ತೇ ತಾ ಮಾಶ್ವಲಾಯನಃ ‖" ಎಂದದರಿಂದ ಶ್ರಾವಣಮಾಸದಲ್ಲಿ ಹಸ್ತನಕ್ಷತ್ರವು ಪಂಚಮಿಯು ಕೂಡಿದ ದಿವಸ ಆಶ್ವಲಾಯನರು ಉಪಾಕರ್ಮ ನಡೆಸುವರು.

"ವಿಧತ್ತೇ ಶ್ರವಣರ್ಕ್ಷೇ ವಾ ಸಿಂಹರಾಶಿಗತೇ ರವೌ ‖ ಶ್ರವಣರ್ಕ್ಷಯುಗಂ ಸಿಂಹಮಾಸಿ ಚೇದ್ಗೃಹ್ಯತೇ ಪರಂ ‖ ‖" ಎಂದದರಿಂದ ಶ್ರಾವಣಮಾಸದಲ್ಲಿ ಹಸ್ತನಕ್ಷತ್ರ ದಿಂದ ಕೂಡಿದ ಪಂಚಮೀ ಬಾರದೆ ಇರುವಲ್ಲಿ ಸಿಂಹರಾಶಿಯಲ್ಲಿ ಆದಿತ್ಯನಿರುವಾಗ ಶ್ರವಣನಕ್ಷತ್ರ ಬಂದ ದಿವಸವಾದರೂ ಆಶ್ವಲಾಯನರು ಉಪಾಕರ್ಮ ಮಾಡುವರು. ಎರಡು ಸಾರಿ ಶ್ರವಣ ನಕ್ಷತ್ರ ಬರಲಾಗಿ ಎರಡನೇ ಬಂದ ಶ್ರವಣನಕ್ಷತ್ರವನ್ನೇ ಅಂಗೀಕರಿಸುವರು. ಈ ಉಪಾಕರ್ಮದಲ್ಲಿ ಸಮಸ್ತ ಮತದವರಿಗೂ ಅಧಿಮಾಸವು ವರ್ಜ್ಯ. ಸಂಸರ್ಪಾಂಹಸ್ಪತಿಗಳು ವರ್ಜ್ಯಂಗಳಲ್ಲ. "ಉದಯಸ್ಸಂಗವಸ್ಪರ್ಶೇ ಶ್ರುತೌ ಪರ್ವಣಿ ಚಾರ್ಕಭೇ ‖ ಕುರ್ಯಾನ್ನಭಸ್ಯುಪಾಕರ್ಮ ‖" ಎಂದು ಶ್ರುತಿಮುಕ್ತಾವಳಿಯಲ್ಲಿ ಹೇಳಿರುವುದರಿಂದ ಹಿಂದೆ ಹೇಳಿದುದು ಸಮಸ್ತವು ಉದಯಾದಿಯಾಗಿ ಸಂಗವ ಕಾಲಕ್ಕೆ ಸ್ಪರ್ಶಿಸಿ ಇರಬೇಕು. ಆಯಾಯ ಮಾಸದವರಿಗೆ ಉಪಾಕರ್ಮಕ್ಕೆ ಹೇಳಿದ ದಿವಸ ಸಂಕ್ರಾಂತಿಯಾಗಲೀ ಗ್ರಹಣವಾಗಲೀ ಬಂದರೆ ಎರಡನೆಯ ಮಾಸದಲ್ಲಿ ಮಾಡಿಕೊಳಬೇಕು. ಎರಡು

ಮಾಸಕ್ಕೂ ದೋಷ ಬಂದರೆ ಪ್ರಾಯಶ್ಚಿತ್ತ ಮಾಡಿಕೊಂಡು ಉಪಾಕರ್ಮ ಮಾಡಿಕೊಳ್ಳಬೇಕು. ಗುರುಶುಕ್ರರ ಮೌಢ್ಯವು ವರ್ಜ್ಯವಲ್ಲ. "ಅತ್ರಸ್ಮೃತಿಮುಕ್ತಾವಲಿ:- ಸಂಕ್ರಾಂತಿ ಗ್ರಹಣಂ ವಾಽಪಿ ಯದಿ ಪರ್ವಣಿ ಜಾಯತೇ ॥ ಪರ್ವಣ್ಯುತ್ತರೇ ಮಾಸೇ ಸ್ಯಾದುಪಾಕರಣಂ ಹಿ ತತ್ ॥ ॥ ಮಾಸ ದ್ವಯೇಽಪಿ ದೋಷಶ್ಚೇತ್ ಶ್ರಾವಣೇ ಮಾಸಿ ತದ್ಭವೇತ್ ॥ ನಿತ್ಯತ್ವಾತ್ ಕರ್ಮ ನ ತ್ಯಾಜ್ಯಂ ಗುರ್ವಸ್ತಾದಿ ನ ದೋಷವತ್ ॥ ॥ ಸೋಮೋ ಧೇನುರಿತಿ ದ್ವಾಭ್ಯಾಂ ಹುತ್ವೈವೋಪಾಕೃತಿಂ ಚರೇತ್ ॥ ಪ್ರಥಮೋಪಾಕೃತಿಂ ವಾಽಪಿ ಕುಳೀರಸ್ಥೇ ದಿವಾಕರೇ ॥ ॥ ಸರ್ವಥೈವ ನ ಕರ್ತವ್ಯೇತ್ಯೇವಮಾಹ ಬೃಹಸ್ಪತಿಃ ॥ ಗುರುಭಾರ್ಗವಯೋರ್ಮೌಢ್ಯೇ ಮಾಘಮಾಸೇ ತಥೈವ ಚ ॥ ॥ ಪ್ರಥಮೋಪಾಕೃತಿರ್ನ ಸ್ಯಾತ್ ಕುರ್ಯಾಚ್ಚೇತ್ತ್ವವಿನಶ್ಯತಿ ॥ ವೃದ್ಧಮನು:- ಅತ್ರಾರ್ಧರಾತ್ರಾದರ್ವಾಕ್ಚೇದ್ಗ್ರಹಃ ಸಂಕ್ರಮಣೋಽಪಿ ವಾ ॥ ನೋಪಾಕರ್ಮ ತದಾ ಕುರ್ಯಾತ್ ಶ್ರಾವಣ್ಯಾಂ ಶ್ರವಣೇಽಪಿ ವಾ ॥ ॥ ಕಾತ್ಯಾಯನಶ್ಚ- ಅರ್ಧರಾತ್ರಾದಧಸ್ತಾಚ್ಚೇತ್ ಸಂಕ್ರಾಂತಿರ್ಗ್ರಹಣಂ ತಥಾ ॥ ಉಪಾಕರ್ಮ ನ ಕುರ್ವೀತ ಪರತಶ್ಚೇನ್ನ ದೋಷಭಾಕ್ ॥ ॥ ಇತಿ"

ಅನಂತರದಲ್ಲಿ ಎರಡು ಶ್ಲೋಕಗಳಿಂದ ವೇದಾರಂಭ ಕಾಲವನ್ನು ಹೇಳುತ್ತಾನೆ-

ಉಪಾಕೃತಿರ್ಯದಹ್ನಿ ತದ್ದಿನತ್ರಯಾದನಂತರಂ ।
ಶುಭೇ ಮುಹೂರ್ತ ಆಗತೇ ಶ್ರುತೇರುಪಕ್ರಮಃ ಸ್ಮೃತಃ ॥
ಜ್ಯೇಷ್ಠಾಯಾಂ ತಪನೋದಯೇಽಪಿ ಸುಜನೈರ್ವೇದಸ್ಸಮಾರಭ್ಯತೇ ।
ಪಾದೇಽಂತ್ಯೇ ಪರಮಾಪದಿ ಪ್ರತಿಪದಃ ಶಾಸ್ತ್ರತ್ರಯೀಪಾಠಯೋಃ ॥
ಚಾತುರ್ಮಾಸ್ಯದಿನಾತ್ತ್ರಯಶ್ಚ ದಿವಸಾ ವರ್ಜ್ಯಾಸ್ಸದೈವಾಽಸಿತೇ ।॥
ಮಾಘೇ ಮಾಸಿ ಚ ಸಪ್ತಮೀ ನವಮೀ ಭಾದ್ರೇ ತ್ರಯೋದಶ್ಯಪಿ ॥ ೨೨ ॥

ಟೀಕಾ - ಉಪಾಕೃತಿರಿತಿ - ಯದಹ್ನಿ = ಯಾವ ದಿವಸದಲ್ಲಿ, ಉಪಾಕೃತಿಃ= ಉಪಾಕರ್ಮವು, ತದ್ದಿನತ್ರಯಾತ್=ಆ ದಿನತ್ರಯ ದೆಸೆಯಿಂದ, ಅನಂತರಂ=ಆಮೇಲೆ, ಶುಭೇ = ಶುಭವಾದಂಥ, ಮುಹೂರ್ತೇ = ಮುಹೂರ್ತವು, ಆಗತೇಸತಿ = ಬರಲಾಗಿ, ಶ್ರುತೇಃ=ವೇದದ, ಉಪಕ್ರಮಃ=ಆರಂಭವು. ಸ್ಮೃತಃ=ಹೇಳಲ್ಪಟ್ಟಿತೆಂದರ್ಥ. ಯಾವ ದಿವಸ ಉಪಾಕರ್ಮವಾಗುತದೆಯೋ ಆ ದಿನದಾರಭ್ಯ ಮೂರು ದಿವಸವು ಅನಾಧ್ಯಾಯವು. ಆದ್ದರಿಂದ ಆ ಮೂರು ದಿನದ್ದೆಸೆಯಿಂದ ಮೇಲೆ ಶುಭಮುಹೂರ್ತದಲ್ಲಿ ವೇದಾರಂಭವನ್ನು ಮಾಡಬೇಕು. ಆ ಮುಹೂರ್ತವಾವುದೆಂದರೆ- ಜ್ಯೇಷ್ಠಾಯಾಮಿತಿ- ಜ್ಯೇಷ್ಠಾಯಾಂ= ಜ್ಯೇಷ್ಠಾನಕ್ಷತ್ರದಲ್ಲಿ ತಪನೋದಯೇಽಪಿ = ಸೂರ್ಯೋದಯ ಲಗ್ನದಲ್ಲಿಯೂ, ಸುಜನೈಃ = ವಿದ್ವಾಂಸರಿಂದ, ವೇದಃ = ವೇದವು, ಸಮಾರಭ್ಯತೇ = ಆರಂಭಿಸಲ್ಪಡುತ್ತದೆ. ಶಾಸ್ತ್ರತ್ರಯೀಪಾಠಯೋಃ = ಶಾಸ್ತ್ರವೇದ ಪಾಠಗಳ, ಪ್ರಾರಂಭಃ = ಪ್ರಾರಂಭವು, ಪರಮಾಪದಿ = ಅತ್ಯಾಪತ್ಕಾಲದಲ್ಲಿ. ಪ್ರತಿಪದಃ=ಪಾಡ್ಯದ. ಪಾದೇಽಂತ್ಯೇ= ನಾಲ್ಕನೆಯ ಪಾದದಲ್ಲಿ, ಆರಭ್ಯತೇ = ಆರಂಭಿಸಲ್ಪಡುತ್ತದೆ. ಚಾತುರ್ಮಾಸ್ಯದಿನಾತ್= ಚಾತುರ್ಮಾಸ್ಯೇಷ್ಟಿಯ ದಿನದ್ದೆಸೆಯಿಂದ, ತ್ರಯಃ = ಮೂರು, ದಿವಸಾಃ = ದಿವಸಗಳು, ಮಾಘೇಮಾಸಿ=ಮಾಘಮಾಸದಲ್ಲಿ, ಅಸಿತೇ= ಕೃಷ್ಣಪಕ್ಷದಲ್ಲಿ, ನವಮೀ=ನವಮೀ

ಸಹಿತವಾದಂಥ, ಸಪ್ತಮೀ = ಸಪ್ತಮಿಯು, ಭಾದ್ರೇ = ಭಾದ್ರಪದ ಮಾಸದಲ್ಲಿ, ತ್ರಯೋದಶ್ಯಪಿ = ತ್ರಯೋದಶಿಯೂ, ವರ್ಜ್ಯಾಃ = ವರ್ಜ್ಯಂಗಳು. "ವೇದಾರಂಭೋಽಥ ಮಾಘಾರ್ಧಾತ್ಪೂರ್ವಮೇವಾಕ್ಷರೋದಿತೇ ॥ ಕಾಲೇ ಜ್ಯೇಷ್ಠಾ ಶುಭಾ ಪಕ್ಷತ್ಯಂತ್ಯ ಪಾದೋಽಪಿ ಮಧ್ಯಮಃ ॥ ॥" ಎಂಬದ್ದರಿಂದ ಉಪಾಕರ್ಮ ಕಳಿದ ಬಳಿಕ ಮಾಘ ಮಾಸದ ಅರ್ಧದ್ದೆಸೆಯಿಂದ ಮೊದಲು ವೇದಾರಂಭ ಮಾಡುವುದು ಪ್ರಶಸ್ತವು. ಈ ವೇದಾರಂಭದಲ್ಲಿಯೂ ಶಾಸ್ತ್ರಾದಿಗಳ ಆರಂಭಿಸುವುದರಲ್ಲಿಯೂ ಹಿಂದೆ ಅಕ್ಷರಾರಂಭಕ್ಕೆ ಹೇಳಿದ ಹದಿನೇಳು ನಕ್ಷತ್ರಗಳು ಮತ್ತು ಜ್ಯೇಷ್ಠಾ ನಕ್ಷತ್ರ ಈ ಹದಿನೆಂಟು ನಕ್ಷತ್ರಗಳು ಶುಭವೇ ಸರಿ. ಪಾಪೋದಯ ಲಗ್ನಗಳಲ್ಲಿ ಸೂರ್ಯೋದಯ ಲಗ್ನವು ಪ್ರಶಸ್ತವು. "ಆಷಾಢೇ ಕಾರ್ತಿಕೇ ಚೈವ ಫಾಲ್ಗುನೇಽಪಿ ತಥೈವ ಚ ॥ ಚಾತುರ್ಮಾಸ್ಯೇಷ್ಟಯಃ ಕಾರ್ಯಾಃ ರಾಕಾಯಾಂ ನಾಧಿಮಾಸಕೇ ॥ ॥" ಎಂಬದರಿಂದ ಆಷಾಢ ಕಾರ್ತಿಕ ಫಾಲ್ಗುನ ಮಾಸ ಈ ಮೂರು ಮಾಸಗಳ ಪೌರ್ಣಮಿಯಲ್ಲಿ ಚಾತುರ್ಮಾಸ್ಯೇಷ್ಟಿಯು ಆಗಬೇಕು. ಆ ಚಾತುರ್ಮಾಸ್ಯೇಷ್ಟಿಯಾದ ದಿವಸದಾರಭ್ಯ ಮೂರು ದಿವಸ ಅನಾಧ್ಯಾಯವಾದದ್ದರಿಂದ ವೇದಾರಂಭ ಮಾಡಬಾರದು. ಮಾಘಮಾಸದ ಕೃಷ್ಣಪಕ್ಷದ ಸಪ್ತಮಿಯು ನವಮಿಯು, ಭಾದ್ರಪದ ಮಾಸದ ಕೃಷ್ಣಪಕ್ಷದ ತ್ರಯೋದಶಿಯು ಇವು ಅಷ್ಟಕಾ ದಿವಸಗಳಾದ್ದರಿಂದ ಅದು ಅನಾಧ್ಯಾಯವಾದ್ದರಿಂದ ಅಲ್ಲಿ ವೇದಶಾಸ್ತ್ರಾದಿಗಳ ಆರಂಭವು ವರ್ಜ್ಯವಾಗಿಹುದು. ಪಾಡ್ಯದ ನಾಲ್ಕನೆಯ ಪಾದವು ವೇದಶಾಸ್ತ್ರಗಳ ಆರಂಭಕ್ಕೆ ಮಧ್ಯಮ ಪ್ರಕಾರ ವಿಪತ್ಕಾಲದಲ್ಲಿ ಗ್ರಹಿಸಬಹುದು.

ಅನಂತರದಲ್ಲಿ ವ್ರತಾದಿಗಳಿಗೆ ಕಾಲವನು ಹೇಳುತ್ತಾನೆ-

ಮಧ್ಯಂ ಭಾನುದಿನೇಂದ್ವಿನೋದಯಮನಧ್ಯಾಯೋ ವಿವರ್ಜ್ಯೋ ವ್ರತೇ ।
ಗೋದಾನೇಽಪ್ಯುಪನೀತಿಭಂ ಚ ವಿಹಿತಂ ವರ್ಷೇ ತ್ವಿದಂ ಷೋಡಶೇ ॥
ಅಸ್ಯಚ್ಚೌಲವದಸ್ಯ ಶೇಷಕರಣೇ ಕಾಲೋಽಪಿ ನಾಲೋಚ್ಯತೇ ।॥
ಸ್ನಾನೇಽಪ್ಯೇಷ ವಿಧಿರ್ನ ಸಪ್ತದಶಕಃ ಕೌಶೀತಕ್ಯೈರ್ವತ್ಸರಃ ॥ ೨೩ ॥

ಟೀಕಾ - ಮಧ್ಯಮಿತಿ - ವ್ರತೇ = ವ್ರತದಲ್ಲಿಯೂ, ಗೋದಾನೇ = ಗೋದಾನಕ್ರಿಯೆಯಲ್ಲಿಯೂ, ಭಾನುದಿನೇಂದ್ವಿನೋದಯಂ = ಭಾನುದಿನ = ಆದಿತ್ಯವಾರ, ಇಂದ್ವಿನೋದಯಂ = ಚಂದ್ರಸೂರ್ಯರ ಉದಯವು, ಮಧ್ಯಂ = ಮಧ್ಯಮವು. ಅನಧ್ಯಾಯಃ= ಅನಾಧ್ಯಾಯವು, ಉಪನೀತಿಭಂ ಚ=ಉಪನಯನವಾದ ನಕ್ಷತ್ರವು, ವಿವರ್ಜ್ಯಃ=ವರ್ಜ್ಯವು. ಇದಂ=ಈ ಗೋದಾನವು, ಷೋಡಶೇ ವರ್ಷೇ=ಹದಿನಾರನೆಯ ವರ್ಷದಲ್ಲಿ, ವಿಹಿತಂ= ಯೋಗ್ಯವು. ಅಸ್ಯ=ಈ ಗೋದಾನಕ್ಕೆ, ಅಸ್ಯತ್=ಮೇಲಾದುದು, ಚೌಲವತ್=ಚೌಲಮೋಪಾದಿಯು. ಶೇಷಕರಣೇ=ಮೇಲಾದುದರಲ್ಲಿ, ಕಾಲೋಽಪಿ=ಕಾಲವೂ, ನಾಲೋಚ್ಯತೇ= ಆಲೋಚಿಸಲ್ಪಡುವುದಿಲ್ಲ. ಸ್ನಾನೇಽಪಿ=ಸ್ನಾನದಲ್ಲಿಯೂ, ಏಷವಿಧಿಃ=ಇದೇ ವಿಧಿಯು. ಕೌಶೀತಕ್ಯೈಃ=ಕೌಶೀತಕರಿಂದ, ಸಪ್ತದಶಕಃ=ಹದಿನೇಳನೆಯದಾದಂಥ, ವತ್ಸರಃ=ವರ್ಷವು, ನ=ನಿಷೇಧವು ಎಂಬರ್ಥ. ವ್ರತದಲ್ಲಿಯೂ ಗೋದಾನದಲ್ಲಿಯೂ ಆದಿತ್ಯವಾರವು ಚಂದ್ರಾದಿತ್ಯರ ಉದಯವು ಮಧ್ಯಮ ಪ್ರಕಾರ ಗ್ರಹಿಸಬಹುದು. ತನಗೆ ಉಪನಯನವಾದ

ನಕ್ಷತ್ರವು ಅನಾಧ್ಯಾಯವು ವರ್ಜ್ಯವು. ಈ ಗೋದಾನವು ಹದಿನಾರನೆಯ ವರ್ಷದಲ್ಲಿ ಆಗಬೇಕು. ಮೇಲಾದ ಕ್ರಿಯೆಗಳಲ್ಲಿ ವರ್ಷನಿಯಮವಿಲ್ಲ. ಇವುಗಳಿಗೆ ಮುಹೂರ್ತವು ಚೌಲಕ್ಕೆ ಹೇಳಿದೋಪಾದಿಯೇ ಆಗಬೇಕು. ಸಮಾವರ್ತನೆಗೂ ಇಲ್ಲಿ ಹೇಳಿದೋಪಾದಿಯೇ ನೋಡಿಕೊಳಬೇಕು. ಕೌಶೀತಕರು ಈ ಸಮಾವರ್ತನೆಯನು ಹದಿನೇಳನೆಯ ವರ್ಷದಲ್ಲಿ ವರ್ಜಿಸುವರು.

ಅನಂತರದಲ್ಲಿ ಸಮಾವರ್ತನ ಕಾಲವನು ಹೇಳುತಾನೆ-

ಸ್ನಾನೇ ಸಾಮವಿದಾಂ ವಿಧಿದ್ವಿದಿನಕೃನ್ಮಿತ್ರಾಚ್ಯುತಾರ್ಯಾಃ ಶುಭಾಃ ।
ಶಸ್ತಂ ಮಿತ್ರಭಮಾಶ್ವಲಾಯನ ಇನಕ್ಷೇತ್ರಂತು ಯಾಜುರ್ವಿದೇ ॥
ಕಾಲೋಽಜಾರ್ಯಭಗತ್ರಿಶೂರ್ಪವದಹರ್ಮಧ್ಯತ್ರಿಭಾಗಃ ಪರಂ ।॥
ಷಷ್ಠ್ಯಾಃ ಪ್ರಾಗಸಿತಾಽ ನಯೋಸ್ತಿಥಿರನಧ್ಯಾಯೋಽಪಿ ನ ತ್ಯಜ್ಯತೇ ॥ ૩೪ ॥

ಟೀಕಾ-ಸ್ನಾನೇತಿ-ಸ್ನಾನೇ=ಸಮಾವರ್ತನೆಯಲ್ಲಿ, ಸಾಮವಿದ್ಹಾಂ=ಸಾಮವೇದಿಗಳಿಗೆ, ವಿಧಿದ್ವಿದಿನಕೃನ್ಮಿತ್ರಾಚ್ಯುತಾರ್ಯಾಃ = ವಿಧಿದ್ವಿ = ರೋಹಿಣಿ ಮೃಗಶಿರೆ, ದಿನಕೃತ್=ಹಸ್ತ, ಮಿತ್ರ = ಅನೂರಾಧೆ, ಅಚ್ಯುತ = ಶ್ರವಣ, ಆರ್ಯಾಃ = ಪುಷ್ಯ, ಎಂದಿವುಗಳು, ಶುಭಾಃ= ಶುಭಂಗಳು. ಆಶ್ವಲಾಯನೇ=ಆಶ್ವಲಾಯನರಲ್ಲಿ, ಮಿತ್ರಭಂ=ಅನೂರಾಧೆ ನಕ್ಷತ್ರವು, ಶಸ್ತಂ = ಪ್ರಶಸ್ತವು. ಯಾಜುರ್ವಿದೇ = ಯಜುರ್ವೇದಿಗಳಲ್ಲಿ, ಇನಕ್ಷೇತ್ರಂತು=ಸಿಂಹ ರಾಶಿಯು, ಅಜಾರ್ಯಭಗತ್ರಿಶೂರ್ಪವತ್=ಅಜ=ರೋಹಿಣಿ, ಆರ್ಯ=ಪುಷ್ಯ, ಭಗತ್ರಿ= ಉತ್ತರ ಹಸ್ತ ಚಿತ್ರೆ, ಶೂರ್ಪವತ್=ವಿಶಾಖೆ ಎಂದಿವುಗಳು, ಅಹರ್ಮಧ್ಯತ್ರಿಭಾಗಃ= ಅಹಃ=ಹಗಲಿನ, ಮಧ್ಯತ್ರಿಭಾಗಃ=ಮೂರು ಭಾಗವಲ್ಲಿ ಮಧ್ಯದ ಭಾಗವು, ಪರಂ= ಶ್ರೇಷ್ಠವು. ಅನಯೋಃ=ಈ ಆಶ್ವಲಾಯನ ಯಜುರ್ವೇದಿಗಳಿಗೆ, ಅಸಿತಾ=ಕೃಷ್ಣಪಕ್ಷ ವಾದಂಥ, ತಿಥಿಃ = ತಿಥಿಯು, ಷಷ್ಠ್ಯಾಃಪ್ರಾಕ್ = ಷಷ್ಠೀದೆಸೆಯಿಂದ ಮೊದಲಿನದು, ಶಸ್ತಾ=ಪ್ರಶಸ್ತವು. ಅನಧ್ಯಾಯೋಽಪಿ=ಅನಾಧ್ಯಾಯವು ಕೂಡಾ, ನ ತ್ಯಜ್ಯತೇ=ವರ್ಜಿಸಲ್ಪಡುವುದಿಲ್ಲ ಎಂದರ್ಥ. ಸಮಾವರ್ತನೆಯಲ್ಲಿ ಸಾಮವೇದಿಗಳಿಗೆ ರೋಹಿಣಿ ಮೃಗಶಿರೆ ಹಸ್ತ ಅನೂರಾಧೆ ಶ್ರವಣ ಪುಷ್ಯ ಈ ಆರು ನಕ್ಷತ್ರಗಳಾಗಬೇಕು. ಆಶ್ವಲಾಯನರಿಗೆ ಅನೂರಾಧಾ ನಕ್ಷತ್ರವೂ ಚೌಲಕ್ಕೆ ವಿಧಿಸಿದ ನಕ್ಷತ್ರಗಳಾದೀತು. ಯಜುರ್ವೇದಿಗಳಿಗೆ ಸಿಂಹ ಲಗ್ನವಾದೀತು. ಈ ಸಮಾವರ್ತನೆಗೂ ಚೌಲದೋಪಾದಿಯ ಮುಹೂರ್ತವಾಗಬೇಕು ಎಂದು ಹಿಂದಣ ಶ್ಲೋಕದಲ್ಲಿಯೇ ಹೇಳಿರುತ್ತದೆಯಷ್ಟೆ? ಚೌಲಕ್ಕೆ ವೃಶ್ಚಿಕ ಕುಂಭ ಸಿಂಹ ಲಗ್ನಗಳು ಆಗದೆಂತ ಹೇಳಿಹದು. ಅದರಲ್ಲಿ ಸಿಂಹಲಗ್ನವು ಯಜುರ್ವೇದಿಗಳಿಗೆ ಆದೀತು. ರೋಹಿಣಿ ಪುಷ್ಯ ಉತ್ತರೆ ಹಸ್ತ ಚಿತ್ರೆ ವಿಶಾಖೆ ಈ ಇಂತೀ ಆರು ನಕ್ಷತ್ರಗಳು ಯಜುರ್ವೇದಿಗಳಿಗೆ ಶುಭವು. ಇವರಿಗೆ ದಿವಸವನ್ನು ಮೂರುಭಾಗ ಮಾಡಿ ಅದರಲ್ಲಿ ಮಧ್ಯದ ಭಾಗವಾಗಬೇಕು. ಈ ಆಶ್ವಲಾಯನರಿಗೂ ಯಜುರ್ವೇದಿಗಳಿಗೂ ಕೃಷ್ಣಪಕ್ಷದ ಷಷ್ಠೀ ದೆಸೆಯಿಂದ ಮೊದಲೇ ಇರುವ ತಿಥಿಗಳೆಲ್ಲ ಪ್ರಶಸ್ತವೇ ಸರಿ. ಈ ಸಮಾವರ್ತನೆಯಲ್ಲಿ ಅನಾಧ್ಯಾಯವು ವರ್ಜ್ಯವಲ್ಲ. ಮೇಲಾದುದು ಸಮಸ್ತವೂ ಚೌಲಕ್ಕೆ ಹೇಳಿದ ಪ್ರಕಾರವೇ ಆಗಬೇಕು.

ಅನಂತರದಲ್ಲಿ ಅಗ್ನ್ಯಾಧಾನ ಕಾಲವನು ಹೇಳುತಾನೆ-

ಆದಧೀತ ವಸಂತೇಽಗ್ನಿಂ ವರ್ಧಮಾನೇ ನಿಶಾಕರೇ ॥
ಕೃತ್ತಿಕಾರೋಹಿಣೀಚಿತ್ರಾಮಾತೃಭಾಗ್ಯಯಮೋಡುಷು ॥ ೨೫ ॥

ಟೀಕಾ-ಆದಧೀತೇತಿ-ವಸಂತೇ = ವಸಂತ ಕಾಲದಲ್ಲಿ, ವರ್ಧಮಾನೇ = ವರ್ಧಮಾನ ನಾದಂಥ, ನಿಶಾಕರೇ=ಚಂದ್ರನಲ್ಲಿ, ಕೃತ್ತಿಕಾ ರೋಹಿಣೀ ಚಿತ್ರಾ ಮಾತೃಭಾಗ್ಯಯ ಮೋಡುಷು=ಕೃತ್ತಿಕೆ ರೋಹಿಣಿ ಚಿತ್ರೆ ಪುನರ್ವಸು ಉತ್ತರೆ ಭರಣಿಗಳಲ್ಲಿ, ಅಗ್ನಿಂ=ಅಗ್ನಿ ಯನ್ನು, ಆದಧೀತ=ಆಧಾನ ಮಾಡುವರು ಎಂದರ್ಥ. 'ವರ್ಧಮಾನೇನಿಶಾಕರೇ' ಎಂದರೆ ಚಂದ್ರನ ವರ್ಧಿಸುವ ಕಾಲವಾಗಿಹದು. ಅದು ಶುಕ್ಲಪಕ್ಷವೆಂದರ್ಥ. ವಸಂತ ಋತುವಿನಲ್ಲಿ ಶುಕ್ಲಪಕ್ಷದಲ್ಲಿ ಕೃತ್ತಿಕಾ ರೋಹಿಣೀ ಚಿತ್ರಾ ಪುನರ್ವಸು ಉತ್ತರೆ ಭರಣಿ ಈ ನಕ್ಷತ್ರಗಳಲ್ಲಿ ಅಗ್ನ್ಯಾಧಾನವನು ಮಾಡಬೇಕು.

ಇತಿ ಮುಹೂರ್ತಪದವ್ಯಾಂ ದ್ವಿತೀಯಃ ಪರಿಚ್ಛೇದಃ

ಈ ಪ್ರಕಾರ ಎರಡನೆಯ ಪರಿಚ್ಛೇದದಲ್ಲಿ ವಿವಾಹಾದಿ ಅಗ್ನ್ಯಾಧಾನಾಂತ ಕಾಲವ ಹೇಳಿ ಇನ್ನು ಮೂರನೆಯ ಪರಿಚ್ಛೇದದಲ್ಲಿ ಪಟ್ಟಾಭಿಷೇಕಾದಿ ಧಾನ್ಯವೃದ್ಧಿ ಪರ್ಯಂತವಹ ಕಾಲಗಳನ್ನು ಹೇಳುತಾನೆ-

ದಸ್ರೇಂದ್ರಾಂತ್ಯವಿರಿಂಚಿಮಾತೃದಿನಕೃಚ್ಚಂದ್ರಾರ್ಯಮಿತ್ರೋತ್ತರಾ ।
ಸ್ತಾರಾಃ ಕರ್ಕಿವೃಷಾಳಿಸಿಂಹಮಿಥುನಾ ರಾಜಾಭಿಷೇಕೇ ಶುಭಾಃ ॥
ದೋಷಾಂತ್ಯಾರ್ಕಗುರುಜ್ಞಶುಕ್ರದಿವಸಾಃ ಶುದ್ಧಿಶ್ಚ ಲಾಭೇ ನ ಧೀ ।।।
ಧರ್ಮಾಂತ್ಯಾರ್ಥಮೃತೌ ಖರಾ ಘಟವಧೂಕರ್ಕಿಸ್ಥಿತೋಽರ್ಕಸ್ತಥಾ ॥ ೨೬ ॥

ಟೀಕಾ - ದಸ್ರೇತಿ = ದಸ್ರೇಂದ್ರಾಂತ್ಯವಿರಿಂಚಿಮಾತೃದಿನಕೃಚ್ಚಂದ್ರಾರ್ಯಮಿತ್ರೋತ್ತರಾಃ=ದಸ್ರ=ಅಶ್ವಿನಿ, ಇಂದ್ರ=ಜ್ಯೇಷ್ಠೆ, ಅಂತ್ಯ=ರೇವತಿ, ವಿರಿಂಚಿ=ರೋಹಿಣಿ, ಮಾತೃ= ಪುನರ್ವಸು, ದಿನಕೃತ್=ಹಸ್ತ, ಚಂದ್ರ=ಮೃಗಶಿರೆ, ಆರ್ಯ=ಪುಷ್ಯ, ಮಿತ್ರ=ಅನೂರಾಧೆ, ಉತ್ತರಾಃ=ಉತ್ತರಾತ್ರಯವಾದ ಉತ್ತರೆ ಉತ್ತರಾಷಾಢ ಉತ್ತರಾಭಾದ್ರೆ ಎಂದು ಇಂಥ. ತಾರಾಃ=ನಕ್ಷತ್ರಗಳು, ಕರ್ಕಿವೃಷಾಲಿಸಿಂಹಮಿಥುನಾಃ=ಕರ್ಕಿ=ಕರ್ಕಟಕ, ವೃಷ=ವೃಷಭ, ಅಳಿ=ವೃಶ್ಚಿಕ, ಸಿಂಹ=ಸಿಂಹ, ಮಿಥುನಾಃ=ಮಿಥುನ ಎಂದಿವುಗಳು, ದೋಷಾಂತ್ಯಾರ್ಕ ಗುರುಜ್ಞಶುಕ್ರದಿವಸಾಃ=ದೋಷ=ರಾತ್ರಿಯ, ಅಂತ್ಯ=ಮೂರನೆಯ ಭಾಗ, ಅರ್ಕ=ಆದಿತ್ಯ, ಗುರು=ಬೃಹಸ್ಪತಿ, ಜ್ಞ=ಬುಧ, ಶುಕ್ರ=ಶುಕ್ರ ಎಂದಿವರುಗಳ, ದಿವಸಾಃ=ವಾರಗಳು. ಲಾಭೇ=ಏಕಾದಶದಲ್ಲಿ, ಶುದ್ಧಿಶ್ಚ=ಶುದ್ಧಿಯೂ, ರಾಜಾಭಿಷೇಕೇ=ರಾಜಾ=ಅರಸುಗಳ, ಅಭಿಷೇಕೇ=ಪಟ್ಟಾಭಿಷೇಕದಲ್ಲಿ, ಶುಭಾಃ=ಶುಭಂಗಳು, ಧೀಧರ್ಮಾಂತ್ಯಾರ್ಥಮೃತೌ= ಧೀ=ಪಂಚಮ, ಧರ್ಮ=ನವಮ, ಅಂತ್ಯ=ದ್ವಾದಶ, ಅರ್ಥ=ದ್ವಿತೀಯ, ಮೃತೌ= ಅಷ್ಟಮ ಎಂದಿದರಲ್ಲಿ, ಖರಾಃ=ಪಾಪಗ್ರಹರು, ತಥಾ=ಹಾಗೆ, ಘಟವಧೂಕರ್ಕಿಸ್ಥಿತಃ= ಘಟ=ಕುಂಭ, ವಧೂ=ಕನ್ಯಾ, ಕರ್ಕಿ=ಕರ್ಕಟಕ ಎಂದಿವುಗಳಲ್ಲಿ, ಸ್ಥಿತಃ=ಇರುವಂಥ, ಅರ್ಕಃ=ಆದಿತ್ಯನು, ನ=ನಿಷೇಧವು ಎಂದರ್ಥ. ಅರಸುಗಳಿಗೆ ಪಟ್ಟಾಭಿಷೇಕ ಮಾಡುವಲ್ಲಿ

ಅಶ್ವಿನಿ ಜ್ಯೇಷ್ಠೆ ರೇವತಿ ರೋಹಿಣಿ ಪುನರ್ವಸು ಹಸ್ತ ಮೃಗಶಿರೆ ಪುಷ್ಯ ಅನೂರಾಧೆ, ಉತ್ತರೆ ಉತ್ತರಾಷಾಢ ಉತ್ತರಾಭಾದ್ರೆ ಇಂತೀ ಹನ್ನೆರಡು ನಕ್ಷತ್ರ, ಕರ್ಕಟಕ ವೃಷಭ ವೃಶ್ಚಿಕ ಸಿಂಹ ಮಿಥುನ ಇಂತೀ ಐದು ಲಗ್ನಗಳು. ರಾತ್ರಿಯನು ಮೂರು ವಿಭಾಗ ಮಾಡಿ ಅವರಲ್ಲಿ ಅಂತ್ಯಭಾಗ ರಾತ್ರಿಯು, ಆದಿತ್ಯ ಬುಧ ಗುರು ಶುಕ್ರವಾರಗಳು ಸಹ ಪ್ರಶಸ್ತಂಗಳು. ಏಕಾದಶದಲ್ಲಿ ಯಾವ ಗ್ರಹರೂ ಇರಲಾಗದು. ಪಂಚಮ ನವಮ ದ್ವಾದಶ ದ್ವಿತೀಯ ಅಷ್ಟಮ ಇಷ್ಟರೊಳಗೊಂದರಲ್ಲಿಯೂ ಪಾಪಗ್ರಹರಿರಲಾಗದು. ಕುಂಭ ಕನ್ನಿ ಕರ್ಕಟಕ ಈ ಮೂರು ರಾಶಿಗಳಲ್ಲಿ ಸೂರ್ಯನಿರುವಾಗ ಪಟ್ಟಾಭಿಷೇಕವ ಮಾಡಲಾಗದು. ಅನ್ನಪ್ರಾಶನೆಗೆ ವರ್ಜ್ಯಂಗಳಾಗಿರುವ ನಕ್ಷತ್ರಂಗಳಲ್ಲಿ ಜ್ಯೇಷ್ಠಾನಕ್ಷತ್ರ ಈ ರಾಜಾಭಿಷೇಕದಲ್ಲಿ ಗ್ರಹಿಸಬಹುದು. ಅನ್ನಪ್ರಾಶನೆಗೆ ವಿಧಿಸಿದ ಹದಿನಾರು ನಕ್ಷತ್ರಗಳಲ್ಲಿ ಚಿತ್ರೆ ಸ್ವಾತಿ ಶ್ರವಣ ಧನಿಷ್ಠೆ ಶತಭಿಷೆ ಇಂತೀ ಐದು ನಕ್ಷತ್ರಗಳಾಗದು. ಇಲ್ಲಿ ಸ್ಥಿರಲಗ್ನಗಳೇ ಆಗಬೇಕು. ಅವರಲ್ಲಿ ಕುಂಭ ಲಗ್ನ ಮಾತ್ರ ವರ್ಜ್ಯವು. ಚರಲಗ್ನಗಳಲ್ಲಿ ಕರ್ಕಟಕ ಲಗ್ನವಾದೀತು. ಉಭಯ ಲಗ್ನದಲ್ಲಿ ಮಿಥುನ ಲಗ್ನವಾದೀತು. ಮಿಕ್ಕಾದ ಲಗ್ನಗಳೆಲ್ಲ ವರ್ಜ್ಯಂಗಳು. ವಿವಾಹದಲ್ಲಿ ಸಪ್ತಮ, ಉಪನಯನದಲ್ಲಿ ಅಷ್ಟಮ, ಚೌಲದಲ್ಲಿ ನವಮ, ಅನ್ನಪ್ರಾಶನದಲ್ಲಿ ದಶಮ, ಪಟ್ಟಾಭಿಷೇಕದಲ್ಲಿ ಏಕಾದಶ, ಗೃಹಾರಂಭದಲ್ಲಿ ದ್ವಾದಶ ಇವು ನಿಯಮಸ್ಥಾನಂಗಳು. ಈ ನಿಯಮ ಸ್ಥಾನಗಳಲ್ಲಿ ಯಾವ ಗ್ರಹರೂ ಇರಲಾಗದು. "ಅತ್ರಮಾಧವೀಯಂ - ಇಷ್ಟಂತ್ಯಗ್ರಹತಾಂ ಸ್ಮರಾದಿಷು ಪದೇಷೂದ್ವಾಹವಿಪ್ರಕ್ರಿಯಾ ಚೌಲಪ್ರಾಶನಪಟ್ಟಬಂಧನಗೃಹಪ್ರಾರಂಭಣೇಷು ಕ್ರಮಾತ್ ॥ ಇತಿ" ಈ ನಿಯಮ ಸ್ಥಾನಂಗಳ ಹೊರತು ಮಿಕ್ಕಾದ ಸ್ಥಾನಂಗಳಲ್ಲಿ ನಿಷೇಧವಾದ ಗ್ರಹರು ಇದ್ದರೆ ಆ ಗ್ರಹನಿಗೆ ಉಚ್ಚವಾಗಿ ಸ್ವವರ್ಗವಾಗಿ ಇದ್ದು ಆತನಿಗೆ ಶುಭದೃಷ್ಟಿ ಇರಲಾಗಿ ದೋಷವಿಲ್ಲ. "ಅತ್ರಗುರು:- ಯಸ್ಯ ದೋಷಸ್ಯ ಯಃ ಕರ್ತಾ ಸ್ವವರ್ಗಸ್ಥೋಚ್ಚಗೋ ಯದಿ ॥ ಶುಭದೃಷ್ಟಃ ಸ ಏವಾಸ್ಯ ಭಂಗದೋಷಂ ಸ ದಾಸ್ಯತಿ ॥ ॥ ಇತಿ" ಆ ಅನಿಷ್ಟ ಸ್ಥಾನಗತ ಗ್ರಹನಿಗೆ ಉಚ್ಚಸ್ವಕ್ಷೇತ್ರಗಳಿದ್ದರೆ ದೋಷವಿಲ್ಲ. "ಮಾಧವೀಯಂ-ಕ್ರೂರಾಃ ಶುಭಾ ವಾ ವಪುಷೋ ಗ್ರಹಾ ಯೇ ಸ್ಥಾನಾನ್ಯನಿಷ್ಟಾನಿ ಯದಾ ಪ್ರವಿಷ್ಟಾಃ ॥ ತದಾ ಸ್ವತುಂಗೇ ಬಲಿನಃ ಸ್ವಭೇವ ಯದಿ ಸ್ಥಿತಾಸ್ತೇ ಶುಭದಾ ಭವಂತಿ ॥ ॥ ಇತಿ"

ಇನ್ನು ಅರಸುಗಳಿಗೆ ಆಭರಣ ಕೊಡುವುದಕ್ಕೆ ಗಜ ನಿರೀಕ್ಷಣೆಗೂ, ಗಜಸಂಗ್ರಹಕ್ಕೂ, ಅಶ್ವ ನಿರೀಕ್ಷಣೆಗೂ, ಅಶ್ವಸಂಗ್ರಹಕ್ಕೂ ಮತ್ತು ದಂಡಿಗೆ ಮೊದಲಾದರ ಸಂಗ್ರಹಕ್ಕೂ, ಗಜಾಶ್ವ ಮೊದಲಾದ ವಾಹನಗಳ ಏರುವದಕ್ಕೂ, ನಗರಾದಿಗಳ ಪ್ರವೇಶಿಸುವದಕ್ಕೂ, ಶ್ವೇತಚ್ಛತ್ರಾದಿಗಳ ಸಂಗ್ರಹಕ್ಕೂ, ಹಾಸಿಗೆ ಪಾದುಕೆ ಕವಚ ಕಿರೀಟ ಮೊದಲಾದವರ ಧರಿಸುವದಕ್ಕೂ ಮತ್ತು ಅರಸುಗಳಿಗೆ ಏನೊಂದು ವಿಶೇಷ ಕಾರ್ಯಗಳ ಮಾಡುವುದಕ್ಕೂ ಅನ್ನಪ್ರಾಶನೆಗೆ ಹೇಳಿದ ಪ್ರಕಾರದ ಮುಹೂರ್ತಗಳಾಗಬೇಕು. "ಅತ್ರ ಗ್ರಂಥಾಂತರಂ- ಸ್ವರ್ಣಾದ್ಯಪತ್ರ ಸಂಭೋಗೇ ಕುಂಜರಾಣಾಂ ನಿರೀಕ್ಷಣೇ ॥ ತತ್ಸಂಗ್ರಹಾರೋಹಣಯೋಃ ಅಶ್ವ ಯಾನಾಧಿರೋಹಣೇ ॥ ॥ ನಗರಾದಿಪ್ರವೇಶೇ ಚ ಸಿತಚ್ಛತ್ರಾದಿಕಗ್ರಹೇ ॥ ಶಯ್ಯಾ ಪಾದುಕವರ್ಮಾದಿಭೋಗೇ ಚ ವಿಧಿರನ್ನವತ್ ॥ ॥ ಇತಿ" "ಪುನಶ್ಚ ಗ್ರಂಥಾಂತರಂ- ಬಾಲಾನ್ನವನ್ಮುಹೂರ್ತೋಽಥ ರಂಗಯಾನಾಧಿರೋಹಯೋಃ ॥ ಪಾತ್ರಾದಿಭೋಗೇ ಚ

ತಥಾ ಕಿಂ ತು ಮೇಘೋ ಮಿತಃ ಸ್ಮೃತಃ ॥ ॥ ಇತಿ" ಮತ್ತು ಅರಸು ಮೊದಲಾದ ಸಮಸ್ತರಿಗೂ, ಸಮಸ್ತ ಕಾರ್ಯಗಳಿಗೂ, ಅನ್ನಪ್ರಾಶನೆಗೆ ವಿಧಿಸಿದ ನಕ್ಷತ್ರಗಳು ಶುಭಗ್ರಹರ ವಾರಗಳು ಅಷ್ಟಮಶುದ್ಧಿಯಾದ ಲಗ್ನಗಳು ಸಹ ಸಾಮಾನ್ಯದಿಂದ ಶುಭವಾಗಿಹದು. "ವಸಿಷ್ಠ:- ಬಾಲಾನ್ನವಿಹಿತಾಸ್ತಾರಾಃ ನಿಧನಂ ಗ್ರಹವರ್ಜಿತಂ ॥ ಶುಭಗ್ರಹಾಣಾಂ ವಾರಾಶ್ಚ ಸಾಮಾನ್ಯೇನ ಶುಭಾ ಮತಾಃ ॥ ॥ ಇತಿ" ಆದರೂ 'ಉಲ್ಕೋರ್ವೀಚಲನೋಪರಾಗ' ಇತ್ಯಾದಿ ದೋಷಗಳನ್ನೆಲ್ಲ ವರ್ಜಿಸಿಕೊಳ್ಳಬೇಕು.

ಅನಂತರದಲ್ಲಿ ಪ್ರತಿಷ್ಠಾ ಕಾಲವನು ಹೇಳುತಾನೆ-

ಪಕ್ಷೇಽಚ್ಛೇಽಯನ ಉತ್ತರಾನ್ನಭಮಖಾಸ್ವಿಷ್ಟಾಃ ಪ್ರತಿಷ್ಠಾದಯೋ ।
ವರ್ಜ್ಯಾ ವಾರುಣಸೌರ್ಯಸೃಗ್ವಿನಧನುರ್ಮೇಷೈಣಜೂಕಾ ಇಹ ॥
ಧೀಸ್ಥಾ ರಂಧ್ರ ಶುಭಾಂತ್ಯಗಾ ಅಪಿ ಖರಾ ಪೂರ್ವೌ ನಿಶಾತ್ರ್ಯಂಶಕೌ ॥।
ವಿದ್ಧರ್ಕ್ಷಂ ಚ ಕೃತೋಷ್ಟಬಂಧ ಉಭಯೋಃ ಪಕ್ಷಾಯನದ್ವಂದ್ವಯೋಃ ॥ ೨೭ ॥

ಟೀಕಾ - ಪಕ್ಷೇಽಚ್ಛೇತಿ - ಉತ್ತರೇ ಅಯನೇ = ಉತ್ತರಾಯಣದಲ್ಲಿ, ಅಚ್ಛೇಪಕ್ಷೇ= ಶುಕ್ಲಪಕ್ಷದಲ್ಲಿ, ಅನ್ನಭಮಖಾಸು=ಅನ್ನಪ್ರಾಶನಕ್ಕೆ ಹೇಳಿದ ನಕ್ಷತ್ರ, ಮಘಾ ಎಂದಿವು ಗಳಲ್ಲಿ, ಪ್ರತಿಷ್ಠಾದಯಃ = ಪ್ರತಿಷ್ಠಾದಿಗಳು, ಇಷ್ಟಾಃ = ಇಷ್ಟಂಗಳು. ವಾರುಣಸೌರ್ಯ ಸೃಗ್ವಿನಧನುರ್ಮೇಷೈಣಜೂಕಾಃ = ವಾರುಣ = ಶತಭಿಷೆ, ಸೌರ್ಯಸೃಗ್ವಿನ = ಶನಿ ಕುಜ ವಾರಗಳು, ಧನು=ಧನು, ಮೇಷ=ಮೇಷ ಏಣ=ಮಕರ, ಜೂಕಾ=ತುಲೆ ಎಂದಿವುಗಳು, ಧೀಸ್ಥಾಃ = ಪಂಚಮದಲ್ಲಿದ್ದಂಥ, ರಂಧ್ರಶುಭಾಂತ್ಯಗಾಃಅಪಿ = ರಂಧ್ರ=ಅಷ್ಟಮ, ಶುಭ= ನವಮ, ಅಂತ್ಯ = ದ್ವಾದಶ, ಎಂದಿವುಗಳಲ್ಲಿ, ಗಾಃ = ಹೋಗಿರುವಂಥ, ಖರಾಃ = ಪಾಪ ಗ್ರಹರು. ಪೂರ್ವೌ = ಮೊದಲಿನದಾದಂಥ, ನಿಶಾತ್ರ್ಯಂಶಕೌ = ರಾತ್ರಿಯ ಮೂರನೆಯ ಎರಡು ಭಾಗಗಳು, ವಿದ್ಧರ್ಕ್ಷಂ ಚ = ಗ್ರಹವರ್ಜ್ಯ ವೇಧನಕ್ಷತ್ರವು, ವರ್ಜ್ಯಾಃ= ವರ್ಜ್ಯಂಗಳು. ಅಷ್ಟಬಂಧಃ = ಅಷ್ಟಬಂಧವು, ಉಭಯೋಃ = ಎರಡಾದಂಥ, ಪಕ್ಷಾಯನ ದ್ವಂದ್ವಯೋಃ=ಪಕ್ಷಾಯನ ದ್ವಂದ್ವಗಳಲ್ಲಿ, ಕೃತಃ=ಮಾಡಲ್ಪಟ್ಟಂಥಾದ್ದೆಂದರ್ಥ. ದೇವತಾ ಪ್ರತಿಷ್ಠೆ ಮೊದಲಾದವುಗಳಲ್ಲಿ ಉತ್ತರಾಯಣವೂ, ಶುಕ್ಲಪಕ್ಷವೂ ಆಗಬೇಕು. ದಕ್ಷಿಣಾಯನವೂ ಕೃಷ್ಣಪಕ್ಷವೂ ಆಗದು. ಮಘಾನಕ್ಷತ್ರವೂ ಅನ್ನಪ್ರಾಶನೆಗೆ ವಿಧಿಸಿದ ಹದಿನಾರು ನಕ್ಷತ್ರಗಳು ಆ ಪ್ರಕಾರ ಹದಿನೇಳು ನಕ್ಷತ್ರಂಗಳಲ್ಲಿ ಶತಭಿಷೆ ನಕ್ಷತ್ರವಾಗದು. ಮಿಕ್ಕಾದ ಹದಿನಾರು ನಕ್ಷತ್ರಗಳಾಗಬೇಕು. ಧನು ಮೇಷ ಮಕರ ತುಲೆ ಈ ನಾಲ್ಕು ಲಗ್ನಗಳಾಗದು. ಮಿಕ್ಕಾದ ಎಂಟು ಲಗ್ನಗಳಾದೀತು. ಪಂಚಮ ಅಷ್ಟಮ ನವಮ ದ್ವಾದಶಗಳಲ್ಲಿ ಪಾಪಗ್ರಹರು ಇರಲಾಗದು. ರಾತ್ರಿಯ ಮೂರು ಭಾಗ ಮಾಡಿ ಅದರಲ್ಲಿ ಮೊದಲಿಣ ಎರಡು ಪಾಲು ರಾತ್ರಿಯಾಗದು. ಕಡೆಯಣ ಒಂದು ಪಾಲು ರಾತ್ರಿಯಾದೀತು. ಗ್ರಹವರ್ಜ್ಯವೇಧೆ ಇರುವ ನಕ್ಷತ್ರವನ್ನು ವರ್ಜಿಸಬೇಕು. ಅಷ್ಟಬಂಧಕ್ಕೆ ಉತ್ತರಾಯಣವು ದಕ್ಷಿಣಾಯನವು ಶುಕ್ಲಪಕ್ಷವು ಕೃಷ್ಣಪಕ್ಷವು ಸಹ ಆದೀತು. 'ಪ್ರತಿಷ್ಠಾದಯಃ' ಎಂದು ಆದಿ ಶಬ್ದದಿಂದ ಪ್ರತಿಷ್ಠೆಗೂ ಪೀಠ ಬದಲಿಸುವದಕ್ಕೂ ಬಿಂಬ ಬದಲಿಸುವುದಕ್ಕೂ ಮಂಟಪ ಸಂಕೋಚಿಸುವದಕ್ಕೂ, ಸಂಕೋಚ ಕಲಶಕ್ಕೂ ಛಾಯಾ ಕಲಶಕ್ಕೂ

ನವೀಕರಣಕ್ಕೂ, ಉತ್ತರಾಯಣವು ಶುಕ್ಲಪಕ್ಷವು ಆಗಬೇಕು. ದಕ್ಷಿಣಾಯನವು ಕೃಷ್ಣಪಕ್ಷವು ಆಗದು. ಛಾಯಾಕಲಶಕ್ಕೂ, ನವೀಕರಣಕ್ಕೂ, ಅಷ್ಟಬಂಧಕ್ಕೂ, ಎರಡು ಅಯನಗಳು ಎರಡು ಪಕ್ಷಗಳು ಆದೀತು. ವೈಷ್ಣವ ದೇವತಾ ಪ್ರತಿಷ್ಠೆ ಮೊದಲಾದ್ದರಲ್ಲಿ ಶ್ರಾವಣಮಾಸವಾದೀತು. ದಕ್ಷಿಣಾಯನವಾದರೂ ದೋಷವಿಲ್ಲವೆಂದು ಗುರು ಹೇಳಿಹನು. "ಗುರುಃ- ವಿಷ್ಣೋಶ್ಚ ಶ್ರಾವಣಂ ಮಾಸಂ ವಿಶೇಷೇಣ ಶುಭಂ ವಿದುಃ || ಇತಿ" 'ಧನು ಮೇಷ್ಯೈಣಜೂಕಾಃ' ಎಂದು ಉಭಯ ಲಗ್ನಗಳಲ್ಲಿ ಧನುರ್ಲಗ್ನ ಒಂದು ಆಗದು. ಚರಲಗ್ನಗಳಲ್ಲಿ ಕರ್ಕಟಕ ಒಂದು ಹೊರತು ಮಿಕ್ಕಾದ ಲಗ್ನಗಳು ಆಗದೆಂದು ಹೇಳಿದಾಗ್ಯೂ ವಿಪತ್ಕಾಲದಲ್ಲಿ ಚರಲಗ್ನದಲ್ಲಿ ಶುಭಗ್ರಹವಿದ್ದರೂ ಗುರು ನೋಡಿದರೂ ಗ್ರಹಿಸಬಹುದು ಮತ್ತು ಇಲ್ಲಿ ವರ್ಜ್ಯವೆಂದು ಹೇಳಿದ ಲಗ್ನಗಳು ಊರ್ಧ್ವಮುಖಿಗಳಾಗಿದ್ದರೆ ಆ ಲಗ್ನಗಳು ಹಗಲಿನಲ್ಲಿ ಗ್ರಹಿಸಬಹುದು. ದೋಷವಿಲ್ಲ. "ಅತ್ರಗುರುಃ- ಚರಾಶ್ಚ ಗುರುಣಾ ದೃಷ್ಟಾಃ ಶುಭಯುಕ್ತಾಸ್ತು ಶೋಭನಾಃ || ಊರ್ಧ್ವಾಸ್ಯಾಶ್ಚ ದಿವಾ ಶ್ರೇಷ್ಠಾಃ ಸರ್ವೇ ಸಂಪತ್ಪ್ರದಾಸ್ತು ತೇ || || ಇತಿ" "ನಾರದೋಽಪಿ-ರಾಶಯಃ ಸಕಲಾಃ ಶ್ರೇಷ್ಠಾಃ ಶುಭಗ್ರಹಯುತೇಕ್ಷಿತಾಃ || ಇತಿ" ದ್ವಾದಶದಲ್ಲಿ ಪಾಪಿಗಳಿದ್ದರೆ ತಂತ್ರಿಗೆ ದೋಷವು. ನವಮದಲ್ಲಿ ಪಾಪಿಗಳಿದ್ದರೆ ಗ್ರಾಮಾಧಿಪತಿಗೆ ದೋಷ. ಅಷ್ಟಮದಲ್ಲಿದ್ದರೆ ಕೆಲಸ ಮಾಡಿದ ಶಿಲ್ಪಿಗೆ ದೋಷವು. ಪಂಚಮದಲ್ಲಿ ಪಾಪಿಗಳಿದ್ದರೆ ಬಿಂಬಕ್ಕೆ ದೋಷ. "ಅತ್ರ ಗ್ರಂಥಾಂತರಂ- ವ್ಯಯಧರ್ಮಾಷ್ಟಮಧೀಸ್ಥಾಸ್ತು ಪಾಪಾ ಹನ್ಯುರ್ವಿಶೇಷತಃ || ಆಚಾರ್ಯಮನ್ನದಾತಾರಂ ಶಿಲ್ಪಿನಂ ಪ್ರತಿಮಾಮಪಿ || || ಇತಿ" ಗ್ರಹವರ್ಜ್ಯವೇಧೆಗಳಾವುವೆಂದರೆ-ರೋಹಿಣಿ ಹಸ್ತ ಶ್ರವಣ ಆರ್ದ್ರೆ ಸ್ವಾತಿ ಶತಭಿಷೆ ಈ ಆರು ನಕ್ಷತ್ರಗಳಿಗೆ ಒಂದು ವರ್ಗವು. ಭರಣಿ ಅನೂರಾಧೆ ಪುಬ್ಬ ಪೂರ್ವಾಷಾಢ ಉತ್ತರಾಭಾದ್ರೆ ಪುಷ್ಯ ಈ ಆರು ನಕ್ಷತ್ರಗಳಿಗೆ ಒಂದು ವರ್ಗ. ಜ್ಯೇಷ್ಠೆ ರೇವತಿ ಅಶ್ವಿನಿ ಆಶ್ಲೇಷೆ ಮೂಲ ಮಘೆ ಈ ಆರು ನಕ್ಷತ್ರಗಳಿಗೆ ಒಂದು ವರ್ಗ. ಚಿತ್ರೆ ಧನಿಷ್ಠೆ ಮೃಗಶಿರೆ ಈ ಮೂರು ನಕ್ಷತ್ರಗಳಿಗೆ ಒಂದು ವರ್ಗ. ಪೂರ್ವಾಭಾದ್ರೆ ವಿಶಾಖೆ ಉತ್ತರಾಷಾಢ ಪುನರ್ವಸು ಕೃತ್ತಿಕೆ ಉತ್ತರೆ ಈ ಆರು ನಕ್ಷತ್ರಗಳಿಗೆ ಒಂದು ವರ್ಗವು. ಈ ಪ್ರಕಾರದ ಐದು ವರ್ಗಗಳೊಳಗೊಂದು ವರ್ಗದಲ್ಲಿ ಯಾವನಾದರೊಬ್ಬ ಗ್ರಹನಿದ್ದರೆ ಆ ವರ್ಗದಲ್ಲಿರುವ ನಕ್ಷತ್ರಗಳೆಲ್ಲದಕ್ಕೂ ಆ ಗ್ರಹವೇಧೆ ಉಂಟೆಂದರಿವದು. "ಅತ್ರಮಾಧವೀಯಂ - ಧಾತೃತ್ರೀನಾಥರುದ್ರಾನಿಲರವಿವರುಣಾಃ ಕಾಲಮಿತ್ರಾರ್ಯಮಾಂಭೋ | ಬುಧ್ನ್ಯಾರ್ಯಾಃ ಶಕ್ರಪೂಷಾಶ್ವ್ಯಹಿನಿಋತಿಮುಖಾಸ್ತ್ವಷ್ಟ್ರವಃ ಸ್ಕಂದವಾನಿ || ಭಾದ್ರೇಂದ್ರಾಗ್ನ್ಯರ್ಕ್ಷವಿಶ್ವಾದಿತಿದಹನಭಗಾಃ ಪಂಚವರ್ಗಾಃ ಸ್ಯುರೇಷಾಂ ||| ವರ್ಗಂ ತಂ ವೇಧದುಷ್ಟಂ ತ್ಯಜತು ಗೃಹಕೃತೌ ಸಗ್ರಹಾ ಯತ್ರ ತಾರಾ || || ಇತಿ" ಈ ವೇಧೆಯನು ಗೃಹ ಕರ್ಮದಲ್ಲಿಯೂ ಪ್ರತಿಷ್ಠಾದಿಗಳಲ್ಲಿಯೂ ವರ್ಜಿಸಬೇಕು. ಯಾವ ಗ್ರಹರ ವೇಧೆಯು ಆಗದೆಂದರೂ ವಿಪತ್ಕಾಲದಲ್ಲಿ ಗುರುವೇಧೆಯನೂ ಪಾಪಗ್ರಹರ ವೇಧೆಯನೂ ವರ್ಜಿಸಿದರೂ ಸಾಕು. ಗುರು ವೇಧೆಯಲ್ಲಿಯೂ ಗುರುವಿರುವ ನಕ್ಷತ್ರವಾದೀತು. ಅದು ಹೊರತು ಆ ವರ್ಗದಲ್ಲಿರುವ ನಕ್ಷತ್ರವೆಲ್ಲವು ಆಗದು. ರಾಹು ಇರುವ ನಕ್ಷತ್ರವಾಗದು. ಅದು ಹೊರತು ಆ ವರ್ಗದಲ್ಲಿರುವ ನಕ್ಷತ್ರಗಳಲ್ಲಿ ಆದೀತು. "ಕಾಲದೀಪಿಕಾ-ವೇಧೋ ವರ್ಜ್ಯಃ ಪ್ರತಿಷ್ಠಾದೌ

ಜೀವಪಾಪೈರ್ವಿಶೇಷತಃ ॥ ಗ್ರಾಹ್ಯಂ ಜೀವಯುತಂ ತಾರಂ ರಾಹುಯುಕ್ತಂ ತು ವರ್ಜಯೇತ್ ॥ ॥ ಇತಿ" "ಚತುರ್ಥದಿವಸೇ ಸ್ನಾನೇ ನ ತಾರಾದಿವಿಧಿರ್ಭವೇತ್ ॥" ಎಂದವರಿಂದ ಚತುರ್ಥಸ್ನಾನವಾಗಿರುವ ನಾಲ್ಕನೆಯ ದಿವಸದ ಕಲಶಕ್ಕೆ ಮುಹೂರ್ತ ವಾಗಬೇಕೆಂಬುದಿಲ್ಲ. "ಶ್ರೀ ಜ್ಯೇಷ್ಠಾ ಪಾರ್ವತೀ ದುರ್ಗಾ ಭದ್ರಕಾಳೀ ಸರಸ್ವತೀ ॥ ಘಟಿಕಾದಶಕಸ್ಯೈತಾ ಅಧಿಪಾಃ ಸಂಪ್ರಕೀರ್ತಿತಾಃ ॥ ॥" ಎಂದದರಿಂದ ಅವರವರ ಕಾಲದಲ್ಲಿ ಅವರವರ ಭಜಿಸಿದರೆ ವಿಶೇಷ ಶುಭವಾಗಿಹದು.

ಅನಂತರವಲ್ಲಿ ಗೃಹಾರಂಭಕಾಲವನು ಹೇಳುತಾನೆ-

ಪ್ರಾಚ್ಯಾದೌ ಮಕರಾಚ್ಚರಸ್ಥಿರಗತೇ ಸೂರ್ಯೇ ಗೃಹಾರಂಭಣಂ ।
ಶಸ್ತಂ ಮೂಲಮಘಾಶನೋಡುಷು ಚರಾ ವರ್ಜ್ಯಾಃ ಕುಳೀರಂ ವಿನಾ ॥
ವಿದ್ಧರ್ಕ್ಷಾಣಿ ಕುಜೋಽಷ್ಟಮೇಽಂಬುನಿ ಖರಾ ವಾರೌ ಚ ಭೌಮಾರ್ಕಯೋಃ ॥।
ಅರ್ಕೇ ಕರ್ಕಟಕೃತ್ತಿಕೋಭಯಗತೇ ನೇಚ್ಛಂತಿ ಗೇಹಕ್ರಿಯಾಂ ॥ ೨೮ ॥

ಟೀಕಾ - ಪ್ರಾಚ್ಯಾದಾವಿತಿ - ಸೂರ್ಯೇ = ಸೂರ್ಯನು, ಮಕರಾತ್ = ಮಕರವ್ಮೊದಲು ಯಿಂದ, ಚರಸ್ಥಿರಗತೇ = ಚರಸ್ಥಿರಗಳಲ್ಲಿರಲಾಗಿ, ಮೂಲಮಘಾಶನೋಡುಷು = ಮೂಲ ಮಘೆ ಅನ್ನಪ್ರಾಶನ ನಕ್ಷತ್ರ ಎಂದಿವುಗಳಲ್ಲಿ, ಪ್ರಾಚ್ಯಾದೌ = ಪ್ರಾಚ್ಯಾದಿಯಲ್ಲಿ, ಗೃಹಾರಂಭಣಂ = ಗೃಹಾರಂಭವು, ಶಸ್ತಂ = ಪ್ರಶಸ್ತವು. ಕುಳೀರಂ = ಕರ್ಕಟಕವನ್ನು, ವಿನಾ = ಹೊರತು, ಚರಾಃ = ಚರಲಗ್ನಗಳು, ವಿದ್ಧರ್ಕ್ಷಾಣಿ = ವೇಧನಕ್ಷತ್ರಗಳು, ಅಷ್ಟಮೇ = ಅಷ್ಟಮದಲ್ಲಿ, ಕುಜಃ = ಅಂಗಾರಕನು, ಅಂಬುನಿ = ಚತುರ್ಥದಲ್ಲಿ ಖರಾಃ = ಪಾಪಗ್ರಹರು, ಭೌಮಾರ್ಕಯೋಃ = ಕುಜ ರವಿಗಳ, ವಾರೌಚ = ವಾರಗಳು, ವರ್ಜ್ಯಾಃ = ವರ್ಜ್ಯಂಗಳು. ಅರ್ಕೇ = ಆದಿತ್ಯನು, ಕರ್ಕಟಕೃತ್ತಿಕೋಭಯಗತೇ = ಕರ್ಕಟಕ ಕೃತ್ತಿಕಾ ನಕ್ಷತ್ರ. ಉಭಯರಾಶಿ ಎಂದಿವುಗಳಲ್ಲಿ, ಗತೇ ಸತಿ = ಪ್ರಾಪಿಸಲಾಗಿ, ಗೇಹಕ್ರಿಯಾಂ = ಗೃಹಕಾರ್ಯವನ್ನು, ನೇಚ್ಛಂತಿ = ಇಚ್ಛಿಸುವುದಿಲ್ಲವೆಂದರ್ಥ.

ಮಕರಾದಿಯಾಗಿ ಚರಸ್ಥಿರ ರಾಶಿಗಳಲ್ಲಿ ಸೂರ್ಯನಿರುವಾಗ, ಪ್ರಾಚ್ಯಾದಿ ಮನೆಗಳನು ಆರಂಭಿಸಬೇಕು. ಹೇಗೆಂದರೆ ಮಕರ ಕುಂಭಗಳಲ್ಲಿ ಸೂರ್ಯನಿರುವಾಗ ಮೂಡದಿಕ್ಕಿನ ಮನೆಯು ಆರಂಭಿಸಬೇಕು. ಮೇಷ ವೃಷಭಗಳಲ್ಲಿ ಸೂರ್ಯನಿರುವಾಗ ತೆಂಕಮನೆಯ ಪ್ರಾರಂಭಿಸಬೇಕು. ಕರ್ಕಟಕ ಸಿಂಹಗಳೊಳಗೆ ಕರ್ಕಟಕ ಕೃತ್ತಿಕೆಗಳಲ್ಲಿ ಸೂರ್ಯನಿರುವಾಗ ಆಗದೆಂದು ಒಂದೆ ಹೇಳಿದುದರಿಂದ ಸಿಂಹದಲ್ಲಿ ಸೂರ್ಯನಿರುವಾಗ ಪಡುಮನೆ, ತುಲಾ ವೃಶ್ಚಿಕಗಳಲ್ಲಿ ಸೂರ್ಯನಿರುವಾಗ ಬಡಗ ಮನೆ ಆರಂಭಿಸಬೇಕು. ಅನ್ನಪ್ರಾಶನಕ್ಕೆ ವಿಧಿಸಿದ ಹದಿನಾರು ನಕ್ಷತ್ರಗಳು ಮತ್ತು ಮೂಲ ಮಘೆಗಳು ಎರಡು. ಆ ಪ್ರಕಾರ ಹದಿನೆಂಟು ನಕ್ಷತ್ರಗಳು ಆದೀತು. ಮಿಕ್ಕಾದ ಒಂಬತ್ತು ನಕ್ಷತ್ರಗಳಾಗದು. ಚರಲಗ್ನ ಗಳಾಗದು. ಅದರಲ್ಲಿ ಕರ್ಕಟಕ ಒಂದು ಆದೀತು. ಈ ಪ್ರಕಾರವಾಗಲಾಗಿ ವೃಷಭ ಮಿಥುನ ಕರ್ಕಟಕ ಸಿಂಹ ಕನ್ಯಾ ವೃಶ್ಚಿಕ ಧನು ಕುಂಭ ಮೀನ ಈ ಒಂಬತ್ತು ಲಗ್ನಗಳಾದೀತು. ಮೇಷ ತುಲಾ ಮಕರ ಈ ಮೂರು ಲಗ್ನಗಳಾಗದು. ವೇಧ ನಕ್ಷತ್ರವು ಆಗದು. ಅಷ್ಟಮದಲ್ಲಿ ಅಂಗಾರಕನು, ಚತುರ್ಥದಲ್ಲಿ ಪಾಪಗ್ರಹರು ಆದಿತ್ಯ ಕುಜ ವಾರಗಳು ಸಹ

ಆಗದು. ಕರ್ಕಟಕ ರಾಶಿಯಲ್ಲಿ ಕೃತ್ತಿಕಾ ನಕ್ಷತ್ರದಲ್ಲಿ ಉಭಯರಾಶಿಗಳಲ್ಲಿ ಸೂರ್ಯ ನಿರುವಾಗ ಕೆಲವು ಮನೆಗಳ ಕಟ್ಟಬಹುದು.

"ಕಳಂ ಚೋಲೂಖಲಗೃಹಂ ಪಾಕಾಗಾರಂ ಚ ಗೋಗೃಹಂ ॥ ಸುಧೀಃ ಕರೋತು ಮಾರ್ತಂಡೇ ಮಿಥುನಾದ್ಯುಭಯರ್ಕ್ಷಗೇ ॥ ಉಲೂಖಲಗೃಹಂ ಪಾಕಗೃಹಂ ಪಶುಗೃಹಂ ಕಳಂ ॥ ಕನ್ಯಾದ್ಯುಭಯರಾಶಿಸ್ಥೇ ಸೂರ್ಯೇ ಕುರ್ಯಾತ್ಸಮೃದ್ಧಯೇ ॥ ಇತಿ" ಈ ಶ್ಲೋಕಗಳ ತಾತ್ಪರ್ಯದಿಂದ ಮಿಥುನಾದಿತ್ಯನಲ್ಲಿ ಕಳಗೃಹ ಪ್ರಾರಂಭ, ಕನ್ಯಾದಿತ್ಯನಲ್ಲಿ ಉಲೂಖಲಗೃಹ ಪ್ರಾರಂಭ, ಚಾಪಾದಿತ್ಯನಲ್ಲಿ ಪಾಕಾಗಾರಾರಂಭ, ಮೀನಾದಿತ್ಯನಲ್ಲಿ ಪಶುಮಂದಿರಾರಂಭ ಸಹ ಮಾಡಬೇಕೆಂಬದಾಯಿತು. ಇದು ಸಮಸ್ತಕ್ಕೂ ಗೃಹಾರಂಭಕ್ಕೆ ವಿಧಿಸಿದೋಪಾದಿಯಲ್ಲಿಯೇ ಮಿಕ್ಕ ಮುಹೂರ್ತಗಳಾಗಬೇಕು. ಗೋಶಾಲಾ ನಿರ್ಮಾಣ ವಲ್ಲಿಯೂ ಮತ್ತು ಪಶುಗಳ ವಿಷಯವಾಗಿರುವ ಸಮಸ್ತ ಕಾರ್ಯಗಳಲ್ಲಿಯೂ ಬವ ಬಾಲವ ತೈತಲೆ ಈ ಮೂರು ಕರಣಂಗಳು, ಚಿತ್ರೆ ವಿಶಾಖೆ ಈ ಎರಡು ನಕ್ಷತ್ರಗಳು, ರವಿ ಸೋಮ ಮಂಗಳ ಶುಕ್ರ ಈ ನಾಲ್ಕು ವಾರಗಳು ಸಹ ಅವಶ್ಯವಾಗಿ ವರ್ಜ್ಯಂಗಳು. ಮಿಕ್ಕಾದ ಸಮಸ್ತವು ಹಿಂದೆ ಗೃಹಾರಂಭಕ್ಕೆ ಹೇಳಿದ ಪ್ರಕಾರವೇ ಆಗಬೇಕು. **"ಅತ್ರವಿಶ್ವಕರ್ಮಾ- ಸ್ಥಿರವಿಷ್ಟಿಬಿರಾವ್ಯಾಘ್ರಸಿಂಹಾಖ್ಯಕರಣಾನಿ ಚ ॥ ಮಿತ್ರಾಂ ಶೂರ್ಪಾಂ ರವೀಂದ್ವಾರಶುಕ್ರಾಣಾಮಪಿ ವಾಸರಾನ್ ॥ ಹಿತ್ವಾऽಥ ಗೃಹಕಾರ್ಯೋಕ್ತೇ ಕಾಲೇ ಗೋಕಾರ್ಯಮೀರಿತಂ ॥ ಇತಿ"** ಸ್ಥಿರಕರಣವು ವಿಷ್ಟಿಯು ಸಮಸ್ತ ಕೆಲಸಕ್ಕೂ ಆಗದೆಂದು ದೋಷಪ್ರಕರಣದಲ್ಲಿಯೇ ಹೇಳಿಹದು. ಶನಿವಾರದಲ್ಲಿ ಸ್ವಾತಿ ಆರ್ದ್ರೆ ಈ ಎರಡರಿಂದ ಒಂದು ನಕ್ಷತ್ರ ಕೂಡಿ ಬಂದರೆ ಆ ದಿವಸ ವೃಷಭ ಲಗ್ನದಲ್ಲಿ ಒಂದು ಯೋಗ. ಗುರುವಾರವಾಗಲೀ ಶನಿವಾರವಾಗಲೀ ಈ ಎರಡು ವಾರಗಳಿಂದೊಂದು ವಾರದಲ್ಲಿ ಸ್ಥಿರ ನಕ್ಷತ್ರಂಗಳಾದ ಉತ್ತರೆ ಉತ್ತರಾಷಾಢ ಉತ್ತರಾಭಾದ್ರೆ ರೋಹಿಣಿ ಈ ನಾಲ್ಕು ನಕ್ಷತ್ರಗಳಿಂದೊಂದು ನಕ್ಷತ್ರ ಬಂದರೆ ಆ ದಿವಸವು ಸ್ಥಿರಲಗ್ನವಾದ ವೃಷಭ ವೃಶ್ಚಿಕ ಕುಂಭ ಲಗ್ನಗಳಲ್ಲಿ ಒಂದು ಯೋಗ. ಸಿಂಹವು ಸ್ಥಿರವಾದರೂ ಪಶುಕಾರ್ಯಕ್ಕೆ ವರ್ಜ್ಯವು. ಈ ಎರಡು ಯೋಗಗಳಲ್ಲಿ ಗೋಶಾಲೆಯನ್ನು ನಿರ್ಮಿಸಿದರೆ ಅತ್ಯಂತ ಶುಭಪ್ರದವು. **"ಮುಹೂರ್ತಶತಕಂ- ಸ್ವಾತೀರುದ್ರಯುತೇ ಶನೈಶ್ಚರದಿನೇ ಗೋಷ್ಠಂ ವೃಷರ್ಕ್ಷೋದಯೇ। ಬಧ್ನೀಯಾದ್ಗುರುಮಂದವಾರಸಹಿತೇ ತಾರೇ ಗೃಹೇ ಚ ಸ್ಥಿರೇ ॥ ಇತಿ"** ಸಾಧಾರಣವಾಗಿ ಗೋಕಾರ್ಯಗಳಲ್ಲಿ ಸಮಸ್ತಗಳಲ್ಲಿಯೂ ವಿಪತ್ಕಾಲದಲ್ಲಿ ಚಿತ್ರೆ ವಿಶಾಖೆಗಳೆರಡು ಹೊರತು ಉಳಿದ ಸಮಸ್ತ ನಕ್ಷತ್ರಗಳೂ ಸಹ ಸಮಸ್ತ ತಿಥಿಗಳೂ ಆದೀತು. ವಾರವೂ ಕರಣವೂ ಗೋಕಾರ್ಯದಲ್ಲಿ ಮುಖ್ಯವಾದ್ದರಿಂದ ಹಿಂದೆ ಹೇಳಿದ ಪ್ರಕಾರ ವಾರಕರಣಗಳ ವರ್ಜಿಸಬೇಕು. **"ಮಾಧವೀಯಂ- ಗೋಕಾರ್ಯೇಷು ಸಮಸ್ತೇಷು ವಾರಾಶ್ಚ ಕರಣಾನಿ ಚ ॥ ತಿಥ್ಯಾದಿಭ್ಯೋ ವಿಶಿಷ್ಯಂತೇ ಶೂರ್ಪಾಂ ಚಿತ್ರಾಂ ಚ ವರ್ಜಯೇತ್ ॥ ॥ ಇತಿ"** ಸಣ್ಣಕರುಗಳನು ಕಟ್ಟುವ ಶಾಲೆಗೆ ವತ್ಸಾಲಯವೆಂದು ಹೆಸರು. ಪುಷ್ಯ ನಕ್ಷತ್ರದ ಮೂರನೆಯ ಪಾದದಲ್ಲಿ ಸೂರ್ಯನಿರುವಾಗ ವತ್ಸಾಲಯವ ಮಾಡಿದರೆ ಅತ್ಯಂತ ಶುಭವು. **"ಅತ್ರಗುರು:- ಪುಷ್ಯೇ ತೃತೀಯಕೇऽಪ್ಯಂಶೇ ಚಾದಿತ್ಯೇ ಯದಿ ಸಂಸ್ಥಿತೇ ॥ ವತ್ಸಾಲಯಂ ಪ್ರಕುರ್ವೀತ ವತ್ಸವೃದ್ಧಿರ್ಭವೇದಿತಿ ॥ ॥"**

ನೂತನಾಗಾರಾದಿ ಪ್ರವೇಶಕ್ಕೂ, ಹೊರಟು ಹೋದ ಮನೆಗೆ ತಿರುಗಿ ಪ್ರವೇಶಿಸುವುದಕ್ಕೂ ಪ್ರಥಮಶಿಲಾನ್ಯಾಸಕ್ಕೂ, ಸ್ತಂಭ ಪ್ರತಿಷ್ಠೆಗೂ, ದ್ವಾರ ಸ್ಥಾಪನೆಗೂ, ಕವಾಟ ಯೋಗಕ್ಕೂ, ಗೃಹಾರಂಭಕ್ಕೆ ವಿಧಿಸಿದ ಪ್ರಕಾರಮುಹೂರ್ತವಾಗಬೇಕು. "ಅತ್ರಸರ್ವಸಿದ್ಧಿ:- ಆಸ್ಥಾನಾದಿ ಪ್ರವೇಶೇ ಚ ನಿರ್ಗತ್ಯಾನುಪ್ರವೇಶನೇ ॥ ಶಿಲಾನ್ಯಾಸೇ ಪ್ರತಿಷ್ಠಾಯಾಂ ದ್ವಾರಸ್ಥಾಪಿ ವಿಶೇಷತಃ ॥ ॥ ಕವಾಟಸ್ಥಾಪನೇ ಚೈವ ಗೃಹೋಪಕ್ರಮವದ್ವಿಧಿಃ ॥ ಇತಿ" ಇನ್ನು ಇವರಲ್ಲಿರುವ ವಿಶೇಷವನು ಹೇಳುತವೆ- "ಗುರು:- ಧ್ರುವಭೇ ಶುಭವಾರೇ ತು ಸ್ಥಿರಲಗ್ನೇ ಶುಭೇ ತಿಥೌ ॥ ದ್ವಾರಂ ಸ್ಥಾಪ್ಯಂ ಯುತಂ ಚಿತ್ರೈಃ ಸರ್ವಸಂಪದ್ವಿವೃದ್ಧಯೇ ॥ ವಸುಚಿತ್ರಾರ್ಯಮಾರಿಶ್ವದ್ವಿಷ್ಣ್ವರ್ಕೇಂದ್ವಶ್ವಿಮೂಲಭಂ ॥ ಊರ್ಧ್ವಮಂಶಂ ದ್ವಾರ ದಾರ್ವೋಃ ಸ್ಥಾಪನೇ ಕೇಚಿದೂಚಿರೇ ॥ ಚರೇ ಸ್ಥಿರೇ ಚ ನಕ್ಷತ್ರೇ ಬುಧಶುಕ್ರದಿನೇ ತಿಥೌ ॥ ಶುಭೇ ಕವಾಟಯೋಗಸ್ಯ ದ್ವಿಸ್ವಭಾವೋದಯೇ ಗೃಹಾಃ ॥ ॥ ಸ್ತಂಭಂ ವಿಧೂದಯೇ ಸ್ಥಾಪ್ಯಂ ವೇಣುಭಾಸುಂ ಬುಧೋದಯೇ ॥ ಭೃಗೂದಯೇ ಚ ಸಂಧಾದ್ಯಂ ನ ಚಾಗ್ನಿಭಯಮಾದಿಶೇತ್ ॥ ॥ ಗುರೌ ಕೇಂದ್ರೇ ಶುಕ್ರಲಗ್ನೇ ಖರಗೇ ರಾಹೌ ಗೃಹೋಪರಿ ॥ ತೃಣಾದಿಭಿಃ ಸಮಾಚ್ಛಾದ್ಯಂ ನ ವಾತಾಗ್ನಿಭಯಂ ಗೃಹೇ ॥ ॥ ಭೃಗೋರ್ವಾರೋದಯೇ ವಾऽಪಿ ತೃಣೈರಾಚ್ಛಾದಯೇದ್ಧ್ರುವಂ ॥ ಜೀವೇ ಲಗ್ನೇ ಭೃಗೌ ಕೇಂದ್ರೇ ಶುಭರ್ಕ್ಷೇ ಚೇಷಿಕಾದಿಭಿಃ ॥ ॥ ಇತಿ" "ಗ್ರಂಥಾಂತರಂ- ತೃಣಾದ್ಯೈರ್ಗೃಹಬಂಧೇತು ಕೃತ್ತಿಕಾ ರೇವತೀಗತಂ ॥ ಭಾಸುಂ ಭೌಮಾರ್ಕಯೋರ್ವಾರಂ ವೇಧತಾರಾಂಶ್ಚ ವರ್ಜಯೇತ್ ॥ ॥ ಇತಿ" ಮನೆಗೆ ಸಾರಣೆ ಕೊಡುವುದರನ್ನು ಉಪಲೇಪನೆ ಎಂದೆಂಬರು. ಆ ಉಪಲೇಪನಕ್ಕೆ ಕಾಲವನು ಹೇಳುತಾನೆ- ಅತ್ರಿ ಹೇಳಿದನು- "ಅತ್ರಿ:- ಪೂರ್ವಾಧ್ರುವಭೃಗುಜ್ಞರ್ಕ್ಷೇ ಗೃಹಸ್ಯೈವೋಪಲೇಪನೇ ॥ ಕರ್ಕ್ಯರ್ಕಾರ್ಕ್ಯಾರಭೇ ಲೇಪಃ ಪುತ್ರಾರ್ಥಾಪತ್ತಿಭೀತಿದಃ ॥ ಇತಿ" "ವಿಧಿ ರತ್ನಂಚ- ಭಾನುವಾರೇ ಕುಜಸ್ಯಾಹ್ನಿ ನ ಸಮಾಲೇಪಯೇದ್ಧ್ರುವಂ ॥ ಲೇಪನಂ ಗೃಹನಾಶಾಯ ಚತುರ್ದಶ್ಯಾಂ ವಿಶೇಷತಃ ॥ ॥ ಇತಿ"

ಅನಂತರದಲ್ಲಿ ಗೃಹಪ್ರವೇಶಕ್ಕೂ ಕೂಪಾರಂಭಕ್ಕೂ ತರುಚ್ಛೇದನೆಗೂ ಕಾಲವನು ಹೇಳುತಾನೆ-

ಏವಂ ಕೂಪಗೃಹಪ್ರವೇಶನವಿಧಿಃ ನಾರ್ಕಃ ಪ್ರವೇಶೇ ಘಟ ।
ಸ್ತ್ರೀಕರ್ಕಿಷ್ವಿತರತ್ರ ಸಂತು ಚರಭಾನ್ಯರ್ಕಶ್ಚ ವಹ್ನ್ಯಾದಿಗಃ ॥
ಚಿತ್ರಾದ್ವೀಂದ್ವಸುರಾಶ್ವಿಚಾಪಮಶುಭಂ ಶಸ್ತಂ ಜಲಕ್ಷ್ಮಾಚ್ಛದೃಕ್ ।॥
ಛಿಂದ್ಯಾದ್ದ್ವಾರು ನ ವಾರುಣಾಚ್ಯುತಯಮಸ್ವಾತ್ಯಾದಿಪಂಚಾಶ್ವಿಷು ॥ ೨೯ ॥

ಟೀಕಾ - ಏವಮಿತಿ - ಏವಂ = ಈ ಪ್ರಕಾರ, ಕೂಪಗೃಹಪ್ರವೇಶನವಿಧಿಃ = ಕೂಪ= ಕೂಪಾರಂಭ, ಗೃಹಪ್ರವೇಶನ = ಗೃಹಪ್ರವೇಶ ಎಂದಿವುಗಳ, ವಿಧಿಃ = ವಿಧಿಯು, ಕೂಪತಟಾಕಾದಿಗಳ ಮಾಡುವುದರಲ್ಲಿಯೂ ನವಾಗಾರ ಪ್ರವೇಶದಲ್ಲಿಯೂ ಹಿಂದೆ ಗೃಹಾರಂಭಕ್ಕೆ ಹೇಳಿದ ಪ್ರಕಾರವೇ ಮುಹೂರ್ತವಾಗಬೇಕು. ಇನ್ನು ಈ ಕೂಪಾರಂಭ ಗೃಹಪ್ರವೇಶಗಳಲ್ಲಿರುವ ವಿಶೇಷವನು ಹೇಳುತಾನೆ. ನಾರ್ಕ ಇತಿ = ಪ್ರವೇಶೇ= ಗೃಹಪ್ರವೇಶದಲ್ಲಿ, ಘಟಸ್ತ್ರೀಕರ್ಕಿಷು = ಘಟ = ಕುಂಭ, ಸ್ತ್ರೀ = ಕನ್ಯಾ, ಕರ್ಕಿಷು-ಕರ್ಕಾಟಕ

ಎಂದಿವುಗಳಲ್ಲಿ, ಅರ್ಕಃ=ಆದಿತ್ಯನು ನ=ನಿಷೇಧವು. ಕುಂಭ ಕನ್ನಿ ಕರ್ಕಟಕ ಈ ಮೂರು ರಾಶಿಗಳಲ್ಲಿ ಸೂರ್ಯನಿರುವಾಗ ಹೊಸ ಮನೆಯನು ಪ್ರವೇಶಿಸಲಾಗದು. ಅತ್ಯಾಪತ್ಕಾಲ ದಲ್ಲಿ ಕುಂಭ ಕರ್ಕಟಕಗಳಲ್ಲಿ ಸೂರ್ಯನಿರುವಾಗ ಶಾಂತಿಯನು ಮಾಡಿ ಪ್ರವೇಶಿಸ ಬಹುದು. 'ಅತ್ರ ಗುರುಃ- ಶಾಂತಿಂ ಕೃತ್ವಾ ಘಟಾಷಾಢೇ ವಿಶೇದಾವಶ್ಯಕೇ ಸತಿ ॥' ಈ ಪ್ರಕಾರ ಹೇಳಿದಾಗ್ಯೂ ಕುಂಭದಲ್ಲಿರುವಾಗ ಮಾತ್ರ ಗ್ರಾಹ್ಯವಲ್ಲದೆ ಕರ್ಕಟಕ ಕನ್ನಿಗಳಲ್ಲಿ ಸೂರ್ಯನಿರುವಾಗ ಗ್ರಾಹ್ಯವಲ್ಲ. 'ಶ್ರೇಷ್ಠೋ ಪಶ್ಚಿಮಭಾಗನಿರತಃ ಶುಕ್ರೋಽತ್ರ ವರ್ಜ್ಯೋಽನ್ಯಗಃ ॥' ಎಂದು ಮಾಧವೀಯದಲ್ಲಿ ಹೇಳಿರುವುದರಿಂದಲೂ, 'ಪೃಷ್ಠ ದಕ್ಷಿಣಗೇ ಶುಕ್ರೇ' ಎಂದು ಸರ್ವ ಸಿದ್ಧಿಯಲ್ಲಿ ಹೇಳಿರುವುದರಿಂದಲೂ, 'ಪೃಷ್ಠಗಂ ದಕ್ಷಿಣಸ್ಥಂ ವಾ ಭೃಗುಂ ಕೃತ್ವಾ ವಿಶೇದ್ಗೃಹಂ ॥ ಪುರತೋ ವಾಮತೋ ವಾಽಪಿ ಶುಕ್ರಂ ಕೃತ್ವಾ ನ ಚಾವಿಶೇತ್॥ ॥' ಎಂದು ಗುರು ಹೇಳಿದರಿಂದಲೂ, ಪ್ರತಿ ಶುಕ್ರನು ತನಗೆ ಪೂರ್ವ ಭಾಗದಲ್ಲಿಯೂ, ಎಡದ ಭಾಗದಲ್ಲಿಯೂ ಮಾಡಿಕೊಂಡು ಗೃಹವನ್ನು ಪ್ರವೇಶಿಸಲಾಗದು ಎಂದು ಕೆಲವರು ಹೇಳಿಹರು. ಅದರಿಂದ ಆ ಲಕ್ಷಣವೆಂತೆಂದರೆ- "ಸರ್ವಸಿದ್ಧಿಃ- ತಾರಾವಹ್ನಿಮಖಾಮಿತ್ರವಸ್ವಾದ್ಯಾಸ್ಸಪ್ತ ಸಪ್ತ ಚ ॥ ಪ್ರಾಚ್ಯಾದಿ ಶುಕ್ರಮಾಕಲ್ಪ್ಯ ಕೋಣೇಷ್ವಗ್ನ್ಯಾದಿಕೇಷ್ವಪಿ ॥ ॥ ಇತಿ" ಇಲ್ಲಿ ಹೇಳಿದ ಕೃತ್ತಿಕಾದಿ ಏಳೇಳು ನಕ್ಷತ್ರಗಳು ಕ್ರಮದಿಂದ ಪ್ರಾಚ್ಯಾದಿ ದಿಕ್ಕುಗಳು. 'ಅಪಿ' ಶಬ್ದದಿಂದ ಕೃತ್ತಿಕೆ ಮಘೆ ಅನೂರಾಧೆ ಧನಿಷ್ಠೆ ಈ ನಾಲ್ಕು ನಕ್ಷತ್ರಗಳು ಕ್ರಮದಿಂದ ಅಗ್ನಿ ನಿರ್ಋತಿ ವಾಯು ಈಶಾನವೆಂಬ ನಾಲ್ಕು ದಿಙ್ನಕ್ಷತ್ರಗಳಲ್ಲಿ ಯಾವ ದಿಕ್ಕಿನ ನಕ್ಷತ್ರದಲ್ಲಿ ಯಾವ ಗ್ರಹನಿರುತಾನೋ ಆ ಗ್ರಹನು ಆ ದಿಕ್ಕಿನಲ್ಲಿರುತಾನೆಂದು ದಿಕ್ಕುಗಳ ಅರಿಯಬೇಕು. "ಅತ್ರ ಗ್ರಂಥಾಂತರಂ - ಯದ್ದಿಗ್ಭಿಃ ಖೇಚರಾಸ್ಸಂತಿ ತದ್ದಿಕ್ಸ್ಥಾಃ ಪ್ರತಿಖೇಚರಾಃ ॥ ಇತಿ" ಈ ಪ್ರಕಾರ ಪ್ರತಿ ಗ್ರಹರ ತಿಳಿದು ಆ ಪ್ರಕಾರ ಪ್ರತಿಶುಕ್ರನು ತನಗೆ ಪೂರ್ವಭಾಗ ದಲ್ಲಿಯೂ ಉತ್ತರ ಭಾಗದಲ್ಲಿಯೂ ಇರುವಾಗ್ಗೆ ಹೊಸ ಮನೆಯ ಪ್ರವೇಶವನ್ನೂ ಯಾತ್ರೆಯನ್ನೂ ಮಾಡಲಾಗದು. ಆ ಸಮಯದಲ್ಲಿ ಶುಕ್ರನು ಉಚ್ಚಸ್ವಕ್ಷೇತ್ರಗಳಲ್ಲಿದ್ದರೂ ಅಥವಾ ಭಾರ್ಗವ ಗೋತ್ರದ ಬ್ರಾಹ್ಮಣನನ್ನು ಮುಂಭಾಗದಲ್ಲಿ ಮಾಡಿಕೊಂಡು ಪ್ರವೇಶಿಸಿದರೂ ಆ ಶುಕ್ರ ದೋಷವಿಲ್ಲ. "ಸರ್ವಸಿದ್ಧಿಃ- ಶುಕ್ರೇ ಕ್ಷೇತ್ರೋಚ್ಚಗೇ ವಿಪ್ರೇ ಭೃಗುಗೋತ್ರೇಽಥವಾ ಗೃಹೇ ॥ ಗಚ್ಛೇದಾತ್ಯಯಿಕೇ ಕಾರ್ಯೇ ತತಃ ಶುಕ್ರೋ ನ ದೋಷಕೃತ್ ॥ ॥ ಇತಿ"

ವಧೂಪ್ರವೇಶ ಕಾಲವನು ಮುಹೂರ್ತ ಶತಕದಲ್ಲಿ ಹೇಳಿಹದು- "ಮುಹೂರ್ತ ಶತಕಂ- ಚಿತ್ರಾರ್ಕೇಂದುವಸೂತ್ತರಾದಿತಿಮರುತ್ತಿಷ್ಯಾನುರಾಧಾಶ್ವಿನೀ । ಪೌಷ್ಣಶ್ರೀಪತಿ ರೋಹಿಣೀವರುಣಭೇ ರಾಶೌ ಸ್ಥಿರೇ ಚೋಭಯೇ ॥ ಜೀವೇಂದೂಶನಸಾಂ ದಿನೇ ನವ ವಧೂವೇಶ್ಮಪ್ರವೇಶಃ ಶುಭಃ ॥। ತ್ಯಾಜ್ಯಾ ಸ್ಯಾನ್ನವಮೀ ದಿನಂ ಚ ನವಮಂ ಯಾತುಃ ಪ್ರವೇಶೇ ಪುನಃ ॥ ॥ ಇತಿ" ತನ್ನ ಮನೆಯಿಂದ ಹೊರಟುಹೋದರೆ ಎರಡನೆ ತನ್ನ ಮನೆಗೆ ಬರುವಲ್ಲಿ ನವಮೀ ತಿಥಿಯೂ ಹೊರಟ ಒಂಬತ್ತನೆಯ ದಿನವೂ ಒಂಬತ್ತನೆಯ ಮಾಸವೂ ಆಶ್ಲೇಷೆ ನಕ್ಷತ್ರವೂ ವರ್ಜ್ಯವು. "ಗ್ರಂಥಾಂತರಂ-ನಿರ್ಗಮಾನ್ನವಮೇ ಮಾಸೇ ನಿರ್ಗಮಾನ್ನವಮೇ ದಿನೇ ॥ ನವಮ್ಯಾಂ ಸರ್ಪಭೇ ಚೈವ ಕದಾಚನ್ನ ವಿಶೇದ್ಗೃಹಂ ॥ ॥ ಇತಿ"

ಇನ್ನು ಕೂಪಾರಂಭಕ್ಕಿರುವ ವಿಶೇಷವನು ಹೇಳುತಾನೆ- "ಇತರತ್ರೇತಿ-ಇತರತ್ರ=ಇದು ಹೊರತು ಇರುವ ಕೂಪಾರಂಭದಲ್ಲಿ, ಚರಭಾನಿ = ಚರ ಲಗ್ನಗಳು, ವಹ್ನ್ಯಾದಿಗಃ= ಕೃತ್ತಿಕಾದಿಗಳಲ್ಲಿರುವಂಥ, ಅರ್ಕಃಸ್ಥ = ಆದಿತ್ಯನು,, ಸಂತು = ಆಗಲಿ, ಚಿತ್ರಾದ್ವೀಂದ್ವ್ವಸುರಾಶ್ವಿಚಾಪಂ=ಚಿತ್ರಾದ್ವಿ = ಚಿತ್ರೆಸ್ವಾತಿ, ಇಂದು=ಮೃಗಶಿರೆ, ಅಸುರ= ಮೂಲ, ಅಶ್ವಿ= ಅಶ್ವಿನಿ ಚಾಪಂ = ಧನುರ್ಲಗ್ನ ಎಂದಿವುಗಳು, ಅಶುಭಂ = ಶುಭಪ್ರದವಲ್ಲ. ಜಲರ್ಕ್ಷಾಚ್ಛದೃಕ್=ಜಲರ್ಕ್ಷ=ಜಲರಾಶಿಯ ಲಗ್ನಗಳು, ಅಚ್ಛದೃಕ್ = ಶುಕ್ರದೃಷ್ಟಿಯು, ಶಸ್ತಂ= ಪ್ರಶಸ್ತವು ಎಂದರ್ಥ. ಕೂಪಾರಂಭಕ್ಕೂ ತಟಾಕಾರಂಭಕ್ಕೂ ನದಿ ಮೊದಲಾದುವುಗಳಿಗೆ ಸೇತು ಕಟ್ಟುವುದಕ್ಕೂ ಇವುಗಳಿಂದ ಆರಂಭದಲ್ಲಿ ಜಲವನ್ನು ಬಿಡುವುದಕ್ಕೂ ಮತ್ತು ಜಲದ ವಿಷಯವಾಗಿರುವ ಸಮಸ್ತ ಕಾರ್ಯಗಳಿಗೂ ಗೃಹಾರಂಭಕ್ಕೆ ಹೇಳಿದ ಮುಹೂರ್ತವೇ ಆಗಬೇಕು. ಇಲ್ಲಿ ಚರ ಲಗ್ನಗಳು ಆದೀತು. ಕರ್ಕಟಕ ಕೃತ್ತಿಕೆ ಉಭಯರಾಶಿ ಎಂದಿವುಗಳಲ್ಲಿ ಸೂರ್ಯನಿರಲಾಗಲೂ ಆದೀತು. ಆ ಗೃಹಾರಂಭಕ್ಕೆ ಹೇಳಿದ ನಕ್ಷತ್ರಗಳೊಳಗೆ ಚಿತ್ರೆ ಸ್ವಾತಿ ಮೃಗಶಿರೆ ಮೂಲ ಅಶ್ವಿನಿ ಈ ಐದು ನಕ್ಷತ್ರಗಳು ಧನುರ್ಲಗ್ನವು ಆಗದು. ಜಲರ್ಕ್ಷವೆಂದರೆ ಜಲನಕ್ಷತ್ರವು ಜಲರಾಶಿಗಳು ಆದೀತೆಂದರಿಯಬೇಕು. ಜಲನಕ್ಷತ್ರವು ಪೂರ್ವಾಷಾಢವು. ಜಲರಾಶಿಗಳು ಕರ್ಕಟಕ ಮೀನ ಕುಂಭ ಮಕರಗಳು. "ಕರ್ಕಿಕುಂಭ ಮೃಗಾಂತ್ಯಾಶ್ಚ ಸಂಪ್ರೋಕ್ತಾ ಜಲರಾಶಯಃ ॥ ಪೂರ್ವಾಷಾಢಾತ್ತ್ವಯಂ ತಾರಂ ಜಲನಕ್ಷತ್ರಮುಚ್ಯತೇ ॥ ॥ ಇತಿ" ಈ ಜಲನಕ್ಷತ್ರವು ಜಲರಾಶಿಗಳು ಶುಕ್ರದೃಷ್ಟಿಯು ಇಲ್ಲಿ ಅತಿ ಪ್ರಶಸ್ತಗಳು. ಸೇತುಬಂಧನೆಯಲ್ಲಿರುವ ವಿಶೇಷವನು ಗುರು ಹೇಳಿಹನು. "ಮಂದವಾರೇ ಚ ಸಸಂಗತೌ ವೃಷಲಗ್ನೇ ಶುಭೇಕ್ಷಿತೇ ॥ ಸೇತೂನಾಂ ಬಂಧನಂ ಕಾರ್ಯಂ ತಟಾಕೇ ಭೇದಮಾಗತೇ ॥ ॥ ಮಂದವಾರ ಯುತಾದ್ರಾರ್ಯಾಂ ವೃಷಲಗ್ನೇ ಚ ಬಂಧನಂ ॥ ಸೇತೂನಾಂ ಕಾರಯೇದತ್ರ ಶಿಲಾಬಂಧಾದಿಕಂ ತಥಾ ॥ ॥ ಇತಿ"

ಇನ್ನು ಗೃಹಾರ್ಥವಾಗಿ ತರುಚ್ಛೇದನೆಗೆ ಇರುವ ವಿಶೇಷವನು ಹೇಳುತಾನೆ- ಛಿಂದ್ಯಾದಿತಿ - ವಾರುಣಾಚ್ಯುತಯಮಸ್ವಾತ್ಯಾದಿಪಂಚಾಶ್ವಿಷು = ವಾರುಣ = ಶತಭಿಷೆ, ಅಚ್ಯುತ=ಶ್ರವಣ, ಯಮ=ಭರಣಿ, ಸ್ವಾತ್ಯಾದಿಪಂಚ=ಸ್ವಾತಿ ಮೊದಲಾದ ಐದು ನಕ್ಷತ್ರ, ಅಶ್ವಿಷು = ಅಶ್ವಿನಿ ಎಂದಿವುಗಳಲ್ಲಿ, ದಾರು = ವೃಕ್ಷವನ್ನು, ನ ಛಿಂದ್ಯಾತ್ = ಛೇದಿಸಲಾಗದೆಂದರ್ಥ. ಗೃಹಾರ್ಥವಾಗಿ ವೃಕ್ಷವನ್ನು ಛೇದಿಸುವುದಕ್ಕೆ ಶತಭಿಷೆ ಶ್ರವಣ ಭರಣಿ ಸ್ವಾತಿ ವಿಶಾಖೆ ಅನೂರಾಧೆ ಜ್ಯೇಷ್ಠೆ ಮೂಲ ಅಶ್ವಿನಿ ಈ ಒಂಬತ್ತು ನಕ್ಷತ್ರಗಳಾಗದು. ಮಿಕ್ಕಾದ ಹದಿನೆಂಟು ನಕ್ಷತ್ರಗಳಾದೀತು. ಮೇಲಾದುದೆಲ್ಲ ಗೃಹಾರಂಭಕ್ಕೆ ಹೇಳಿದ ಪ್ರಕಾರವೇ ನೋಡಿಕೊಳಬೇಕು.

ಅನಂತರದಲ್ಲಿ ಶಸ್ತ್ರಬಂಧ ಕಾಲವನು ಹೇಳುತಾನೆ-

ಮೂಲಾಂತ್ಯಾರ್ಕತ್ರಿಪುಷ್ಯಾದಿತಿವರುಣವಿಧಿ ದ್ವ್ಯುತ್ತರಾಃ ಶಸ್ತ್ರಬಂಧೇ ।
ಶಸ್ತಾ ನ ಸ್ವಾಂಬುಗಾಸದ್ವ್ಯಯಗತಗುರವಃ ತೇ ಚ ಜನ್ಮಾಷ್ಟಮಾಂತ್ಯೇ ॥
ಅಂಧಂ ಸಾರ್ಕಂ ಸಪಾರ್ಶ್ವಂ ಸ್ಥಿತಮುಡುನವಕಂ ಚೈತದೇಕಾದಶಾದ್ಯಂ ॥।
ಪ್ರೋದ್ವಾಹೇsನಿಷ್ಟಮಾಸಾನ್ನಿಮೃಗಖರಗೃಹಾನ್ ವಾ ತ್ಯಜೇಜ್ಜನ್ಮಭಾನಿ ॥ ೩೦ ॥

ಟೀಕಾ - ಮೂಲಾಂತ್ಯೇತಿ - ಶಸ್ತ್ರಬಂಧೇ=ಶಸ್ತ್ರಬಂಧದಲ್ಲಿ, ಮೂಲಾಂತ್ಯಾರ್ಕಾತ್ರಿ ಪುಷ್ಯಾದಿತಿವರುಣವಿಧಿದ್ವಿತ್ತರಾಃ=ಮೂಲ=ಮೂಲ, ಅಂತ್ಯ = ರೇವತಿ, ಅರ್ಕತ್ರಿ=ಹಸ್ತ ಚಿತ್ರೆ ಸ್ವಾತಿ, ಪುಷ್ಯ=ಪುಷ್ಯ, ಅದಿತಿ=ಪುನರ್ವಸು, ವರುಣ=ಶತಭಿಷೆ, ವಿಧಿದ್ವಿ=ರೋಹಿಣಿ ಮೃಗಶಿರೆ, ಉತ್ತರಾಃ=ಉತ್ತರಾತ್ರಯವಾದ ಉತ್ತರೆ ಉತ್ತರಾಷಾಢ ಉತ್ತರಾಭಾದ್ರೆ ಎಂದಿವುಗಳು, ಶಸ್ತಾಃ=ಪ್ರಶಸ್ತಂಗಳು. ಸ್ವಾಂಬುಗಾಸದ್ವ್ಯಯಗತ ಗುರವಃ=ಸ್ವ=ದ್ವಿತೀಯ, ಅಂಬು=ಚತುರ್ಥ, ಗ=ಇರುವಂಥ, ಅಸತ್=ಪಾಪಗ್ರಹರು, ವ್ಯಯಗತಗುರವಃ=ವ್ಯಯ= ದ್ವಾದಶ, ಗತಗುರವಃ = ಇರುವಂಥ ಬೃಹಸ್ಪತಿಯು, ಜನ್ಮಾಷ್ಟಮಾಂತ್ಯೇ = ಜನ್ಮ= ಜನ್ಮರಾಶಿ, ಅಷ್ಟಮ = ಜನ್ಮರಾಶಿ ವೆಸೆಯಿಂದ ಅಷ್ಟಮ, ಅಂತ್ಯೇ = ದ್ವಾದಶ ಎಂದಿವು ಗಳಲ್ಲಿ, ತೇ = ಆ ಪಾಪ ಗ್ರಹಗಳು, ನ = ನಿಷೇಧವು. ಅಂಧಂ = ಅಂಧ ನಕ್ಷತ್ರವನ್ನೂ, ಸಪಾರ್ಶ್ವಂ = ಪಾರ್ಶ್ವ ನಕ್ಷತ್ರ ಸಹಿತವಾದಂಥ, ಸಾರ್ಕಂ = ಆದಿತ್ಯ ಸಹಿತವಾದಂಥ, ಏತದೇಕಾದಶಾದ್ಯಂ=ಏತತ್ = ಈ ಆದಿತ್ಯನಿರುವ ನಕ್ಷತ್ರದ್ವೆಸೆಯಿಂದ, ಏಕಾದಶಾದ್ಯಂ= ಹನ್ನೊಂದನೆಯ ಮೊದಲಾದಂಥ, ಉಡುನವಕಂ = ಒಂಬತ್ತು ನಕ್ಷತ್ರಗಳನ್ನು, ಪ್ರೋದ್ವಾಹೇಽನಿಷ್ಟಮಾಸಾನ್ = ಪ್ರೋದ್ವಾಹೇ = ವಿವಾಹದಲ್ಲಿ, ಅನಿಷ್ಟಮಾಸಾನ್= ಅನಿಷ್ಟಪ್ರದವಾದಂಥ ಮಾಸಗಳನ್ನು, ವಿಮೃಗಖರಗೃಹಾನ್ = ವಿಮೃಗ = ಮಕರ ಹೊರತಾದಂಥ, ಖರಗೃಹಾನ್ = ಪಾಪಕ್ಷೇತ್ರ ಲಗ್ನಗಳನ್ನೂ ಜನ್ಮಭಾನಿ ವಾ=ಜನ್ಮ ನಕ್ಷತ್ರಗಳನ್ನೂ ತ್ಯಜೇತ್ = ವರ್ಜಿಸಲಿ ಎಂದರ್ಥ.

ಶಸ್ತ್ರಬಂಧವೆಂದರೆ ಆಯುಧಾಭ್ಯಾಸವಾಗಿಹದು. ಆಯುಧ ವಿದ್ಯವನ್ನು ಪ್ರಾರಂಭಿಸು ವುದರಲ್ಲಿ ಮೂಲ ರೇವತಿ ಹಸ್ತ ಚಿತ್ರೆ ಸ್ವಾತಿ ಪುಷ್ಯ ಪುನರ್ವಸು ಶತಭಿಷೆ ರೋಹಿಣಿ ಮೃಗಶಿರೆ ಉತ್ತರೆ ಉತ್ತರಾಷಾಢ ಉತ್ತರಾಭಾದ್ರೆ ಇಂತೀ ಹದಿಮೂರು ನಕ್ಷತ್ರಂಗಳಾಗ ಬೇಕು. ಮಿಕ್ಕಾದ ಹದಿನಾಲ್ಕು ನಕ್ಷತ್ರಂಗಳಾಗದು. ದ್ವಿತೀಯ ಚತುರ್ಥಗಳಲ್ಲಿ ಪಾಪಗ್ರಹರಿರಲಾಗದು. ದ್ವಾದಶದಲ್ಲಿ ಬೃಹಸ್ಪತಿ ಇರಲಾಗದು. ಕರ್ತೃವಿನ ಜನ್ಮರಾಶಿ ಯಲ್ಲೂ ಜನ್ಮರಾಶಿ ವೆಸೆಯಿಂದ ಅಷ್ಟಮ ದ್ವಾದಶಗಳಲ್ಲಿಯೂ ಪಾಪಗ್ರಹರು ಬೃಹಸ್ಪತಿ ಸಹ ಇರಲಾಗದು. ಮತ್ತು ಅಂಧನಕ್ಷತ್ರವನ್ನೂ ಆದಿತ್ಯನಿರುವ ನಕ್ಷತ್ರ ಒಂದು ಇವರ ಹಿಂದೆ ಮುಂದೆ ಇರುವ ನಕ್ಷತ್ರಗಳೆರಡು, ಆದಿತ್ಯನಿರುವ ನಕ್ಷತ್ರದ್ವೆಸೆಯಿಂದ ಹನ್ನೊಂದನೆಯ ನಕ್ಷತ್ರ ಮೊದಲಾಗಿ ಒಂಬತ್ತು ನಕ್ಷತ್ರಗಳು ಈ ಪ್ರಕಾರ ಹನ್ನೆರಡು ನಕ್ಷತ್ರಗಳು, ವಿವಾಹಕ್ಕೆ ಅನಿಷ್ಟ ಮಾಸಗಳಾದ ಕರ್ಕಟಕ ಕನ್ನಿ ಧನು ಕುಂಭ ಈ ನಾಲ್ಕು ಮಾಸಗಳು, ಮೀನದ ಅಂತ್ಯಾರ್ಧ ಈ ಪ್ರಕಾರ ನಾಲ್ಕುವರೆ ಮಾಸಗಳನ್ನು ಅವಶ್ಯವಾಗಿ ವರ್ಜಿಸಬೇಕು. ಪಾಪಗ್ರಹ ಕ್ಷೇತ್ರದ ಲಗ್ನಗಳಾಗದು. ಅದರಲ್ಲಿ ಮಕರ ಬಂದು ಆದೀತು. ಆ ಪ್ರಕಾರವಾಗಲಾಗಿ ವೃಷಭ ಮಿಥುನ ಕರ್ಕಟಕ ಕನ್ನಿ ತುಲೆ ಧನು ಮಕರ ಈ ಆರು ಲಗ್ನಗಳಾದೀತು. ಮಿಕ್ಕಾದ ಲಗ್ನಗಳಾಗದು. ಜನ್ಮನಕ್ಷತ್ರಗಳು ಮೂರೂ ಆಗದು. 'ವಾತ್ಯಜೇಜ್ಜನ್ಮಭಾನಿ' ಎಂದು 'ವಾ' ಶಬ್ದದಿಂದ ಅವಶ್ಯವಾಗಿ ಪ್ರಥಮ ಜನ್ಮನಕ್ಷತ್ರ ಮಾತ್ರ ವರ್ಜ್ಯವು. ತ್ರಿಜನ್ಮ ದ್ವಿಜನ್ಮಗಳು ಮಧ್ಯಮವೆಂದಾಯಿತು. ಅಂಧ ನಕ್ಷತ್ರವನರಿವದು ಹೇಗೆಂದರೆ ಆದಿತ್ಯನಿರುವ ನಕ್ಷತ್ರವು ಅಂಧವು. ಆಮೇಲೆ ಮೂರು ನಕ್ಷತ್ರವು ಅಂಧವಾಗಿಯೇ ಇಹದು. ಆಮೇಲೆ ಮೂರು ನಕ್ಷತ್ರ ಏಕ ದೃಷ್ಟಿಗಳು.

ಆಮೇಲೆ ಆರು ನಕ್ಷತ್ರ ದೃಷ್ಟಿಯುಳ್ಳ ನಕ್ಷತ್ರ. ಆಮೇಲೆ ಮೂರು ನಕ್ಷತ್ರ ಒಂದು ಕಣ್ಣಿನ ನಕ್ಷತ್ರ. ಆಮೇಲೆ ಆರು ನಕ್ಷತ್ರ ದೃಷ್ಟಿಯುಳ್ಳ ನಕ್ಷತ್ರ. ಆಮೇಲೆ ಮೂರು ಒಂದು ಕಣ್ಣಿನದು. ಆಮೇಲೆ ಮೂರು ಅಂಧಗಳು. "ಸಾರ್ಕಂ ನಕ್ಷತ್ರಮಂಧಂ ಸ್ಯಾತ್ ತಸ್ಮಾದೂರ್ಧ್ವಂ ತ್ರಿಕಂ ತ್ರಿಕಂ || ಅಂಧಕಾಣಾಕ್ಷಿದೃಕ್ಕಾಣದೃಗ್ದೃಕ್ಕಾಣಾಂಧಸಂಜ್ಞಕಾಃ || || ಇತಿ" ಇದಕ್ಕೆ ಅಭಿಜಿತ್ ಕೂಡಾ ಕೂಡಿಕೊಳ್ಳಬೇಕು. ಈ ಪ್ರಕಾರವಾಗುವಾಗ್ಗೆ ಆದಿತ್ಯನಿರುವ ನಕ್ಷತ್ರ ಒಂದು. ಅದರ ಹಿಂದೆ ಮೂರು ನಕ್ಷತ್ರ ಮುಂದೆ ಮೂರು ನಕ್ಷತ್ರ ಈ ಪ್ರಕಾರ ಏಳು ನಕ್ಷತ್ರಂಗಳು ಎಂದಾಯಿತು. "ಅತ್ರ ಸರ್ವಸಿದ್ಧಿಃ- ಏಕಂ ತ್ರಿಕಂ ತ್ರಿಕಂ ಷಟ್ಕಂ ಏಕಂ ಷಟ್ಕಂ ತ್ರಿಕಂ ತ್ರಿಕಂ || ಅಂಧಾಂಧಕಾಣದೃಕ್ಕಾಣದೃಕ್ಕಾಣಾಂಧಾ ರವೇಃ ಕ್ರಮಾತ್ || || ಇತಿ" ಈ ಅಂಧಾದಿ ನಕ್ಷತ್ರಗಳು ಬಹು ಪ್ರಕಾರವಿರುತ್ತದೆ. ಆದರೂ ಇಲ್ಲಿ ಹೇಳಿದ ಪ್ರಕಾರವೇ ಪ್ರಧಾನವಾಗಿಹದು.

ಅನಂತರದಲ್ಲಿ ಸಂಚಯನ ಕಾಲವನು ಹೇಳುತಾನೆ-

ಪಕ್ಷೇ ಸಿತೇ ಯುಜಿ ತಿಥೌ ಖಲು ಸಂಚಯೋಽಸ್ಥ್ನಾಂ |
ನೇಷ್ಟಾ ದ್ವಿರಾಶಿಗತತಾರಸಿತಾರವಾರಾಃ ||
ಪಿಂಡಪ್ರದಾತೃಜನಿಭಂ ಪ್ರತಿಪತ್ತೃತೀಯೇ |||
ಪ್ರೇತಾಷ್ಟಮರ್ಕ್ಷಮಿಹ ಶೀತಕರಃ ಶುನೀ ಚ || ೩೧ ||

ಟೀಕಾ - ಪಕ್ಷ ಇತಿ - ಅಸಿತೇ ಪಕ್ಷೇ = ಕೃಷ್ಣಪಕ್ಷದಲ್ಲಿ, ಅಯುಜಿ ತಿಥೌ = ಓಜ ತಿಥಿಯಲ್ಲಿ, ಅಸ್ಥ್ನಾಂ = ಅಸ್ಥಿಗಳ, ಸಂಚಯಃಖಲು = ಸಂಚಯನೆಯಷ್ಟೆ? ದ್ವಿರಾಶಿಗತ ತಾರಸಿತಾರವಾರಾಃ = ದ್ವಿರಾಶಿ = ಎರಡು ರಾಶಿಗಳನ್ನು, ಗತ = ಪ್ರಾಪಿಸಿ ಇರುವಂಥ, ತಾರಾ=ನಕ್ಷತ್ರ, ಸಿತ=ಶುಕ್ರ, ಆರ=ಅಂಗಾರಕ ಎಂದಿವರುಗಳ, ವಾರಾಃ=ವಾರಗಳು, ಪಿಂಡ ಪ್ರದಾತೃಜನಿಭಂ=ಪಿಂಡವಿಕ್ಕುವ ಕರ್ಮ ಕರ್ತೃವಿನ ಜನ್ಮನಕ್ಷತ್ರವು, ಪ್ರತಿಪತ್ತೃತೀಯೇ= ಪಾಡ್ಯ ತದಿಗೆಗಳು, ಪ್ರೇತಾಷ್ಟಮರ್ಕ್ಷಂ=ಪ್ರೇತ=ಪ್ರೇತದ, ಅಷ್ಟಮರ್ಕ್ಷಂ= ಜನ್ಮರಾಶಿ ದೆಸೆಯಿಂದ ಅಷ್ಟಮ ಲಗ್ನವು, ಇಹ = ಈ ಜನ್ಮಾಷ್ಟಮದಲ್ಲಿ, ಶೀತಕರಃ = ಚಂದ್ರನು, ಶುನೀಚ=ವಿಷ್ಟಿಕರಣವು, ನೇಷ್ಟಾಃ = ಇಷ್ಟವಿಲ್ಲ. ಆಗದೆಂಬರ್ಥ. ಅಸ್ಥಿಸಂಚಯನದಲ್ಲಿ ಕೃಷ್ಣಪಕ್ಷದಲ್ಲಿ ಓಜ ತಿಥಿಗಳೊಳಗೆ ಪಾಡ್ಯ ತದಿಗೆಗಳಾಗದೆಂದು ಮುಂದೆ ಹೇಳುತಾನೆ. ಆದ್ದರಿಂದ ಅದು ಹೊರತು ಪಂಚಮೀ ಸಪ್ತಮೀ ನವಮೀ ಏಕಾದಶೀ ತ್ರಯೋದಶೀ ಅಮಾವಾಸ್ಯೆ ಈ ಆರು ತಿಥಿಗಳು ಆಗಬೇಕು. ಮಿಕ್ಕಾದ ತಿಥಿಗಳಾಗದು. ಎರಡು ರಾಶಿಗಳನ್ನು ಪ್ರಾಪಿಸಿ ಇರುವ ನಕ್ಷತ್ರಂಗಳಾಗದು. ಕೃತ್ತಿಕೆ ಮೃಗಶಿರೆ ಪುನರ್ವಸು ಉತ್ತರೆ ಚಿತ್ರೆ ವಿಶಾಖೆ ಉತ್ತರಾಷಾಢ ಧನಿಷ್ಠೆ ಪೂರ್ವಾಭಾದ್ರೆ ಈ ಒಂಬತ್ತು ನಕ್ಷತ್ರಂಗಳು ದ್ವಿರಾಶಿ ಗತ ತಾರೆಗಳು. ಇವು ಅಸ್ಥಿಸಂಚಯನೆಯಲ್ಲಿ ವರ್ಜ್ಯಂಗಳು. ಮಂಗಳವಾರ ಶುಕ್ರವಾರಗಳಾಗದು. ಉಳಿದ ವಾರಗಳಾದೀತು. ಕರ್ಮ ಕರ್ತೃವಿನ ಪ್ರಥಮ ಪರ್ಯಾಯದ ಜನ್ಮನಕ್ಷತ್ರವು, ಪಾಡ್ಯ ತದಿಗೆಗಳೆರಡು ತಿಥಿಗಳು, ಪ್ರೇತದ ಜನ್ಮರಾಶಿ ದೆಸೆಯಿಂದ ಅಷ್ಟಮರಾಶಿಯ ಲಗ್ನವು, ಆ ಅಷ್ಟಮ ರಾಶಿಯಲ್ಲಿ ಚಂದ್ರನಿರುವಾಗಲೂ, ಭದ್ರಕರಣವೂ ಆಗದು. ಇಲ್ಲಿ 'ಶುನೀ' ಚ ಎಂದು ದೋಷ ಪ್ರಕರಣದಲ್ಲಿ ಆಗದೆಂದು

ಹೇಳಿದ ದೋಷಗಳಲ್ಲಿ ಸೇರಿರುವ ಭದ್ರಕರಣವನ್ನು ಮಾತ್ರ ಇಲ್ಲಿ ಆಗದೆಂದು ಹೇಳಿದ್ದರಿಂದ ಅಲ್ಲಿ ಹೇಳಿದ ಉಳಿದ ದೋಷಗಳೆಲ್ಲ ವರ್ಜಿಸಬೇಡವೆಂದರಿಯಬೇಕು. ಇಲ್ಲಿ ಹೇಳಿದುದು ಸಮಸ್ತವು ದಶಾಹ ಕಳೆದ ಬಳಿಕ ಉಳ್ಳ ವಿಧಿಗೆ ಎಂದರಿವದು. ದಶಾಹ ಮಧ್ಯದಲ್ಲಿ ಮಾಡುವದಾದರೆ ದ್ವಿರಾಶಿಗತ ನಕ್ಷತ್ರಗಳು, ಶುಕ್ಲಪಕ್ಷವು, ಸಮತಿಥಿಗಳು ಸಹ ವರ್ಜ್ಯಂಗಳಲ್ಲ. ಗ್ರಹಿಸಬಹುದು. ಚತುರ್ದಶೀ ತಿಥಿಯು ಮೃತವಾದ ಐದನೇಯ ದಿನವು, ಕರ್ಮ ಕರ್ತೃವಿನ ಮೂರು ಜನ್ಮನಕ್ಷತ್ರಂಗಳು, ತ್ರಿಪದ ನಕ್ಷತ್ರಂಗಳಾದ ಪುನರ್ವಸು ವಿಶಾಖೆ ಪೂರ್ವಾಭಾದ್ರೆ ಈ ಮೂರು ನಕ್ಷತ್ರಗಳು, ಮತ್ತು ರೋಹಿಣಿ ರೇವತಿಗಳೆರಡು ಈ ಐದು ನಕ್ಷತ್ರಗಳು, ನಂದ ತಿಥಿಗಳಾದ ಪಾಡ್ಯ ಷಷ್ಠೀ ಏಕಾದಶಿಗಳು, ಶುಕ್ರವಾರವು ಇಷ್ಟರನ್ನು ಅವಶ್ಯವಾಗಿ ವರ್ಜಿಸಬೇಕು. "ಅತ್ರಗುರು:- ಆಶೌಚಾಗಮನಾತ್ಪೂರ್ವಂ ಅಸ್ಥಿಸಂಚಯನಂ ಯದಿ ‖ ದ್ವಿರಾಶಿಗತನಕ್ಷತ್ರಂ ಶುಕ್ಲಪಕ್ಷ: ಸಮಾತಿಥಿ: ‖ ‖ ಗೃಹ್ಯತೇ ತತ್ರ ತು ತ್ಯಾಜ್ಯಂ ಪಕ್ಷದ್ವಯಚತುರ್ದಶೀ ‖ ದಿನಂ ಚ ಪಂಚಮಂ ವರ್ಜ್ಯಂ ಅನಿಶಾಸರ್ಮ ಮುಗ್ಧವತ್ ‖ ‖ ತ್ರಿಜನ್ಮಸು ತ್ರಿಪಾದರ್ಕ್ಷೇ ನಂದಾಯಾಂ ಭೃಗುವಾಸರೇ ‖ ಧಾತೃಪೌಷ್ಣಭಯೋಶ್ಚಾಪಿ ಕುಲಕ್ಷಯಕರಂ ಭವೇತ್ ‖ ‖ ಇತಿ" ಅಲ್ಲಿ 'ಅಯುಜ ತಿಥೌ' ಹೇಳಿದ್ದರಿಂದ ಇಲ್ಲಿ ಮೃತ ದಿವಸದಾರಭ್ಯ ಓಜ ದಿವಸಗಳಲ್ಲಿ ಆಗಬೇಕೆಂದರಿಯುವದು. ಅದರಲ್ಲಿ ಐದನೆಯ ದಿವಸವಾಗದೆಂದು ಹಿಂದೆ ಹೇಳಿತು. ಶಾಖಾ ಸಂಸ್ಕಾರದಲ್ಲಿ ತ್ರೈಪಕ್ಷಾದಿ ಶ್ರಾದ್ಧ ಸಪಿಂಡೀಕರಣ ಮುಂತಾದ ಸಮಸ್ತ ಅಪರ ಕರ್ಮಕ್ಕೂ ಸ್ವಗೃಹ್ಯೋಕ್ತ ದಿನ ಮಾಸ ವರ್ಷಗಳಲ್ಲಿ ಇಲ್ಲಿ ಸಂಚಯನಕ್ಕೆ ಹೇಳಿದ ಪ್ರಕಾರದ ಮುಹೂರ್ತಗಳಲ್ಲಿ ವಿಧಿಸಬೇಕು. ಅಷ್ಟಕಾ ಶ್ರಾದ್ಧವನ್ನು ಮಾಡುವುದಕ್ಕೆ ಕಾಲವನು ಹೇಳುತದೆ-

ಕನ್ಯಾಮಾಸದಲ್ಲಿ ಮಘೆ ಭರಣಿ ಅಶ್ವಿನಿ ಮೃಗಶಿರೆ ಪೂರ್ವಾತ್ರಯವಾದ ಹುಬ್ಬೆ ಪೂರ್ವಾಷಾಢ ಪೂರ್ವಾಭಾದ್ರೆ ಅನೂರಾಧೆ ಸ್ವಾತಿ ಚಿತ್ರೆ ರೇವತಿ ಹಸ್ತ ಶ್ರವಣ ಧನಿಷ್ಠೆ ಶತಭಿಷೆ ಆರ್ದ್ರೆ ಪುಷ್ಯ ಜ್ಯೇಷ್ಠೆ ಈ ಹದಿನೆಂಟು ನಕ್ಷತ್ರಂಗಳಲ್ಲಿ ನಂದತಿಥಿ ಚತುರ್ದಶಿ ಸಹ ಹೊರತಿರುವ ಬಿದಿಗೆ ತದಿಗೆ ಚೌತಿ ಪಂಚಮಿ ಸಪ್ತಮಿ ಅಷ್ಟಮಿ ನವಮಿ ದ್ವಾದಶಿ ತ್ರಯೋದಶಿ ಪೌರ್ಣಮೀ ಅಮಾವಾಸ್ಯೆ ಈ ತಿಥಿಗಳಲ್ಲಿ ಕುಜವಾರ ಶುಕ್ರವಾರ ಹೊರತಿರುವ ವಾರಗಳಲ್ಲಿ ತನ್ನದು ತನ್ನ ಭಾರ್ಯೆಯದು ತನ್ನ ಹಿರಿಯ ಪುತ್ರನದು ಇಂತೀ ಮೂರು ಜನರ ಮೂರು ಜನ್ಮನಕ್ಷತ್ರಗಳನ್ನು ವರ್ಜಿಸಿ ಅಷ್ಟಕಾಶ್ರಾದ್ಧವನು ಮಾಡಬೇಕು. "ಅತ್ರಮುಹೂರ್ತಶತಕಂ- ಕನ್ಯಾಮಾಸಿ ಮಘಾ ತಿಥೌ ಸಿತಾರರಹಿತೇ ವಾರೇ ಗೃಹೀತಾತ್ಮನೋ ಜನ್ಮರ್ಕ್ಷತ್ರಿತಯಂ ಚ ದಾರಸುತಯೋರ್ಹಿತ್ವಾಽಷ್ಟಕಾಂ ಧಾರಯೇತ್ ‖ ಇತಿ" ತುಲಾ ಮಾಸವೂ ಕುಂಭ ಮಾಸವೂ ಈ ಅಷ್ಟಕಾಶ್ರಾದ್ಧದಲ್ಲಿ ಆದೀತು. "ಕನ್ಯಾ ತುಲಾಗತೇ ಭಾನೌ ಕುಂಭಗೇ ಚ ತಥೈವ ಚ ‖ ಯತ್ನಾದೇವಾಷ್ಟಕಾಶ್ರಾದ್ಧಂ ಕುರ್ಯಾತ್ ಸ್ಯಾತ್ಕೃಷ್ಣಪಕ್ಷಕೇ ‖ ‖ ಇತಿ" ಈ ಅಷ್ಟಕಾಶ್ರಾದ್ಧವು ಕೃಷ್ಣಪಕ್ಷದಲ್ಲಿಯೇ ಆಗಬೇಕು. "ಪಂಚಮ್ಯಾ: ಪರತ: ಶ್ರೇಷ್ಠ ಆಪಂಚಮ್ಯಾ: ಸಿತೇಽಪಿ ಚ ‖" ಎಂಬದರಿಂದ ಕೃಷ್ಣಪಕ್ಷದ ಪಂಚಮೀದೆಸೆಯಿಂದ ಮೇಲೆ ಶುಕ್ಲಪಕ್ಷದ ಪಂಚಮೀ ಪರ್ಯಂತ ಉತ್ತಮ ಎಂಬದಾಯಿತು. ಶ್ರಾದ್ಧಕರ್ತೃವಿನ ಪ್ರಥಮ ಪುತ್ರನ ತನ್ನ ಪತ್ನಿಯ ಈ ಮೂರು ಜನರ ಮೂರು

ಜನ್ಮನಕ್ಷತ್ರಗಳು ಮತ್ತು ಕರ್ತೃವಿನ ಜನ್ಮನಕ್ಷತ್ರದ್ವೆಸೆಯಿಂದ ಇಪ್ಪತ್ತನಾಲ್ಕನೆಯ ನಕ್ಷತ್ರವು ಇಪ್ಪತ್ತೇಳನೆಯ ನಕ್ಷತ್ರವು ಸಹ ವರ್ಜ್ಯಗಳೆಂದು ಗುರು ಹೇಳಿಹನು- **"ಗುರು:- ಕರ್ತೃಜನ್ಮತ್ರಯಂ ವರ್ಜ್ಯಂ ದಾರಾಸೂನ್ವೋಸ್ತ್ರಿಜನ್ಮ ಚ ॥ ಚತುರ್ವಿಂಶತಿಭಂ ಕರ್ತುಃ ಸಪ್ತವಿಂಶತಿಭಂ ತಥಾ ॥ ॥ ಇತಿ"** ಈ ಶ್ರಾದ್ಧ ವಿಷಯದಲ್ಲಿ ಚತುರ್ದಶಿಯಾಗ ದೆಂದರೂ ದುರ್ಮರಣವಾದವರಿಗೆ ಪ್ರತ್ಯೇಕವೇನಾದರೂ ಶ್ರಾದ್ಧಮಾಡುವಲ್ಲಿ ಚತುರ್ದಶಿಯು ಅತಿಪ್ರಶಸ್ತವೆಂದು ಹೇಳಿಹದು. **"ಸ್ಮೃತಿ:- ವೃಕ್ಷಾರೋಹಣ ಲೋಹಾದ್ಯೈರ್ವಿದ್ಯುಜ್ಜಲವಿಷಾದಿಭಿಃ ॥ ಶೃಂಗಿದಂಷ್ಟ್ರಿವಿಪನ್ನಾ ಯೇ ತೇಷಾಂ ಶಸ್ತಾ ಚತುರ್ದಶೀ ॥ ॥ ಇತಿ"**

ಅನಂತರದಲ್ಲಿ ವಸ್ತ್ರಧಾರಣೆ ಕಾಲವನು ಹೇಳುತ್ತಾನೆ-

ದ್ವಿಡ್ವ್ಯಯೇಂದುವಸುದಸ್ರರೇವತೀ ।

ಹಸ್ತಪಂಚಸುರಸೂರ್ದ್ವ್ಯಜೋತ್ತರಾಃ ॥

ಶುಕ್ರದೃಕ್ಚ ವಸನೇ ಶುಭಾ ಮತಾ ।॥

ನ ಸ್ತ್ರ್ಯಜಾಲಿಧನುರುಗ್ರವಾಸರಾಃ ॥ ೩೨ ॥

ಟೀಕಾ - ದ್ವಿಡಿತಿ - ದ್ವಿಡ್ವ್ಯಯ = ಷಷ್ಠ ದ್ವಾದಶಗಳಲ್ಲಿ, ಇಂದು=ಚಂದ್ರನು, ವಸು= ಧನಿಷ್ಠೆ, ದಸ್ರ = ಅಶ್ವಿನಿ, ರೇವತೀ = ರೇವತಿ, ಹಸ್ತಪಂಚ=ಹಸ್ತ, ಚಿತ್ರೆ, ಸ್ವಾತಿ, ವಿಶಾಖೆ, ಅನೂರಾಧೆ, ಸುರಸೂರ್ದ್ವಿ = ಪುನರ್ವಸು, ಪುಷ್ಯ, ಅಜ = ರೋಹಿಣಿ, ಉತ್ತರಾಃ= ಉತ್ತರಾತ್ರಯಗಳು, ಶುಕ್ರದೃಕ್ಚ = ಶುಕ್ರದೃಷ್ಟಿಯು, ವಸನೇ = ವಸ್ತ್ರಧಾರಣೆಯಲ್ಲಿ. ಶುಭಾಮತಾ = ಶುಭಪ್ರದವು. ಸ್ತ್ರ್ಯಜಾಲಿಧನುರುಗ್ರವಾಸರಾಃ=ಸ್ತ್ರೀ=ಕನ್ನಿ, ಅಜ=ಮೇಷ, ಅಲಿ=ವೃಶ್ಚಿಕ, ಧನುಃ=ಧನು, ಉಗ್ರವಾಸರಾಃ=ಪಾಪವಾರವೆಂದಿವುಗಳು. ನ=ನಿಷೇಧಂಗಳು ಎಂದರ್ಥ.

ವಸ್ತ್ರಧಾರಣೆಯಲ್ಲಿ ಷಷ್ಠದಲ್ಲಿಯೂ ದ್ವಾದಶದಲ್ಲಿಯೂ ಚಂದ್ರನು, ಧನಿಷ್ಠೆ ಅಶ್ವಿನಿ ರೇವತಿ ಹಸ್ತ ಚಿತ್ರೆ ಸ್ವಾತಿ ವಿಶಾಖೆ ಅನೂರಾಧೆ ಪುನರ್ವಸು ಪುಷ್ಯ ರೋಹಿಣಿ ಉತ್ತರೆ ಉತ್ತರಾಷಾಢ ಉತ್ತರಾಭಾದ್ರೆ ಈ ಹದಿನಾಲ್ಕು ನಕ್ಷತ್ರಗಳು ಸಹ ಶುಭಂಗಳು. ಉಳಿದ ಹದಿಮೂರು ನಕ್ಷತ್ರಂಗಳು ಆಗದು. ಇಲ್ಲಿ ಶುಕ್ರ ದೃಷ್ಟಿಯು ಪ್ರಶಸ್ತವು, ಕನ್ಯಾಲಗ್ನ ಮೇಷ ಲಗ್ನ ಧನುರ್ಲಗ್ನ ವೃಶ್ಚಿಕ ಲಗ್ನ ಪಾಪ ಗ್ರಹರ ವಾರಗಳು ಸಹ ವರ್ಜ್ಯಂಗಳು. ವಿವಾಹಾದಿ ಕಾಲಗಳಲ್ಲಿಯೂ ಅರಸು ಮೊದಲಾದವರು ಉಡುಗೊರೆ ಮಾಡಿದ ವಸ್ತ್ರಗಳಲ್ಲಿಯೂ ಮತ್ತೊಬ್ಬ ಧರಿಸಿದ ವಸ್ತ್ರ ಧರಿಸುವುದರಲ್ಲಿಯೂ ಕಾಲ ನಿಯಮವನು ನೋಡಬೇಕೆಂಬುದಿಲ್ಲ. **"ಅತ್ರಮಾಧವೀಯಂ-ವಿವಾಹಾದಿಷು ಕಾರ್ಯೇಷು ರಾಜಾಜ್ಞಾ ಯಾಂ ಚ ವಾಸಸಾಂ॥ ಪರಿಧಾನಂ ನವೀನಾನಾಂ ಗಣೇ ತ್ಯಾಜ್ಯೇ ನ ದುಷ್ಯತಿ ॥ ॥ ಗ್ರಂಥಾಂತರಂ- ಅನ್ಯಾಂಗೇ ಭುಕ್ತಪೂರ್ವೇ ಚ ಮಾನ್ಯೈರ್ದತ್ತೇ ಪ್ರಸಾದತಃ ॥ ನ ಕಾಲನಿಯಮಂ ಪ್ರಾಹುಃ ನವವಸ್ತ್ರೇ ವಿಪಶ್ಚಿತಃ ॥ ॥ ಇತಿ"** ಆಭರಣಾದಿಗಳ ಧರಿಸುವಲ್ಲಿಯೂ ಇದೇ ಪ್ರಕಾರ ನೋಡಿಕೊಳ್ಳಬೇಕು.

ಅನಂತರದಲ್ಲಿ ಯಾತ್ರಾಕಾಲವನು ಹೇಳುತ್ತಾನೆ-

ಯಾಯಾನ್ನೈರ್ಋತಭುಕ್ತಿಭೇ ಸ್ಥಿರನೃಯುಕ್ಚಿತ್ರಾಂಬುಗೇಂದೂಂಸ್ತ್ಯಜೇತ್ ।
ಅರ್ಕಾರಾರ್ಯಬುಧಾಚ್ಛಮಂದಶಶಿನಾಂ ವಾರಾಂಸ್ತಥೈಂದ್ರ್ಯಾದಿಷು ॥
ಪ್ರಾಚ್ಯಾದಿಷ್ವಥ ದಿಕ್ಷು ವಿಶ್ವಹರಿಭೇ ಬುಧ್ನ್ಯಾಶ್ವಿಭೇ ರೋಹಿಣೀ ।।।
ಪುಷ್ಯೌ ಭಾನುಭಗೌ ಚ ಜನ್ಮಭಮಸಚ್ಚಂದ್ರೋಽಸ್ತು ಷಷ್ಠಾಂತ್ಯಯೋಃ ॥ ೩೩॥

ಟೀಕಾ-ಯಾಯಾದಿತಿ-ನೈರ್ಋತಭುಕ್ತಿಭೇ = ನೈರ್ಋತ = ಮೂಲ, ಭುಕ್ತಿಭೇ=ಅನ್ನಪ್ರಾಶನ ನಕ್ಷತ್ರ ಎಂದಿವರಲ್ಲಿ, ಯಾಯಾತ್=ಯಾತ್ರೆ ಮಾಡಲಿ. ಸ್ಥಿರನೃಯುಕ್ಚಿತ್ರಾಂಬುಗೇಂದೂನ್=ಸ್ಥಿರ=ಸ್ಥಿರ ಲಗ್ನ, ನೃಯುಕ್=ಮಿಥುನ ಲಗ್ನ, ಚಿತ್ರಾ=ಚಿತ್ರಾನಕ್ಷತ್ರ, ಅಂಬುಗ=ಚತುರ್ಥಗತನಾದಂಥ, ಇಂದೂನ್=ಚಂದ್ರ ಎಂಬಿವುಗಳನ್ನು, ತಥಾ=ಹಾಗೇ, ಐಂದ್ರ್ಯಾದಿಷು=ಇಂದ್ರಾದ್ಯಷ್ಟ ದಿಕ್ಕುಗಳಲ್ಲಿ, ಅರ್ಕಾರಾರ್ಯಬುಧಾಚ್ಛಮಂದಶಶಿನಾಂ= ಅರ್ಕ=ಆದಿತ್ಯ, ಆರ=ಅಂಗಾರಕ, ಆರ್ಯ=ಗುರು, ಬುಧ=ಬುಧ, ಅಚ್ಛ=ಶುಕ್ರ, ಮಂದ= ಶನಿ, ಶಶಿನಾಂ=ಚಂದ್ರ ಎಂದಿವರುಗಳ, ವಾರಾನ್=ವಾರಗಳನ್ನು, ಅಥ=ಆಮೇಲೆ, ಪ್ರಾಚ್ಯಾದಿಷು = ಪೂರ್ವಾದಿಗಳಾದಂಥ, ದಿಕ್ಷು = ನಾಲ್ಕು ದಿಕ್ಕುಗಳಲ್ಲಿ, ವಿಶ್ವಹರಿಭೇ= ಉತ್ತರಾಷಾಢ ಶ್ರವಣಗಳನ್ನು, ಬುಧ್ನ್ಯಾಶ್ವಿಭೇ = ಉತ್ತರಾಭಾದ್ರ ಅಶ್ವಿನಿಗಳನ್ನು, ರೋಹಿಣೀ ಪುಷ್ಯೇ=ರೋಹಿಣೀ ಪುಷ್ಯಗಳನ್ನು, ಭಾನುಭಗೌ ಚ=ಹಸ್ತ ಉತ್ತರೆಗಳನ್ನು, ತ್ಯಜೇತ್ = ವರ್ಜಿಸಬೇಕು. ಜನ್ಮಭಂ = ಪ್ರಥಮ ಜನ್ಮನಕ್ಷತ್ರವು, ಅಸತ್ = ನಿಷೇಧವು, ಷಷ್ಠಾಂತ್ಯಯೋಃ = ಷಷ್ಠ ದ್ವಾದಶಗಳಲ್ಲಿ, ಚಂದ್ರಃ = ಚಂದ್ರನು, ಅಸ್ತು = ಇರಲಿ, ಎಂದರ್ಥ.

ಯಾತ್ರೆಯನು ಮಾಡುವಲ್ಲಿ ಚಿತ್ರೆಯು ಯಾವ ದಿಕ್ಕಿಗೂ ಆಗದೆಂಬುದರಿಂದ ಅನ್ನಪ್ರಾಶನೆಗೆ ವಿಧಿಸಿದ ಹದಿನಾರು ನಕ್ಷತ್ರಗಳಲ್ಲಿ ಚಿತ್ರೆ ಹೊರತು ಹದಿನೈದು ನಕ್ಷತ್ರಗಳು ಮೂಲ ಒಂದು ಆ ಪ್ರಕಾರ ಹದಿನಾರು ನಕ್ಷತ್ರಗಳು ಶುಭಂಗಳು. ಮಿಕ್ಕಾದ ನಕ್ಷತ್ರಗಳಾಗದು. ಸ್ಥಿರಲಗ್ನಗಳಾದ ವೃಷಭ ಸಿಂಹ ವೃಶ್ಚಿಕ ಕುಂಭಗಳು ನಾಲ್ಕು ಮಿಥುನ ಒಂದು ಆ ಪ್ರಕಾರ ಐದು ಲಗ್ನಗಳು ಮತ್ತು ಚಿತ್ರಾನಕ್ಷತ್ರವು ಚತುರ್ಥದಲ್ಲಿ ಚಂದ್ರ ಸಹ ಯಾತ್ರೆಯಲ್ಲಿ ವರ್ಜ್ಯಂಗಳು. ಇಂದ್ರ ದಿಕ್ಕಿಗೆ ಆದಿತ್ಯವಾರ, ಆಗ್ನೇಯಕ್ಕೆ ಮಂಗಳವಾರ, ಯಾಮ್ಯಕ್ಕೆ ಗುರುವಾರ, ನೈರ್ಋತ್ಯಕ್ಕೆ ಬುಧವಾರ, ವಾರುಣ್ಯಕ್ಕೆ ಶುಕ್ರವಾರ, ವಾಯುವ್ಯಕ್ಕೆ ಶನಿವಾರ, ಸೌಮ್ಯಕ್ಕೆ ಚಂದ್ರವಾರ, ಐಶಾನ್ಯಕ್ಕೆ ರವಿವಾರ ಈ ಪ್ರಕಾರ ಆಯಾಯ ದಿಕ್ಕುಗಳಿಗೆ ಆಯಾಯ ವಾರಂಗಳನ್ನು ಬಿಡಬೇಕು. ಪೂರ್ವದಿಕ್ಕಿಗೆ ಉತ್ತರಾಷಾಢ ಶ್ರವಣಗಳು, ದಕ್ಷಿಣ ದಿಕ್ಕಿಗೆ ಉತ್ತರಾಭಾದ್ರ ಅಶ್ವಿನಿಗಳು, ಪಶ್ಚಿಮಕ್ಕೆ ರೋಹಿಣಿ ಪುಷ್ಯಗಳು, ಉತ್ತರಕ್ಕೆ ಹಸ್ತ ಉತ್ತರೆಗಳು ಈ ಪ್ರಕಾರ ಆಯಾಯ ದಿಕ್ಕುಗಳಿಗೆ ಆಯಾಯ ನಕ್ಷತ್ರಂಗಳ ಬಿಡಬೇಕು. ಪ್ರಥಮ ಪರ್ಯಾಯದ ಜನ್ಮನಕ್ಷತ್ರವ ಮಾತ್ರ ವರ್ಜಿಸಿದರೆ ಸಾಕು. ದ್ವಿತೀಯ ತೃತೀಯ ಜನ್ಮನಕ್ಷತ್ರಂಗಳು ವರ್ಜ್ಯಗಳಲ್ಲ. ಯಾತ್ರಾಲಗ್ನದ ಷಷ್ಠ ದ್ವಾದಶಗಳಲ್ಲಿ ಚಂದ್ರನಿದ್ದರೆ ಪ್ರಶಸ್ತವು. 'ಸರ್ವದಿಕ್ಷು ಶುಭಂ ಮೂಲಂ ಚಿತ್ರಾಂ ಸರ್ವತ್ರ ವರ್ಜಯೇತ್ ॥' ಎಂದು ಪ್ರಶ್ನಮಾರ್ಗದಲ್ಲಿ ಹೇಳಿದ್ದರಿಂದ ಚಿತ್ರಾನಕ್ಷತ್ರವು ಯಾವ ದಿಕ್ಕಿನ ಯಾತ್ರೆಗೂ

ವರ್ಜ್ಯವಾದ್ದರಿಂದ ಅನ್ನಪ್ರಾಶನೆಗೆ ವಿಧಿಸಿದ ನಕ್ಷತ್ರಗಳಲ್ಲಿ ಚಿತ್ರೆಯ ಬಿಟ್ಟು ಮಿಕ್ಕಾದ ನಕ್ಷತ್ರಗಳಲ್ಲಿ ಆಯಾಯ ದಿಕ್ಕುಗಳ ನಕ್ಷತ್ರಗಳನ್ನು ಬಿಟ್ಟು ಉಳಿದ ನಕ್ಷತ್ರಗಳಲ್ಲಿಯೂ ಯಾತ್ರೆಯನು ಮಾಡಬೇಕು. ಕೃತ್ತಿಕಾದಿ ಏಳು ನಕ್ಷತ್ರಗಳು ಪೂರ್ವ ದಿಕ್ಕಿಗೆ, ದಕ್ಷಿಣ ದಿಕ್ಕಿಗೆ ಮಘಾದಿ ಏಳು ನಕ್ಷತ್ರಗಳು, ಪಶ್ಚಿಮ ದಿಕ್ಕಿಗೆ ಅನೂರಾಧಾದಿ ಏಳು ನಕ್ಷತ್ರಗಳು, ಉತ್ತರಕ್ಕೆ ಧನಿಷ್ಠಾದಿ ಏಳು ನಕ್ಷತ್ರಗಳು, ಆಗ್ನೇಯಕ್ಕೆ ಕೃತ್ತಿಕೆ, ನೈರ್ಋತ್ಯಕ್ಕೆ ಮಘೆ, ವಾಯುವ್ಯಕ್ಕೆ ಅನೂರಾಧೆ, ಈಶಾನ್ಯಕ್ಕೆ ಧನಿಷ್ಠೆ ಇವು ದಿಙ್ನಕ್ಷತ್ರಗಳು. "ಅತ್ರ ಸರ್ವಸಿದ್ಧಿ:- **ತಾರಾ ಪಶ್ಚಿಮಘಾಮಿತ್ರವಸ್ವಾದ್ಯಾಃ ಸಪ್ತ ಸಪ್ತ ಚ ॥ ಪ್ರಾಚ್ಯಾದಿಷು ಕ್ರಮಾತ್ಕಲ್ಪ್ಯಾಃ ಕೋಣೇಷ್ವಗ್ನ್ಯಾದಿಕೇಷ್ವಪಿ ॥ ॥ ಇತಿ"** ಇದರಲ್ಲಿ ಅಭಿಜಿತ್ ಸಹಿತವಾಗಿ ನೋಡಿಕೊಳ್ಳಬೇಕು. ಆಯಾಯ ದಿಕ್ಕಿನ ದಿಙ್ನಕ್ಷತ್ರಗಳಲ್ಲಿ ಅನ್ನಪ್ರಾಶನೆಗೆ ವಿಧಿಸದೆ ಇರುವ ನಕ್ಷತ್ರಗಳ ಬಿಟ್ಟು ಮಿಕ್ಕಾದ ನಕ್ಷತ್ರಗಳಲ್ಲಿ ಆಯಾಯ ದಿಕ್ಕಿನ ಯಾತ್ರೆಗೆ ಅತಿ ಪ್ರಶಸ್ತಂಗಳು. ಪೂರ್ವ ದಿಕ್ಕಿನ ದಿಙ್ನಕ್ಷತ್ರಗಳಲ್ಲಿ ಉತ್ತರ ದಿಕ್ಕಿಗೆ, ಉತ್ತರ ದಿಙ್ನಕ್ಷತ್ರಗಳಲ್ಲಿ ಪೂರ್ವಕ್ಕೆ, ಪಶ್ಚಿಮ ದಿಙ್ನಕ್ಷತ್ರಗಳಲ್ಲಿ ದಕ್ಷಿಣಕ್ಕೆ ದಕ್ಷಿಣ ದಿಙ್ನಕ್ಷತ್ರಗಳಲ್ಲಿ ಪಶ್ಚಿಮಕ್ಕೆ ಈ ಪ್ರಕಾರ ಯಾತ್ರೆಯನು ಮಾಡಬಹುದು. ಇದಕ್ಕೆ ವ್ಯತ್ಯಸ್ತವಾಗಿ ಯಾತ್ರೆ ಮಾಡಲಾಗದು. ಏಕೆಂದರೆ ವಾಯುವ್ಯದಿಂದ ಅಗ್ನಿಪರ್ಯಂತ ಪರಿಘವೆಂಬ ದಂಡವಿಹದು. ಆ ಪರಿಘ ದಂಡವನು ದಾಟಿ ಯಾತ್ರೆಯನು ಮಾಡಬಾರದಾದ ಕಾರಣ ಹಿಂದೆ ಹೇಳಿದ ಪ್ರಕಾರವೇ ಮಾಡಬೇಕು. ಸ್ತ್ರೀಯರುಗಳಿಗೂ, ಪಶುಗಳಿಗೂ ಈ ಪರಿಘ ದೋಷವಿಲ್ಲ. "ಅತ್ರ ಸರ್ವಸಿದ್ಧಿ:- **ಪರಿಘೋ ನಾಮ ದಂಡೋಽಸ್ತಿ ವಾಯವ್ಯಾಗ್ನೇಯಕೋಣಗಃ ॥ ತದತಿಕ್ರಮಣಂ ಕಷ್ಟಂ ನರಾಣಾಂ ನ ತು ಗೋಸ್ತ್ರಿಯಾಂ ॥ ॥ ಇತಿ"** ಯಾತ್ರಾಯೋಗವಿರುವಲ್ಲಿ ಪೂರ್ವಾತ್ರಯ ಭರಣಿ ಜ್ಯೇಷ್ಠೆ ಆರ್ದ್ರೆ ಆಶ್ಲೇಷೆ ಇಷ್ಟು ನಕ್ಷತ್ರಗಳ ಮಾತ್ರ ವರ್ಜಿಸಿ ಮಿಕ್ಕಾದ ನಕ್ಷತ್ರಗಳಲ್ಲಿ ಯಾತ್ರೆಯನು ಮಾಡಬಹುದು. "ಗ್ರಂಥಾಂತರಂ- **ಪೂರ್ವಾಸು ತ್ರಿಷು ಯಾಮ್ಯರ್ಕ್ಷೇ ಜ್ಯೇಷ್ಠಾಯಾಂ ರೌದ್ರಸಾರ್ಪಯೋಃ ॥ ಸರ್ವಾತಾಸು ಗತೋ ಯತ್ರ ಪ್ರಾಣಹಾನಿರ್ಭವಿಷ್ಯತಿ ॥ ॥ ಶೇಷೇಷು ಭೇಷು ಸರ್ವೇಷು ಯಾತ್ರಾಯೋಗೋಽಸ್ತಿ ಚೇತ್ತದಾ ॥ ಗಂತವ್ಯಮವಿಚಾರೇಣ ಸದ್ಭಿರಾವಶ್ಯಕೇ ಸತಿ ॥ ॥ ಇತಿ"** ಈ ಪೂರ್ವಾತ್ರಯ ಭರಣಿ ಜ್ಯೇಷ್ಠೆ ಆರ್ದ್ರೆ ಆಶ್ಲೇಷೆಗಳು ಯಾತ್ರಾಯೋಗವಿದ್ದರೂ ಆಗದೆಂಬರ್ಥ. ಚಿತ್ರೆ ಭರಣಿ ಆಶ್ಲೇಷೆಗಳ ದ್ವಿತೀಯಾರ್ಧ ಮೂವತ್ತು ಘಳಿಗೆಪ್ರದೇಶದಿಂದ ಮೇಲೆಯೂ, ಕೃತ್ತಿಕೆ ಮಘೆ ಸ್ವಾತಿಗಳ ಪೂರ್ವಾರ್ಧ ವಹ ಆದಿ ಮೂವತ್ತು ಘಳಿಗೆಯು ಸಹ ಬಿಟ್ಟು ಉಳಿದೆಲ್ಲವೂ ಶುಭವೇ ಸರಿ ಎಂದು ವರಾಹಮಿಹಿರನು ಹೇಳಿಹನು. "ವರಾಹಮಿಹಿರ:- **ವಿವರ್ಜಯೇತ್ತ್ವಾಷ್ಟ್ರಯಮೋರಗಾಣಾಂ । ಅರ್ಧಂ ದ್ವಿತೀಯಂ ಗಮನೇ ಜಯೇಪ್ಸುಃ ॥ ಪೂರ್ವಾರ್ಧಮಾಗ್ನೇಯಮಖಾನಿಲಾನಾಂ ।॥ ಶಸ್ತಂ ಮತೇನೋಶನಸಸ್ಸಮಸ್ತಂ ॥ ॥ ಇತಿ"** ಪ್ರಾಚ್ಯಾದ್ಯಷ್ಟ ದಿಕ್ಕುಗಳಿಗೆ ಕ್ರಮದಿಂದ ಆದಿತ್ಯ ಕುಜ ಗುರು ಬುಧ ಶುಕ್ರ ಶನಿ ಚಂದ್ರ ರವಿವಾರಗಳಾಗದೆಂದು ಹಿಂದೆ ಹೇಳಿತಷ್ಟೆ? ಮತ್ತು ಪೂರ್ವ ಭಾಗಕ್ಕೆ ಕುಜವಾರ ದಕ್ಷಿಣಕ್ಕೆ ಶನಿ ಚಂದ್ರವಾರ, ಪಶ್ಚಿಮಕ್ಕೆ ಗುರು ಬುಧವಾರ, ಉತ್ತರಕ್ಕೆ ಶುಕ್ರ ಆದಿತ್ಯವಾರ ಇವು ಅತಿಪ್ರಶಸ್ತಂಗಳು. "ಅತ್ರ ರತ್ನದೀಪಿಕಾ- **ಭೌಮಸ್ಯ ಮಂದಶಶಿನೋಃ ಗುರು ಚಂದ್ರಸೂನ್ವೋಃ ಶುಕ್ರಾರ್ಕಯೋಃ ಶುಭಕಲಾಃ ಕ್ರಮಶೋಽಪಿ ವಾರಾಃ ॥ ಪ್ರಾಚ್ಯಾದಿ**

ದಿಕ್ಷು ನ ಶುಭಾ ರವಿಭೌಮಜೀವಶೀತಾಂಶುಸೂನುಭೃಗುಮಂದಶಶಾಂಕವಾರಾಃ ll ll ಇತಿ" "ಗ್ರಂಥಾಂತರಂ- ರವಿಗುರ್ವೋರ್ದಿನೇ ಪೂರ್ವಂ ದಕ್ಷಿಣೇ ಸೋಮಶುಕ್ರಯೋಃ ll ಕುಜೇ ಪಶ್ಚಿಮತಃ ಶೂಲ ಉತ್ತರೇ ಬುಧಚಂದ್ರಯೋಃ ll ll ಇತಿ ll ಪುನರಪಿ- ನ ಪೂರ್ವೇ ಶನಿಸೋಮೌ ಚ ನ ಪಶ್ಚಾದ್ಭಾನುಶುಕ್ರಯೋಃ ll ನ ಗುರೌ ದಕ್ಷಿಣಾ ಚೈವ ಸೋತ್ತರೇ ಬುಧಮಂಗಳೇ ll ll ಇತಿ ll" 'ರವಿಗುರ್ವೋಃ' ಎಂಬ ಶ್ಲೋಕದಲ್ಲಿಯೂ, 'ನ ಪೂರ್ವೇ' ಎಂಬ ಶ್ಲೋಕದಲ್ಲಿಯೂ ಹೇಳಿದದು ವಾರಶೂಲವಾಗಿಹದು. ಆವಾವ ವಾರದಲ್ಲಿ ಆವಾವ ದಿಕ್ಕಿನಲ್ಲಿ ಶೂಲವಿರುವುದರಿಂದ ಅದಕ್ಕೆ ಸಮ್ಮುಖವಾಗಿ ಯಾತ್ರೆ ಮಾಡಬಾರದು. ಈ ಪ್ರಕಾರದ ಸಮಸ್ತ ಮತವನ್ನು ಅಂಗೀಕರಿಸಿ ವರ್ಜ್ಯವಾರಂಗಳ ಗಮನ ಚಿಂತಾಮಣಿ ಯಲ್ಲಿ ಹೇಳಿಹದು. "ಗಮನಚಿಂತಾಮಣಿ:- ಮಂದಾರ್ಕಜೀವಚಂದ್ರಾಣಾಂ ವಾಸರಂ ಪ್ರಾಗ್ದಿಶಿ ತ್ಯಜೇತ್ ll ದಕ್ಷಿಣೇ ವಿಸೃಜೇಚ್ಛುಕ್ರದೇವೇಡ್ಯಶಶಿವಾಸರಂ ll ll ಪಶ್ಚಿಮೇ ಚಾರ್ಕಭೂಜಾನಾಂ ಸೌಮ್ಯೇ ಜ್ಞೇಂದ್ವಸೃಜಾಮಪಿ ll ಕ್ರಮಾದಾರಜ್ಞಮಂದಾನಾಂ ಕೋಣೇಷ್ವಗ್ನ್ಯಾದಿಷು ತ್ಯಜೇತ್ ll ll ಇತಿ" ಈಶಾನ್ಯ ದಿಕ್ಕಿಗೆ ಸಮಸ್ತ ವಾರಂಗಳು ಶುಭಂಗಳೇ ಸರಿ ಎಂದು ಅರ್ಥದಿಂದಲೇ ಕಾಣುತದೆ. "ಕ್ರಮಾತ್ಸೂರ್ಯಾದಿ ವಾರೇಷು ಘೃತಂ ಕ್ಷೀರಂ ಗುಡಂ ತಥಾ ll ತಿಲಂ ದಧಿ ಯವಾನ್ ಮಾಷಾನ್ ಭುಕ್ತ್ವಾ ಯಾಯಾನ್ನರಾಧಿಪ ll ll" ಎಂದು ಆವಾವ ವಾರಂಗಳಲ್ಲಿ ಆವಾವ ದ್ರವ್ಯವನು ಭುಂಜಿಸಿ ಅನುಕ್ತ ದಿಕ್ಕುಗಳನು ಯಾತ್ರೆಮಾಡಲಾಗಿ ದೋಷವಿಲ್ಲವೆಂದು ಮಾಧವೀಯದಲ್ಲಿ ಹೇಳಿದ್ದರಿಂದಲೂ ಈ ಮುಹೂರ್ತ ಪದವಿಯಲ್ಲಿ ವರ್ಜ್ಯವೆಂದು ಹೇಳಿದ ವಾರವನ್ನೇ ರಣದೀಪಿಕೆಯಲ್ಲಿಯೂ ವರ್ಜ್ಯವೆಂದು ಹೇಳಿ ಬೇರೆ ಏನೂ ವಾರಗಳ ವಿಷಯದಲ್ಲಿ ಹೇಳದಿರುವುದರಿಂದಲೂ ವಾರದೋಷವು ನಾಲ್ಕು ವರ್ಣದವರಿಗೂ ಪ್ರಧಾನವಲ್ಲವಾದ್ದರಿಂದಲೂ ಈ ಮುಹೂರ್ತಪದವಿಯಲ್ಲಿ ವರ್ಜ್ಯಗಳೆಂದು ಹೇಳಿದ ವಾರಗಳ ಮಾತ್ರ ವರ್ಜಿಸಿದರೆ ಸಾಕಾಗಿರುತದೆ. "ರಣದೀಪಿಕಾ- ಲಗ್ನಾದುಪಚಯಸ್ಥಸ್ಯ ನ ಶುಭೋಽಪಿ ಶುಭಪ್ರದಃ ll ll" ಊರ್ಧ್ವೋದಯ ಊರ್ಧ್ವಮುಖಿಗಳಾಗಿ ಶುಭಯೋಗವಿದ್ದರೆ ಸ್ಥಿರಲಗ್ನಗಳಾದರೂ ಗ್ರಾಹ್ಯವು. ಕುಂಭಲಗ್ನವು ಈ ಗುಣವಿದ್ದರೂ ಮಧ್ಯಮವು. "ಮಾಧವೀಯಂ-ಊರ್ಧ್ವೋದಯೋರ್ಧ್ವವದನಾಃ ಶುಭಸಂಯುತಾಶ್ಚೇತ್ ll ಗ್ರಾಹ್ಯಾಃ ಸ್ಥಿರಾ ಅಪಿ ಗೃಹಾಃ ಕಲಶಸ್ತು ಮಧ್ಯಃ ll ಇತಿ" ಮಿಥುನಲಗ್ನವು ಸಹಸ್ರಗುಣ ಕೂಡಿ ಇದ್ದಾಗ್ಯೂ ನಿಷೇಧವೇ ಸರಿ. "ರಣದೀಪಿಕಾ-ಊರ್ಧ್ವಾನತಾಃ ಶುಭಯುತಾಶ್ಚ ಶುಭಾಃ ಸಮಸ್ತಾ ವೀಣಾಧರೋ ಗುಣಯುತೋಽಪಿ ನಿಷಿದ್ಧ ಏವ ll ಇತಿ"

ಯಾತ್ರೆಯ ಮಾಡುವವರು ತನ್ನ ಜನ್ಮರಾಶಿದ್ವೇಸೆಯಿಂದಲಾಗಲೀ, ಜನ್ಮಲಗ್ನದ್ವೇಸೆಯಿಂದಲಾಗಲೀ ದ್ವಿತೀಯ ತೃತೀಯ ಷಷ್ಠ ಏಕಾದಶಗಳಿಂದೊಂದು ಲಗ್ನದಲ್ಲಿ ಯಾತ್ರೆ ಮಾಡಲಾಗಿ ಅತಿಪ್ರಶಸ್ತವು. ಶತ್ರುಜಯಾರ್ಥವಾಗಿ ಯಾತ್ರೆ ಮಾಡುವಲ್ಲಿ ಆ ಶತ್ರುವಿನ ಜನ್ಮಲಗ್ನದ್ವೇಸೆಯಿಂದಲಾಗಲೀ ಜನ್ಮರಾಶಿದ್ವೇಸೆಯಿಂದಲಾಗಲೀ ಅಷ್ಟಮದಲ್ಲಿ ಪಾಪಗ್ರಹನಿರುವಾಗ ಯಾತ್ರೆಯ ಮಾಡಿದರೆ ಆ ಶತ್ರುವನ್ನು ಕ್ಷಿಪ್ರದಲ್ಲಿ ಜಯಿಸುವನು. "ಪ್ರಶ್ನಮಾರ್ಗ:- ಯಾತುರ್ವಿಲಗ್ನತೋ ಜನ್ಮರಾಶೇರ್ವಾ ಯಾನಮುತ್ತಮಂ ll ಶತ್ರೋರ್ಯಾಯಾದಷ್ಟಮೋ ರಾಶಿರ್ಜನ್ಮತೋವಾಽಥ ಲಗ್ನತಃ ll ll ಪಾಪಗ್ರಹ

ಸಮಾರೂಢಃ ತದಾ ಶತ್ರುವಧೋ ಭವೇತ್ ॥ ಇತಿ" ನಂದ ತಿಥಿಗಳಾದ ಪಾಡ್ಯಷಷ್ಠಿ ಏಕಾದಶಿಗಳು ಪೂರ್ವದಿಕ್ಕಿಗೆ, ಭದ್ರತಿಥಿಗಳಾದ ಬಿದಿಗೆ ಸಪ್ತಮಿ ದ್ವಾದಶಿಗಳು ದಕ್ಷಿಣಕ್ಕೆ, ಜಯ ತಿಥಿಗಳಾದ ತದಿಗೆ ಅಷ್ಟಮಿ ತ್ರಯೋದಶಿಗಳು ಪಶ್ಚಿಮಕ್ಕೆ, ಪೂರ್ಣತಿಥಿಗಳಾದ ಪಂಚಮಿ ದಶಮಿ ಪೌರ್ಣಮಿಗಳು ಉತ್ತರಕ್ಕೆ ಇವು ಪ್ರಶಸ್ತಂಗಳು. "ಪ್ರಶ್ನಮಾರ್ಗ: ನಂದಾ ಭದ್ರಾ ಜಯಾ ಪೂರ್ಣಾ ದಿಕ್ಷು ಪ್ರಾಚ್ಯಾದಿಷು ಕ್ರಮಾತ್ ॥ ಪ್ರಶಸ್ತಾಸ್ತಿಥಯೋ ಯಾನೇ ನೈವ ರಾತಿರಧೋಮುಖಃ ॥ ॥ ಪ್ರತಿಪತ್ಪ್ರಸ್ಯತೇ ಕೈಶ್ಚಿತ್ ಇಮಾಂ ನಿಂದಂತಿ ಕೇಚನ ॥ ಇತಿ" ಆದಿತ್ಯ ಶುಕ್ರ ಕುಜ ರಾಹು ಶನಿ ಚಂದ್ರ ಬುಧ ಗುರುಗಳು ಕ್ರಮದಿಂದ ಇಂದ್ರಾದ್ಯಷ್ಟ ದಿಕ್ಕುಗಳ ಅಧಿಪತಿಗಳು. "ಗ್ರಂಥಾಂತರಂ-ರವಿಶುಕ್ರಾರಪಾತಾರ್ಕಚಂದ್ರಜ್ಞ ಗುರುವಃ ಕ್ರಮಾತ್ ॥ ದಿಶಾಮಿಂದ್ರಾದಿಕಾನಾಂ ಚ ಕ್ರಮೇಣೈವಾಧಿಪಾಃ ಸ್ಮೃತಾಃ ॥ ॥ ಇತಿ" ಸೂರ್ಯಚಂದ್ರರು ಚರರಾಶಿಯಲ್ಲಿದ್ದು ಚರಲಗ್ನದಲ್ಲಿ ಪರದೇಶ ಯಾತ್ರೆಗೆ ಶುಭ. ಸ್ಥಿರರಾಶಿಯಲ್ಲಿ ಚಂದ್ರಾದಿತ್ಯರಿದ್ದಾಗ ಸ್ಥಿರಲಗ್ನದಲ್ಲಿ ಸ್ವದೇಶ ಯಾತ್ರೆಗೆ ಶುಭ. "ಅತ್ರ ಸಿದ್ಧಾರ್ಥ:- ಚರಲಗ್ನಾದಿಸಂಸ್ಥೇಷು ಲಗ್ನರಾಶೀಂದುಭಾನುಷು ॥ ಪರದೇಶಾದಿಗಮನಂ ಯಶಸ್ಯಂ ಕಾರ್ಯಸಿದ್ಧಿಕೃತ್ ॥ ॥ ಸ್ಥಿರಲಗ್ನೇ ಸ್ಥಿರಸ್ಥೇಷು ಸ್ವದೇಶಗಮನಂ ಶುಭಂ ॥ ಇತಿ" "ಪ್ರಶ್ನಮಾರ್ಗ:- ಪ್ರಾಯೋ ಜಗುಃ ಸಹಜಶತ್ರುದಶಾಯಸಂಸ್ಥಾ: । ಪಾಪಾಃ ಶುಭಾಃ ಸವಿತ್ರಜಂ ಪರಿಹೃತ್ಯ ಖಿಸ್ಥಂ ॥ ಸರ್ವತ್ರಗಾಃ ಶುಭಫಲಂ ಜನಯಂತಿ ಸೌಮ್ಯಾಃ ॥। ಹಿತ್ವಾಸ್ತಸಂಸ್ಥಮಮರಾರಿಗತಂ ಜಿಗೀಷುಃ ॥ ॥ ಬಂಧುಸ್ಥಾನೇ ಶೀತಗುರುಃ ಶೋಕದಾತಾ । ಷಷ್ಠಾಧೀಶೋ ಲಗ್ನಸಂಸ್ಥಸ್ತಥೈವ ॥ ರಂಧ್ರಾರಿಸ್ಥೋ ದಿಕ್ಪತಿರ್ವೀರ್ಯಹೀನೋ ॥। ಮೃತ್ಯುಂ ಶೋಕಂ ಕೀರ್ತಿಹಾನಿಂ ಚ ಕುರ್ಯಾತ್ ॥ ॥ ಇತಿ" ಈ ಹಿಂದೆ 'ತಾರಾ ವಹ್ನಿ ಮಖಾಮಿತ್ರ' ಇತ್ಯಾದಿ ಶ್ಲೋಕದಲ್ಲಿ ಹೇಳಿದ ದಿಙ್ನಕ್ಷತ್ರಗಳೊಳಗೆ ಯಾವ ದಿನ ನಕ್ಷತ್ರ ದಲ್ಲಿ ಯಾವ ಗ್ರಹನಿರುತ್ತಾನೋ ಆ ಗ್ರಹನು ಆ ದಿಕ್ಕಿನಲ್ಲಿರುತ್ತಾನೆಂದು ಅರಿವದು. ಇದಕ್ಕೆ ಪ್ರತಿಗ್ರಹರೆಂದು ಹೆಸರು. "ಗ್ರಂಥಾಂತರಂ:- ಯದ್ದಿಗ್ಭಿಃಖೇಚರಾಸ್ಸಂತಿ ತದ್ದಿಕ್ಸ್ಥಾಃ ಪ್ರತಿಖೇಚರಾಃ ॥ ಇತಿ" ಈ ಪ್ರತಿಗ್ರಹರೊಳಗೆ ಪ್ರತಿ ಶುಕ್ರನು ಯಾತ್ರೆ ಮಾಡುವವನ ಎಡದ ಭಾಗದಲ್ಲಿಯೂ, ಮುಂಭಾಗದಲ್ಲಿಯೂ ಇರಲಾಗದು. ಈ ಬಗ್ಗೆ ಅಪವಾದವನು ಗುರು ಹೇಳಿಹನು. 'ಗುರು:- ಸಮ್ಮೂಲಕೂಲಯಾತ್ರಾಯಾಂ ಶುಕ್ರದೋಷೋ ನ ವಿದ್ಯತೇ ॥ ಆಗಸ್ತ್ಯೇತೇಸ್ತಥಾಽವಾರ್ಗ್ಯಾ ಗಮನಾಗಮನೇ ಶುಭೇ ॥ ॥ ನಾರದಶ್ಚ-ಏಕಗ್ರಾಮೇ ವಿವಾಹೇ ಚ ದುರ್ಭಿಕ್ಷೇ ರಾಷ್ಟ್ರವಿಗ್ರಹೇ ॥ ದ್ವಿಜಕ್ಷೋಭೇ ನೃಪಕ್ಷೋಭೇ ಶುಕ್ರದೋಷೋ ನ ವಿದ್ಯತೇ ॥ ॥ ಇತಿ' ಗುರುಶ್ಚ-ನಿತೇ ಸ್ವತುಂಗೇ ಸ್ವಕ್ಷೇತ್ರೇ ಯುಕ್ತೇ ದೋಷೋ ನ ವಿದ್ಯತೇ ॥ ಚತುಷ್ಪದಾಂ ವಿಶೇಷೇಣ ನ ದೋಷಃ ಶುಭಗೋಚರಃ ॥ ॥ ಇತಿ" "ಮಾಧವೀಯಂ-ಯಸ್ಯಾಂ ದಿಶಿ ಸ್ಥಿತಾ ನಿತ್ಯಂ ಗುಳಿಕಾರ್ಕಜವಿಷ್ಟಯಃ ॥ ನ ತಾಃ ಪ್ರತಿದಿಶಂ ಯಾಯಾತ್ ಪೃಷ್ಠಗಾಃ ತೇ ಜಯಾವಹಾಃ ॥ ॥ ಯಾತ್ರಾ ಶುಭದಾ ದಕ್ಷಿಣಭಾಗೇ ದಿಗಧೀಶೇ ಕೇಂದ್ರೇ ಚ ತಥಾ ತದ್ಭವನಸ್ಯ ಅಭ್ಯುದಯೇ ಚ ॥" ವಾರಾಧಿಪತಿಯಿಂದ "ದಕ್ಷಿಣ ಸಂಸ್ಥಂ ಶುಭಮಸ್ಯಾಂ ಶಂಸಂತಿ ॥ ವಿಲಗ್ನೋಪಚಯಸ್ಥಸ್ಯ ಚ ವಾರಮಿತಿ ॥" ಯಾತ್ರಾಕಾಲದಲ್ಲಿ ಸೂರ್ಯನಿರುವ ನಕ್ಷತ್ರದಾರಭ್ಯ ಚಂದ್ರನಿರುವ ನಕ್ಷತ್ರ ಪರ್ಯಂತ ಎಷ್ಟು ಆಗುತದೆಯೋ ಅದನ್ನು ಏಳರಿಂದ ಭಾಗಿಸಿದ ಶೇಷವು ಎರಡಾದರೂ, ಆರಾದರೂ,

ಭ್ರಮಣವೆಂಬ ದೋಷ. ಮೂರಾದರೂ ಏಳಾದರೂ ತಾಡನವೆಂಬ ದೋಷ. ಇದೆರಡರನ್ನು ಯಾತ್ರೆಯಲ್ಲಿ ವರ್ಜಿಸಬೇಕು. "ಸೂರ್ಯಾದಿ ಗಣ್ಯತೇ ಚಂದ್ರೇ ಸಪ್ತಭಿರ್ಭಗೇ ಮಾನ್ ಹರೇತ್ ॥ ದ್ವಿಷಟ್ಕಂ ವಿಭ್ರಮಣಂ ಶೇಷಂ ತ್ರಿಸಪ್ತಮಪಿ ತಾಡನಂ ॥ ॥ ಇತಿ" ಪ್ರತಿಪದಾದಿ ತಿಥಿ ಸಂಖ್ಯೆಯನೂ ಕೃತ್ತಿಕಾದಿ ನಕ್ಷತ್ರ ಸಂಖ್ಯೆಯನೂ ಒಂದುಗೂಡಿ ಮೂರರಿಂದ ಭಾಗಿಸಲಾಗಿ ಒಂದು ಶೇಷವಾದರೆ ಜಲವು. ಎರಡು ಶೇಷವಾದರೆ ಸ್ಥಲವು. ನಿಶ್ಶೇಷವಾದರೆ ಆಕಾಶವು. "ಪ್ರಥಮಾದಿತಿಥಿಂ ಕೃತ್ವಾ ಕೃತ್ತಿಕಾದಿಸಮನ್ವಿತಂ ॥ ಅಗ್ನಿ ಸಂಖ್ಯಾ ಹರೇಚ್ಛೇಷ್ಮಂ ಜಲಸ್ಥಲನಭಾಃ ಕ್ರಮಾತ್ ॥ ಜಲೇ ಸಿದ್ಧ್ಯತಿ ಕಾರ್ಯಂತು ಸ್ಥಲೇ ನಾಸ್ತೀತಿ ಕಥ್ಯತೇ ॥ ಆಕಾಶೇ ಸರ್ವಸಿದ್ಧಿಃ ಸ್ಯಾತ್ ಇತ್ಯೇತತ್ಕಾಲಚಂದ್ರತಃ ॥ ॥ ಇತಿ"

ಇನ್ನು ತ್ರಿವರ್ಗ ಫಲ ತರುವುದಕ್ಕೆ ಹೇಳುತದೆ- ಯಾತ್ರಾಕಾಲದ ವಾರನಕ್ಷತ್ರ ತಿಥಿಗಳ ಸಂಖ್ಯೆಗಳನೊಂದುಗೂಡಿ ಮೂರು ಪ್ರತಿ ಇರಿಸಿ ಮೇಲಣ ಪ್ರತಿಯ ಎರಡರಿಂದ ಗುಣಿಸುವುದು. ಮಧ್ಯದ ಪ್ರತಿಯ ಮೂರರಿಂದ ಗುಣಿಸುವುದು. ಕೆಳಗಣ ಪ್ರತಿಯ ನಾಲ್ಕರಿಂದ ಗುಣಿಸುವುದು. ಆಮೇಲೆ ಮೇಲಣ ಪ್ರತಿಯ ಏಳರಿಂದ ಭಾಗಿಸಿ ಮಧ್ಯದ ಪ್ರತಿಯ ಆರರಿಂದ ಭಾಗಿಸಿ ಕೆಳಗಣ ಪ್ರತಿಯ ಎಂಟರಿಂದ ಭಾಗಿಸಿ ಮೂರು ಸ್ಥಾನವೂ ಶೂನ್ಯವಾದರೆ ಭಯ. ಕೆಳಗಣ ಪ್ರತಿ ಶೂನ್ಯವಾದರೆ ದುಃಖ. ಮೇಲಣ ಪ್ರತಿ ಶೂನ್ಯವಾದರೆ ವಿಪತ್ತಿ. ಮಧ್ಯದ ಪ್ರತಿ ಶೂನ್ಯವಾದರೆ ಭಯ. ಮೂರು ಪ್ರತಿಯು ಶೂನ್ಯವಾಗದಿದ್ದರೆ ಐಶ್ವರ್ಯ ಜಯಾದಿಗಳು ಉಂಟಾಗುವುದು. "ಯಾತ್ರಾ ವಾಸರತಾರಕಾತಿಥಿಯುತಾಃ ತ್ರಿಸ್ಥಾಪಯೇದ್ವಾದಿಭಿಃ । ಹತ್ವಾತಾಃಕ್ರಮಶೋ ನಗೈರಥರಸ್ಯೈಃ ನಾಗೈರ್ಭಜೇಚ್ಛೂನ್ಯತಾ ॥ ಸರ್ವಾಂತ್ಯಾದಿಮಮಧ್ಯಮೇಷು ಮರಣಂ ದುಃಖಂ ವಿಪತ್ತಿಂ ಭಯಂ ಕುರ್ಯಾತ್ ಸರ್ವಜಯಂ ಶ್ರಿಯಂ ಚ ಕುರುತೇ ನಿಶ್ಶೂನ್ಯತಾ ಸರ್ವತಃ ॥ ॥ ಇತಿ"

ವಾರ ತಿಥಿಗಳ ಯೋಗಿನಿಗಳ ಅಭಿಮುಖವಾಗಿಯೂ ಯಾತ್ರೆ ಮಾಡಲಾಗದೆಂದು ಕೆಲವರು ಹೇಳಿಹರು- ಅದೆಂತೆಂದರೆ- "ಬ್ರಾಹ್ಮೀ ಮಾಹೇಶ್ವರೀ ಚೈವ ಕೌಮಾರೀ ವೈಷ್ಣವೀ ತಥಾ ॥ ವಾರಾಹೀ ಚೈವ ಮಾಹೇಂದ್ರೀ ಚಂಡಿಕಾ ಸೂರ್ಯವಾರತಃ ॥ ಯೋಗಿನ್ಯಃ ಕ್ರಮಶಃ ಪಾರ್ಥ ಪ್ರಭೃಲೀಶಾಂತದಿಕ್ಸ್ಥಿತಾಃ ॥ ಇತಿ" ತಿಥಿಯೋಗಿನಿಗಳನ್ನು ಹೇಳುತದೆ- "ಅತ್ರಸಂಗ್ರಾಮವಿಜಯಪದ್ಧತಿ:- ಪೂರ್ವಸ್ಯಾಮುದಯೋ ಬ್ರಾಹ್ಮ್ಯಾಃ ಪ್ರಥಮಾ ನವಮೀತಿಥೌ ॥ ಮಾಹೇಶ್ವರೀ ಚೋತ್ತರಸ್ಯಾಂ ದ್ವಿತೀಯಾದಶಮೀತಿಥೌ ॥ ॥ ಏಕದಶ್ಯಾಂ ತೃತೀಯಾಯಾಂ ಕೌಮಾರೀ ಪಶ್ಚಿದಿಗ್ಗತಾ ॥ ಚತುರ್ಥೇ ದ್ವಾದಶೇ ಚೈವ ವೈಷ್ಣವೀ ನಿರ್ಋತೌ ಸ್ಥಿತಾ ॥ ॥ ವಾರಾಹೀ ಯಮದಿಕ್ಸಂಸ್ಥಾ ಪಂಚಮೇ ಚ ತ್ರಯೋದಶೇ ॥ ಷಷ್ಠ್ಯಾಂಚೈವ ಚತುರ್ದಶ್ಯಾಂ ಇಂದ್ರಾಣೀ ಪಶ್ಚಿಮೇ ಸ್ಥಿತಾ ॥ ॥ ಪೌರ್ಣಮಾಸ್ಯಾಂ ಚ ಸಪ್ತಮ್ಯಾಂ ವಾಯವ್ಯಾಂ ಚಂಡಿಕಾ ಸ್ಥಿತಾ ॥ ನಷ್ಟಚಂದ್ರದಿನೇಽಷ್ಟಮ್ಯಾಂ ಮಹಾಲಕ್ಷ್ಮೀ ಶಿವಾಲಯೇ ॥ ॥ ಯೋಗಿನೀಂ ಪುರತಃ ಕೃತ್ವಾ ಬುಧೋ ಯಾತ್ರಾಂ ನ ಕಾರಯೇತ್ ॥ " ಈ ಬಗ್ಗೆ ಅಕ್ಷರ ಸಂಖ್ಯೆಯಿಂದ ಹೇಳಲ್ಪಡುತದೆ- "ಪಾರ್ಥತ್ರೀಭೋಗಶಾಂತಾದಿಪಥಿ ತ್ರೀಭಗಣಾಂತಜೇ ॥ ದಿಶಿ ಕ್ರಮೇಣ ಯೋಗಿನ್ಯೋ ಬಾಧ್ಯಂತಿ ಪ್ರಥಮಾದಿತಃ ॥ ॥ ಇತಿ" ಸರ್ವಸಿದ್ಧಿ:- ಪಿಶಾಚಗೀರ್ವಾಣಧನೇಶದಂಡೀ ಕೋರಂಗಗಾಂಪಹ್ನಿನಿಶಾಚರಾಖ್ಯಾಃ ॥

ಕುಧಾದಿಕೇ ನಾಶಮುಖೇಸ ವಾಮತೋ ಭವಂತ್ಯಮೀ ಕ್ಷಾಮುದಯಾದ್ಯವ್ಯೋಮಗಾಃ ॥ ॥ ಪ್ರೇತನಿವಾಸೋ ನಿಪುಣೋ ಧನಾಗಮೋ ದಂಡಭೀತಿರಜಭಯೋ ಕ್ಷಯವೃದ್ಧಿ ಪ್ರಾರ್ನಭಯೋನಾಶಕೀರ್ತ್ಯೇಷಾಂ ಫಲಾನ್ಯನುಕ್ರಮಶಃ ॥ ಇತಿ" ಈ ಯಾತ್ರೆಯಲ್ಲಿ ಅರಸುಗಳಿಗೆ ಯೋಗವೇ ಪ್ರಧಾನವಾದ್ದರಿಂದ ಆ ಯಾತ್ರಾ ಯೋಗಂಗಳಾವವೆಂದರೆ- "ಮಾಧವೀಯಂ- ಚಂದ್ರೇಽನಷ್ಟಮಗೇ ಕ್ಷತೇ ದಿನಕರೇ ಲಗ್ನೇ ಬಲಿಷ್ಠೇ ಗುರೌ । ಕೇಂದ್ರಸ್ಥೇ ಸುರರಾಜ ಮಂತ್ರಿಣಿ ತನೋರಾಪ್ರೋಕ್ಲಿಮಸ್ಥೇ ವಿಧೌ ॥ ಮೂರ್ತಿಸ್ಥೇ ಮೃಗಲಾಂಛನೇ ಸುರಗುರೌ ಶುಕ್ರೇಽಪಿ ವಾ ಕಂಟಕೇ ।।। ಚಂದ್ರೇಽಸ್ತೇ ತನುಭೇ ಗುರೌ ಚ ಸಹಜೇ ಪಾಪೇ ವ್ಯಯೇ ಜ್ಞೇ ಭೃಗೌ ॥ ॥ ಮೂರ್ತಿಭ್ರಾತೃಮದಾಯಖೇಷು ಧಿಷಣಃ ಪಾಪಃ ಶಶೀನಃ ಶುಭೋ । ಜೀವಾರ್ಕೇಂದುಸಿತೇಷು ಮೂರ್ತ್ಯರಿಸಭಸ್ತೋಯೇಷು ಪುತ್ರೇ ಬುಧೇ ॥ ವಾಗೀಶೇ ವಪುಷಿ ಸ್ಥಿತೇ ಭವಧನಪ್ರಾಪ್ತೇಷು ಶೇಷೇಷು ಚ ।।। ಜ್ಞೇ ಲಗ್ನಾರಿಖತೋಯಗೇ ಬಲಯುತೇ ಪಾಪೋಜಿತೇಽಂತ್ಯೇ ಸ್ಮರೇ ॥ ॥ ಲಗ್ನಾಯ ತ್ರಿರಿಪುಸ್ಮರೇಷು ಸಿತಶಸ್ಯರ್ಕಾರಜೀವಾಃ ಕ್ರಮಾತ್ । ಲಾಭಾಜ್ಞಾರಿಪುರಿಪ್ಫಮಸ್ಮಥ ತನುತ್ರಿಸ್ಥೇಷು ಸೂರ್ಯಾದಿಷು ॥ ಷಷ್ಠಭ್ರಾತೃಮದಾತ್ಮಬಂಧುಭವಗಾಃ ಸರ್ವೇ ಗುರೋರ್ವಾಸರೇ ।।। ಪುತ್ರಾರಿತ್ರಿಮದಾಷ್ಟಮೇಷು ಗುರುಭಾನ್ವಾರಷ್ಟಶುಕ್ರೇಷು ಚ ॥ ॥ ಮೂರ್ತ್ಯಂಬುತ್ರಿಷು ಶುಕ್ರಜೀವದಿನಪೇಷ್ವಾಯೇಽರ್ಕಜೇ ವಾ ಕುಜೇ । ವ್ಯರ್ಕಾಃ ಪಂಚ ನಿರಂತರಂ ಯದಿ ಗತಾಃ ಕ್ಷೇತ್ರಾಣಿ ಪಂಚಗ್ರಹಾಃ ॥ ಯದ್ಯೇಕಾಂತರಗಾ ಗ್ರಹಾಶ್ಚ ನಿಖಿಲಾಃ ಕ್ಷೇತ್ರೇಷು ಷಟ್ಸು ಸ್ಥಿತಾಃ ।।। ಚಂದ್ರೇ ಭಾರ್ಗವಜೀವಮಧ್ಯವಸತೌ ಲಗ್ನೇ ಸುಖೇ ವಾ ಸ್ಥಿತೇ ॥ ॥ ಬಂಧುಸ್ಥೌ ಜ್ಞಸಿತೌ ಸ್ಮರೇ ಹಿಮಕರೇ ಲಗ್ನೇ ಚ ಜೀವೇಕ್ಷಿತೇ । ಲಗ್ನೇ ಸದ್ವ್ಯುತಿ ಕೇಂದ್ರಗೌ ಗುರುಕುಜೌ ಯದ್ಯೇಕತಾರಾಂ ಗತೌ ॥ ಯಾತ್ರಾ ದಿಕ್ಪತಿಸಂಶ್ರಿತಾಷ್ಟ ಭವನಾತ್ ಪುತ್ರೇ ಬಲಾಢ್ಯೇ ಗ್ರಹೇ ।।। ಜೀವಜ್ಞಾರ್ಕಸಿತೇಷು ಕಶ್ಚನ ಕುಜಾತ್ ಮಂದಾತ್ತ್ರಿಕೋಣಸ್ಥಿತಃ ॥ ॥ ಕಲ್ಯಸ್ಥೋ ಧಿಷಣಃ ಪರೇಽಪಿ ಚ ಯಥಾ ಲಾಭ ಸ್ವಗೇಹಸ್ಥಿತಾಃ । ಪಾಪಾ ವಿಕ್ರಮಗಾಃ ಶುಭಾಸ್ತನುಗತಾಃ ಚಂದ್ರಃ ಸ್ಥಿತೋ ನಾಷ್ಟಮೇ ॥ ಚಂದ್ರೇ ನಾಷ್ಟಮಗೇ ತನೌ ಸುರುಗುರೌ ಕ್ರೂರೇ ಭವೇ ವ್ಯೋಮ್ನಿವಾ ।।। ಲಗ್ನೈಕಾದಶವಿತ್ತ ಗಾ ಯದಿ ಶುಭಾಃ ಪಾಪೌ ತ್ರಿಗೌ ಖೇ ರವಿಃ ॥ ॥ ಸ್ವೋಚ್ಚಸ್ಥೋ ಯದಿ ಕಶ್ಚನೋದಯ ಗತಶ್ಚಂದ್ರೇ ಸ್ಥಿತೇ ಕರ್ಕಟೇ । ಸತ್ಕರ್ಮಾಹಿಬುಕಸ್ಥಿತೋ ಯದಿ ಸಿತೇ ಪಕ್ಷೇ ಸ್ಥಿತಶ್ಚಂದ್ರಮಾಃ ॥ ವ್ಯೋಮ್ನೀಂದುರ್ಗುರು ರಾತ್ಮಗೋ ಭವಗತಃ ಪಾಪಾ ವಿಶುದ್ಧೇ ಸುತೇ ।।। ಕ್ರೂರೇಷು ತ್ರಿಷಡಾಯಗೇಷು ಧಿಷಣೇ ಮೂರ್ತೌ ವಿಶುಕ್ರೇ ಸ್ಮರೇ ॥ ॥ ಯೋಗಾನ್ ಸಿದ್ಧಿಕರಾನ್ ಬುಧಾ ವಿದುರಿಮಾನ್ ಶ್ಲೋಕೈಕಪಾದೋದಿತಾನ್ । ಯಾತ್ರಾಯಾಂ ಸುನಫಾಽನಫಾ ಧುರಧುರಾಯೋಗಾಧಿಯೋಗಾನಪಿ ॥ ಆಧತ್ತೇ ಧರಣೀಪತೇರಧಿಗತಂ ತುಷ್ಟಂ ವಿಶೇಷಾತ್ಫಲಂ ।।। ಯಾತ್ರೋಕ್ತಂ ನಿಖಿಲೋ ಜನಸ್ಯ ಸಮಯಃ ಸರ್ವತ್ರ ಸಾಧಾರಣಃ ॥ ॥ ಏಕೋಽಪಿ ಜೀವೋ ಬಲವಾನ್ವಿಲಗ್ನಗೇ ಚಂದ್ರೇ ತ್ರಿಕೋಣೇ ಶಶಿಜಃ ಕವಿರ್ವಾ ॥ ದ್ವಾಭ್ಯಾಂ ಚ ತಾಭ್ಯಾಂ ಅತಿಯೋಗಸಂಜ್ಞೋ ಯೋಗಾಧಿಯೋಗಸ್ಸ ಹಿತೈಃತ್ರಿಭಿಃಸ್ಯಾತ್ ॥ ॥ ಇತಿ" ಈ ಪ್ರಕಾರದ ಶುಭಕಾಲದಲ್ಲಿ ಬ್ರಾಹ್ಮಣರನ್ನು ಪಾರ್ವತೀ ಪರಮೇಶ್ವರರನ್ನು ಮಹಾಗಣಪತಿಯನ್ನು ನವಗ್ರಹರನ್ನು ದಿಗೀಶ್ವರರನ್ನು ಪೂಜಿಸಿ ತನ್ನ

ಗುರುಹಿರಿಯರ ಆಶೀರ್ವಾದವನಂಗೀಕರಿಸಿ ಯಾತ್ರೆಯನು ಮಾಡಬೇಕು. "ಅತ್ರಮಾಧವೀಯಂ- ಪ್ರತೋಷ್ಯ ವಿಪ್ರಾನ್ ಹವಿಷಾ ಧನಂಜಯಂ ಸಮರ್ಚ್ಯ ಯಾತೋ ಲಭತೇ ಧನಂಜಯಂ ॥ ಪ್ರಣಮ್ಯ ಗೌರೀಂ ಗಣನಾಥಮೀಶ್ವರಂ ಸ್ಮರನ್ಮಹೇಂದ್ರಂ ಮನಸಾ ದಿಗೀಶ್ವರಂ ॥ ॥ ಇತಿ"

ಈ ಪ್ರಕಾರ ಯಾತ್ರೆ ಹೊರಟು ತನ್ನ ಉಭಯ ಪಾರ್ಶ್ವಗಳನ್ನು ಪೃಷ್ಠಭಾಗವನ್ನು ನೋಡದೆ ತನ್ನ ಮುಂಭಾಗದಲ್ಲಿ ಏನೇನು ಶುಭಾಶುಭ ಶಕುನಗಳಾಗುತ್ತಿವೆ ಎಂದು ಮುಂಭಾಗವನ್ನೇ ನೋಡಿಕೊಂಡು ಶೀಘ್ರವಾಗಿ ನಡದು ಸಹಸ್ರಧನು ಪ್ರಮಾಣವಾಗಲೀ ಅವರ ಅರ್ಧವಾಗಲೀ ಶತಧನುಃ ಪ್ರಮಾಣವಾಗಲೀ ಹೋಗದೆ ನಿಲ್ಲಲಾಗದು. ಆಮೇಲೆ ನಿಲ್ಲಬೇಕೆಂದು ಕಂಡರೆ ನಿಲ್ಲಬಹುದು. "ಮಾಧವೀಯಂ-ಸಹಸ್ರಂ ವಾ ತದರ್ಧಂ ವಾ ಶತಂ ವಾ ಧನುಷಾಂ ಪಥಿ ॥ ನ ಗತ್ವಾ ಪ್ರಸ್ಥಿತಸ್ತಿಷ್ಠೇತ್ ತತಸ್ತಿಷ್ಠೇತ್ ಪ್ರಯಾತು ವಾ ॥ ॥ ಇತಿ" ಈ ಪ್ರಕಾರ ಹೋಗಲಾಗಿ ಶುಭಶಕುನಗಳಾದರೆ ಮುಂದೆ ಶುಭವುಂಟೆಂದರಿವದು. ದುಷ್ಟಶಕುನಗಳಾದರೆ ಮುಂದೆ ಅಶುಭವುಂಟೆಂದು ತಿಳಿದು ಮುಂದೆ ಹೋಗದೆ ಪುನಃ ತನ್ನ ಮನೆಗೆ ಬರಬೇಕು. ಆ ಶುಭಾಶುಭ ಶಕುನಗಳನ್ನು ಇಲ್ಲಿ ಹೇಳುತವೆ- "ಗ್ರಂಥಾಂತರಂ-ಕನ್ಯಾಗೌರ್ಭೇರಿಶಂಖೌ ದಧಿಫಲಕುಸುಮಂ ಪಾವಕಂ ದೀಪ್ಯಮಾನಂ । ಯಾನಂ ವಾ ವಿಪ್ರಯುಗ್ಮಂ ಹಯಗಜವೃಷಭಂ ಪೂರ್ಣಕುಂಭಂ ದ್ವಿಜಂ ವಾ ॥ ನೃತ್ತಿಂ ವಾ ಚಾಪಬಾಣೌ ಜಲಚರಯುಗಲಂ ಸ್ನಿಗ್ಧಮನ್ನಂ ಶವಂ ವಾ ॥। ವೇಶ್ಯಾ ಸ್ತ್ರೀ ಮಾಂಸಖಂಡಂ ಪರಹಿತವಚನಂ ಮಂಗಲಂ ಪ್ರಸ್ಥಿತಾನಾಂ ॥ ॥ ತಕ್ರಂ ತೈಲಾಭಿಷಿಕ್ತಂ ಭುಜಗಮಭಿಮುಖಂ ಮುಕ್ತಕೇಶಂ ಚ ನಗ್ನಂ । ರಕ್ತಂ ಸ್ತ್ರೀರಿಕ್ತಭಾಂಡಂ ಪ್ರತಿಮುಖ ಕಲಹಂ ವಾನರಂ ಕಾಷ್ಠಭಾರಂ ॥ ವಿಪ್ರೈಕಂ ಭಿನ್ನನಾಸಂ ಜಟಮುಕುಟಧರಂ ಭರ್ತೃಹೀನಾ ಚ ನಾರೀ ॥। ಪ್ರಸ್ಥಾನೇ ಪ್ರಸ್ಥಿತೋಽಯಂ ಯದಿ ಭವತಿ ಭವೇತ್ ಸರ್ವಕಾರ್ಯೇಷು ನಷ್ಟಃ ॥ ॥ ಮಾರ್ಜಾರಯುದ್ಧಂ ಕಲಹಂ ಕುಟುಂಬೇ ರಜಸ್ವಲಾ ಸ್ತ್ರೀ ರಜಕಸ್ಯ ದರ್ಶನಂ ॥ ಅಕಾಲವೃಷ್ಟಿಸ್ತ್ವ ಭುಜಂಗದರ್ಶನಂ ॥। ಪಶುಕ್ಷತಂ ಪ್ರಾಣಹರಾಣಿ ಸಪ್ತ ॥ ॥ ಮಯೂರೋ ಹರಿಣಶ್ಚೈವ ನಕುಲಶ್ಶುನಕಸ್ತಥಾ ॥ ಭರದ್ವಾಜಃ ಕುಕ್ಕುರಶ್ಚ ಶುಭಂ ತೇಷಾಂ ವಿಲೋಕನಂ ॥ ॥ ಏಕಶ್ಶೂದ್ರೋ ಗ್ರಾಮಯಾತಃ ಪ್ರಸ್ಥಿತಾನಾಂ ಶುಭಂ ಸ್ಮೃತಂ ॥ ವಾಮಭಾಗೇ ಸುಪರ್ಣಸ್ಯ ದಕ್ಷಿಣೇ ಚ ಪಿಕಸ್ಯ ಚ ॥ ॥ ದರ್ಶನಂ ಪ್ರಸ್ಥಿತಾನಾಂ ಚ ಮಂಗಲಂ ಭವತಿ ಧ್ರುವಂ ॥ ಶುಭಂ ವಾಮಸಮಾಯಾತೋ ಭರದ್ವಾಜಶ್ಚ ಕುಕ್ಕುರಃ ॥ ॥ ಮೃತ್ಯುರ್ನೀಲವಿಹಂಗಸ್ಯ ವಾಮಭಾಗಗತಿಶ್ಚ ವೈ ॥ ರಜಕಃ ಶುಭಮಾಯಾತೋ ಗೃಹೀತ ಮಲಿನಾಂಶುಕಾಃ ॥ ॥ ಅಶುಭೌ ಪಾಶಬದ್ಧೌ ಚ ಗೋವೃಷೌ ಚ ನ ಸಂಶಯಃ ॥ ಚಂಡಾಲಸ್ತ್ರೀ ಶುಭಂ ಚೈವ ಕಾರ್ಯಸಿದ್ಧಿಸ್ತು ಬಾಲಕಃ ॥ ॥ ಪ್ರಶ್ನಮಾರ್ಗಶ್ಚ- ಪಾಷಾಣಾದಿಷು ಪಾದಸ್ಖಲನಂ ಸ್ತಂಭಾದಿಕೇ ತಥಾ ಶಿರಸಃ ॥ ನೇಷ್ಟಂ ನಿರ್ಗಮನೇಽನ್ಯಾನ್ಯಂ ಸಂಚಿಂತ್ಯಾನಿ ಲೋಕಸಿದ್ಧಾನಿ ॥ ॥ ಸೃಗಾಲನಕುಲವ್ಯಾಘ್ರ ಚಕೋರೋರಗಪತ್ರಿಣಃ ॥ ಗಚ್ಛಂತೋ ದಕ್ಷಿಣೇ ವಾಮೇ ಚಾಗ್ರತೋ ವಾ ಮೃಗದ್ವಿಪಾಃ ॥ ॥ ದೃಷ್ಟಾಃ ಪ್ರಶಸ್ತಾ ಏತೇ ತು ನ ಶುಭಾಃ ಸ್ಯುರ್ವಿಪರ್ಯಯೇ ॥ ಪಥಚ್ಛೇದೋಹಿ

ಮಾರ್ಜಾರಗೋಧಾನಕುಲವಾಸರ್ಪೈಃ ॥ ॥ ಸರ್ಪಪೇಂಧನಪಾಷಾಣತೃಣಾನ್ಯೇತಾನಿ ದೋಷಕೃತ್ ॥ ಇತಿ ॥ ಗ್ರಂಥಾಂತರಂ:- ಶ್ವಮೃಗಾಜಗರಧ್ವಾಂಕ್ಷರುರೂಣಾಂ ವಾಯಸಸ್ಯ ಚ ॥ ವಾಮೇನಾಲೋಕನಂ ಶ್ರೇಷ್ಠಂ ಪ್ರಯಾಣೇ ದಕ್ಷಿಣೇಽನ್ಯಥಾ ॥ ॥ ಉಲೂಕ ಮಹಿಷಶ್ಯೇನಖರೋಷ್ಟ್ರವ್ಯಾಲಡುಂಡುಭಾಃ ॥ ಇತಿ" ಮಾರ್ಗದಲ್ಲಿ ಮಃಶಕುನವಾದರೆ ಪರಿಹಾರವನ್ನು ಪ್ರಶ್ನಮಾರ್ಗದಲ್ಲಿ ಹೇಳಿಹದು- "ಪ್ರಶ್ನಮಾರ್ಗ:- ಏಕಾದಶಾದಿಮೋಽ ನಿಷ್ಟೇ ದ್ವಿತೀಯೇ ಶಕುನೇ ಪುನಃ ॥ ಪ್ರಾಣಾಯಾಮಾಃ ಷೋಡಶ ಸ್ಯುಃ ತೃತೀಯೇ ತು ನ ಚ ವ್ರಜೇತ್ ॥ ॥"

ಯಾತ್ರೆಯಲ್ಲಿ ಶೀಘ್ರದಲ್ಲಿ ಫಲಸಿದ್ಧಿಯಾಗುವುದಕ್ಕೆ ಸರ್ವಸಿದ್ಧಿಯಲ್ಲಿ ಯುಕ್ತಿಯನು ಹೇಳಿಹದು- "ಸರ್ವಸಿದ್ಧಿ:- ಸೌಮ್ಯೇ ಗತ್ವಾ ಶಿವಾದಿತ್ಯೋಽಸ್ವಮಧ್ಯುಷ್ಯಾರ್ಕಭೇ ವ್ರಜೇತ್ ॥ ಧನಸಿದ್ಧ್ಯೈ ಸರೋ ಗತ್ವಾ ಸ್ವಸೀಮ್ನಿ ನ ವಸೇತ್ಪುನಃ ॥ ॥ ಮೈತ್ರೇ ಗತ್ವಾಽದ್ರ್ರಭೇಽಧ್ಯುಷ್ಯ ಮೂಲೇ ಯಾಯಾದ್ಧನಾಪ್ತಯೇ ॥ ಹಸ್ತೇ ಗತ್ವಾ ಸಮಧ್ಯುಷ್ಯ ಚಿತ್ರಾಸ್ವಾತ್ಯೋಃ ಪರೇ ವ್ರಜೇತ್ ॥ ॥ ಗತ್ವಾ ಪೌಷ್ಣೇಂದುಪುಷ್ಯೇಷು ಸಮಧ್ಯುಷ್ಯೈಕ ರಾತ್ರಕಂ ॥ ಸ್ವಸೀಮ್ನೋ ವ್ರತತೋ ಗಚ್ಛೇತ್ ಧನಾರೋಗ್ಯಾದಿಸಿದ್ಧಯೇ ॥ ॥ ವಾಮ್ಯುಷ್ಯ ಚೈಂದ್ರವಿಷ್ಣ್ವರ್ಯಹಸ್ತಭೇ ತ್ವರಯಾ ವ್ರಜೇತ್ ॥ ಇತಿ" ಯಾತ್ರೆ ಹೋಗುವವನು ಅರಸಾದರೆ ಒಂದೇ ಠಾವಿನಲ್ಲಿ ಹತ್ತು ದಿವಸ ನಿಲ್ಲಲಾಗದು. ಮಿಕ್ಕಾದವರು ಏಳು ದಿವಸ ನಿಲ್ಲಲಾಗದು. ಯತ್ನಲಾನು ನಿತ್ತರೆ ಅಲ್ಲಿಂದ ಪುನಶ್ಚ ಹೊರಡಬೇಕಾದರೆ ಇಲ್ಲಿ ಹೇಳಿದ ಪ್ರಕಾರದ ಮುಹೂರ್ತದಲ್ಲಿಯೇ ಹೊರಡಬೇಕಷ್ಟೆ. "ಅತ್ರಮಾಧವೀಯಂ-ನೈಕತ್ರ ವಸತು ದಿವಸಾನ್ ದಶ ಪ್ರಯಾತೋ ನೃಪೋ ನ ಪಂಚಾನ್ಯಃ ॥ ಯದಿ ನಿವಸೇತ್ತತ್ಸ್ಥಾನಂ ಪುನರಪಿ ಕುರ್ಯಾಚ್ಛುಭೇ ದಿವಸೇ ॥ ॥ ಇತಿ" ಯುದ್ಧಾರ್ಥವಾಗಿ ಅರಸು ಪ್ರಯಾಣ ಮಾಡುವಲ್ಲಿಯೂ ಯಾತ್ರೆಗೆ ಹೇಳಿದ ಮುಹೂರ್ತವೇ ಆಗಬೇಕು. "ಅತ್ರ ಜ್ಯೋತಿಷಾರ್ಣವ:- ನಕ್ಷತ್ರತಿಥಿತಿಥ್ಯರ್ಧಯೋಗವಾಸರರಾಶಯಃ ॥ ಭಾವಯೋಗಾದಿಕಂ ಯುದ್ಧೇ ಯಾತ್ರಾವತ್ಸರ್ವಮಿಷ್ಯತೇ ॥ ॥ ತ್ರಿಪೂರ್ವಾಭರಣೀಜ್ಯೇಷ್ಠಾಮಘಾಗ್ನಿಶಿವವಾರುಣೇ ॥ ಸರ್ಪಾಶ್ವಿಭೇಷು ವಾಯುವ್ಯಾಂ ಸಮರೇ ವಿಜಯಾವಹಾಃ ॥ ॥ ಕೃಷ್ಣಪಕ್ಷೇ ಜಯಾ ರಿಕ್ತಾ ತಿಥಯೋ ವಿಜಯಪ್ರದಾಃ ॥ ಜೀವಮಂದಾರ್ಕಭೌಮಾನಾಂ ವಾರರಾಶ್ಯಂಶಕಾದಯಃ ॥ ॥ ಉದಯಪ್ರೇಕ್ಷಣಾದ್ಯಸ್ತು ಸಮರೇ ವಿಜಯಂ ಪ್ರದಾಃ ॥ ಜಯಮಧ್ಯವಿನಾಶಾಶ್ಚ ನದ್ಯೃಕ್ಷಾಣಾಂಧಭೇಷು ಚ ॥ ॥" ಏವಂ ಗತ್ವಾ ಶಕುನಮಖಿಲಂ ಚಾವಧಾರ್ಯಾನುಕೂಲೇ । ಯಾಯಾನ್ನೋಚೇತ್ ಪುನರಪಿ ಗೃಹೇ ಚೋಪವಿಶ್ಯೈವ ಗಚ್ಛೇತ್ ॥ ಶಸ್ತೇ ಕಾಲೇ ಸಮರವಿಜಯಂ ಪ್ರಾಪ್ಯ ಶತ್ರೂಂಶ್ಚ ಜಿತ್ವಾ ।॥ ಕೀರ್ತ್ಯಾ ಲಕ್ಷ್ಮ್ಯಾ ಪುನರಪಿ ವಿಶೇದ್ರಾಜಧಾನೀಂ ನರೇಂದ್ರಃ ॥ ॥ ಇತಿ"

ಅನಂತರದಲ್ಲಿ ಜಲಯಾತ್ರೆಯಲ್ಲಿಯೂ ಗೋವುಗಳಿಗೆ ಮತ್ತು ಸ್ತ್ರೀಯರಿಗೆ ಇರುವ ಯಾತ್ರೆಯಲ್ಲಿಯೂ ವಿಶೇಷವಿರುವುದನು ಹೇಳುತಾನೆ-

ನ ಶೋಭನೋಽತ್ರ ಪಕ್ಷತಿಸ್ತ್ಯಜಂತಿ ಸೌಗತಾ ಮೃಗೇ ।
ಶುಭೋ ನ ಗೋಸ್ತ್ರಿಯೋಃ ಕವೀಂದುಪುತ್ರವಾಸರೌ ॥ ೩೪ ॥

ಟೀಕಾ - ನತೋಭನ ಇತಿ - ಅತ್ರ = ಈ ಯಾತ್ರೆಯಲ್ಲಿ, ಪಕ್ಷತಿಃ = ಪಾಡ್ಯವು, ನ ಶೋಭನಃ = ಶುಭವಲ್ಲ. ನೌಗತೌ=ದೋಣಿ ಯಾತ್ರೆಯಲ್ಲಿ, ಮೃಗಂ=ಮಕರ ಲಗ್ನವನ್ನು, ತ್ಯಜಂತಿ = ಬಿಡುತಾರೆ. ಗೋಸ್ತ್ರಿಯೋಃ = ಗೋವು ಮತ್ತು ಸ್ತ್ರೀಯರಿಗೆ, ಕವೀಂದು ಪುತ್ರವಾಸರೌ=ಶುಕ್ರ ಬುಧವಾರಗಳು, ನ ಶುಭಃ=ಶುಭವಲ್ಲ ಎಂದರ್ಥ.

ನೀರ ಮೇಲಣ ದೋಣಿಯಲ್ಲಿ ಹೋಗುವ ಯಾತ್ರೆಗೂ ಇಲ್ಲಿ ಹಿಂದೆ ಯಾತ್ರೆಗೆ ಹೇಳಿದ ಮುಹೂರ್ತವೇ ಆಗಬೇಕು. ಇಲ್ಲಿ ಮಕರ ಲಗ್ನವು ಮಾತ್ರ ವರ್ಜಿಸಬೇಕು. ಮೃದುಕ್ಷಿಪ್ರ ಚರಂಗಳಾದ ನಕ್ಷತ್ರಗಳಲ್ಲಿಯೂ ಲಗ್ನಂಗಳಲ್ಲಿಯೂ ಮಕರರಾಶಿಯ ಅಂಶಕ ಬಂದರೂ, ಆ ಅಂಶಕವನ್ನು ವರ್ಜಿಸಬೇಕೆಂದು ಮಾಧವೀಯದಲ್ಲಿ ಹೇಳಿಹದು- "ಮಾಧವೀಯಂ- ಮೃದುಕ್ಷಿಪ್ರಚರರ್ಕ್ಷೇಷು ತ್ಯಕ್ತ್ವಾ ಮೃಗಮೃಗಾಂಶಕೌ ‖ ಜಲರಾಶೌ ವಿಲಗ್ನಸ್ಥೇ ದೂರಾನ್ನೌಯಾನಮಿಷ್ಯತೇ ‖ ‖ ಇತಿ" ಈ ಶ್ಲೋಕದಿಂದ ಜಲರಾಶಿಯ ಲಗ್ನವು ವಿಶೇಷವೆಂಬದಾಯಿತು. ದೋಣಿ ಹಡಗು ಮೊದಲಾದ್ದನ್ನುಂಟು ಮಾಡುವುದಕ್ಕೂ ಅದರಲ್ಲಿ ರಸಾಯುಧ ದ್ರವ್ಯಾದಿಗಳ ಪ್ರಾರಂಭ ತುಂಬುವುದಕ್ಕೂ ಅದನ್ನು ನೀರಿನ ಮೇಲೆ ಇಳಿಸುವುದಕ್ಕೂ ಚೌಲಕ್ಕೆ ವಿಧಿಸಿದ ಮುಹೂರ್ತ ಆಗಬೇಕು. "ಕಾಮೇಽಭಿಷೇಕೇ ವೃಷನೌ ಪ್ರೋತ್ಸರ್ಗಾದ್ಯೇಷು ಕರ್ಮಸು ‖ ಚೌಲವತ್ಸಮಯಃ ಪ್ರೋಕ್ತಃ ಪೂರ್ವೈರಾಚಾರತತ್ಪರೈಃ ‖ ‖ ಇತಿ" ಗೋವುಗಳಿಗೂ, ಸ್ತ್ರೀಯರಿಗೂ ಯಾತ್ರೆಯಲ್ಲಿ ಬುಧವಾರ ಶುಕ್ರವಾರ ವರ್ಜ್ಯವು. ವಿಕಲ್ಪದಿಂದ ಕುಜವಾರವು ವರ್ಜ್ಯವೆಂದು ಹೇಳುವರು. ಮಿಕ್ಕಾದ ವಾರಂಗಳು ಶುಭಂಗಳು.

ಅನಂತರದಲ್ಲಿ ಔಷಧಿ ಸೇವನೆಗೆ ಕಾಲವನು ಹೇಳುತಾನೆ-

ಚಿತ್ರಾದ್ವ್ಯಶ್ವಿವಿಧಿತ್ರಿವಾರುಣಗುರುಶ್ರೀಶಾಃ ಕುಜಾರ್ಯಾರ್ಕವಿತ್ ।
ವಾರಾಂಬುಕ್ಷಯ ದುಷ್ಟಯೋಗಚರವೀಣಾಂತ್ಯಾಲಿರಿಕ್ತಾಃ ಶುಭಾಃ ‖
ನೋ ಪೂರ್ಣಾ ನಿಧನಾರಿಗಾ ಅಪಿ ಖರಾ ಜನ್ಮತ್ರಯಂ ಚೌಷಧೇ ।‖
ನೇತ್ರೇಽಂಧರ್ಕ್ಷಕುಜಾರ್ಕಶುಕ್ರದಿವಸಾಸ್ತ್ಯೋಯುಕ್ಷಯಃ ಪುಷ್ಟಿದಃ ‖ ೩೫ ‖

ಟೀಕಾ-ಚಿತ್ರಾದ್ವೀತಿ-ಚಿತ್ರಾದ್ವ್ಯಶ್ವಿವಿಧಿತ್ರಿವಾರುಣಗುರುಶ್ರೀಶಾಃ = ಚಿತ್ರಾದ್ವಿ = ಚಿತ್ರ ಸ್ವಾತಿ, ಅಶ್ವಿ=ಅಶ್ವಿನಿ, ವಿಧಿತ್ರಿ=ರೋಹಿಣಿ ಮೃಗಶಿರ ಆರ್ದ್ರೆ, ವಾರುಣ=ಶತಭಿಷ, ಶ್ರೀಶಾಃ = ಶ್ರವಣ ಎಂಬಿವುಗಳು, ಕುಜಾರ್ಯಾರ್ಕವಿದ್ವಾರಾಂಬುಕ್ಷಯದುಷ್ಟಯೋಗ ಚರವೀಣಾಂತ್ಯಾಲಿರಿಕ್ತಾಃ=ಕುಜ=ಅಂಗಾರಕ, ಆರ್ಯ = ಗುರು, ಅರ್ಕ = ಆದಿತ್ಯ, ವಿತ್= ಬುಧ, ಎಂಬಿವುಗಳ, ವಾರ=ವಾರವು, ಅಂಬುಕ್ಷಯ=ಜಲಹ್ರಾಸ, ದುಷ್ಟಯೋಗ=ದುಷ್ಟ ಯೋಗಗಳು, ಚರ=ಚರಲಗ್ನವು, ವೀಣ=ಮಿಥುನಲಗ್ನ, ಅಂತ್ಯ=ಮೀನ, ಅಳಿ=ವೃಶ್ಚಿಕ, ರಿಕ್ತ = ರಿಕ್ತತಿಥಿಯು, ಔಷಧೇ = ಔಷಧಿ ವಿಧಿಯಲ್ಲಿ, ಶುಭಾಃ = ಶುಭಗಳು. ಪೂರ್ಣಾ= ಪೂರ್ಣತಿಥಿಯು, ನಿಧನಾರಿಗಾಃ = ನಿಧನ = ಅಷ್ಟಮ, ಅರಿ = ಷಷ್ಠ, ಎಂದಿವುಗಳಲ್ಲಿ, ಗಾಃ = ಇರುವಂಥ, ಖರಾಃ = ಪಾಪಗ್ರಹರು, ಜನ್ಮತ್ರಯಂ ಚ = ಜನ್ಮತ್ರಯವೂ, ನ= ನಿಷೇಧವು. ನೇತ್ರೇ = ನೇತ್ರದ ಔಷಧಿಯಲ್ಲಿ, ಅಂಧರ್ಕ್ಷಕುಜಾರ್ಕಶುಕ್ರದಿವಸಾಃ= ಅಂಧರ್ಕ್ಷ = ಅಂಧನಕ್ಷತ್ರದಲ್ಲಿ, ಕುಜ = ಅಂಗಾರಕ, ಅರ್ಕ = ಆದಿತ್ಯ, ಶುಕ್ರ = ಶುಕ್ರ

ಎಂದಿವುಗಳ, ದಿವಸಾಃ = ವಾರಗಳು, ನ = ನಿಷೇಧವು. ತೋಯಕ್ಷಯಃ=ಜಲಹ್ರಾಸವು, ಪುಷ್ಟಿದಃ = ಪುಷ್ಟಿಪ್ರದವು, ನ = ನಿಷೇಧವು ಎಂದರ್ಥ. ರೋಗ ಶಮನಾರ್ಥವಾಗಿ ಔಷಧಿಯನ್ನು ತೆಗೆದುಕೊಳ್ಳುವಲ್ಲಿ ಚಿತ್ರೆ ಸ್ವಾತಿ ಅಶ್ವಿನಿ ರೋಹಿಣಿ ಮೃಗಶಿರೆ ಆರ್ದ್ರೆ ಶತಭಿಷೆ ಪುಷ್ಯ ಶ್ರವಣ ಇಂತೀ ಒಂಬತ್ತು ನಕ್ಷತ್ರಗಳು ಆಗಬೇಕು. ಮಿಕ್ಕಾದ ಹದಿನೆಂಟು ನಕ್ಷತ್ರಗಳಾಗದು. ಕುಜ ಗುರು ಆದಿತ್ಯ ಬುಧ ಈ ನಾಲ್ಕು ವಾರಂಗಳು ಶುಭ. ಮಿಕ್ಕಾದ ಚಂದ್ರ ಶುಕ್ರ ಶನಿಗಳ ವಾರಗಳು ಶುಭವಲ್ಲ. ಜಲಹ್ರಾಸವು, ಮೃತ್ಯು ದಗ್ಧ ವಿಷ ವಿಘಾತ ನಾಶಂಗಳೆಂಬ ದುಷ್ಟಯೋಗಂಗಳು, ಚರ ಲಗ್ನಗಳಾದ ಮೇಷ ಕರ್ಕಟಕ ತುಲೆ ಮಕರ ಈ ನಾಲ್ಕು ಲಗ್ನಂಗಳು, ಮಿಥುನ ಮೀನ ವೃಶ್ಚಿಕ ಈ ಮೂರು ಲಗ್ನಂಗಳು ಈ ಪ್ರಕಾರ ಏಳು ಲಗ್ನಂಗಳು ರಿಕ್ತತಿಥಿಗಳು ಸಹ ಶುಭಪ್ರದಂಗಳು. ಮೃತ್ಯುದಗ್ಧಾದಿ ಯೋಗಂಗಳು ಅತಿದುಷ್ಟ ಯೋಗಗಳಾದಾಗ್ಯೂ ಔಷಧಿಯಲ್ಲಿ ಅತಿಶುಭಪ್ರದಂಗಳು. ಪೂರ್ಣತಿಥಿಗಳು ಷಷ್ಠಾಷ್ಟಮದಲ್ಲಿ ಪಾಪಗ್ರಹರು, ಮೂರು ಜನ್ಮನಕ್ಷತ್ರಗಳು ಸಹಾ ವರ್ಜ್ಯಂಗಳು. ನೇತ್ರದ ರೋಗಕ್ಕೆ ಔಷಧಿಯ ಸೇವನೆಯಲ್ಲಿ ಅಂಧನಕ್ಷತ್ರವು, ಕುಜಾದಿತ್ಯ ಶುಕ್ರವಾರಂಗಳು ಸಹ ವರ್ಜ್ಯಂಗಳು. ದೇಹಪುಷ್ಟಿಯಾಗುವ ಉದ್ದಿಶ್ಯ ಔಷಧಿಯನ್ನು ತೆಗೆದುಕೊಳ್ಳುವಲ್ಲಿ ಜಲಹ್ರಾಸವು ಶುಭವಲ್ಲ. ಜಲವೃದ್ಧಿಯೇ ಶುಭಪ್ರದವು. ಕ್ಷಿಪ್ರ ಪ್ರಸವಾರ್ಥ ಔಷಧಿಯಲ್ಲಿ ಚರಲಗ್ನ ಅಧೋಮುಖ ಲಗ್ನ ಸಹ ವಿಶೇಷವು. ಕುಷ್ಠರೋಗದ ಔಷಧಿಯಲ್ಲಿ ಪಾಪೋದಯ ಪಾಪದೃಷ್ಟಿಗಳು ಶುಭಂಗಳು. "ಚರಾಶ್ಚಾಧೋಮುಖಾಃ ಶಸ್ತಾಃ ಪ್ರಸವಾರ್ಥೇ ತು ಕರ್ಮಣಿ ॥ ಕುಷ್ಠರೋಗಚಿಕಿತ್ಸಾಯಾಂ ಪಾಪದೃಷ್ಟ್ಯುದಯೌ ಶುಭೌ ॥ ॥ ಇತಿ" ಚಂದ್ರನಿರುವ ರಾಶಿಯಾರಭ್ಯ ಮೂರು ರಾಶಿಯು ಜಲವೃದ್ಧಿಯು, ಆಮೇಲೆ ಮೂರು ರಾಶಿ ಜಲಹ್ರಾಸ. ಆಮೇಲೆ ಮೂರು ರಾಶಿ ಜಲವೃದ್ಧಿ. ಆಮೇಲೆ ಮೂರು ರಾಶಿ ಜಲಹ್ರಾಸ. "ಅತ್ರ ಮಾಧವೀಯಂ-ಚಂದ್ರೋದಯಾತ್ತದಾರಭ್ಯ ಪರಂ ರಾಶಿತ್ರಯಂ ಜಲಂ ॥ ವರ್ಧತೇ ಕ್ಷೀಯತೇ ವಾಽಪಿ ಚಂದ್ರಗತ್ಯಾ ಪುನಃ ಪುನಃ ॥ ॥ ಇತಿ" ಅಂಧಾದಿ ನಕ್ಷತ್ರಗಳನ್ನು ಹಿಂದೆ ಶಸ್ತ್ರಬಂಧದಲ್ಲಿ ಹೇಳಿರುತದೆ.

ಅನಂತರದಲ್ಲಿ ವೃಷಭ ಮಹಿಷಗಳಿಗೆ ನೊಗವಿಡುವುದಕ್ಕೆ ಕಾಲವನು ಹೇಳುತಾನೆ-

ಶಶಿಶಿವಪಿತೃರಕ್ಷಃಪೌಷ್ಣಪೂರ್ವೋತ್ತರೇಂದ್ರ ।
ಜ್ವಲನವರುಣಮಿತ್ರೇಷ್ವಿಂದುಜೀವಜ್ಞವಾರೇ ॥
ಯುಗಮುಪರಿ ವೃಷಾಣಾಂ ವಿನ್ಯಸೇಯುರ್ವಿಹಾಯ ।।।
ಸ್ಥಿರಕರಣಮೃಗೇಂದ್ರವ್ಯಾಘ್ರವಿಷ್ಟಿಸ್ವರಿಕ್ತಾಃ ॥ ೩೬ ॥

ಟೀಕಾ - ಶಶೀತಿ - ಶಶಿಶಿವಪಿತೃರಕ್ಷಃಪೌಷ್ಣಪೂರ್ವೋತ್ತರೇಂದ್ರಜ್ವಲನವರುಣಮಿತ್ರೇಷು=ಶಶಿ=ಮೃಗಶಿರೆ, ಶಿವ = ಆರ್ದ್ರೆ, ಪಿತೃ = ಮಘೆ, ರಕ್ಷಃ = ಮೂಲ, ಪೌಷ್ಣ= ರೇವತಿ, ಪೂರ್ವ = ಪೂರ್ವಾತ್ರಯ, ಉತ್ತರಾ = ಉತ್ತರಾತ್ರಯ, ಇಂದ್ರ = ಜ್ಯೇಷ್ಠೆ, ಜ್ವಲನ = ಕೃತ್ತಿಕೆ, ವರುಣ = ಶತಭಿಷೆ, ಮಿತ್ರೇಷು=ಅನೂರಾಧೆ ಎಂದಿವುಗಳಲ್ಲಿ, ಇಂದುಜೀವಜ್ಞವಾರೇ - ಇಂದು = ಚಂದ್ರ, ಜೀವ = ಗುರು, ಜ್ಞ= ಬುಧ, ವಾರೇ=ವಾರದಲ್ಲಿ, ವೃಷಾಣಾಂ = ವೃಷಭಂಗಳ, ಉಪರಿ = ಮೇಲೆ, ಯುಗಂ = ನೊಗವನ್ನು, ವಿನ್ಯಸೇಯುಃ=

ಇರಿಸಲಿ. ಸ್ಥಿರಕರಣಮೃಗೇಂದ್ರವ್ಯಾಘ್ರವಿಷ್ಟಿಃ=ಸ್ಥಿರಕರಣ=ಸ್ಥಿರಕರಣಗಳು, ಮೃಗೇಂದ್ರ= ಬವಕರಣ, ವ್ಯಾಘ್ರ=ಬಾಲವಕರಣ, ವಿಷ್ಟಿಃ=ಭದ್ರಕರಣ ಎಂದಿವುಗಳು, ಸರಿಕ್ತಾಃ=ರಿಕ್ತ ತಿಥಿಗಳು, ವಿಹಾಯ=ಬಿಟ್ಟು ಎಂದರ್ಥ.

ವೃಷಮಹಿಷಗಳಿಗೆ ಪ್ರಾರಂಭ ನೊಗವಿಡುವುದಕ್ಕೆ ಮೃಗಶಿರೆ ಆರ್ದ್ರೆ ಮಘೆ ಮೂಲ ರೇವತಿ ಪುಷ್ಯೆ ಪೂರ್ವಾಷಾಢ ಪೂರ್ವಾಭಾದ್ರೆ ಉತ್ತರೆ ಉತ್ತರಾಷಾಢ ಉತ್ತರಾಭಾದ್ರೆ ಜ್ಯೇಷ್ಠೆ ಕೃತ್ತಿಕೆ ಶತಭಿಷೆ ಅನೂರಾಧೆ ಇಂತೀ ಹದಿನೈದು ನಕ್ಷತ್ರಗಳಾಗಬೇಕು. ಮಿಕ್ಕಾದ ಹನ್ನೆರಡು ನಕ್ಷತ್ರಗಳಾಗದು. ಚಂದ್ರವಾರ ಗುರುವಾರ ಬುಧವಾರಗಳಾದೀತು. ರವಿ ಕುಜ ಶುಕ್ರ ಶನಿಗಳ ವಾರಂಗಳಾಗದು. ಸ್ಥಿರಕರಣಗಳಾದ ಶಕುನಿ ಚತುಷ್ಪಾದ ನಾಗವಾನ್ ಕಿಂಸ್ತುಘ್ನಂಗಳು, ಬವಬಾಲವ ಭದ್ರೆಗಳು ಇಂತೀ ಏಳು ಕರಣಗಳಾಗದು. ಕೌಲವ ತೈತಲೆ ಗರಜೆ ವಣಿಜೆಗಳಾದೀತು. ರಿಕ್ತ ತಿಥಿಗಳಾದ ಚೌತಿ ನವಮಿ ಚತುರ್ದಶಿಗಳಾಗದು. ಮಿಕ್ಕಾದ ತಿಥಿಗಳಲ್ಲಿ ದರ್ಶ ಹೊರತು ಎಲ್ಲ ತಿಥಿಗಳು ಗ್ರಾಹ್ಯಗಳು. ಪಶು ಮಹಿಷ ವೃಷಂಗಳ ವಿಷಯವಾಗಿ ಏನೊಂದು ಕಾರ್ಯ ಮಾಡುವಲ್ಲಿಯೂ ಇಲ್ಲಿ ಹೇಳಿದ ಪ್ರಕಾರದ ಮುಹೂರ್ತವೇ ಆಗಬೇಕು. ದೋಷ ಪ್ರಕರಣದಲ್ಲಿ ಹೇಳಿದ ದೋಷಂ ಗಳೊಳಗೆ ಸ್ಥಿರಕರಣಗಳನ್ನೂ ರಿಕ್ತ ತಿಥಿಗಳನ್ನೂ ಭದ್ರಕರಣವನ್ನೂ ಬಿಟ್ಟು ಮಿಕ್ಕಾದ ಸಮಸ್ತ ದೋಷಂಗಳನು ಗ್ರಹಿಸಿಕೊಳಬಹುದು. ವೃಷ ಮಹಿಷ ಪಶು ಮಹಿಷಿ ಮೊದಲಾದುವುಗಳನ್ನು ಸಂಗ್ರಹ ಮಾಡುವಲ್ಲಿ ವಿಷ್ಟಿ, ವ್ಯಾಘ್ರ, ಸಿಂಹಗಳೆಂಬ=ಭದ್ರೆ ಬಾಲವ ಬವ ಈ ಮೂರು ಕರಣಂಗಳನ್ನು ಮತ್ತು ಶ್ವ ವ್ಯಾಘ್ರ ಸಿಂಹ ಯೋನಿಗಳ ವಾರಂಗಳಾದ ಕುಜ ಚಂದ್ರ ಶುಕ್ರರ ವಾರಗಳನ್ನು ಬಿಟ್ಟು ಮಿಕ್ಕಾದ ಕರಣಗಳಲ್ಲಿಯೂ ವಾರಂಗಳಲ್ಲಿಯೂ ಅಶ್ವ ಗಜ ಪಶು ಮೃಗ ಮಹಿಷ ಅಜ ಯೋನಿಗಳ ನಕ್ಷತ್ರಂಗಳಾದ ಅಶ್ವಿನಿ ಶತಭಿಷೆ ಭರಣಿ ರೇವತಿ ಉತ್ತರೆ ಉತ್ತರಾಷಾಢ ಉತ್ತರಾಭಾದ್ರೆ ಅನೂರಾಧೆ ಜ್ಯೇಷ್ಠೆ ಹಸ್ತ ಸ್ವಾತಿ ಕೃತ್ತಿಕೆ ಪುಷ್ಯಗಳೆಂಬ ಹದಿಮೂರು ನಕ್ಷತ್ರಂಗಳಲ್ಲಿ ವೃಷಭ ಮೀನ ಕುಂಭ ಲಗ್ನಗಳಲ್ಲಿ ಸಮೃದ್ಧ್ಯರ್ಥವಾಗಿ ಪಶು ಮಹಿಷಾದಿಗಳನ್ನು ಸಂಗ್ರಹಿಸುವುದು ಅಥವಾ ಶನಿವಾರವು ಪಶುಕರಣವಾದ ವಣಿಜ ಕರಣವು ಕೂಡಿದ ದಿವಸ ಈ ಹಿಂದೆ ಹೇಳಿದ ಹದಿಮೂರು ನಕ್ಷತ್ರಂಗಳೊಂದು ನಕ್ಷತ್ರ ಬಂದರೆ ಆ ದಿವಸ ವೃಷಭ ಲಗ್ನದಲ್ಲಿ ಪಶು ಮಹಿಷಾದಿ ಸಂಗ್ರಹಕ್ಕೆ ಅತಿ ಪ್ರಶಸ್ತವು "ಅತ್ರ ಮಾಧವೀಯಂ-ಶ್ವವ್ಯಾಘ್ರಸಿಂಹಕರಣಾನಿ ತದೀಯಯೋನಿವಾರಾನ್ ವಿಹಾಯ ಚ ವೃಷಾಂತ್ಯಘಟೇಷು ಭೇಷು ॥ ಅಶ್ವೇಭಗೋಮೃಗಮಹಿಷ್ಯಜಯೋನಿಭೇಷು ಕುರ್ಯಾದ್ಗವಾಂ ಪ್ರಥಮ ಸಂಗ್ರಹಣಂ ಸಮೃದ್ಧ್ಯೈ ॥ ॥ ಸೌರಸ್ಯ ವಾರೇ ವಣಿಜೇನ ಯುಕ್ತೇ ಪ್ರಶಸ್ತನಕ್ಷತ್ರ ಸಮನ್ವಿತೇ ಚ ॥ ವೃಷೋದಯೇ ಸಂಗ್ರಹಣಂ ವಿದಧ್ಯಾದ್ಗವಾಂ ಸಮೃದ್ಧ್ಯೈ ಶುಭ ಏಷ ಯೋಗಃ ॥ ॥ ಇತಿ" "ಗುರುಃ- ಘಟೇ ಚ ಸ್ವನವಾಂಶಸ್ಥೇ ಜೀವೇ ಲಗ್ನಮುಪಾಗತೇ ॥ ಮಹಿಷೀಸಂಗ್ರಹಂ ಕುರ್ಯಾತ್ ತಾಸಾಂ ವೃದ್ಧಿಂ ಯದೀಚ್ಛತಿ ॥ ॥" ಸಾಮಾನ್ಯವಾಗಿ ಪಶು ಮಹಿಷಾದಿಗಳ ವಿಷಯವಾಗಿರುವ ಸಮಸ್ತ ಕಾರ್ಯಗಳಲ್ಲಿಯೂ ವಾರಂಗಳು ಕರಣಂಗಳು ಮುಖ್ಯವಾದ್ದರಿಂದ ಸ್ಥಿರಕರಣ ಸಿಂಹ ವ್ಯಾಘ್ರ ವಿಷ್ಟಿಕರಣಂಗಳನ್ನು, ಸೋಮ ಮಂಗಳ

ಶುಕ್ರವಾರಗಳನ್ನೂ, ಚಿತ್ರೆ ವಿಶಾಖೆ ನಕ್ಷತ್ರಗಳನ್ನು ಬಿಟ್ಟು ಮಿಕ್ಕಾದುದು ಸಮಸ್ತವೂ ಶುಭವೇ ಸರಿ.

"ಮಾಧವೀಯಂ- ಗೋಕಾರ್ಯೇಷು ಸಮಸ್ತೇಷು ವಾರಾಶ್ಚ ಕರಣಾನಿ ಚ ||
ತಿಥ್ಯಾದಿಭ್ಯೋ ವಿಶಿಷ್ಯಂತೇ ಶೂರ್ಪಂ ಚಿತ್ರಾಂ ಚ ವರ್ಜಯೇತ್ || || ಇತಿ"

ಅನಂತರ ಎರಡು ಶ್ಲೋಕಗಳಿಂದ ಕೃಷ್ಯಾರಂಭ ಕಾಲವನು ಹೇಳುತಾನೆ-

ಸಾರ್ಕತದ್ವಿಕೃತಿತಿಥ್ಯಗರ್ಕ್ಷತತ್ಪಾರ್ಶ್ವಭಾನಿ ಗಣಿತಾನಿ ಸಾಭಿಜಿತ್ ||
ವೃಂಗವಿಷ್ಟ್ಯಚರಭದ್ರಿಕಾಸ್ಪದಬ್ರಧ್ನವೇಷ್ಮವಿಧವೋSಶುಭಾಃ ಕೃಷೌ || ೩೭ ||
ಮೀನಗೋಮಿಥುನನಕ್ರಕರ್ಕಟವ್ಯಾಘ್ರಸಿಂಹಕರಿವಾರಿವೃದ್ಧಯಃ ||
ಪುಷ್ಯಪೌಷ್ಣಸುರಸೂತ್ತರಾಸುರಬ್ರಧ್ನಧಾತೃರವಿವಾಸರಾಃ ಶುಭಾಃ || ೩೮ ||

ಟೀಕಾ - ಸಾರ್ಕ ಇತಿ - ಸಾರ್ಕ = ಆದಿತ್ಯ ಸಹಿತವಾದಂಥಾದ್ದು, ತತ್ = ಆ ಆದಿತ್ಯ ಸಹಿತವಾದ್ದರ ವೆಸೆಯಿಂದ, ವಿಕೃತಿ=ಇಪ್ಪತ್ತ ಮೂರನೆದು, ತಿಥಿ=ಹದಿನೈದನೆದು, ಅಗ= ಏಳನೆದು ಎಂಬುಳ್ಳಂಥ. ಋಕ್ಷ=ನಕ್ಷತ್ರಗಳು. ತತ್=ಆ ನಕ್ಷತ್ರಗಳ, ಪಾರ್ಶ್ವ=ಉಭಯ ಪಾರ್ಶ್ವಗಳಲ್ಲಿರುವಂಥ. ಭಾನಿ = ನಕ್ಷತ್ರಗಳು. ಸಾಭಿಜಿದ್ಗಣಿತಾನಿ = ಅಭಿಜಿತ್ಸಹಿತವಾಗಿ ಎಣಿಸಲ್ಪಟ್ಟಂಥವುಗಳು. ವೃಂಗವಿಷ್ಟ್ಯಚರಭದ್ರಿಕಾಸ್ಪದಬ್ರಧ್ನವೇಷ್ಮವಿಧವಃ = ವೃಂಗ= ವೃಶ್ಚಿಕಲಗ್ನ, ವಿಷ್ಟಿ = ಭದ್ರಕರಣ, ಅಚರ = ಸ್ಥಿರಕರಣ, ಭದ್ರಿಕಾ=ಭದ್ರಾತಿಥಿ, ಆಸ್ಪದ= ದಶಮದಲ್ಲಿ, ಬ್ರಧ್ನ = ಸೂರ್ಯನು, ವೇಷ್ಮ=ಚತುರ್ಥದಲ್ಲಿ, ವಿಧವಃ=ಚಂದ್ರ ಎಂದಿವು ಗಳು. ಕೃಷೌ = ಕೃಷಿಕರ್ಮದಲ್ಲಿ, ಅಶುಭಾಃ = ಅರಿಷ್ಟಂಗಳು. ಮೀನಗೋಮಿಥುನನಕ್ರ ಕರ್ಕಟವ್ಯಾಘ್ರಸಿಂಹಕರಿವಾರಿವೃದ್ಧಯಃ = ಮೀನ = ಮೀನ, ಗೋ=ವೃಷಭ, ಮಿಥುನ= ಮಿಥುನ. ನಕ್ರ=ಮಕರ. ಕರ್ಕಟ=ಕರ್ಕಟಕ, ವ್ಯಾಘ್ರ=ಬಾಲವ, ಸಿಂಹ=ಬವ, ಕರಿ=ಗರಜ, ವಾರಿವೃದ್ಧಯಃ = ಜಲವೃದ್ಧಿ ಎಂದಿವುಗಳು, ಪುಷ್ಯಪೌಷ್ಣಸುರಸೂತ್ತರಾಸುರಬ್ರಧ್ನಧಾತೃ ರವಿವಾಸರಾಃ = ಪುಷ್ಯ = ಪುಷ್ಯ. ಪೌಷ್ಣ = ರೇವತಿ. ಸುರಸೂ = ಪುನರ್ವಸು, ಉತ್ತರಾ= ಉತ್ತರಾತ್ರಯ. ಅಸುರ = ಮೂಲ. ಬ್ರಧ್ನ = ಹಸ್ತ. ಧಾತೃ = ರೋಹಿಣಿ, ರವಿವಾಸರಾಃ= ಆದಿತ್ಯವಾರ ಎಂದಿವುಗಳು. ಶುಭಾಃ = ಶುಭಂಗಳು ಎಂದರ್ಥ.

ಕೃಷ್ಯಾರಂಭದಲ್ಲಿ ಆದಿತ್ಯನಿರುವ ನಕ್ಷತ್ರ ಒಂದು, ಆ ನಕ್ಷತ್ರದ್ವೆಸೆಯಿಂದ ಇಪ್ಪತ್ತಮೂರನೆ, ಹದಿನೈದನೆ, ಏಳನೆ ಈ ಮೂರು ನಕ್ಷತ್ರಗಳು, ಈ ನಾಲ್ಕು ನಕ್ಷತ್ರಗಳ ಹಿಂದೆ ಮುಂದೆ ಇರುವ ನಕ್ಷತ್ರಗಳು, ಇವುಗಳನ್ನು ಅಭಿಜಿತ್ಸಹಿತವಾಗಿ ಲೆಕ್ಕಿಸಿಕೊಳ್ಳಬೇಕು. ಆ ಪ್ರಕಾರ ಹನ್ನೆರಡು ನಕ್ಷತ್ರಂಗಳು ಶೂಲ ನಕ್ಷತ್ರಗಳಾದುದರಿಂದ ಅವುಗಳನ್ನು ವರ್ಜಿಸಬೇಕು. ವೃಶ್ಚಿಕ ಲಗ್ನ, ಭದ್ರಾಕರಣ, ಸ್ಥಿರಕರಣ, ಭದ್ರಾತಿಥಿ, ದಶಮದಲ್ಲಿ ಆದಿತ್ಯ, ಚತುರ್ಥದಲ್ಲಿ ಚಂದ್ರ ಸಹ ವರ್ಜ್ಯಂಗಳು. ಮೀನ ವೃಷಭ ಮಿಥುನ ಮಕರ ಕರ್ಕಟಕ ಈ ಐದು ಲಗ್ನಗಳು, ಬಾಲವ ಬವ ಗರಜ ಈ ಮೂರು ಕರಣಗಳು, ಜಲವೃದ್ಧಿ, ಪುಷ್ಯ ರೇವತಿ ಪುನರ್ವಸು ಉತ್ತರೆ ಉತ್ತರಾಷಾಢ ಉತ್ತರಾಭಾದ್ರೆ ಮೂಲ ಹಸ್ತ ರೋಹಿಣಿ ಈ ಒಂಬತ್ತು ನಕ್ಷತ್ರಂಗಳು, ಆದಿತ್ಯವಾರ ಸಹ ಅತಿ ಪ್ರಶಸ್ತಂಗಳು. ಹಲಿರೋತ್ಕರ್ಷವನು ಮಾಡುವಾಗ ತ್ರಿಸಂಧ್ಯಾ ಶೂಲಕ್ಕೆ ಪೃಷ್ಠಭಾಗವ ಮಾಡಿ

ಆದಿತ್ಯವಾರದಲ್ಲಿ ಐದು ರೇಖೆ, ಚಂದ್ರವಾರ ಇಪ್ಪತ್ತೊಂದು ರೇಖೆ, ಕುಜವಾರ ಏಳು ರೇಖೆ, ಬುಧವಾರ ಒಂಬತ್ತು ರೇಖೆ, ಗುರುವಾರ ಹತ್ತು ರೇಖೆ, ಶುಕ್ರವಾರ ಹದಿನಾರು ರೇಖೆ, ಶನಿವಾರ ನಾಲ್ಕು ರೇಖೆ ಈ ಕ್ರಮದಿಂದ ಹಲೋತ್ಕರ್ಷವ ಮಾಡಬೇಕು. 'ಸಂಧ್ಯಾ ತ್ರಿಶೂಲಮಾಹ'- 'ಆದಿತ್ಯವಾರೇ ಕುಜ ಅಗ್ನಿಭಾಗೇ ಯಾಮ್ಯೇ ಗುರೌಜ್ಞೇಽಪ್ಯಮರಾರಿ ಭಾಗೇ ॥ ವಾರುಣ್ಯಕೇಽಬ್ಜೇ ಪವನೇಽರ್ಕಪುತ್ರೇ । ವಿಧೌ ಪಿನಾಕೀಂದುದಿಶಿ ತ್ರಿಶೂಲಂ ॥ ॥ ಇತಿ" "ಪಂಚೇಧ್ಮಗಗೋಪಂಕ್ತಿಭೂಪಾಂಬುಧಿಮಿತಾಃ ಕ್ರಮಾತ್ ॥ ಸೂರ್ಯಾದಿವಾರೇ ರೇಖಾಃ ಸ್ಯುಃ ಹಲಕರ್ಮಣಿ ಕೀರ್ತಿತಾಃ ॥ ॥ ಇತಿ" ಕುಮೇರಿ ಕಡಿಯುವುದಕ್ಕೆ ಆ ಸ್ಥಳವ ನೋಡುವ ಬಗ್ಗೆ ಕುಮೇರಿ ಕಡಿಯುವುದಕ್ಕೂ ಅದರ ಸುಡುವುದಕ್ಕೂ ಆ ಮೇಲೆ ಅದರಲ್ಲಿ ಕೃಷಿ ಮಾಡುವುದಕ್ಕೂ ಕಾಲವನು ಮುಹೂರ್ತ ಶತಕದಲ್ಲಿ ಹೇಳಿಹುದು- "ಮುಹೂರ್ತ ಶತಕಂ-ಕೃಷ್ಯರ್ಥಂ ಗಿರಿಶಾತ್ವಿಮಿತ್ರಭರಣೇಪೂರ್ವೋತ್ತರಾಪಿತ್ರಜಸ್ವಾತಿ ಷ್ವಾರ್ಯಕುಜಕ್ಷಪಾಕರವಿದಾಂ ವಾರೇ ಶುಭಾನಾಂ ಗೃಹೇ ॥ ಆರಣ್ಯಾಃ ಪ್ರಥಮ ಪ್ರವೇಶಲವನೇ ದಾಹಂ ಚ ಕುರ್ಯಾತ್ಪುನಃ । ತಸ್ಮಿನ್ ಶೂರ್ಪಯುಗಾತ್ವಿಧಾತೃಷು ಕೃಷಿಂ ವಾರೇ ಕವೇಶ್ಚೋದಯೇ ॥ ॥ ಇತಿ" ದೋಷಪ್ರಕರಣದಲ್ಲಿ ಹೇಳಿದ ದೋಷಂಗಳೊಳಗೆ ಭದ್ರಾಕರಣ ಸ್ಥಿರಕರಣಾದಿಗಳು ಇಲ್ಲಿ ಹೇಳಿದಷ್ಟೇ ವರ್ಜ್ಯಂಗಳಲ್ಲದೆ ಸಮಸ್ತ ದೋಷಂಗಳನು ವರ್ಜಿಸಬೇಕೆಂಬುದಿಲ್ಲ.

ಅನಂತರದಲ್ಲಿ ಬೀಜವಾಪನೆಗೆ ಕಾಲವನು ಹೇಳುತ್ತಾನೆ-

ತೋಯಹ್ರಾಸವರಾಹಗೋಸ್ಥಿರಶುನೀಭದ್ರೇಂದ್ರಪೂರ್ವಾಯಮ ।
ತ್ವಾಷ್ಟ್ರಾಹಿದ್ವಯಪಕ್ಷತಿಸ್ತ್ರ್ಯಜಧನುರ್ಭೃಂಗಾನ್ ತ್ಯಜೇದ್ವಾಪನೇ ॥
ಪಾತರ್ಕ್ಷಾದಪಿ ರುದ್ರತಿಥ್ಯತಿಧೃತಿಃ ಷಟ್ಕೌ ತ್ರಯೋವಿಂಶಭಾತ್ ॥।
ನೇಷ್ಟಾಃ ಖಾಂಬುಶಶೀಖರಾಖ್ಯಕರಣಂ ಚಾಗ್ನೀಶಶೂರ್ಪಾಣಿ ವಾ ॥ ೩೯ ॥

ಟೀಕಾ - ತೋಯಹ್ರಾಸೇತಿ - ತೋಯಹ್ರಾಸವರಾಹಗೋಸ್ಥಿರಶುನೀಭದ್ರೇಂದ್ರ ಪೂರ್ವಾಯಮತ್ವಾಷ್ಟ್ರಾಹಿದ್ವಯಪಕ್ಷತಿಸ್ತ್ರ್ಯಜಧನುರ್ಭೃಂಗಾನ್ = ತೋಯಹ್ರಾಸ = ನೀರಿಳಿತೆ, ವರಾಹ=ಕೌಲವ, ಗೋ=ವಣಜೆ, ಸ್ಥಿರ=ಸ್ಥಿರಕರಣ, ಶುನೀ=ಭದ್ರಾಕರಣ, ಭದ್ರಾ = ಭದ್ರಾತಿಥಿ, ಇಂದ್ರ = ಜ್ಯೇಷ್ಠೆ, ಪೂರ್ವಾ=ಪೂರ್ವಾತ್ರಯ, ಯಮ=ಭರಣಿ, ತ್ವಾಷ್ಟ್ರ=ಚಿತ್ರೆ, ಅಹಿದ್ವಯ=ಆಶ್ಲೇಷೆ ಮಘೆ, ಪಕ್ಷತಿ=ಪಾಡ್ಯ, ಸ್ತ್ರೀ=ಕನ್ಯಾಲಗ್ನ, ಅಜ= ಮೇಷಲಗ್ನ, ಎಂದಿವುಗಳನ್ನು, ವಾಪನೇ=ಬೀಜವಾಪನೆಯಲ್ಲಿ, ತ್ಯಜೇತ್=ವರ್ಜಿಸಲಿ. ಪಾತರ್ಕ್ಷಾತ್ = ರಾಹು ಇರುವಂಥ, ಋಕ್ಷಾತ್=ನಕ್ಷತ್ರದ್ದೆಸೆಯಿಂದ, ರುದ್ರತಿಥ್ಯತಿಧೃತಿ= ರುದ್ರ = ಹನ್ನೊಂದನೆ, ತಿಥಿ = ಹದಿನೈದನೆ, ಅತಿಧೃತಿ=ಹತ್ತೊಂಬತ್ತನೆ. ತ್ರಯೋವಿಂಶ ಭಾತ್=ಇಪ್ಪತ್ತಮೂರನೆಯ ನಕ್ಷತ್ರದ್ದೆಸೆಯಿಂದ, ಷಟ್ಕೌ=ಎರಡಾರಾದಂಥ ಹನ್ನೆರಡು ನಕ್ಷತ್ರಗಳು, ಖಾಂಬುಶಶೀ = ಖ = ದಶಮ, ಅಂಬು = ಚತುರ್ಥ ಎಂದಿವುಗಳಲ್ಲಿ, ಶಶೀ=ಚಂದ್ರನು, ಖರಾಖ್ಯಕರಣಂ = ತೈತಲಾಕರಣವು, ನೇಷ್ಟಾಃ = ಇಷ್ಟವಲ್ಲ. ಅಗ್ನೀಶ ಶೂರ್ಪಾಣಿವಾ=ಅಗ್ನಿ=ಕೃತ್ತಿಕೆ, ಈಶ = ಆರ್ದ್ರೆ, ಶೂರ್ಪಾಣಿ = ವಿಶಾಖೆ ಎಂದಿವುಗಳು, ವಾ=ಮಧ್ಯಮಗಳೆಂದರ್ಥ.

ಬೀಜವಾಪನೆಯಲ್ಲಿ ಜಲಹ್ರಾಸವಾಗದು. ಕೌಲವ ವಣಿಜೆ ಸ್ಥಿರಕರಣಗಳಾದ ಶಕುನಿ ಚತುಷ್ಪಾದ ನಾಗವಾನ್ ಕಿಂಸ್ತುಘ್ನ ಭದ್ರೆ ಇಂತೀ ಏಳು ಕರಣಗಳಾಗದು. ತೈತಲಾ ಕರಣವಾಗವೆಂದು ಮುಂದೆ ಹೇಳುತ್ತದೆ. ಆ ಪ್ರಕಾರ ಆಗುವಾಗ್ಗೆ ಬವ ಬಾಲವ ಗರಜೆ ಈ ಮೂರು ಕರಣಗಳಾದೀತೆಂಬುದಾಯಿತು. ಭದ್ರಾತಿಥಿಗಳಾದ ಬಿದಿಗೆ ಸಪ್ತಮೀ ದ್ವಾದಶೀ ಗಳಾಗದು. ಮಿಕ್ಕಾದ ತಿಥಿಗಳೆಲ್ಲ ಶುಭಪ್ರದಂಗಳು. ಜೇಷ್ಠೆ ಹುಬ್ಬೆ ಪೂರ್ವಾಷಾಢ ಪೂರ್ವಾಭಾದ್ರೆ ಭರಣಿ ಚಿತ್ರೆ ಆಶ್ಲೇಷೆ ಮಘೆ ಈ ಎಂಟು ನಕ್ಷತ್ರಂಗಳಾಗದು. ಮಿಕ್ಕಾದ ನಕ್ಷತ್ರಂಗಳೆಲ್ಲ ಶುಭಪ್ರದಂಗಳು. ಪಾಡ್ಯಂಗಳೆರಡು ವರ್ಜ್ಯಂಗಳು. ಕನ್ನೆ ಮೇಷ ಧನು ವೃಶ್ಚಿಕ ಈ ನಾಲ್ಕು ಲಗ್ನಂಗಳ ಹೊರತು ಮಿಕ್ಕಾದ ಲಗ್ನಂಗಳೆಲ್ಲವೂ ಆದೀತು. ರಾಹು ಇರುವ ನಕ್ಷತ್ರವ್ದೆಸೆಯಿಂದ ಹನ್ನೊಂದನೆಯ ನಕ್ಷತ್ರ ಒಂದು, ಹದಿನೈದನೆಯ ನಕ್ಷತ್ರ ಒಂದು, ಹತ್ತೊಂಬತ್ತನೆಯ ನಕ್ಷತ್ರ ಒಂದು. ಈ ಪ್ರಕಾರ ಮೂರು ನಕ್ಷತ್ರಂಗಳು, ಆಮೇಲೆ ಆ ರಾಹು ಇರುವ ನಕ್ಷತ್ರವ್ದೆಸೆಯಿಂದ ಇಪ್ಪತ್ತಮೂರನೇ ನಕ್ಷತ್ರದಾರಭ್ಯ ಹನ್ನೆರಡು ನಕ್ಷತ್ರಂಗಳನ್ನು ಆ ಪ್ರಕಾರ ಹದಿನೈದು ನಕ್ಷತ್ರಂಗಳಿಗೆ ರಾಹುಚಕ್ರ ವೇಧೆ ಎಂಬ ದೋಷವಿರುವುದರಿಂದ ಆ ನಕ್ಷತ್ರಗಳನ್ನು ಇಲ್ಲಿ ವರ್ಜಿಸಬೇಕು. ದಶಮ ಚತುರ್ಥಗಳಲ್ಲಿ ಚಂದ್ರನಿರಲಾಗದು. ತೈತಲಾಕರಣವೂ ಆಗದು. ಕೃತ್ತಿಕೆ ಆರ್ದ್ರೆ ವಿಶಾಖೆಗಳು ಮಧ್ಯಮ ಪ್ರಕಾರವಾದೀತು. ಇಲ್ಲಿ ಹೇಳಿದ ದೋಷಂಗಳು ಮಾತ್ರ ವರ್ಜ್ಯ ಗಳಲ್ಲದೆ ದೋಷಪ್ರಕರಣದಲ್ಲಿ ಹೇಳಿದ ದೋಷಂಗಳನ್ನೆಲ್ಲ ವರ್ಜಿಸಬೇಕೆಂಬುದಿಲ್ಲ. ಈ ಪ್ರಕಾರ ಸಮಸ್ತ ವಿಧ ಬೀಜವಾಪನೆಗೂ ನೋಡಿಕೊಳ್ಳಬೇಕು. ಈ ರಾಹುಚಕ್ರದ ವೇಧೆಯನರಿಯುವುದಕ್ಕೆ ಅಕ್ಷರಸಂಖ್ಯೆಯಿಂದ ಹೇಳುತದೆ- "ಕ್ಷೇಳಂ ತುರಂಗೇ ವಿಮತೇತು ಕಷ್ಟಳಂ ಸತ್ಪುಣ್ಯಾ ಮಾಸ್ಯೇಥ ಟಗೌರ ಈತಯಃ ॥ ವೀರೇಶರೇತೀರ ಸರೇಪಿತಂಡುಲಂ ಶಿಷ್ಟೇಸ್ನವೃದ್ಧಿಃ ಫಣಭಾತ್ಕ್ರಮೇಣ ॥ ॥ ಇತಿ" ಈ ರಾಹುಚಕ್ರ ವೇಧೆಯು ಮಾಧವೀಯಕ್ಕೆ ಅನುಸರಿಸಿ ಇರುವುದಿಲ್ಲವಾದ್ದರಿಂದ ಮಾಧವೀಯ ಮತಕ್ಕೆ ಅನುಸಾರವಾಗಿರುವ ಗ್ರಂಥಾಂತರ ಶ್ಲೋಕವನು ಹೇಳಲ್ಪಡುತ್ತದೆ- "ಗ್ರಂಥಾಂತರಂ ಆಸ್ಯೇತ್ರೀಣಿ ಗಳೇ ತ್ರಯಂ ಚ ಜಠರೇ ಧಿಷ್ಣ್ಯಾನಿ ತು ದ್ವಾದಶ ಸ್ಯಾತ್ಪುಚ್ಛೇಽಸ್ಯ ಚತುಷ್ಟಯಂ ಚ ಫಣಿನೋ ಭಾನಾಂ ಬಹಿಃ ಪಂಚಕಂ ॥ ಕ್ಷೇಳಂ ಕಷ್ಟಳಮನ್ನವೃದ್ಧಿರಧಿಕಂ ನಿಸ್ತಂಡುಲತ್ವಂ ಕ್ರಮಾತ್ ॥। ನಾಶಂಚೇತಿ ಯಥಾಕ್ರಮಂ ವಿಗಣಯೇತ್ ಬೀಜಪ್ರವಾಪೇ ಫಲಂ ॥ ॥ ಇತಿ" "ನರಪತಿಶ್ಚ- ಸರ್ಪಾಭಾದ್ಯಂ ಕ್ರಮಾತ್ ಸ್ಥಾಪ್ಯ ತ್ರಿನಾಡೀ ಚಕ್ರವತ್ ಕ್ರಮಾತ್ ॥ ಶೀರ್ಷೇ ತ್ರೀಣಿ ಗಲೇ ತ್ರೀಣಿ ಭಾನಿ ಚ ದ್ವಾದಶೋದರೇ ॥ ॥ ಪುಚ್ಛೇ ಸ್ಥಾಪ್ಯಾನಿ ಚತ್ವಾರಿ ನಾಡೀ ಬಾಹ್ಯೇತು ಪಂಚಕಂ ॥ ವದನೇ ಕ್ಷ್ವಳಕಂ ವಿದ್ಯಾದ್ಗಲೇ ಕಷ್ಟಲಕಾರಕಂ ॥ ॥ ಉದರೇ ಧಾನ್ಯವೃದ್ಧಿಃಸ್ಯಾ ಪುಚ್ಛೇ ಧಾನ್ಯಕ್ಷಯೋ ಮತಃ ॥ ॥ ಈತಿರೋಗಭಯಂ ಬಾಹ್ಯೇ ಚಕ್ರೇ ಬೀಜೋಪ್ತಿಸಂಭವೇ ॥ ಇತಿ"

ಇಲ್ಲಿ ಮುಹೂರ್ತಪದವಿಯಲ್ಲಿ ಹೇಳಿದ ಪ್ರಕಾರ ನೋಡುವಾಗ್ಗೆ 'ಪಾತಕ್ಷಾತ್' ಎಂಬಲ್ಲಿ ರಾಹು ಇರುವ ನಕ್ಷತ್ರ ಬಿಟ್ಟು ಲೆಕ್ಕಿಸಿಕೊಳಲಾಗಿ ಮಾಧವೀಯ ಮತಕ್ಕೆ ಅನುಗುಣವಾಗುತದೆ. ವ್ರೀಹಿಗಳನ್ನು ಪ್ರಥಮದಲ್ಲಿ ಬೀಜವಿಕ್ಕುವುದಾದರೆ ಆ ಹೊಲ ದೊಳಗೆ ಇಲ್ಲಿ ಮುಂದೆ ಹೇಳುವ ದಿಕ್ಕುಗಳಲ್ಲಿ ಆ ಹೇಳುವಷ್ಟು ದಿಕ್ಕುಗಳಲ್ಲಿ ಆ

ಹೇಳುವಷ್ಟು ವ್ರೀಹಿಗಳನ್ನು ಬಿತ್ತಿ ಆಮೇಲೆ ಹೇಳಲ್ಪಡುವ ಪ್ರಕಾರ ಬೇಲಿಯನು ಕಟ್ಟಿ ಆ ಮೇಲೆ ಯಥೇಚ್ಛೆಯಾಗಿ ಬಿತ್ತುವದು. "ಇಂದ್ರೇಶೇಂದುಜಲೇಶರಾಕ್ಷಸಯಮಾಗ್ನೇಯೇಷು ದಿಕ್ಷು ಕ್ರಮಾದ್ವ್ರೀಹಿಸ್ಥಾಪನಮುತ್ತಮಂ ನಿಗದಿತಂ ವಾರೇಷು ಸೂರ್ಯಾದಿಷು ॥ ಭೂಯೋ ಭೂತೈಕವಿಂಶಸ್ವರನವಕಕುಂಭಂ ಷೋಡಶಾಂಭೋಧಯಸ್ತ್ವ ಪ್ರೋಕ್ತಂ ಹ್ಯೇವಂ ಕ್ರಮಶ ಇತುತು ವ್ರೀಹಿಮಾನಂ ಮುನೀಂದ್ರೈಃ ॥ ॥ ಸಸಾರಸಕ್ಷೀರಸಕಂಟಕಾನಾಂ ತಥಾ ಫಲಾನಾಂ ಚ ಫಲಾನ್ವಿತಾನಾಂ ॥ ಸಪುಷ್ಪಕಾಣಾಮಥ ದರ್ಭಕಾಣಾಂ ಪತಂಗವಾರಾದಿ ಯಥಾಕ್ರಮೇಣ ॥ ॥ ಇತಿ"

ಅನಂತರದಲ್ಲಿ ಕೆಲವು ಬೀಜವಾಪನೆಗಳಲ್ಲಿ ಇರುವ ವಿಶೇಷವನು ಎರಡು ಶ್ಲೋಕಗಳಿಂದ ಹೇಳುತದೆ-

ಕಂದೇ ಮಂದದಿನಂ ಸಿತಾರದಿನಕೃತ್ ವಾರಾಂಸ್ತಿಲೇ ವರ್ಜಯೇತ್ ।
ಭೌಮಸ್ಯಾಲುಪಸೂರಣೇ ಚ ಕತಿಚಿತ್ ನಿಂದಂತಿ ಮುದ್ಗೇ ರವೇಃ ॥
ಮಧ್ಯಂ ಮೂಲಕುಲಿತ್ಥಯೋಃ ಕುಜದಿನಂ ನೇಷ್ಟಂ ತಿಲೇ ಮಂತ್ರಿಣಃ ॥।
ಸತ್ಸೌರಃ ಫಲಿಷೂಚಿತಾನಿ ಫಲವದ್ವಾರೂಣಿ ತಾರಾಣಿ ಹಿ ॥ ೪೦ ॥
ನಾಳಿಕೇರಾದಿಕೇ ವೇಧಃ ಕುಳೀರಾಳಿತುಲಾದಯಃ ॥
ವರ್ಜ್ಯಾ ಊರ್ಧ್ವಮುಖಾಃ ಶಸ್ತಾಃ ಕೇಂದ್ರೇಽಪೀಂದ್ರಪುರೋಹಿತಃ ॥ ೪೧ ॥

ಟೀಕಾ-ಕಂದೇತಿ-ಕಂದೇ=ಗಡ್ಡೆಗೆಣಸು ಮೊದಲಾದುದರಲ್ಲಿ, ಮಂದದಿನಂ=ಶನಿವಾರವನ್ನು, ತಿಲೇ=ತಿಲದಲ್ಲಿ, ಸಿತಾರದಿನಕೃದ್ವಾರಾನ್=ಶುಕ್ರಾಂಗಾರಕಾದಿತ್ಯ ವಾರಗಳನ್ನು, ಆಳುಪಸೂರಣೇ = ಆಳುಪ ಸೂರಣ ಎಂದಿವರಲ್ಲಿ, ಭೌಮಸ್ಯ = ಅಂಗಾರಕನ ದಿನವನ್ನು, ವರ್ಜಯೇತ್ = ವರ್ಜಿಸಲಿ. ಕತಿಚಿತ್=ಕೆಲವರು, ಮುದ್ಗೇ=ಹೆಸರಿನಲ್ಲಿ, ರವೇರ್ದಿನಂ= ಆದಿತ್ಯನ ವಾರವನ್ನು. ನಿಂದಂತಿ = ನಿಂದಿಸುತ್ತಾರೆ. ಮೂಲಕುಲಿತ್ಥಯೋಃ = ಮೂಲ= ಗೆಣಸು. ಕುಲಿತ್ಥಯೋಃ=ಹುರುಳಿ ಎಂದಿವುಗಳಿಗೆ. ಕುಜದಿನಂ=ಕುಜವಾರವು, ಮಧ್ಯಂ= ಮಧ್ಯಮವು. ತಿಲೇ=ತಿಲದಲ್ಲಿ. ಮಂತ್ರಿಣಃ=ಗುರುವಾರವು, ನೇಷ್ಟಂ=ಇಷ್ಟವಲ್ಲ. ಸೌರಃ= ಶನಿವಾರವು. ಸತ್=ಉತ್ತಮವು. ಫಲವದ್ವಾರೂಣಿ=ಬಹುಫಲವಾಗುವ ವೃಕ್ಷವೃಕ್ಷಂಥ, ತಾರಾಣಿ=ನಕ್ಷತ್ರಗಳು. ಫಲಿಷು=ಫಲವಾಗುವ ಮರಗಳಲ್ಲಿ, ಉಚಿತಾನಿ=ಯೋಗ್ಯಗಳು. ನಾಳಿಕೇರಾದಿಕೇ = ನಾಳಿಕೇರಾದಿಯಲ್ಲಿ, ವೇಧಃ = ಗ್ರಹವರ್ಜ್ಯವೇಧವು, ಕುಳೀರಾಳಿ ತುಲಾದಯಃ=ಕುಳೀರ=ಕರ್ಕಟಕ, ಅಳಿ = ವೃಶ್ಚಿಕ, ತುಲ = ತುಲೆ, ಆದಯಃ = ಮೇಷ ಎಂದಿವುಗಳು, ವರ್ಜ್ಯಾಃ = ವರ್ಜ್ಯಂಗಳು. ಊರ್ಧ್ವಮುಖಾಃ = ಊರ್ಧ್ವಮುಖ ರಾಶಿಗಳು. ಕೇಂದ್ರೇ = ಕೇಂದ್ರದಲ್ಲಿ, ಇಂದ್ರಪುರೋಹಿತೋಽಪಿ = ಬೃಹಸ್ಪತಿಯು ಕೂಡಾ. ಶಸ್ತಾಃ = ಪ್ರಶಸ್ತಂಗಳೆಂದರ್ಥ.

ಗಡ್ಡೆಗೆಣಸು ಮೊದಲಾದವುಗಳಿಗೂ ಹಿಂದಣ ಶ್ಲೋಕದಲ್ಲಿ ಹೇಳಿದ ಪ್ರಕಾರವೇ ನೋಡಿಕೊಳಬೇಕು. ಇಲ್ಲಿ ಸ್ವಲ್ಪ ವಿಶೇಷವಿರುವುದನ್ನು ಹೇಳುತದೆ. ಗಡ್ಡೆಗೆಣಸು ನೆಡುವದಕ್ಕೆ ಶನಿವಾರ ವರ್ಜ್ಯವು. ತಿಲವನ್ನು ಬಿತ್ತುವದಕ್ಕೆ ಶುಕ್ರಾರ್ಕಾಂಗಾರಕ ವಾರಗಳಾಗದು. ಆಲುಪ ಸೂರಣಂಗಳ ನಡುವಲ್ಲಿ ಕುಜವಾರ ವರ್ಜ್ಯವು. ಹಸರು ಬಿತ್ತುವದಕ್ಕೆ

ಆದಿತ್ಯವಾರ ವರ್ಜ್ಯವು. ಗೆಣಸು ನೆಡುವುದಕ್ಕೂ ಹರುಳಿ ಬಿತ್ತುವುದಕ್ಕೂ ಕುಜವಾರ ಮಧ್ಯಮವು. ಎಳ್ಳು ಬಿತ್ತುವುದಕ್ಕೆ ಗುರುವಾರ ವರ್ಜ್ಯವು. ಶನಿವಾರ ಎಳ್ಳು ಬಿತ್ತುವುದಕ್ಕೆ ಶುಭವು. ಅಶ್ವಿನ್ಯಾದಿ ನಕ್ಷತ್ರಂಗಳೊಳಗೆ ಯಾವ ನಕ್ಷತ್ರಕ್ಕೆ ಬಹಳ ಫಲಂಗಳಾಗುವ ವೃಕ್ಷಂಗಳ ಹೇಳುತ್ತದೋ ಆ ನಕ್ಷತ್ರವು ಸಮಸ್ತ ಬೀಜವಾಪನೆಗೂ ಶುಭವಾಗಿಹದು. ತೆಂಗು ಕಂಗು ತಾಳಿ ಮೊದಲಾದವುಗಳ ನೆಡುವುದಕ್ಕೆ ಗೃಹವರ್ಜ್ಯವೇಧೆಯನ್ನು ಕರ್ಕಟಕ ವೃಶ್ಚಿಕ ತುಲೆ ಮೇಷ ಈ ನಾಲ್ಕು ಲಗ್ನಗಳನ್ನೂ ವರ್ಜಿಸಬೇಕು. ಊರ್ಧ್ವಮುಖ ರಾಶಿಗಳ ಲಗ್ನಗಳು, ಕೇಂದ್ರದಲ್ಲಿ ಬೃಹಸ್ಪತಿ ಸಹ ಬಹಳ ಮುಖ್ಯವು. ಅಶ್ವಿನ್ಯಾದಿ ನಕ್ಷತ್ರಗಳ ವೃಕ್ಷಂಗಳಾವವೆಂದರೆ-ಅಶ್ವಿನಿ ಕಾಸರ್ಕ, ಭರಣಿ, ನೆಲ್ಲಿ, ಕೃತ್ತಿಕೆ ಅತ್ತಿ, ರೋಹಿಣಿ ಜಂಬು, ಮೃಗಶಿರೆ ಖದಿರ, ಆರ್ದ್ರೆ ಮತ್ತಿ, ಪುನರ್ವಸು ಬಿದಿರು, ಪುಷ್ಯ ಅಶ್ವತ್ಥ, ಆಶ್ಲೇಷೆ ಪನ್ನೇರಳು, ಮಘೆ ಪೇರಳ, ಹುಬ್ಬೆ ಪಾಲಾಶ, ಉತ್ತರೆ ಗೋಳಿ, ಹಸ್ತ ಅಂಬಟೆ, ಚಿತ್ರೆ ಬಿಲ್ವಪತ್ರೆ, ಸ್ವಾತಿ ಚಳ್ಳ, ವಿಶಾಖೆ ಅಂಕೋಲೆ, ಅನೂರಾಧೆ ರೆಂಜೆ, ಜ್ಯೇಷ್ಠೆ ಸರಳಿ, ಮೂಲ ಚಂದಳಿಕ, ಪೂರ್ವಾಷಾಢ ವಮ್ಮುಳ, ಉತ್ತರಾಷಾಢ ಹಲಸು, ಶ್ರವಣ ಎಕ್ಕೆ, ಧನಿಷ್ಠೆ ಶಮಿ, ಶತಭಿಷೆ ಕದಂಬ, ಪೂರ್ವಾಭಾದ್ರೆ ಮಾವು, ಉತ್ತರಾಭಾದ್ರೆ ನಿಂಜೆ, ರೇವತಿ ನಾಳೀಲಿ, ಇವು ಅಶ್ವಿನ್ಯಾದಿ ನಕ್ಷತ್ರಂಗಳ ವೃಕ್ಷಗಳು. "ಗ್ರಂಥಾಂತರಂ-ವಿಷವೃಕ್ಷಾಮೃತತರು ಔದುಂಬರಜಂಬುಖದಿರಕೃಷ್ಣಾಶ್ವ || ವಂಶೋಽಶ್ವತ್ಥೌ ನಾಪ್ಪೋನ್ಯಗ್ರೋಧ ಪಲಾಶಕಪ್ಲಕ್ಷಾಃ || || ಅಂಬಷ್ಟತ್ರೀವೃಕ್ಷಾವರ್ಜುನವೈಕಂಕತೌ ಬಕುಳವಿಲ್ವೌ ಚ || ಸರ್ಜೋವಂಜುಳಪನಸಾವರ್ಕಶಮೀಕದಂಬಾಶ್ಚ || ಚೂತೋ ನಿಂಬೋ ಮಧುಪಶ್ಚೈವ ನಕ್ಷತ್ರಶಾಖಿನಃ ಪ್ರೋಕ್ತಾಃ || ಇತಿ" ಈ ಪ್ರಕಾರದ ಕಾಲದಲ್ಲಿ ಬೀಜವಾಪನೆಯನ್ನು ಮಾಡಿ ಆಮೇಲೆ ಶ್ರವಣ ಮಘೆಗಳ ನಾಲ್ಕನೆಯ ಪಾದದಲ್ಲಾದರೂ ಉತ್ತರಾಭಾದ್ರೆಯ ದ್ವಿತೀಯ ತೃತೀಯ ಪಾದಗಳಲ್ಲಾದರೂ ಜ್ಯೇಷ್ಠೆಯ ಪ್ರಥಮ ಪಾದದಲ್ಲಾಗಲೀ ಸಿಂಹ ಧನುರ್ಲಗ್ನಗಳಲ್ಲಿ ಸಸ್ಯರಕ್ಷಾರ್ಥವಾಗಿ ಕುಳಿತುಕೊಂಡು ಕಾಯುವುದಕ್ಕೆ ಗುಡಿಯನ್ನು ಕಟ್ಟಬೇಕು. "ಮಾಧವೀಯಂ:- ಅಂತೇಽಂತ್ಯೇಽಚ್ಯುತಮಘಯೋಃ ಮಧ್ಯೇ ಬುಧ್ನ್ಯಸ್ಯ ಮಘವತಃ ಪ್ರಥಮೇ || ಉದಯೇ ಚ ಸಿಂಹಧನುಷೋಃ ಪ್ರಾದಧ್ಯಾತ್ಸಸ್ಯ ರಕ್ಷಣಾಯ ಕುಟೀಂ || || ಇತಿ" ಆರ್ದ್ರಾನಕ್ಷತ್ರ ದಿವಸ ಬವಕರಣವಾಗಲೀ ಭದ್ರಕರಣವಾಗಲೀ ಬಂದರೆ ಆ ಸಮಯದಲ್ಲಿ ಧನುಸಿಂಹ ಲಗ್ನಗಳಲ್ಲಿ ಆ ಕ್ಷೇತ್ರಕ್ಕೆ ಬಿದಿರಕೆಟ್ಟನ್ನು ನೆಡಲಾಗಿ ಮೃಗಬಾಧೆ ಬರಲಾರದು. "ಮಾಧವೀಯಂ:- ರೌದ್ರರ್ಕ್ಷೇ ಬವಕರಣೇ ವಿಷ್ಟ್ಯಾ ವಾ ಚಾಪಸಿಂಹಯೋರುದಯೇ || ನಿಹಿತೇ ಹರತಿ ಸ್ಥಾಣುಸ್ಸಸ್ಯಾಗಾರಾದಿಕೇಷು ಮೃಗಬಾಧಾಂ || || ಇತಿ" ಬವಕರಣ ಭದ್ರಾಕರಣವೆಂದು ಈ ಎರಡು ಕರಣಗಳಿಂದೊಂದು ಕರಣದ ಉದಯ ಘಳಿಗೆಯಲ್ಲಿ ತದುಕ್ತ ದಿಕ್ಕಿನಲ್ಲಿ ತದುಕ್ತ ವೃಕ್ಷವನ್ನು ನಡಲಾಗಿ ಆ ಕ್ಷೇತ್ರಕ್ಕೆ ಮೃಗಾದಿ ಬಾಧೆಗಳು ಬರಲರಿಯದು. ಈ ಸಿಂಹಕರಣ ಭದ್ರಕರಣಂಗಳ ಉದಯವರಿಯುವುದಕ್ಕೆ ಅಕ್ಷರಸಂಖ್ಯೆಯಿಂದ ಹೇಳುತದೆ.

"ಯಜ್ಞಮಾನಜನಸ್ತ್ರೀಯೋ ಮನೋಭಾನುಸುನಾಪಕ್ಯೈಃ || ಮಿತ್ರಾಸು ತಿಥಿಷು ಜ್ಞೇಯಂ ಸಿಂಹಾಖ್ಯಕರಣೋದಯಂ || || ಗುಣಪ್ರಿಯಶತೀದಾನಗಂಗಾರುದ್ರರಮಾತುಕೈಃ || ಶಮಿತಾಸ್ವಪಿ ನಾಡೀಷು ಕ್ರಮಾತ್ತ್ಯಾಗಾದಿದಿಕ್ಷ್ವಪಿ || || ವನದಾನಪಟೇ

ಪ್ರಾಯಾಗಾರಸೇನಾನಟೇ ಭಟ್ಯೈಃ ॥ ಸಮಾಸು ತಿಥಿಷು ಜ್ಞೇಯಂ ವಿಷ್ಟೀನಾಮುದಯಂ ಕ್ರಮಾತ್ ॥ ॥ ಯುಗನಾಗತನಾಗಾದ್ಯಾದ್ಯಂತಯೋರ್ನಿಮಿತಾಸ್ವಪಿ ॥ ನಾಡೀಷು ಮಂತ್ರ ಸೇವಾಂತರ್ಗಜಾರ್ಕಮಿತಬಿಕ್ಷು ಚ ॥ ॥ ಇತಿ" ಸಿಂಹ ಕರಣಂಗಳಾವವೆಂದರೆ- ಶುಕ್ಲ ಪಾಡ್ಯ ಮೊದಲಾದ ಎಂಟು ಸಿಂಹ ಕರಣಂಗಳಿಗೆ ಕ್ರಮದಿಂದ ಕಳ್ಳಿ ಅತ್ತಿ ಬಿಲ್ವಪತ್ರೆ ಸರಳಿ ರೆಂಜೆ ಅಂಕೋಲೆ ಬಾಳೆ ಬಿದಿರು ಇವು ಕ್ರಮದಿಂದ ಸಿಂಹಕರಣ ವೃಕ್ಷಂಗಳು. "ಮಾಧವೀಯಂ-ಬಿಕ್ಷು ಕ್ರಮೇಣ ಸಿತುತಾಸ್ಸ್ನುಗುದುಂಬರಶ್ಚ ಶ್ರೀವೃಕ್ಷವೃಶ್ಚಿಬಕುಲಾಶ್ಚ ವಿಕಂಕತಶ್ಚ ॥ ರಂಭಾ ಚ ವೇಣುರಿತಿ ತೇಽಭ್ಯುದಯೇ ಮುರಾರೇಸ್ಸಿಸ್ಯೋ ಹರಂತಿ ಪತುಕೋಲಮೃಗಾದಿ ಬಾಧಾಂ ॥ ॥ ಇತಿ"

ಇನ್ನು ಶುಕ್ಲ ಚೌತಿ ಮೊದಲಾದ ಎಂಟು ವಿಷ್ಟಿಗಳಿಗೆ ಕ್ರಮದಿಂದ ವೃಕ್ಷಗಳು- ಅಶ್ವತ್ಥ ಹೊಂಗಾರೆ ಬಿದಿರು ಕಾಸರಿಕ ಅಂಕೋಲೆ ನೆಲ್ಲಿ ಕಳ್ಳಿ ನೆಡಿತೆ ಇವು ಕ್ರಮದಿಂದ ವಿಷ್ಟಿ ವೃಕ್ಷಗಳು. "ಮಾಧವೀಯಂ-ಕಥಯಂತಿ ವಿಷ್ಟಿವೃಕ್ಷಾನ್ ಅಶ್ವತ್ಥಂ ಶಿಂಶುಕಂ ತಥಾ ವೇಣುಂ ॥ ಕಾರಸ್ಕರಂ ವಿಕಂಕತಧಾತುಕೌ ದುಗ್ಧಿಕಂ ಚ ಗಿರಿಕರ್ಣಿಕೀಂ ॥ ॥ ಕ್ಷೇತ್ರೇ ಸಿತಿತಾಃ ಕ್ರಮಶೋ ವಿಷ್ಟ್ಯುದಯೇ ಪ್ರಸರನಾದಿಕಾದಿಷು ॥ ಸಸ್ಯಾ ಹಿ ವಿಷ್ಟಿತರವೋ ಗೋಪಾಯಂತ್ಯೇವ ಗೋಪಮೃಗಾದಿಭ್ಯಃ ॥ ॥"

ಅನಂತರದಲ್ಲಿ ಧಾನ್ಯಾದಿಗಳನು ಪ್ರಾರಂಭವಾಗಿ ಕೊಯ್ಯುವದಕ್ಕೂ ಅದರ ಮನೆಗೆ ತರುವುದಕ್ಕೂ ಅದನ್ನು ಧಾನ್ಯಾಲಯದಲ್ಲಿ ತುಂಬುವುದಕ್ಕೂ ಆಮೇಲೆ ಅದರಿಂದ ಪ್ರಾರಂಭ ತೆಗೆಯುವುದಕ್ಕೂ ಅಕ್ಕಿ ಮಾಡುವುದಕ್ಕೂ ಕಾಲವನು ಹೇಳುತಾನೆ-

ಕುಂಭಪೂರ್ತಿತಿಥಿಭಾಂಬುಚಂದ್ರಮೋ ವೃದ್ಧಿ ರಿಷ್ಪರಿಪುಚಂದ್ರಮಂದದೃಕ್ ॥
ಧಾನ್ಯವೃದ್ಧಿಶುಭದಂ ನ ಕೃತ್ತಿಕಾ ಶಕ್ರನಕ್ರವಣಿಗಾದ್ಯರಾಶಯಃ ॥ ೪೨ ॥

ಟೀಕಾ - ಕುಂಭಪೂರ್ತೀತಿ - ಕುಂಭಪೂರ್ತಿತಿಥಿಭಾಂಬುಚಂದ್ರಮೋವೃದ್ಧಿ ರಿಷ್ಪಚಂದ್ರ ಮಂದದೃಕ್=ಕುಂಭಪೂರ್ತಿ=ಪೂರ್ಣಕುಂಭ, ತಿಥಿ=ತಿಥಿ, ಭ=ನಕ್ಷತ್ರ, ಅಂಬು=ಜಲ, ಚಂದ್ರಮೋ=ಚಂದ್ರ ಎಂದಿವುಗಳ ವೃದ್ಧಿ=ವೃದ್ಧಿ, ರಿಷ್ಪ=ದ್ವಾದಶ, ರಿಪು=ಷಷ್ಠ, ಎಂದಿವು ಗಳಲ್ಲಿ, ಚಂದ್ರ=ಚಂದ್ರನು, ಮಂದದೃಕ್=ಶನಿದೃಷ್ಟಿಯು, ಧಾನ್ಯವೃದ್ಧಿಶುಭದಂ=ಧಾನ್ಯ ವೃದ್ಧಿ = ಧಾನ್ಯವೃದ್ಧಿಯಲ್ಲಿ, ಶುಭದಂ = ಶುಭಪ್ರದವು. ಕೃತ್ತಿಕಾಶಕ್ರನಕ್ರವಣಿಗಾದ್ಯ ರಾಶಯಃ=ಕೃತ್ತಿಕಾ=ಕೃತ್ತಿಕೆ, ಶಕ್ರ=ಜ್ಯೇಷ್ಠೆ, ನಕ್ರ=ಮಕರ, ವಣಿಕ್=ತುಲೆ, ಆದ್ಯ=ಮೇಷ ಎಂದುಳ್ಳಂಥ, ರಾಶಯಃ=ಲಗ್ನಗಳು, ನ=ನಿಷೇಧಂಗಳು ಎಂದರ್ಥ.

ಧಾನ್ಯವೃದ್ಧಿಯಲ್ಲಿ ಪೂರ್ಣಕುಂಭ, ತಿಥಿವೃದ್ಧಿ, ನಕ್ಷತ್ರವೃದ್ಧಿ, ಜಲವೃದ್ಧಿ, ಚಂದ್ರ ವೃದ್ಧಿ, ದ್ವಾದಶ ಷಷ್ಠಗಳಲ್ಲಿ ಚಂದ್ರ, ಶನಿದೃಷ್ಟಿ ಸಹ ಅತಿ ಪ್ರಶಸ್ತಂಗಳು. ಕೃತ್ತಿಕೆ ಜ್ಯೇಷ್ಠೆ ಎರಡು ನಕ್ಷತ್ರಂಗಳು, ಮಕರ ತುಲೆ ಮೇಷ ಈ ಮೂರು ಲಗ್ನಗಳು, ಸಹ ವರ್ಜ್ಯಂಗಳು. ಆವಾಗ್ಗೆ ಮಿಕ್ಕಾದ ನಕ್ಷತ್ರಗಳು ಲಗ್ನಗಳು ಶುಭಪ್ರದವೆಂಬದಾಯಿತು. ಕುಂಭವೆಂದರೂ ಕಲಶವೆಂದರೂ ಒಂದೇ ಸರಿಯಷ್ಟೆ? ಇದರಲ್ಲಿ ಮೂರು ವಿಧವಿಹದು. ರಿಕ್ತಕಲಶ ಪೂರ್ಣಕಲಶ ಸ್ತಂಭವೆಂದು. ಅದರ ತಿಳಿಯುವುದು ಹೇಗೆಂದರೆ- ಅಭಿಜಿತ್ಸಹಿತವಾಗಿ

ಕೃತ್ತಿಕಾದಿ ಏಳೇಳು ನಕ್ಷತ್ರಂಗಳನು ಕ್ರಮದಿಂದ ಪೂರ್ವಾದಿ ನಾಲ್ಕು ದಿಕ್ಕುಗಳಿಗೆ ಕಲ್ಪಿಸಿ ಅದರಲ್ಲಿ ನಾಲ್ಕು ದಿಕ್ಕುಗಳ ನಕ್ಷತ್ರಗಳಲ್ಲಿಯೂ ಮಧ್ಯ ಮಧ್ಯದಲ್ಲಿರುವ ಆರ್ದ್ರೆ ಹಸ್ತ ಪೂರ್ವಾಷಾಢ ಉತ್ತರಾಭಾದ್ರೆ ಈ ನಾಲ್ಕು ನಕ್ಷತ್ರಂಗಳು ಸ್ತಂಭ ನಕ್ಷತ್ರಂಗಳು. ಈ ಸ್ತಂಭ ನಕ್ಷತ್ರಗಳ ದಕ್ಷಿಣ ಪಾರ್ಶ್ವದಲ್ಲಿ ಮೂರು ವಾಮ ಪಾರ್ಶ್ವದಲ್ಲಿ ಮೂರು ನಕ್ಷತ್ರ ಇವು ಶುಭಂಗಳು. ಈ ಸ್ತಂಭ ನಕ್ಷತ್ರಗಳ ಉಭಯ ಪಾರ್ಶ್ವದ ಕಲಶಗಳೊಳಗೆ ಯಾವ ಪಾರ್ಶ್ವದ ಕಲಶದಲ್ಲಿ ಸೂರ್ಯನಿರುತಾನೋ ಆ ನಾಲ್ಕು ಸ್ತಂಭಗಳಲ್ಲಿಯೂ ಆ ಪಾರ್ಶ್ವದ ಕಲಶಗಳೆಲ್ಲವೂ ರಿಕ್ತಗಳು. ಆಚೆ ಪಾರ್ಶ್ವದ ಕಲಶಗಳು ಪೂರ್ಣಕಲಶಂಗಳು, ಕಲಶಗಳಲ್ಲಿ ಸೂರ್ಯನಿರುವಾಗ ಸ್ತಂಭಗಳು ಪೂರ್ಣಂಗಳು. ಸ್ತಂಭಗಳಲ್ಲಿ ಸೂರ್ಯ ನಿರುವಾಗ ಆ ಸ್ತಂಭರಿಕ್ತ. ಆ ಮೇಲಣ ಸ್ತಂಭ ಪೂರ್ಣ. ಆ ಮೇಲಣ ಸ್ತಂಭ ರಿಕ್ತ. ಆ ಮೇಲಣ ಸ್ತಂಭ ಪೂರ್ಣ. ಈ ಕ್ರಮದಿಂದ ನೋಡಿಕೊಂಬುದು. "ಮಾಧವೀಯಂ-ದಿಕ್ತಾರಾಣಾಂ ಮಧ್ಯಮಾಃ ಸ್ತಂಭಸಂಜ್ಞಾಃ ತಿಸ್ರಸ್ತಿಸ್ರಃ ಪಾರ್ಶ್ವಸಂಸ್ಥಾ ಘಟಖ್ಯಾಃ ॥ ತಿಷ್ಠತ್ಯರ್ಕೋ ಯತ್ರ ಕುಂಭಸ್ಸ ರಿಕ್ತಃ ಸಂಪೂರ್ಣೋಽನ್ಯಃ ಸ್ತಂಭಸಂಜ್ಞೋಽಪಿ ತದ್ವತ್ ॥ ॥ ಇತಿ" ತಿಥಿವೃದ್ಧಿ ನಕ್ಷತ್ರ ವೃದ್ಧಿಗಳೆಂದರೆ ಅವುಗಳ ಘಳಿಗೆಗಳು ಏರಿ ಏರಿ ಬರುವುದು. ಜಲವೃದ್ಧಿ ಎಂದರೆ ನೀರ ಏರತೆಯು. ಅದನ್ನು ಹಿಂದೆ ಹೇಳಿದ ಮೂವತ್ತಾರನೆಯ (೩೬ನೆಯ) ಶ್ಲೋಕ ವ್ಯಾಖ್ಯಾನದಲ್ಲಿ ಹೇಳಿಹದು. ಚಂದ್ರವೃದ್ಧಿ ಎಂದರೆ ಶುಕ್ಲಪಕ್ಷವಾಗಿಹದು. ಧಾನ್ಯಾದಿಗಳನ್ನು ಪ್ರಾರಂಭ ಕೊಯ್ಯುವುದಕ್ಕೂ ಅದರ ಮನೆಗೆ ತರುವುದಕ್ಕೂ, ಅದನ್ನು ಧಾನ್ಯಾಲಯದಲ್ಲಿ ಇರಿಸುವುದಕ್ಕೂ, ಆಮೇಲೆ ಅದನ್ನು ಕಣಜ ಪತ್ತಾಯ ಮೊದಲಾದ್ದರಲ್ಲಿ ತುಂಬುವದಕ್ಕೂ, ಆಮೇಲೆ ಅದರಿಂದ ಪ್ರಾರಂಭ ತೆಗೆಯುವದಕ್ಕೂ, ಅಕ್ಕಿ ಮಾಡುವದಕ್ಕೂ, ಈ ಪ್ರಕಾರದ ಆರು ವಿಧ ಕಾರ್ಯಗಳಿಗೂ ಇಲ್ಲಿ ಹೇಳಿದ ಪ್ರಕಾರದ ಮುಹೂರ್ತವೇ ಆಗಬೇಕು. ದೋಷಪ್ರಕರಣದಲ್ಲಿ ಹೇಳಿದ ದೋಷಂಗಳನ್ನು ವಿಶೇಷವಾಗಿ ವರ್ಜಿಸಬೇಕೆಂಬುದಿಲ್ಲ. ಇಲ್ಲಿ ಯತ್ತಲಾನು ಈ ಹೇಳಿದ ಪ್ರಕಾರ ಮುಹೂರ್ತವು ಸಿಕ್ಕದ ಪಕ್ಷದಲ್ಲಿ ಈ ಹೇಳಿದವರೊಳಗೆ ಎರಡು ಮೂರಾದರೂ ಕೂಡಿಬಂದರೆಯೂ ಸಾಕು. ಮಾಧವೀಯಾದಿಗಳಲ್ಲಿ ಉತ್ತರಾಷಾಢ ಆರ್ದ್ರೆ ರೇವತಿ ಉತ್ತರೆ ಸ್ವಾತಿ ಜ್ಯೇಷ್ಠೆ ಶತಭಿಷೆ ಈ ಏಳು ನಕ್ಷತ್ರಗಳ ಆದಿಪಾದದಲ್ಲಾಗಲೀ ಅಥವಾ ಶ್ರವಣ ಮಘೆ ವಿಶಾಖೆಗಳಲ್ಲಿಯಾಗಲೀ ಶುಭತಿಥಿ ಶುಭವಾರಗಳು ಕೂಡಲಾಗಿ ಅಲ್ಲಿ ಕರ್ಕಟಕ ವೃಶ್ಚಿಕ ಲಗ್ನಗಳಲ್ಲಾಗಲೀ ಶುಭಕ್ಷೇತ್ರಗಳಲ್ಲಾಗಲೀ ವ್ರೀಹ್ಯಾದಿಗಳ ಪ್ರಥಮ ಲವನವ ಮಾಡಬೇಕೆಂದು ಹೇಳಿಹದು. ಅದೆಲ್ಲ ಬಹುಬಾಹುಲ್ಯವಾಗುವುದರಿಂದ ಇಲ್ಲಿ ಹೇಳಿದ ಪ್ರಕಾರ ಕುಂಭ ಪೂರ್ಣಾದಿಗಳೊಳಗೆ ಎರಡು ಮೂರಾದರೂ ಕೂಡಿ ಬಂದರೂ ಸಾಕಾಗಬಹುದು. ಮನೆಯೊಳಗೆ ಇರಿಸಿದ ಧಾನ್ಯಕ್ಕೆ ಮೂಷಿಕಾದಿಗಳ ಭಯ ಬರುವುದಕ್ಕೆ ಚಂದ್ರ ರಾಹುಗಳೊಂದೇ ನವಾಂಶಕದಲ್ಲಿರುವಾಗ ಶನಿಯಿಂದ ದೃಷ್ಟರಾದರೆ ಅವರ ಉದಯ ಲಗ್ನದಲ್ಲಿ ಆ ಧಾನ್ಯಕ್ಕೆ ರಕ್ಷೆಯನು ಮಾಡಿದರೆ ಮೂಷಿಕಾದಿ ಭಯಬಾರದು. "ಮಾಧವೀಯಂ-ಏಕಾಂಶಕಸ್ಥೌ ಶಶಿಸಿಂಹಿಕೇಯೌ ಲಗ್ನೇ ಯದಾ ಸೂರ್ಯಸುತೇನ ದೃಷ್ಟೌ ॥ ಕರೋತು ಧಾನ್ಯಸ್ಯ ತದೈವ ರಕ್ಷಾಂ ನ ಮೂಷಿಕಾದೇರ್ಭವತೀಹ ಭೀತಿಃ ॥ ॥

ಗುರುः- ರಾಶೌ ಶುಕ್ರಾಂಶಕೇ ಲಗ್ನೇ ಮುಖಪುಚ್ಛವಿವರ್ಜಿತೇ ॥ ನಿರ್ಗುಂಡೀಕೀಲಕಾಃ ಸ್ಥಾಪ್ಯಾಃ ಕ್ಷೇತ್ರೇ ತಾ ಧಾನ್ಯರಕ್ಷಣೇ ॥ ॥ ಇತಿ"

"ಮಾಧವೀಯಂ- ಆಪ್ಯೇ ವರುಣಾರ್ಕ್ಷೇ ವಾ । ಕುಜವಾರೇ ಲಗ್ನಸಂಸ್ಥಿತೇ ಮಂದೇ ॥ ಆದದ್ಯಾದ್ಬ್ರುಮವಪ್ರ ।॥ ಪ್ರಾಕಾರಾದೀನ್ ಗೇಹಸ್ಯ ರಕ್ಷಾರ್ಥಂ ॥ ॥ ಗುರುः- ಪೂರ್ವಾಷಾಢೇ ಚ ವಾರುಣ್ಯಾಂ ಕುಜವಾರೇ ಯಮೋದಯೇ ॥ ಪ್ರಾಕಾರೇಣ ವೃತಿಂ ಕುರ್ಯಾತ್ ದದ್ಯಾದ್ವೃಟ್ಬಿಮಪೀತಿ ಚ ॥ ॥ ಅಜೈಕಪಾದ್ವಿಧೋರ್ಲಗ್ನೇ ಪ್ರಾಕಾರಾದಿವಿಬಂಧನಂ ॥ ವಾರುಣೇ ಕುಜವಾರೇ ತು ಪ್ರಾಕಾರೇ ಕಂಟಕೇಂಧನಃ ॥ ॥ ಮಂದೇ ವಿಲಗ್ನಗೇ ಚೈವ ಚೋರಬಾಧಾ ನ ವಿದ್ಯತೇ ॥ ಚಂದ್ರಕೇತೂದಯೇಕಾಂಶೇ ವಿಲಗ್ನೇ ಸಮುಪಾಗತೇ ॥ ॥ ನಿರ್ಗುಂಡೀಕೀಲಕೈ ರಕ್ಷಾಂ ಕುರ್ಯಾದ್ದ್ವಾರೇಷು ವಿನ್ಯತಾಂ ॥ ಇತಿ"

ಅನಂತರವಲ್ಲಿ ಈ ಮುಹೂರ್ತ ಪದವಿಯಲ್ಲಿ ಶ್ರಮಿಸಿದವರಿಗೆ ಶ್ರೇಯೋಭಿವೃದ್ಧಿಯನ್ನು ಪ್ರಾರ್ಥಿಸುತ್ತಾನೆ-

ಇತಿ ಸುಖಮಪಿ ಗಂತುಂ ಸನ್ಮುಹೂರ್ತೇಷು ದೋಷವ್ಯತಿಕರಪರಿಹಾರೀ
ಶೋಧಿತಃ ಸಾಧುಮಾರ್ಗಃ ॥
ಕಥಮಪಿ ಘಟಯಂತಃ ಸಂತು ದೋಷಾನಸಂತೋ ಗುಣಮಿಹ ಗಣಯಂತಃ
ಸಾಧವಃ ಶಂ ಭಜಂತಾಂ ॥ ೪೩ ॥

ಟೀಕಾ - ಇತೀತಿ - ಇತಿ = ಈ ಪೂರ್ವೋಕ್ತ ಪ್ರಕಾರ, ಮಯಾ = ನನ್ನಿಂದ, ಸನ್ಮುಹೂರ್ತೇಷು=ಉತ್ತಮ ಮುಹೂರ್ತಗಳಲ್ಲಿ, ಸುಖಮಪಿ=ಸುಖವನ್ನು, ಗಂತುಂ=ಪ್ರಾಪಿಸಲಿಕ್ಕೋಸ್ಕರ, ದೋಷವ್ಯತಿಕರಪರಿಹಾರೀ = ದೋಷವ್ಯತಿಕರ ಪರಿಹಾರಿಯಾದಂಥ, ಸಾಧುಮಾರ್ಗಃ = ಉತ್ತಮಮಾರ್ಗವು, ಶೋಧಿತಃ = ಶೋಧಿಸಲ್ಪಟ್ಟಿತು. ಇಹ = ಈ ಮುಹೂರ್ತಪದವಿಯಲ್ಲಿ, ಕಥಮಪಿ = ಯಾವ ಪ್ರಕಾರವಾದರೂ, ದೋಷಾನ್= ದೋಷಗಳನ್ನು, ಘಟಯಂತಃ=ನಿರೂಪಿಸುವವರು, ಅಸಂತಃ=ಮೂಢರಾದವರು, ಸಂತು= ಆಗಲಿ. ಗುಣಂ = ಗುಣವನ್ನು, ಗಣಯಂತಃ = ಲೆಕ್ಕಿಸುವಂಥ, ಸಾಧವಃ = ಸಜ್ಜನರು, ಶಂ=ಸುಖವನ್ನು, ಭಜಂತಾಂ=ಪ್ರಾಪಿಸಲಿ ಎಂದರ್ಥ.

ಈ ಪೂರ್ವೋಕ್ತ ಪ್ರಕಾರ ವಿದ್ವಾಂಸರುಗಳಿಗೆ ಉತ್ತಮ ಮುಹೂರ್ತಗಳಲ್ಲಿ ಸುಖವನ್ನು ಪಡೆವ ಉದ್ದಿಶ್ಯ ನಿರ್ದೋಷವಾದ ಒಂದು ಉತ್ತಮ ಮಾರ್ಗವು ನನ್ನಿಂದ ಶೋಧಿಸಲ್ಪಟ್ಟಿತು. ಮಾಧವೀಯಾದಿ ಮುಹೂರ್ತ ಶಾಸ್ತ್ರಗಳ ಬಾಹುಲ್ಯವಾಗಿರುವುದರಿಂದ ಅಲ್ಪಬುದ್ಧಿಯುಳ್ಳವರೀಗೆ ಆ ಶಾಸ್ತ್ರಗಳಿಂದ ಮುಹೂರ್ತಗಳ ನಿರೂಪಿಸುವದಕ್ಕೆ ಬಹುಪ್ರಯಾಸವಾಗುವದು. ಈ ಮುಹೂರ್ತಪದವಿಯಲ್ಲಿ ತಾನು ಸುಲಭದಿಂದ ಹೇಳಿರುವುದರಿಂದ ಇದರಲ್ಲಿ ಪ್ರಯಾಸಗಳುಂಟಾಗುವುದಿಲ್ಲ. ಅದರಿಂದ ವಿದ್ವಾಂಸರಿಗೆ ಅದೇ ಒಂದು ಸುಖವಾಗಿಹುದು. ಆ ಪ್ರಕಾರವಿರುವ ಮುಹೂರ್ತಪದವಿಯೆಂಬ ಶಾಸ್ತ್ರವು ತನ್ನಿಂದ ಮಾಡಲ್ಪಟ್ಟಿತೆಂಬ ತಾತ್ಪರ್ಯ. ಈ ಮುಹೂರ್ತಪದವಿಯಲ್ಲಿ ಯಾವ ಪ್ರಕಾರದಿಂದಾದಾಗ್ಯೂ ದೋಷ ನಿರೂಪಣೆಯ ಮಾಡಬೇಕೆಂದು ಇಚ್ಛಿಸುವ ಜನರು ಮೂಢರಾಗಲಿ. ಯಾಕೆಂದರೆ ಅನೇಕ ಮುಹೂರ್ತಶಾಸ್ತ್ರಂಗಳನೆಲ್ಲವನು ಆಲೋಚಿಸಿ

ಕೇವಲ ವರ್ಜ್ಯಾಂಗಗಳಾಗಿರುವ ದೋಷಗಳ ಮಾತ್ರ ಹೇಳಿ ಅತಿ ಪ್ರಯಾಸದಿಂದ ಸ್ವಲ್ಪ ಗ್ರಂಥಗಳಿಂದ ತಾನು ಮಾಡಿ ಇರುವ ಈ ಮುಹೂರ್ತಪದವಿಯಲ್ಲಿ ತನ್ನ ಪ್ರಯಾಸವನ್ನೂ, ಶಾಸ್ತ್ರಸಾರವನ್ನೂ ಗ್ರಹಿಸದೆ ನಿಂದಿಸುವ ಜನರು ಮೂಢರೇ ಸರಿ. ಆದ್ದರಿಂದ ಇದರಲ್ಲಿ ದೋಷನಿರೂಪಣೆ ಮಾಡುವವರು ಮೂಢರಾಗಲಿ ಎಂದು ಹೇಳಿದದು ಎಂಬ ತಾತ್ಪರ್ಯ. ಈ ಪ್ರಕಾರ ತಾನು ಮಾಡಿದ ಈ ಮುಹೂರ್ತಪದವಿಯಲ್ಲಿ ಗುಣವನ್ನು ಗ್ರಹಿಸಿ ಇರುವಂಥ ವಿದ್ವಾಂಸರು ಸುಖವನ್ನು ಪ್ರಾಪಿಸಲಿ ಎಂಬ ತಾತ್ಪರ್ಯ. ಈ ಮುಹೂರ್ತಪದವಿಯಲ್ಲಿ ಕೆಲವು ಸೂಚನೆಗಳಿಹವು. ಅದೇಂತೆಂದರೆ ತಿಥಿ ನಕ್ಷತ್ರ ವಾರರಾಶಿಗಳೊಳಗೆ ಯಾವ ತಿಥಿವಾರ ನಕ್ಷತ್ರರಾಶಿಗಳು ಆದೀತೆಂದು ಹೇಳುತದೆಯೋ ಅದು ಹೊರತು ಮಿಕ್ಕಾದವುಗಳು ಒಂದೂ ಆಗದೆಂದರಿವದು. ಇಷ್ಟು ತಿಥಿವಾರ ನಕ್ಷತ್ರರಾಶಿಗಳಾಗದೆಂದು ಹೇಳಿರುವಲ್ಲಿ ಮಿಕ್ಕಾದವುಗಳೆಲ್ಲ ಆದೀತೆಂದರಿವದು. ದಿವಾರಾತ್ರಿಗಳ ಪ್ರಸ್ತಾವವನ್ನು ಹೇಳದಿರುವಲ್ಲಿ ದಿವಾರಾತ್ರಿಗಳೆರಡೂ ಆದೀತೆಂದರಿವದು. ಈ ಪ್ರಕಾರ ಎಲ್ಲಾ ಠಾವಿನಲ್ಲೂ ಯುಕ್ತಿಯಿಂದ ತಿಳಿಯಬೇಕು. ದೋಷಪ್ರಕರಣದಲ್ಲಿ ಹೇಳಿದ ದೋಷಂಗಳೊಳಗೆ ಕೆಲವು ದೋಷಂಗಳ ಎರಡನೇ ತಿರುಗಾ ಆಗದೆಂದು ಯಾವ ಮುಹೂರ್ತದಲ್ಲಿ ಹೇಳಿಹದೋ ಆ ಮುಹೂರ್ತದಲ್ಲಿ ಮಿಕ್ಕಾದ ದೋಷಂಗಳನೆಲ್ಲವನು ಅಂಗೀಕರಿಸಬಹುದು. ಅವುಗಳು ಆ ಮುಹೂರ್ತದಲ್ಲಿ ಶುಭವೇ ಸರಿ ॥ ಓಂತತ್ಸತ್ ಬ್ರಹ್ಮಾರ್ಪಣಮಸ್ತು ॥ ಮುಹೂರ್ತಪದವೀ ಸಮಾಪ್ತಾ ॥ ಗ.ಶಾ.ಶ. ೧೮೩೨ನೆಯ ಸಾಧಾರಣ ಸಂ।ದ ವೃಶ್ಚಿಕಮಾಸ ೮ನೆಯ ಕಾರ್ತಿಕ ಬಹುಳ ೭ನೆಯ ಬುಧವಾರ (ಕ್ರಿ.ಶ. ೧೯೧೦.) ಶ್ರೀ ಚಕ್ರಕೋಡಿ ಮೂಡಂಬೈಲು ಕೃಷ್ಣಶಾಸ್ತ್ರಿಗಳ ಮಗ ಭೀಮಶಾಸ್ತ್ರಿಯಿಂದ ಈ ಮುಹೂರ್ತಪದವೀ ವ್ಯಾಖ್ಯಾನವು ಬರೆಯಲ್ಪಟ್ಟಿತು. 'ಶುಭಮಸ್ತು'. ಧೃತಪಾಶಾಂಕುಶಾಕ್ಷಸ್ರುಕ್ಪುಸ್ತಕಾಭೀಷ್ಟದಾಯಿನೀ ॥ ಬಾಲಾ ವಾಣೀ ಶುಭಕರೀ ಸದಾ ದಿಶತು ಮಂಗಲಂ ॥

॥ ॥ ಇತಿ ಮುಹೂರ್ತಪದವ್ಯಾಂ ತೃತೀಯಃ ಪರಿಚ್ಛೇದಃ ॥ ॥

ಮುಹೂರ್ತಪದವೀ ಟೀಕಾ ಸಮಾಪ್ತಾ

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥